ವಿಶ್ವವಾಣಿ

ವಿಶ್ವಾಸವೇ ವಿಶ್ವ

ಬೆಂಗಳೂರಿನಲ್ಲಿ ನಡೆದ ವಿಜಯ್ ಹಜಾರೆ ಟ್ರೋಫಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮುಂಬೈ ತಂಡವನ್ನು 55 ರನ್ ಅಂತರದಿಂದ ಸೋಲಿಸಿ ಸೆಮಿಫೈನಲ್ ಪ್ರವೇಶಿಸಿದೆ. ರಾಜ್ಯದ ಪರ ದೇವದತ್ತ ಪಡಿಕ್ಕಲ್ (81) ಹಾಗೂ ಕರುಣ್ ನಾಯರ್ (74) ಅಜೇಯ ಆಟದ ಮೂಲಕ ಗೆಲುವಿನ ರೂವಾರಿಯಾದರು.

ಇಂದು ಮೈಸೂರು ವಿಮಾನ ನಿಲ್ದಾಣದಲ್ಲಿ ಸಿಎಂ, ಡಿಸಿಎಂ ಭೇಟಿ

ಕಲಬುರಗಿಗೆ ತೆರಳುವ ಮೊದಲು ಖರ್ಗೆ ಜತೆ ಡಿಕೆ ಸುದೀರ್ಘ ಚರ್ಚೆ

ರಾಗಾ ಭೇಟಿಗೆ ವೇದಿಕೆ ಸಜ್ಜು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಕಳೆದ ನಾಲ್ಕು ತಿಂಗಳಿನಿಂದ ಬುಸುಗುಡುತ್ತಿರುವ 'ನಾಯಕತ್ವ' ಗೊಂದಲದ ಬೆನ್ನಲ್ಲೇ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರು ಮಂಗಳವಾರ ಮೈಸೂರಿನಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗುತ್ತಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ.

ತಮಿಳುನಾಡಿನ ಊಟಿಯಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸುತ್ತಿದ್ದಾರೆ. ಮೈಸೂರಿಗೆ ವಿಶೇಷ ವಿಮಾನದಲ್ಲಿ ಆಗಮಿಸಿ, ಅಲ್ಲಿಂದ ಊಟಿಯತ್ತ ಪ್ರಯಾಣ ಬೆಳೆಸಲಿದ್ದಾರೆ. ಈ ವೇಳೆ ಅವರನ್ನು ಬರಮಾಡಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಬ್ಬರೂ ಮೈಸೂರಿಗೆ ತೆರಳುತ್ತಿದ್ದಾರೆ ಎಂದು ತಿಳಿದುಬಂದಿದೆ.

ಮೈಸೂರಿನಲ್ಲಿ ರಾಹುಲ್ ಗಾಂಧಿ ಅವರನ್ನು ಸ್ವಾಗತಿಸಿದ ಬಳಿಕ ಇಬ್ಬರೂ ನಾಯಕರು ಕೆಲ ಕಾಲ ಚರ್ಚಿಸುವ ಸಾಧ್ಯತೆಯಿದೆ. ರಾಜ್ಯದಲ್ಲಿ ನಾಯಕತ್ವ ಗೊಂದಲ ಭುಗಿಲೆದ್ದ ಬಳಿಕ ರಾಜ್ಯ ನಾಯಕರಿಗೆ ರಾಹುಲ್ ಗಾಂಧಿ ಸಿಕ್ಕಿರಲಿಲ್ಲ. ಈ ಹಿಂದೆ ಭೇಟಿಯಾಗಿದ್ದರೂ, ರಾಜ್ಯ ನಾಯಕತ್ವಕ್ಕೆ ಸಂಬಂಧಿಸಿದಂತೆ ಯಾವುದೇ ಚರ್ಚೆ ಸಾಧ್ಯವಾಗಿರಲಿಲ್ಲ. ಇದೀಗ ಉದಕಮಂಡಲಕ್ಕೆ ತೆರಳುವ ಹಾದಿಯಲ್ಲಿ ರಾಹುಲ್, ಕೆಲ ಕಾಲ ಮೈಸೂರಿನಲ್ಲಿ ತಂಗಲಿದ್ದು ಈ ಸಮಯವನ್ನು ಬಳಸಿಕೊಂಡು ಇಬ್ಬರೂ ನಾಯಕರು ತಮ್ಮ 'ಪ್ರಸ್ತಾಪ'ಗಳನ್ನು ಮುಂದಿಡಲಿದ್ದಾರೆಂದು ತಿಳಿದುಬಂದಿದೆ.

ಖರ್ಗೆ ಭೇಟಿಯಾದ ಡಿಕೆಶಿ: ಬೆಂಗಳೂರಿಗೆ ಆಗಮಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೋಮವಾರ ಬೆಳಗ್ಗೆ ಭೇಟಿಯಾಗಿ ಚರ್ಚಿಸಿರುವುದು ಭಾರಿ ಕುತೂಹಲ ಮೂಡಿಸಿದೆ. ಕಲಬುರಗಿಯಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಕೆ ಶಿವಕುಮಾರ್ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರು ವಿಶೇಷ ವಿಮಾನದಲ್ಲಿ ತೆರಳಿದರೂ, ಅದಕ್ಕೂ ಮೊದಲು ಡಿಕೆಶಿ, ಖರ್ಗೆ ಅವರನ್ನು ಭೇಟಿಯಾಗಿ 45 ನಿಮಿಷಗಳ ಕಾಲ ಚರ್ಚೆ ನಡೆಸಿರುವುದು ಹಲವು ರೀತಿಯ ವ್ಯಾಖ್ಯಾನಗಳಿಗೆ ಕಾರಣವಾಗಿದೆ.

ಇಬ್ಬರ ಭೇಟಿಯ ವೇಳೆ ಸುಮಾರು 45 ನಿಮಿಷಗಳ ಕಾಲ ಚರ್ಚೆ ನಡೆಸಿದ್ದಾರೆ. ಅಧಿಕಾರ ಹಂಚಿಕೆಯ ಗೊಂದಲದ ನಡುವೆ ನಡೆದ ಈ ಸುದೀರ್ಘ ಮಾತುಕತೆ ರಾಜ್ಯ ಕಾಂಗ್ರೆಸ್‌ನಲ್ಲಿ ಭಾರಿ ಕುತೂಹಲವನ್ನು ಮೂಡಿಸಿದೆ. ಭೇಟಿಯ ವೇಳೆ ಪ್ರಮುಖವಾಗಿ ಪಕ್ಷದಲ್ಲಿ ಉದ್ಭವಿಸಿರುವ ನಾಯಕತ್ವ ಗೊಂದಲಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ. ಇದರೊಂದಿಗೆ ರಾಹುಲ್ ಗಾಂಧಿ ಹಾಗೂ ಸೋನಿಯಾ ಗಾಂಧಿ ಅವರ ಭೇಟಿಗೆ ಹಲವು ದಿನಗಳಿಂದ ಪ್ರಯತ್ನಿಸುತ್ತಿದ್ದರೂ ಅವಕಾಶ ಸಿಗುತ್ತಿಲ್ಲ. ಆದ್ದರಿಂದ ಅವರ ಭೇಟಿಗೆ ಅವಕಾಶ ಕೊಡಿಸುವಂತೆ ಮನವಿ ಮಾಡಿದ್ದಾರೆ ಎಂದು ತಿಳಿದುಬಂದಿದೆ.

ರಾಜ್ಯದಲ್ಲಿ ಉದ್ಭವಿಸಿರುವ ಗೊಂದಲಕ್ಕೆ ಹೈಕಮಾಂಡ್ ಸ್ಪಷ್ಟನೆ ನೀಡಬೇಕಿದೆ. ಇಲ್ಲದೇ ಹೋದರೆ ಪಕ್ಷದ ವರ್ಚಸ್ಸಿಗೆ ಧಕ್ಕೆ ಆಗಲಿದೆ. ಪಕ್ಷದ ಹೈಕಮಾಂಡ್ ಯಾವುದೇ ತೀರ್ಮಾನ ಕೈಗೊಳ್ಳುವುದಿದ್ದರೂ ಅದನ್ನು ಬಹಿರಂಗವಾಗಿ ಹೇಳಬೇಕು. ಇಲ್ಲದೇ ಹೋದರೆ, ಶಾಸಕರನ್ನು ನಿಯಂತ್ರಿಸುವುದು ಕಷ್ಟವಾಗಲಿದೆ. ಇದು ಮುಂಬರಲಿರುವ ಸ್ಥಳೀಯ ಸಂಸ್ಥೆ ಚುನಾವಣೆಯ ಮೇಲೆ ಹೊಡೆತ ಬೀಳಲಿದೆ ಎಂದು ವಿವರಿಸಿದ್ದಾರೆ. ಇದಕ್ಕೆ ಖರ್ಗೆ ಅವರು ಶೀಘ್ರದಲ್ಲಿಯೇ ಈ ಬಗ್ಗೆ ಸೋನಿಯಾ, ರಾಹುಲ್ ಜತೆ ಚರ್ಚಿಸಿ ಮುಂದಿನ ನಿರ್ಧಾರ ಮಾಡಲಾಗುವುದು ಎಂದು ಭರವಸೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಕಲಬುರಗಿ ಜಿಲ್ಲೆಯಲ್ಲಿ ಕೈಗೊಂಡ 906 ಕೋಟಿ ರು.ವೆಚ್ಚದ ವಿವಿಧ ಕಾಮಗಾರಿಗಳಿಗೆ ಯಡ್ರಾಮಿಯಲ್ಲಿ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಡಿಸಿಎಂ ಡಿ.ಕೆ.ಶಿವಕುಮಾರ್ ಮತ್ತಿತರ ನಾಯಕರು ಇದ್ದರು.

ಚುನಾವಣಾ ಸಭೆ ನೆಪದಲ್ಲಿ ಹೈ ಭೇಟಿಗೆ ಡಿಕೆ ಯತ್ನ

ಅಸ್ಸಾಂ ವಿಧಾನಸಭಾ ಚುನಾವಣೆಯ ವೀಕ್ಷಕರಾಗಿ ನೇಮಕವಾಗಿರುವ ಡಿ.ಕೆ.ಶಿವಕುಮಾರ್ ಅವರು, ಚುನಾವಣಾ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ತೆರಳಿದಾಗ ಹೈಕಮಾಂಡ್ ನಾಯಕರನ್ನು ಭೇಟಿಯಾಗಲು ಪ್ರಯತ್ನಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಅಸ್ಸಾಂ ವಿಧಾನಸಭೆಯ ಚುನಾವಣೆಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ಉಸ್ತುವಾರಿಯಾಗಿದ್ದಾರೆ. ಆದ್ದರಿಂದ ಚುನಾವಣಾ ಸಂಬಂಧಪಟ್ಟ ಚರ್ಚೆಗೆ 16 ಮತ್ತು 22ರಂದು ದೆಹಲಿಯಲ್ಲಿ ಸಭೆ ನಡೆಯಲಿದೆ. ಈ ಸಭೆಯಲ್ಲಿ ಭಾಗವಹಿಸಲು ತೆರಳಿದಾಗ ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ಅವರನ್ನು ಭೇಟಿಯಾಗಲು ಪ್ರಯತ್ನಿಸಿದ್ದಾರೆ. ಇದೇ ವಿಷಯವನ್ನು ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಚರ್ಚಿಸಿದ್ದು, ಭೇಟಿಗೆ ಅವಕಾಶ ಕೊಡಿಸುವ ಭರವಸೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಅಧಿಕಾರ ಹಂಚಿಕೆಯ ಸಂಬಂಧ ಪಟ್ಟಂತೆ ಅಗತ್ಯವಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ದೆಹಲಿಗೆ ಕರೆಸಲಾಗುವುದು.

-ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಕೋಗಿಲು ಪ್ರಕರಣ ಎನ್‌ಐಎಗೆ ವಹಿಸಲು ಬಿಜೆಪಿ ಆಗ್ರಹ : ಸತ್ಯಶೋಧನಾ ಸಮಿತಿಯಿಂದ ವರದಿ

ಬೆಂಗಳೂರಲ್ಲಿ 2 ಲಕ್ಷ ಬಾಂಗ್ಲಾದೇಶಿಯರು!

ಬೆಂಗಳೂರು: ಕೋಗಿಲು ಬಡಾವಣೆಯ ಅಕ್ರಮ ಮನೆ ತೆರವು ಪ್ರಕರಣ ಮಹತ್ವದ ತಿರುವು ಪಡೆದುಕೊಂಡಿದ್ದು, ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಲಕ್ಷಾಂತರ ಬಾಂಗ್ಲಾದೇಶಿಯರಲ್ಲದೆ ರೋಹಿಂಗ್ಯಾಗಳು ಅಧಿಕ ಸಂಖ್ಯೆಯಲ್ಲಿ ಒಳನುಸುಳಿರುವುದು ಬಿಜೆಪಿಯ ಸತ್ಯಶೋಧನಾ ವರದಿಯಲ್ಲಿ ಬೆಳಕಿಗೆ ಬಂದಿದ್ದು, ಪ್ರಕರಣವೀಗ ಲೋಕಭವನದ ಮೆಟ್ಟಿಲು ಹತ್ತಿದೆ.

ಎರಡು ಲಕ್ಷಕ್ಕೂ ಅಧಿಕ ಬಾಂಗ್ಲಾ ಮತ್ತು ರೋಹಿಂಗ್ಯಾಗಳು ಬೆಂಗಳೂರಿನಲ್ಲಿ ಇದ್ದಾರೆ. ಇವರನ್ನು ವಶಕ್ಕೆ ಪಡೆದ ಹಿನ್ನೆಲೆ ಪರಿಶೀಲಿಸಿ ಅವರ ದೇಶಕ್ಕೆ ವಾಪಸ್ ಕಳಿಸಬೇಕು. ಅಕ್ರಮ ವಲಸಿಗರಿಗೆ ನಿಯಮ ಮೀರಿ ಮನೆಗಳ ಹಂಚಿಕೆ ಮಾಡಬಾರದು. ಪೊಲೀಸರು ಅಕ್ರಮ ನುಸುಳುಕೋರರ ಹಿನ್ನೆಲೆ ಪರಿಶೀಲನೆ ಮಾಡಬೇಕು. ಸರಕಾರ ಇದರ ಬಗ್ಗೆ ಸೂಕ್ತ ತನಿಖೆ ಮಾಡಬೇಕು. ರಾಜ್ಯ ಸರಕಾರದಿಂದ ತನಿಖೆ ಆಗದಿದ್ದರೆ ಎನ್‌ಐಎ ತನಿಖೆ ಮಾಡಿಸಬೇಕು ಎಂದು ಬಿಜೆಪಿ ಆಗ್ರಹಿಸಿದೆ.

ಕೋಗಿಲು ಬಡಾವಣೆಯಲ್ಲಿ ಅಕ್ರಮ ಮನೆಗಳ ತೆರವು ಪ್ರಕರಣ ಸಂಬಂಧ ಶಾಸಕ ಎಸ್.ಆರ್. ವಿಶ್ವನಾಥ್ ನೇತೃತ್ವದ ಸತ್ಯಶೋಧನಾ ತಂಡ ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ. ವಿಜಯೇಂದ್ರಗೆ ಅಧ್ಯಯನ ವರದಿ ಸಲ್ಲಿಕೆ ಮಾಡಿದೆ. ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋಗಿಲು ಅಕ್ರಮ ಮನೆಯ ಪ್ರದೇಶ ಮೊದಲು ದೊಡ್ಡ ಬಂಡೆ ಜಾಗ, ಖರಾಬು ಜಾಗವಾಗಿತ್ತು. ಇಲ್ಲಿ ಕಟ್ಟಡ ತ್ಯಾಜ್ಯ ಹಾಕಿ ಹಳ್ಳ ಮುಚ್ಚುತ್ತಾ ಬಂದರು. ಕಾಂಗ್ರೆಸ್‌ನ ಸ್ಥಳೀಯ ಮುಖಂಡರು ಅಕ್ರಮ ನಿವೇಶನ ಮಾಡಿದ್ದರು. ಬಿಬಿಎಂಪಿ ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಆ ಜಾಗ ಮೀಸಲಿದ್ದರೂ ಅಲ್ಲಿ ಗುಡಿಸಲುಗಳನ್ನು ಕಟ್ಟಿಕೊಳ್ಳಲು ಸಹಾಯ ಮಾಡಿದರು. ಈಗಲೂ ಅಲ್ಲಿ ಅಕ್ರಮ ಗುಡಿಸಲುಗಳಿದ್ದು ಇನ್ನೂ ತೆರವು ಮಾಡಿಲ್ಲ. ಸರಕಾರ ಮೊದಲು ಅಕ್ರಮ ಗುಡಿಸಲುಗಳನ್ನು ತೆರವು ಮಾಡಿದಾಗ ಸರಿ ಇತ್ತು. ನಂತರ ಪಿಣರಾಯಿ ವಿಜಯನ್, ವೇಣುಗೋಪಾಲ್ ಮಧ್ಯಪ್ರವೇಶವಾಗಿ ಚುನಾವಣಾ ದೃಷ್ಟಿಯಿಂದ ಅಲ್ಲಿದ್ದವರಿಗೆ ಪುನರ್ವಸತಿಗೆ ಇಬ್ಬರೂ ಸೂಚಿಸಿದ್ದರು ಎಂದು ಆರೋಪಿಸಿದರು.

→10

ಕಾಂಗ್ರೆಸ್ ನಾಯಕರ ಎಡಬಲದಲ್ಲಿ ಇದ್ದವರೇ ಅಕ್ರಮ ನಿವಾಸಿಗಳ ವಾಸ್ತವ್ಯಕ್ಕೆ ಕಾರಣ. ನಾವು ಹೋಗಿದ್ದಾಗ ರೋಹಿಂಗ್ಯಾ, ಬಾಂಗ್ಲಾದವರು ಇರಲಿಲ್ಲ. 10.30 ಲಕ್ಷ ಮೌಲ್ಯದ ಮನೆಗಳನ್ನು 2.5 ಲಕ್ಷ ಕೊಟ್ರೆ ಸಾಕು ಕೊಡುತ್ತೇವೆ ಎಂದು ಸರಕಾರ ಹಂಚಲು ಹೊರಟಿದೆ. ಸಮಿತಿ ಸ್ಥಳ ಪರಿಶೀಲನೆ ಮಾಡುವ ಸಮಯದಲ್ಲಿ ಅಕ್ರಮವಾಗಿ ಇದ್ದವನ್ನು ಕೂಡಲೇ ಸ್ಥಳಾಂತರಿಸಿ, ಸುತ್ತಮುತ್ತಲ ಬಡಾವಣೆಗಳ ಜನರನ್ನು ತಂದು ಇರಿಸಿದರು.

-ಎಸ್.ಆರ್.ವಿಶ್ವನಾಥ್, ಸತ್ಯಶೋಧನಾ ಸಮಿತಿ ಮುಖ್ಯಸ್ಥ

ಸೊಂಪಾದ ಪುಟಗಳು

ಶಿಕ್ಷಣದಲ್ಲಿ ಮಾತೃಭಾಷೆ ಕಡ್ಡಾಯ ನಿಜಕ್ಕೂ ಸಾಧ್ಯವೇ?

ಅಶ್ವತ್ಥಕಟ್ಟೆ – ರಂಜಿತ್ ಎಚ್. ಅಶ್ವತ್ಥ 6

ಇರಾನಿನಲ್ಲಿ ಏನಾಗುತ್ತಿದೆ? ಏಕಾಗುತ್ತಿದೆ?

ವಿಶ್ವರಂಗ – ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ಸೋಲು ಎಂಬುದು ಅಂತಿಮವಲ್ಲ, ಅದು ಗೆಲುವಿನ ಹಾದಿಯಲ್ಲಿ ಸಿಗುವ ಒಂದು ಪಾಠವಷ್ಟೇ. ನಿಮ್ಮ ಗುರಿಯತ್ತ ಸಾಗುವ ಹಾದಿಯಲ್ಲಿ ಅಡೆತಡೆಗಳು ಎದುರಾದಾಗ ಧೃತಿಗೆಡಬೇಡಿ. ಕತ್ತಲೆ ಹೆಚ್ಚಾದಷ್ಟೂ ಸೂರ್ಯೋದಯ ಹತ್ತಿರವಿದೆ ಎಂದರ್ಥ.

ವಕ್ರತುಂಡೋಕ್ತಿ



ಮೇಕಪ್ ಮತ್ತು ಹೆಲ್ಮೆಟ್ ಎರಡೂ ಒಂದೇ. ಎರಡೂ ಮುಖದ ರಕ್ಷಣೆಗೇ ಇರುವುದು, ಒಂದು ಅಪಘಾತದಿಂದ ರಕ್ಷಿಸಿದರೆ, ಇನ್ನೊಂದು ಅಸಲಿ ರೂಪದ ಆಘಾತದಿಂದ.

ಶ್ರೀನಿವಾಸ ಕುಲಕರ್ಣಿಗೆ ರಾಯಲ್ ಸೊಸೈಟಿ ಪದಕ



ಲಂಡನ್: ಅಮೆರಿಕದಲ್ಲಿ ನೆಲೆಸಿರುವ ಭಾರತ ಮೂಲದ ಖಗೋಳ ವಿಜ್ಞಾನಿ ಪ್ರೊಫೆಸರ್ ಶ್ರೀನಿವಾಸ ಕುಲಕರ್ಣಿ ಅವರಿಗೆ ಇಂಗ್ಲೆಂಡ್‌ನ ರಾಯಲ್ ಅಸ್ಟ್ರೊನಾಮಿಕಲ್ ಸೊಸೈಟಿ ಯ (ಆರ್‌ಎಎಸ್) ಚಿನ್ನದ ಪದಕ ಲಭಿಸಿದೆ. ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದಂತೆ ಹಲವು ಮಹತ್ವದ ಸಂಶೋಧನೆಗಳನ್ನು ಕೈಗೊಂಡಿರುವ ಶ್ರೀನಿವಾಸ್ ಕುಲಕರ್ಣಿ ಅವರು, ರಾಜ್ಯಸಭಾ ಸದಸ್ಯೆ ಸುಧಾ ಮೂರ್ತಿ ಅವರ ಸಹೋದರ. ಕ್ಯಾಲಿಫೋರ್ನಿಯಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಪ್ರಾಧ್ಯಾಪಕರಾಗಿರುವ ಕುಲಕರ್ಣಿ ಅವರು ಖಗೋಳ ಭೌತಶಾಸ್ತ್ರದಲ್ಲಿ ಕ್ಷಣಿಕ ಬಹುತರಂಗಾಂತರದ ಕುರಿತಾದ ಸುಸ್ಥಿರ, ನವೀನ ಮತ್ತು ಅಭೂತಪೂರ್ವ ಅನ್ವೇಷಣೆಯ ಕೊಡುಗೆಯನ್ನು ಚಿನ್ನದ ಪದಕ ಆಯ್ಕೆಗೆ ಪರಿಗಣಿಸಲಾಗಿದೆ.

ಪವಿತ್ರಾಗೆ ಮನೆಯೂಟ: ಹೈಕೋರ್ಟ್ ಸಮ್ಮತಿ

ಬೆಂಗಳೂರು: ಚಿತ್ರದುರ್ಗ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಸೇರಿರುವ ಪವಿತ್ರಾ ಗೌಡಗೆ ವಾರಕ್ಕೊಮ್ಮೆ ಮನೆಯೂಟ ನೀಡಲು ಹೈಕೋರ್ಟ್ ಅವಕಾಶ ನೀಡಿದೆ. ಸೋಮವಾರ ಈ ಕುರಿತ ಪವಿತ್ರಾ ಅರ್ಜಿ ವಿಚಾರಣೆ ನಡೆಸಿದ ಕೋರ್ಟ್ ವಾರಕ್ಕೊಮ್ಮೆ ಮನೆಯೂಟ ನೀಡಲು ಸೂಚಿಸಿದೆ. ಆರೋಗ್ಯದಲ್ಲಿ ವ್ಯತ್ಯಾಸವಾದರೆ ವೈದ್ಯರ ಸಲಹೆ ಮೇರೆಗೆ ಊಟ ನೀಡಬೇಕು ಎಂದು ತಿಳಿಸಿದೆ. ಈ ಮೊದಲು ಆರೋಪಿ ಪವಿತ್ರಾ ಗೌಡ ಸೇರಿ ನಾಗರಾಜು, ಲಕ್ಷ್ಮಣ್ ಮನೆಯೂಟ ಬೇಕೆಂದು ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಮನವಿಯನ್ನು ನ್ಯಾಯಾಲಯ ಪುರಸ್ಕರಿಸಿತು.

8 ತಿಂಗಳಲ್ಲಿ 2ನೇ ವೈಫಲ್ಯ, ಇಸ್ರೋ ವಿಜ್ಞಾನಿಗಳಿಗೆ ನಿರಾಶೆ

ಪಿಎಸ್‌ಎಲ್‌ವಿ-ಸಿ 62 ವಿಫಲ: ಕಕ್ಷೆ ಸೇರದ 16 ಉಪಗ್ರಹ



ಶ್ರೀಹರಿಕೋಟ: ಭಾರತೀಯ ಬಾಹ್ಯಾಕಾಶ ಸಂಸ್ಥೆಯ 2026ರ ಸಾಲಿನ ಮೊದಲ ಉಪಗ್ರಹ ಉಡ್ಡಯನ ವಿಫಲವಾಗಿದೆ. 16 ಉಪಗ್ರಹಗಳನ್ನು ಹೊತ್ತು ಆಂಧ್ರಪ್ರದೇಶ ಶ್ರೀಹರಿಕೋಟದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಅಂತರಿಕ್ಷದತ್ತ ನೆಗೆದ ಪಿಎಸ್‌ಎಲ್‌ವಿ-ಸಿ 62 ರಾಕೆಟ್ ಯಶಸ್ವಿ ಯಾಗಿ ಉಡ್ಡಯನವಾದರೂ ಮೂರನೇ ಹಂತದಲ್ಲಿ ನಿಯಂತ್ರಣ ಕಳೆದುಕೊಂಡಿತು. ಇದರೊಂದಿಗೆ ಈ ಉಪಗ್ರಹಗಳು ನಿಗದಿತ ಕಕ್ಷೆ ಸೇರಲು ವಿಫಲವಾಗಿವೆ.

ಎಂಟು ತಿಂಗಳಲ್ಲಿ ಇಸ್ರೋದ ಎರಡನೇ ವೈಫಲ್ಯ ಇದಾಗಿದೆ. 260 ಟನ್ ತೂಕದ ಪಿಎಸ್‌ಎಲ್‌ವಿ -ಡಿಎಲ್ ರೂಪಾಂತರವು ಸೋಮವಾರ ಬೆಳಿಗ್ಗೆ 10:17 ಕ್ಕೆ ಆಕಾಶದೆತ್ತ ರಕ್ಕೆ ಹಾರಿತು. ಮೊದಲ ಎರಡು ಹಂತಗಳು ಯಶಸ್ವಿಯಾಗಿ ನಡೆದರೂ 3ನೇ ಹಂತದ ದಹನದ ನಂತರ ಕಾರ್ಯಾಚರಣೆ ವಿಫಲವಾಗಿರುವುದು ಇಸ್ರೋ ವಿಜ್ಞಾನಿಗಳಿಗೆ ನಿರಾಶೆ ತಂದಿದೆ. ಕಳೆದ ವರ್ಷವೂ ಪಿಎಸ್‌ಎಲ್‌ವಿ ಸಿ-61 ಸುಸ್ಥಿರ ಕಕ್ಷೆಯ ಸೇರುವಲ್ಲಿ ವಿಫಲವಾಗಿತ್ತು. ಕಡಲು ಕಣ್ಗಾವಲಿಗಾಗಿ ಡಿಆರ್‌ಡಿಒ ಅಭಿವೃದ್ಧಿಪಡಿಸಿದ ಅನ್ವೇಷಾ ಉಪಗ್ರಹವಲ್ಲದೆ ಭಾರತೀಯ ವಿದ್ಯಾರ್ಥಿಗಳು ಸಿದ್ದಪಡಿಸಿದ ಪೇಲೋಡ್‌ಗಳು, ಖಾಸಗಿ ಸಂಸ್ಥೆಯ ಪ್ರಯೋಗಾರ್ಥ ಉಪಗ್ರಹಗಳು ಈ ಉಡ್ಡಯನ ಯೋಜನೆಯ ಭಾಗವಾಗಿದ್ದವು.

→10



ಎರಡು ದಿನಗಳ ಭೇಟಿಗಾಗಿ ಭಾರತಕ್ಕೆ ಆಗಮಿಸಿರುವ ಜರ್ಮನಿಯ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್, ನರೇಂದ್ರ ಮೋದಿ ಅವರೊಂದಿಗೆ ಸಬರಮತಿ ನದಿ ದಂಡೆಯಲ್ಲಿ ಆಯೋಜಿಸಲಾಗಿದ್ದ ಗುಜರಾತ್ ಅಂತಾರಾಷ್ಟ್ರೀಯ ಗಾಳಿಪಟ ಉತ್ಸವವನ್ನು ಉದ್ಘಾಟಿಸಿ ಸಂಭ್ರಮಿಸಿದರು.

ಫೆಬ್ರವರಿಯಿಂದಲೇ ಪ್ರಯಾಣದರ ಶೇ.5ರಷ್ಟು ಹೆಚ್ಚಳ

ನಮ್ಮ ಮೆಟ್ರೋ ಮತ್ತೆ ದುಬಾರಿ

ಬೆಂಗಳೂರು: ನಮ್ಮ ಮೆಟ್ರೋ ಈ ವರ್ಷ ಮತ್ತೆ ದರ ಏರಿಕೆ ಮಾಡಲು ಮುಂದಾಗಿದ್ದು, 2026 ಫೆಬ್ರವರಿಯಿಂದ ಜಾರಿಗೆ ಬರುವಂತೆ ಪ್ರಯಾಣ ದರ ಪರಿಷ್ಕರಿಸಲು ಮುಂದಾಗಿದೆ.

ನಮ್ಮ ಮೆಟ್ರೋ ಕಳೆದ ವರ್ಷವಷ್ಟೇ ಶೇ.71ರಷ್ಟು ದರ ಏರಿಕೆ ಮಾಡಿದ್ದು ತೀವ್ರ ಆಕ್ರೋಶಕ್ಕೆ ಕಾರಣವಾಗಿತ್ತು. ದೇಶದ ಇತರ ಎಲ್ಲ ಮೆಟ್ರೋಗಳಿಗಿಂತ ಬೆಂಗಳೂರು ಮೆಟ್ರೋ ಪ್ರಯಾಣದರ ಅತ್ಯಧಿಕವಾಗಿದ್ದರೂ ಈ ವರ್ಷ ಮತ್ತೆ ಶೇ.5ರಷ್ಟು ದರ ಹೆಚ್ಚಳಕ್ಕೆ ಮುಂದಾಗಿರುವುದು ಸಾರ್ವಜನಿಕ ವಲಯದಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ. ನೀರು, ಹಾಲು, ಆಸ್ತಿ ತೆರಿಗೆ ಸೇರಿದಂತೆ ನಾನಾ ಸೇವೆಗಳ ದರ ಏರಿಕೆಯಿಂದ ತತ್ತರಿಸಿರುವ ಬೆಂಗಳೂರಿಗರಿಗೆ 2026ರ ಹೊಸ ವರ್ಷದಲ್ಲಿ ಮೆಟ್ರೋ ಮೊದಲ ಬೆಲೆ ಬರೆ ಬೀಳಲಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಶುಲ್ಕ ನಿಗದಿ ಸಮಿತಿ ತಿಳಿಸಿದಂತೆ 2025ರಲ್ಲಿ ದಶಕದ ಬಳಿಕ ಶೇ.71ರಷ್ಟು ಟಿಕೆಟ್ ದರ ಹೆಚ್ಚಿಸಲಾಗಿತ್ತು. ಸಮಿತಿ ವಾರ್ಷಿಕವಾಗಿ ಶೇ. 5ರಷ್ಟು ದರ ಹೆಚ್ಚಿಸಬೇಕೆಂದು ಸೂಚಿಸಿದ್ದು, ಫೆಬ್ರವರಿಯಿಂದ ನಮ್ಮ ಮೆಟ್ರೋ ಪ್ರಯಾಣವು ಮತ್ತಷ್ಟು ದುಬಾರಿ ಆಗಲಿದೆ. ಮೆಟ್ರೋ ರೈಲ್ವೇಸ್ (ಕಾರ್ಯಾಚರಣೆ ಮತ್ತು ನಿರ್ವಹಣೆ) ಕಾಯಿದೆ, 2002 ರ ಸೆಕ್ಷನ್ 33 ರ ಅಡಿಯಲ್ಲಿ ಕಾನೂನುಬದ್ಧವಾಗಿರುವ ಎಫ್‌ಎಫ್‌ಸಿಯ ಶಿಫಾರಸುಗಳನ್ನು ಅಂಗೀಕರಿಸಿದ ನಂತರ ನಮ್ಮ ಮೆಟ್ರೋವು 2025ರ ದರ ಪರಿಷ್ಕರಣೆಯನ್ನು ಜಾರಿಗೆ ತಂದಿದೆ.

ಸಾರ್ವಜನಿಕರ ಆಕ್ರೋಶ, ವಿರೋಧ: ಮೆಟ್ರೋ ಟಿಕೆಟ್ ದರ ಹೆಚ್ಚಳವು ಬೆಂಗಳೂರಿಗರಿಗೆ ಮತ್ತೊಂದು ಆರ್ಥಿಕ ಹೊರೆಯಾಗಿ ಪರಿಣಮಿಸಲಿದ್ದು, ಇದೇ ವಿಚಾರವಾಗಿ ಸಾರ್ವಜನಿಕರು ಕಳೆದ ವರ್ಷ ವ್ಯಾಪಕ ಆಕ್ರೋಶ ವ್ಯಕ್ತಪಡಿಸಿದ್ದರು. ಆರಂಭದಲ್ಲಿ ಒಂದು ಲಕ್ಷಕ್ಕೂ ಅಧಿಕ ಪ್ರಯಾಣಿಕರು ಸಾರ್ವಜನಿಕ ಸಾರಿಗೆ ಬಸ್, ಟ್ಯಾಕ್ಸಿ, ಸ್ವಂತ ಬೈಕ್‌ಗಳ ಸಮೇತ ಪ್ರಯಾಣ ಆರಂಭಿಸಿದ್ದರು. ಇದು ಮೆಟ್ರೋಗೆ ಒಂದಷ್ಟು ಹಿನ್ನಡೆ ಆಗಿತ್ತು. ಈ ಹಿಂದೆ ನಿರ್ವಹಣೆ ವೆಚ್ಚದ ಕಾರಣ ನೀಡಿ ಮೆಟ್ರೋ ದರ ಏರಿಕೆ ನಿರ್ಧಾರವನ್ನು ಸಮರ್ಥಿಸಿಕೊಂಡಿತ್ತು. ಇದೀಗ ಸಮಿತಿ ಶಿಫಾರಸಿನ ಮೇರೆಗೆ ಪ್ರತಿ ವರ್ಷ ಶೇ.5ರಷ್ಟು ಪ್ರಯಾಣ ಬೆಲೆ ಹೆಚ್ಚಿಸಲು ಮುಂದಾಗಿದೆ. ಕೆಲವು ತಿಂಗಳ ಹಿಂದಷ್ಟೇ ಪ್ರಯಾಣ ದರ ಏರಿಕೆ ಎದುರಿಸಿದ್ದ ಪ್ರಯಾಣಿಕರಿಗೆ ಇದು ಮತ್ತೊಂದು ಬರೆ ಆಗಲಿದೆ ಎಂದು ದೂರುತ್ತಿದ್ದಾರೆ.

ಪ್ರಶ್ನೆ ಪತ್ರಿಕೆ ಸೋರಿಕೆ: ಶಿಕ್ಷಕರ ಬಂಧನ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪೂರ್ವಸಿದ್ಧತಾ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯ ಶಿಕ್ಷಕರು ಸೇರಿ ಆರು ಆರೋಪಿಗಳನ್ನು ಉತ್ತರ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜ.9ರಂದು ಎಸ್‌ಎಸ್‌ಎಲ್‌ಸಿ ಪೂರ್ವಸಿದ್ಧತಾ ಹಿಂದಿ ಪರೀಕ್ಷೆ ನಡೆದಿತ್ತು. ಆದರೆ ಜ. 8ರಂದು ನಿರಂಜನ್ ಶೆಟ್ಟಿ ಹೆಸರಿನ ಯೂಟ್ಯೂಬ್ ಚಾನೆಲ್‌ನಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಈ ಸಂಬಂಧ ಪದವಿ ಪೂರ್ವ ಶಿಕ್ಷಣಾ ಇಲಾಖೆಯ ಜಂಟಿ ನಿರ್ದೇಶಕ ರಾಜು ಅವರು ನೀಡಿದ ದೂರಿನ ಹಿನ್ನೆಲೆಯಲ್ಲಿ ಉತ್ತರ ವಿಭಾಗದ ಸೈಬರ್ ಸೆನ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ತನಿಖೆ ನಡೆಸಿದ ಪೊಲೀಸರು ಮುಖ್ಯ ಶಿಕ್ಷಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸೇರಿದಂತೆ 10 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ್ದಾರೆ. ಪ್ರಸ್ತುತ ತುಮಕೂರಿನ ಶಾಲೆಯೊಂದರ ಮುಖ್ಯೋಪಾಧ್ಯಾಯ ಗಿರೀಶ್, ರಾಮನಗರದ ಸಹ ಶಿಕ್ಷಕ ಅಮ್ಜದ್ ಖಾನ್, ಕಲಬುರಗಿಯ ಮುಖ್ಯ ಶಿಕ್ಷಕಿ ಶಾಹಿದಾ ಬೇಗಂ, ಸಹ ಶಿಕ್ಷಕಿ ಫಾಹಿದಾ, ಶಿಕ್ಷಕ ಮೊಹಮದ್ ಸಿರಾಜುದ್ದೀನ್, ಶಿಕ್ಷಕಿ ಫರ್ಜಾನಾ ಬೇಗಂ ಅವರನ್ನು ಬಂಧಿಸಲಾಗಿದೆ. ಇವರ ಜತೆ ನಾಲ್ವರು ವಿದ್ಯಾರ್ಥಿಗಳನ್ನು ವಶಕ್ಕೆ ಪಡೆಯಲಾಗಿದೆ.

ತುಮಕೂರು, ರಾಮನಗರ, ಕಲಬುರಗಿ ಜಿಲ್ಲೆಗಳಲ್ಲಿ ಪೊಲೀಸರು ಕಾರ್ಯಾಚರಣೆ ನಡೆಸಿ ಪ್ರಶ್ನೆಪತ್ರಿಕೆಯನ್ನು ವೈರಲ್ ಮಾಡಿದವರ ಸಾಮಾಜಿಕ ಜಾಲತಾಣದೊಂದಿಗೆ ಮೊಬೈಲ್ ಪರಿಶೀಲನೆ ಮಾಡುತ್ತಿದ್ದಾರೆ. ಈ ಪ್ರಕರಣದಲ್ಲಿ ಮತ್ತಷ್ಟು ಮಂದಿ ಬಂಧನವಾಗುವ ಸಾಧ್ಯತೆಯಿದೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಪರೀಕ್ಷಾ ಮಂಡಳಿ ಮುಖ್ಯಸ್ಥ ಗೋಪಾಲಕೃಷ್ಣ ತಿಳಿಸಿದ್ದಾರೆ.

ಜೂನ್ 30ರೊಳಗೆ ಚುನಾವಣೆ ಪ್ರಕ್ರಿಯೆ ಮುಗಿಸಲು ಕಟ್ಟಾಜ್ಞೆ

ಜಿಬಿಎ, 5 ಮಹಾನಗರ ಪಾಲಿಕೆ ಚುನಾವಣೆಗೆ ಸುಪ್ರೀಂ ಗಡುವು

ಬೆಂಗಳೂರು: ದಶಕಗಳಿಂದ ನನೆಗುದಿಗೆ ಬಿದ್ದಿದ್ದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಐದು ನಗರ ಪಾಲಿಕೆಗಳ ಚುನಾವಣಾ ಪ್ರಕ್ರಿಯೆಯನ್ನು ಯಾವುದೇ ವಿಳಂಬವಿಲ್ಲದೆ ಜೂನ್ 30ರೊಳಗೆ ಪೂರ್ಣಗೊಳಿಸುವಂತೆ ಸುಪ್ರೀಂ ಕೋರ್ಟ್ ರಾಜ್ಯ ಸರಕಾರ ಮತ್ತು ಚುನಾವಣಾ ಆಯೋಗಕ್ಕೆ ಕಟ್ಟುನಿಟ್ಟಿನ ಆದೇಶ ನೀಡಿದೆ.

ಈ ಹಿಂದೆ ರಾಜ್ಯ ಸರಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಈಗಿನ ಜಿಬಿಎ) ಚುನಾವಣೆಯನ್ನು 2026ರ ಫೆಬ್ರವರಿಯಲ್ಲಿ ನಡೆಸುವುದಾಗಿ ತಿಳಿಸಿತ್ತು. ಆದರೆ, ವಾರ್ಡ್‌ಗಳ ವಿಂಗಡಣೆ, ಮೀಸಲಾತಿ, ಹೊಸ ಪ್ರಾಧಿಕಾರ ರಚನೆ ಹಿನ್ನೆಲೆಯಲ್ಲಿ ಚುನಾವಣಾ ದಿನಾಂಕ ಪ್ರಕಟಿಸಿರಲಿಲ್ಲ. ನೂತನವಾಗಿ ರಚನೆಯಾಗಿರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಡಿಯಲ್ಲಿ ಬರುವ ಐದು ನಗರ ಪಾಲಿಕೆಗಳ ಚುನಾವಣಾ ಪ್ರಕ್ರಿಯೆಯನ್ನು ಜೂನ್ 30 ರೊಳಗೆ ಪೂರ್ಣಗೊಳಿಸುವಂತೆ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜೋಯ್ಮಲ್ಯ ಬಾಗ್ಚಿ ಅವರಿದ್ದ ಪೀಠವು ಗಡುವು ವಿಧಿಸಿ ಆದೇಶಿಸಿದೆ.

→10

ಚುನಾವಣೆಯತ್ತ ನೋಟ

- ಕಳೆದ ಆರು ವರ್ಷಗಳಿಂದ ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಚುನಾಯಿತ ಜನಪ್ರತಿನಿಧಿಗಳಿಲ್ಲ
- 2019ರಲ್ಲಿ ಬಿಬಿಎಂಪಿ ಅವಧಿ ಮುಕ್ತಾಯ, ವಾರ್ಡ್ ಪುನರ್‌ವಿಂಗಡಣೆ ನೆಪದಲ್ಲಿ ಚುನಾವಣೆ ಮುಂದಕ್ಕೆ
- ಬೆಂಗಳೂರನ್ನು ಗ್ರೇಟರ್ ಪ್ರಾಧಿಕಾರವನ್ನಾಗಿ ಪರಿವರ್ತಿಸುವ ಪ್ರಕ್ರಿಯೆಯಿಂದಾಗಿ ಚುನಾವಣೆ ವಿಳಂಬ.
- ಜಿಬಿಎ ಅಸ್ತಿತ್ವಕ್ಕೆ, ಒಟ್ಟು 369 ವಾರ್ಡ್ ರಚನೆ, ವಾರ್ಡ್‌ವಾರು ಮೀಸಲು ಕರಡು ಪಟ್ಟಿಯೂ ಸಿದ್ಧ.
- ಜಿಬಿಎ ಜತೆ ಉಳಿದ ರಾಜ್ಯದ ಮಹಾನಗರಪಾಲಿಕೆ, ನಗರಸಭೆಗಳಿಗೂ ಚುನಾವಣೆ ನಡೆಸಲು ಕೂಗು

ಮಹಿಳೆಯರ ಸುರಕ್ಷತೆಯಲ್ಲಿ ಬೆಂಗಳೂರು ದೇಶದಲ್ಲೇ ನಂ.1

ಬೆಂಗಳೂರು: ಐಟಿ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಜಾಗತಿಕವಾಗಿ ಗಮನ ಸೆಳೆದಿರುವ ಬೆಂಗಳೂರು ಇದೀಗ ಮಹಿಳೆಯರ ಸುರಕ್ಷಿತ ತಾಣವಾಗಿಯೂ ಹೊರಹೊಮ್ಮಿದೆ.

ಮಹಿಳೆಯರ ಉದ್ಯೋಗ ನಿರ್ವಹಣೆ ಮತ್ತು ಅವರು ವಾಸಿಸಲು ಸುರಕ್ಷಿತ ತಾಣದಲ್ಲಿ ಬೆಂಗಳೂರು ಅಗ್ರ ಸ್ಥಾನ ಪಡೆಯುವ ಮೂಲಕ ಗಮನ ಸೆಳೆದಿದೆ. ಭಾರತದ ಪ್ರಮುಖ ಕೆಲಸದ ಸ್ಥಳ, ಸಂಸ್ಕೃತಿ ಸಲಹಾ ಸಂಸ್ಥೆಯಾಗಿರುವ ಅವತಾರ್ ಗ್ರೂಪ್, ಮಹಿಳೆಯರಿಗಾಗಿ ಭಾರತದ ಪ್ರಮುಖ ನಗರಗಳು (ಟಿಸಿಡಬ್ಲ್ಯುಐ) ನಾಲ್ಕನೇ ಆವೃತ್ತಿಯನ್ನು ಬಿಡುಗಡೆ ಮಾಡಿದೆ. ಅದರಲ್ಲಿ ಬೆಂಗಳೂರು ಮೊದಲ ಸ್ಥಾನದಲ್ಲಿದೆ. ಮಹಿಳೆಯರಿಗೆ ಕೆಲಸಕ್ಕೆ ಉತ್ತಮ ಪರಿಸರ ವ್ಯವಸ್ಥೆ, ಒಳಗೊಳ್ಳುವಿಕೆ, ಅವಕಾಶಗಳು ಇರುವ ಕುರಿತು ಸಂಶೋಧನೆ ತೋರಿಸಿದೆ. ಈ ವರದಿಯಲ್ಲಿ ಒಟ್ಟು 125 ನಗರಗಳು ಇದ್ದು, ಮಹಿಳೆಯರ ಭಾಗವಹಿಸುವಿಕೆ, ಸುರಕ್ಷತೆ ಮತ್ತು ವೃತ್ತಿ ಬೆಳವಣಿಗೆ ಸಕ್ರಿಯಗೊಳಿಸಲು ವಿವರವಾದ ಮಾಹಿತಿ ಒಳಗೊಂಡಿದೆ.

ಸಾಮಾಜಿಕ ಸೇರ್ಪಡೆಯಲ್ಲಿ ಶ್ರೇಷ್ಠತೆ ಸಾಧಿಸುವ ನಗರಗಳಲ್ಲಿ ಕೈಗಾರಿಕಾ ಒಳಗೊಳ್ಳುವಿಕೆ ಮುಂಚೂಣಿಯಲ್ಲಿರುವ ನಗರಗಳಿಗಿಂತ ಭಿನ್ನವಾಗಿದ್ದು, ಇದರಲ್ಲಿ ವಿಶಿಷ್ಟ ಸಾಮರ್ಥ್ಯ ತೋರಿಸುತ್ತದೆ. ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಕೈಗಾರಿಕಾ ಒಳಗೊಳ್ಳುವಿಕೆಯಲ್ಲಿ ದೇಶದ ಟಾಪ್ 10 ನಗರಗಳ ಪೈಕಿ ಬೆಂಗಳೂರಿಗೆ ಅಗ್ರಸ್ಥಾನ ನೀಡಲಾಗಿದೆ. ಸುರಕ್ಷತಾ ಕಾರ್ಯ ವಿಧಾನಗಳು, ಸಾರ್ವಜನಿಕ ಸೇವೆಗಳು, ಚಲನಶೀಲತಾ ಉಪಕ್ರಮಗಳು ಮತ್ತು ಆರೋಗ್ಯ ಮತ್ತು ಶಿಕ್ಷಣದ ಪ್ರವೇಶದಂತಹ ಬಲವಾದ ಸಾಮಾಜಿಕ ಅಡಿಪಾಯಗಳನ್ನು ಪ್ರತಿಬಿಂಬಿಸುವ ಮೂಲಕ ಎಸ್‌ಐಎಸ್‌ನಲ್ಲಿ ಚೆನ್ನೈ ಅಗ್ರ ಸ್ಥಾನ ಕಾಯ್ದುಕೊಂಡಿದೆ. ಇದಕ್ಕೆ ವ್ಯತಿರಿಕ್ತವಾಗಿ, ಉದ್ದಿಮೆಯಲ್ಲಿ ಮಹಿಳೆಯರ ಸಹಭಾಗಿತ್ವದ ವಿಚಾರದಲ್ಲಿ ಬೆಂಗಳೂರು ಮುಂಚೂಣಿ ಸ್ಥಾನದಲ್ಲಿದೆ. ಇದು ಮಹಿಳೆಯರಿಗೆ ಬಲವಾದ ಕೈಗಾರಿಕಾ ನೆಲೆ, ಉದ್ಯೋಗಾವಕಾಶಗಳು ಮತ್ತು ಔಪಚಾರಿಕ ಆರ್ಥಿಕ ವಲಯಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಪ್ರದರ್ಶಿಸುತ್ತದೆ.

ಉದ್ಯೋಗದಲ್ಲಿ ಮಹಿಳೆಯರ ಭಾಗವಹಿಸುವಿಕೆಯಲ್ಲಿ ಮಕ್ಕಳ ಆರೈಕೆ ಮತ್ತು ಬೆಂಬಲ ನಿರ್ಣಾಯಕ ಪಾತ್ರ ಹೊಂದಿದ್ದು, ಇದು ನಗರವು ಮಹಿಳಾ ಸ್ನೇಹಿಯಾಗಿದೆ ಎಂಬುದಕ್ಕೆ ಪ್ರಮುಖ ಅಂಶವಾಗಿದೆ. ಟಿಸಿಡಬ್ಲ್ಯುಐನ ಭಾಗವಾಗಿ ಟಾಪ್ 10ರಲ್ಲಿರುವ ನಗರಗಳಲ್ಲಿ ವೃತ್ತಿನಿರತ ತಾಯಂದಿರ ಸೌಲಭ್ಯಗಳನ್ನು ಒದಗಿಸುವ ಮೂಲಕ ಮಹಿಳೆಯರ ಉದ್ಯೋಗ ನಿರಂತರತೆ, ಚಲನಶೀಲತೆ ಮತ್ತು ವೃತ್ತಿ ಪ್ರಗತಿಯನ್ನು ಹೇಗೆ ನೇರವಾಗಿ ರೂಪಿಸುತ್ತದೆ ಎಂಬುದನ್ನು ವಿಶ್ಲೇಷಣೆ ತೋರಿಸಿದೆ.

ಟಾಪ್ 5 ಮಹಿಳಾಸ್ನೇಹಿ ನಗರಗಳು

2025ರ ಸ್ಥಾನ	ನಗರ	ರಾಜ್ಯ	ಪ್ರಮಾಣ
1	ಬೆಂಗಳೂರು	ಕರ್ನಾಟಕ	53.29
2	ಚೆನ್ನೈ	ತಮಿಳುನಾಡು	49.86
3	ಪುಣೆ	ಮಹಾರಾಷ್ಟ್ರ	46.27
4	ಹೈದರಾಬಾದ್	ತೆಲಂಗಾಣ	46.04
5	ಮುಂಬೈ ಮಹಾರಾಷ್ಟ್ರ		44.49

ಬಹುಭಾಷಾ ಸಂಸ್ಕೃತಿ

ಬೆಂಗಳೂರು ತನ್ನ ಬಹುಭಾಷಾ, ಬಹುಸಾಂಸ್ಕೃತಿಕ ಪರಿಸರದಿಂದ ಎಲ್ಲ ರಾಜ್ಯದ ಜನರನ್ನು ಸ್ವಾಗತಿಸುತ್ತಾ ಬಂದಿದೆ. ಇಲ್ಲಿಯ ಪ್ರಾದೇಶಿಕ ಭಾಷೆ ಕನ್ನಡವಾಗಿದ್ದರೂ, ಇತರೆ ಭಾಷೆಗಳಿಗೂ ಗೌರವ ನೀಡುವ ಸಂಸ್ಕೃತಿ ಇಲ್ಲಿ ತುಂಬಿರುವುದು ಗಮನಾರ್ಹ. ಮಹಿಳೆಯರಿಗೆ ಇಲ್ಲಿನ ಸಾರ್ವಜನಿಕ ವ್ಯವಸ್ಥೆ, ರಾತ್ರಿ ಸಮಯದಲ್ಲಿ ಹೆಚ್ಚಿನ ಸುರಕ್ಷತೆ, ತಂತ್ರಜ್ಞಾನ ಕಂಪನಿಗಳಲ್ಲಿ ಅವಕಾಶಗಳ ಲಭ್ಯತೆ ಮತ್ತು ಸಮಾನತೆ ನೀಡುವ ಕೆಲಸದ ಪರಿಸರ ಈ ಶ್ರೇಣಿಯಲ್ಲಿ ಪ್ರಮುಖ ಪಾತ್ರವಹಿಸಿದೆ. ಬೇರೆ ರಾಜ್ಯಗಳಿಂದ ಬಂದ ಮಹಿಳೆಯರು ಸಹ ಬೆಂಗಳೂರಿನಲ್ಲಿ ಉತ್ತಮ ಜೀವನ ರೂಪಿಸಿಕೊಂಡಿದ್ದಾರೆ. ಭಾಷಾ ವೈವಿಧ್ಯಕ್ಕೆ ಇಲ್ಲಿ ಎಲ್ಲರೂ ಮನ್ನಣೆ ನೀಡುತ್ತಿದ್ದಾರೆ ಎಂದು ವರದಿ ತಿಳಿಸಿದೆ.

ಫನ್‌ತರಂಗ

– ರಘುಪತಿ ಶೃಂಗೇರಿ –



ಸಮಾಚಾರ ಸಣ್ಣದಲ್ಲ

ಐಎಎಸ್, ಕೆಎಎಸ್ ಪರೀಕ್ಷೆಗಳಿಗೆ ತರಬೇತಿ

ಕಾರವಾರ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕೇಂದ್ರ ಲೋಕ ಸೇವಾ ಆಯೋಗದವರು ನಡೆಸಲಿರುವ ಐಎಎಸ್ ಹಾಗೂ ಕರ್ನಾಟಕ ಲೋಕ ಸೇವಾ ಆಯೋಗದವರು ನಡೆಸಲಿರುವ ಕೆಎಎಸ್ ಮತ್ತಿತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಮೈಸೂರಿನ ಕೇಂದ್ರ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಜ.17 ರೊಳಗಾಗಿ ಬೆಳಗ್ಗೆ 10 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು 0821-2515944 ದೂರವಾಣಿ ಸಂಖ್ಯೆಯನ್ನು ಸಂರ್ಕಿಸಬಹುದೆಂದು ಕರಾಮುವಿ ಕುಲಸಚಿವರಿ ಪ್ರೊ.ನವೀನ್‌ಕುಮಾರ ಎಸ್.ಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಸಲ್ಲಿಕೆಗೆ ಅವಧಿ ವಿಸ್ತರಣೆ

ಕಾರವಾರ: ಪ್ರಸಕ್ತ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ವಿವಿಧ ಯೋಜನೆಗಳಗೆ ಅಲ್ಪಸಂಖ್ಯಾತರ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ಖ್ ಮತ್ತು ಪಾರ್ಸಿ ವಿದ್ಯಾರ್ಥಿಗಳಿಗೆ ಮೆ.ಪೂರ್ವ ವಿದ್ಯಾರ್ಥಿವೇತನ ಮತ್ತು ಮೆ.ನಂತರದ ಶುಲ್ಕ ಮರುಪಾವತಿ ಯೋಜನೆ (ಎಸ್.ಎಸ್.ಪಿ), ಪಿ.ಎಚ್.ಡಿ ಪೆಲೋಶಿಪ್, IIT,IIM,IISCs ಉತ್ತೇಜನ, ವಿದೇಶಿ ವಿದ್ಯಾರ್ಥಿವೇತನ, ಮತ್ತು ಬಿ.ಎಸ್ಸಿ/ಜಿ.ಎನ್.ಎಮ್ ನರ್ಸಿಂಗ್ ಕೋರ್ಸಿಗೆ ಪ್ರೋತ್ಸಾಹಧನ ಯೋಜನೆಗಳಿಗೆ ಆನ್ಲೈನ್‌ನಲ್ಲಿ ಅರ್ಜಿಸಲ್ಲಿ ಸಲ್ಲಿಸು ಜ.31 ವರೆಗೆ ಹಾಗೂ ಬಿ.ಎಡ್ ಕೋರ್ಸ ಪ್ರೋತ್ಸಾಹಧನಕ್ಕೆ ಜ.15 ವರೆಗೆ ಅವಧಿ ವಿಸ್ತರಿಸಲಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಇಲಾಖೆಯ ವೆಬ್ಸೈಟ್ https://dom.karnataka.gov.in ಅಥವಾ ಜಿಲ್ಲಾ ಕಚೇರಿ ದೂರವಾಣಿ ಸಂಖ್ಯೆ:08382-220336/ಸಹಾಯವಾಣಿ: 8277799990ಗೆ ಸಂಪರ್ಕಿಸುವುದು ಅಥವಾ ಹತ್ತಿರದ ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಕ್ಕೆ ಸಂಪರ್ಕಿಸುವಅತೆ ಅಲ್ಪಾ ಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ

ಕಾರವಾರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಜ.14 ರಂದು ಬೆಳಗ್ಗೆ 10 ಗಂಟೆಗೆ ಶಿವಯೋಗಿ ಸಿದ್ದರಾಮೇಶ್ವರ ಜಯಂತಿಯನ್ನು ಸರಕಾರಿ ಕೈಗಾರಿಕ ತರಬೇತಿ ಸಂಸ್ಥೆ ಬಾಡದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಉದ್ಘಾಟಿಸಲಿದ್ದು, ರ್ನಾಟಕ ರಾಜ್ಯ ಮರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಅಧ್ಯಕ್ಷ ಹಾಗೂ ಶಾಸಕ ಸತೀಶ ಕೆ. ಸೈಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಕರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ರ್ಆ.ವಿ ದೇಶಪಾಂಡೆ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರಾದ ಶಿವರಾಮ ಹೆಬ್ಬಾರ್,ದಿನಕರ ಕೆ. ಶೆಟ್ಟಿ, ಭೀಮಣ್ಣ ಟಿ. ನಾಯ್ಕ, ವಿಧಾನ ಪರಿಷತ್ ಶಾಸಕರಾದ ಎಸ್. ವಿ.ಸಂಕನೂರು, ಶಾಂತಾರಾಮ ಬುಡ್ನ ಸಿದ್ದಿ, ಗಣಪತಿ ಡಿ.ಉಳ್ವೇಕರ ಹಾಗೂ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಸತೀಶ ನಾಯ್ಕ ಮತ್ತಿತರರು ಪಾಲ್ಗೊಳ್ಳಲಿದ್ದಾರೆ. ಸಹಾಯಕ ಪ್ರಾಧ್ಯಾಪಕಿ ಹೇಮಲತಾ ಕೆ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಕರಾವಳಿ ದ್ವೀಪಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ

ಕಾರವಾರ: ರಾಜ್ಯದ ಕರಾವಳಿಯಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಗೊಳಿಸುವ ಉದ್ದೇಶದಿಂದ, ಮಂಗಳೂರು, ಉಡುಪಿ, ಉತ್ತರ ಕನ್ನಡ ಜಿಲ್ಲೆಯ ಕರಾವಳಿ

ಪ್ರದೇಶದಲ್ಲಿನ 106 ದ್ವೀಪಗಳಲ್ಲಿನ 20 ದ್ವೀಪಗಳನ್ನು ಅಭಿವೃದ್ಧಿಪಡಿಸಲು ಗುರುತಿಸಲಾಗಿದ್ದು, ಅವುಗಳಲ್ಲಿ ಈಗಾಗಲೇ 10 ದ್ವೀಪಗಳಲ್ಲಿ ಫಿಸಿಬಿಲಿಟಿ ವರ್ಕ್ ಮಾಡಿ, ಇಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಬಹುದೆಂದು ವರದಿ ಪಡೆಯಲಾಗಿದೆ ಎಂದು ಮೀನು ಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಹೇಳಿದ್ದಾರೆ. ಅವರು ಸೋಮವಾರ ಭಟ್ಕಳದಲ್ಲಿ ಆಯೋಜಿಸಲಾದ ಸುದ್ದಿಗೋಷ್ಠಿಯಲ್ಲಿ ಮಾತನಾ ಡಿದರು. ರಾಜ್ಯದ ಕರಾವಳಿ ಪ್ರದೇಶದಲ್ಲಿ ಸಿಆರ್ಝುಡ್ನ ದೊಡ್ಡ ಸಮಸ್ಯೆ ಇದ್ದು, ಅದನ್ನು ಇರ್ತ್ಥ ಪಡಿಸಬೇಕಿದೆ. ಸಿ.ಆರ್.ಝುಡ್ ನ ಪರಿಷ್ಕೃತ ಮ್ಯಾಫ್ ಅನುಮೋದನೆ ಮಾಡಲು ರಾಜ್ಯದಲ್ಲೇ ಇದುವರೆಗೆ ಯಾವುದೇ ಸಂಸ್ಥೆ ಇಲ್ಲವಾಗಿದ್ದು, ಇದಕ್ಕಾಗಿ ಪಕ್ಕದ ರಾಜ್ಯಗಳನ್ನು ಅವಲಂಬಿಸಬೇಕಿತ್ತು. ಆದರೆ ಪ್ರಸ್ತುತ ರಾಜ್ಯದಲ್ಲೇ ಸಿಆರ್ಝುಡ್ ಮ್ಯಾಫ್ ಅನುಮೋದನೆ ಮಾಡುವ ಸಂಸ್ಥೆಯನ್ನು ಗುರುತಿಸಲಾಗಿದ್ದು, ಇದರಿಂದ ರಾಜ್ಯ ದಲ್ಲಿನ ಸಿಆರ್ಝುಡ್ ಸಂಬಂದಿತ ಸಮಸ್ಯೆಗಳಿಗೆ ತ್ವರಿತ ವಾಗಿ ಪರಿಹಾರ ದೊರೆಯಲಿದೆ ಎಂದರು. ಅವರಿಗೆ ಗತ್ಯವಿರುವ ಬ್ಯಾಂಕ್ ಸಾಲ, ಸಬ್ಸಿಡಿ, ರಸ್ತೆ, ಕುಡಿಯುವ ನೀರು, ವಿದ್ಯುತ್ ಸೇರಿದಂತೆ ಪೂರಕವಾದ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದರು.

{ಮಲ್ಲಿಕಾರ್ಜುನ ಖರ್ಗೆ} ಎಐಸಿಸಿ ಅಧ್ಯಕ್ಷ

ಜಿ ರಾಮ್ ಜಿ ವಿಚಾರದಲ್ಲಿ ಕಾಂಗ್ರೆಸ್ ಹೋರಾಟ ನಿಲ್ಲಲ್ಲ, ಇಲ್ಲಿಗೆ ಬಿಡಲ್ಲ. ನರೇಗಾ ರೈಟು ವರ್ಕ್ ಕಾರಣಕ್ಕಾಗಿ ಕೊಡುಗೆ ಕೊಟ್ಟಿದ್ದು. ಮನಮೋಹನ್ ಸಿಂಗ್ ತಂದ ಕಾನೂನು ಬಡವರ ಹೊಟ್ಟೆ ತುಂಬಿಸುವುದಕ್ಕೆ ತಂದ ಯೋಜನೆ. ಆದರೆ ಇವರು ಬಡವರಿಗೆ ಸಹಾಯ ಮಾಡುವ ಕಾನೂನಿಗೆ ಕೊಡಲಿ ಪೆಟ್ಟು ಹಾಕುತ್ತಿದ್ದಾರೆ. ಪಂಚಾಯಿತಿಯಲ್ಲಿ ನಡೆಯುವ ಕೆಲಸಗಳಿಗೆ ಅಡ್ಡಗಾಲು ಹಾಕುವ ಯೋಜನೆ ಮಾಡ್ತಿದ್ದಾರೆ.

ಗ್ರಾಹಕರ ಹಕ್ಕುಗಳ ಅರಿವು ಅತ್ಯಗತ್ಯ

ಕಾರವಾರ ಶಿವಾಜಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಗ್ರಾಹಕರ ದಿನಾಚರಣೆ| ಅಪರ ಜಿಲ್ಲಾಧಿಕಾರಿ ಸಾಜೀದ್ ಮುಲ್ಲಾ ಹೇಳಿಕೆ

ಕಾರವಾರ: ಉತ್ಪಾದಕರು ಕೇವಲ ಲಾಭ ಗಳಿಸುವ ಉದ್ದೇಶದಿಂದ ವಸ್ತುಗಳನ್ನು ಉತ್ಪಾದಿಸಿ ಮಾರಾಟ ಮಾಡುವಂತ ಪರಿಸ್ಥಿತಿ ನಿರ್ಮಾಣಗೊಂಡಿದ್ದು, ಗ್ರಾಹಕರು ಸರಕು, ಸೇವೆಗಳನ್ನು ಪಡೆಯುವಾಗ ಹಿಂದಿಗಿಂತಲೂ ಹೆಚ್ಚು ಜಾಗೃತರಾಗಬೇಕು. ಗ್ರಾಹಕರ ಹಕ್ಕುಗಳ ಮಹತ್ವವನ್ನು ತಿಳಿದುಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಸಾಜೀದ್ ಮುಲ್ಲಾ ಹೇಳಿದರು.

ಅವರು ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಅಯೋಗ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಕಾರವಾರ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಆಹಾರ ಸುರಕ್ಷತೆ ಇಲಾಖೆ, ಕರ್ನಾಟಕ ಆಹಾರ ನಿಗಮ, ಹಾಗೂ ಶಿವಾಜಿ ಶಿಕ್ಷಣ ಮಹಾವಿದ್ಯಾಲಯ ಕಾರವಾರ ಇವರ ಸಂಯುಕ್ತ ಆಶ್ರಯದಲ್ಲಿ, ಕಾರವಾರದ ಶಿವಾಜಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಯೋಜಿಸಲಾದ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಆಧುನಿಕ ಕಾಲದಲ್ಲಿ ಯುವ ಜನತೆ ಮನೆಯಲ್ಲಿ ಕುಳಿತು ಆನ್ಲೈನ್ ಸೇವೆ ಪಡೆಯುವುದು ಹೆಚ್ಚಾಗಿದ್ದು, ಇದರಲ್ಲೇ ಹೆಚ್ಚಿನ ಮೋಸಕ್ಕೆ ಒಳಗಾಗುತ್ತಿದ್ದಾರೆ. ಯಾವುದೇ ವಸ್ತು ಖರೀಸುವಾಗ ಅದರ ಗುಣಮಟ್ಟ, ಬೆಲೆ ಕುರಿತು ಜಾಗೃತಿ ವಹಿಸಿ ಪರಿಶೀಲಿಸಿದ ನಂತರವೇ ಖರೀದಿಸಬೇಕು. ಅನಾವಶ್ಯಕವಾಗಿ ಹಣವನ್ನು ಮಾಡಬಾರದು. ಯುವ ಜನತೆಗೆ ಸ್ವಾಮಿ ವಿವೇಕಾನಂದರ , ಏಳಿ, ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದ್ದಿರಿ ಎಂಬ ಕರೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಯಶಸ್ಸು ದೊರೆಯಲಿದೆ ಎಂದು ವಿದ್ಯರ್ಥಿಗಳಿಗೆ ಕಿವಿಮಾತು ಹೇಳಿದರು.

ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕಾರ್ಯಕ್ರಮವನ್ನು ಅಪರ ಜಿಲ್ಲಾಧಿಕಾರಿ ಸಾಜೀದ್ ಮುಲ್ಲಾ ಅವರು ಉದ್ಘಾಟಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕರ್ಯರ್ಶಿ ದಿವ್ಯಶ್ರೀ ಸಿ.ಎಂ ಮಾತನಾಡಿ, ಇಡೀ ವಿಶ್ವವೇ ಒಂದು ಮಾರುಕಟ್ಟೆ, ಮನುಷ್ಯ ಒಬ್ಬ ಗ್ರಾಹಕ. ಮನುಷ್ಯನಿಗೆ ಉಚಿತವಾಗಿ ಸಿಗುವ ನೀರು, ಗಾಳಿ, ಬೆಳಕು, ಪ್ರಕೃತಿಯಲ್ಲಿ ಯಾವುದೇ ಮೋಸವಿಲ್ಲ ಆದರೆ ಇದನ್ನು ಕಲುಷಿತಗೊಳಿಸಲಾಗುತ್ತಿದೆ. ಹಣ ಕೊಟ್ಟು ಖರೀದಿಸುವ ವಸ್ತುಗಳಲ್ಲಿ ಮೋಸ ಹೋಗಲಾಗುತ್ತದೆ. ಗ್ರಾಹಕರು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡಾಗ ಮಾತ್ರ ಅವರ ಹಕ್ಕುಗಳನ್ನು ರಕ್ಷಣೆ ಮಾಡಬಹುದು. ಇತ್ತಿಚಿನ ದಿನಗಳಲ್ಲಿ ವ್ಯಾಪಾರಸ್ಥರು ಗ್ರಾಹಕರ ಆರೋಗ್ಯದ ದೃಷ್ಟಿಯನ್ನು ನೋಡದೇ ನಕಲಿ ವಸ್ತುಗಳನ್ನು ಸೃಷ್ಟಿ ಲಾಭಾಂಶಗಳಿಗಾಗಿ ಮಾರಾಟ ಮಾಡುತ್ತಿದ್ದು, ಗ್ರಾಹಕರು ಕಡಿಮೆ ಬೆಲೆಗೆ ಸಿಗುವ ವಸ್ತುಗಳನ್ನು ಹಾಗೂ ಜಾಹಿರಾತುಗಳನ್ನು ನಂಬಿ, ವಸ್ತುಗಳನ್ನು ಖರೀದಿಸದೇ ಅದರ ಗುಣಮಟ್ಟವನ್ನು ಅರಿತುಕೊಂಡು ಖರೀದಿಸಬೇಕು. ಗ್ರಾಹಕರ ಹಕ್ಕುಗಳು ಮತ್ತು ಕಾನೂನಿನ ಬಗ್ಗೆ ಅರಿವು ಇದ್ದಲ್ಲಿ ಗ್ರಾಹಕರಿಗೆ ಆಗುವ ಅನ್ಯಾಯವನ್ನು ತಡೆಯಬಹುದು ಎಂದರು.

> **ಯುವ ಜನತೆಗೆ ಸ್ವಾಮಿ ವಿವೇಕಾನಂದರ , ಏಳಿ, ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದ್ದಿರಿ ಎಂಬ ಕರೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಯಶಸ್ಸು ದೊರೆಯಲಿದೆ.**
> **-ಸಾಜೀದ್ ಮುಲ್ಲಾ,** ಅಪರ ಜಿಲ್ಲಾಧಿಕಾರಿ

ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಮಾರುತಿ ವಡ್ಡರ ಮಾತನಾಡಿ, ಗ್ರಾಹಕರ ಹಿತ ಕಾಯುವ ಉದ್ದೇಶದಿಂದ ಭಾರತದಲ್ಲಿ ವಿಶ್ವ ಗ್ರಾಹಕರ ದಿನಾಚರಣೆಯನ್ನು ಮರ್ಚ 15 ರಂದು ಹಾಗೂ ಡಿ.24 ರಂದು ರಾಷ್ಟ್ರೀಯ ಗ್ರಾಹಕರ ದಿನಾಚರಣೆಯನ್ನು ಆಚರಿಸಲಾಗುತ್ತದೆ. ತಾಯಿಯ ರ್ಭದಿಂದ ಮರಣದವರೆಗೂ ಪ್ರತಿಯೊಬ್ಬರು ಗ್ರಾಹಕರು. ತಾವು ಮೋಸ ಹೋಗಿರುವುದು ತಿಳಿದ ತಕ್ಷಣ ಗ್ರಾಹಕರ ವ್ಯಾಜ್ಯಗಳಿಗೆ ಪರಿಹಾರ ಆಯೋಗಕ್ಕೆ ಸೂಕ್ತ ದಾಖಲೆಗಳೊಂದಿಗೆ ದೂರು ನೀಡಿ 3 ತಿಂಗಳೊಳಗೆ ಪರಿಹಾರ ಕಂಡುಕೊಳ್ಳಬಹುದು. ಗ್ರಾಹಕರ ಹಿತ ಕಾಯುವದಕ್ಕಾಗಿಯೇ ಆಯೋಗವು ಕರ್ಯನರ್ವಹಿಸುತ್ತದೆ ಎಂದರು.

ಕಾರವಾರದ ಪ್ರಥಮ ರ್ಜೆ ಮಹಿಳಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಹೇಮಲತಾ ಕೆ ಗ್ರಾಹಕರ ಹಕ್ಕುಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಅಂಗವಾಗಿ ಆಯೋಜಿಸಲಾದ ಪ್ರಬಂಧ ವಿಜೇತರಿಗೆ ಪ್ರಶಸ್ತಿ ಪತ್ರ ಮತ್ತು ಬಹುಮಾನ ವಿತರಿಸಲಾಯಿತು.

ಕರ್ಯಕ್ರಮದಲ್ಲಿ ಶಿವಾಜಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲೆ ಡಾ. ಸುಮನ್ ಗೋವಿಂದ ಸಾವಂತ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯೆ ನೈನಾ ಅಶೋಕ ಕಾಮತೆ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಸಂತೋಷ್ ಭಾಗವತ್, ಮಹಾವಿದ್ಯಾಲಯದ ಉಪನ್ಯಾಸಕರು, ವಿದ್ಯರ್ಥಿಗಳು ಉಪಸ್ಥಿತರಿದ್ದರು. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕ ಮಂಜುನಾಥ್ ಡಿ ರೇವಣ್ಕರ್‌ಸ್ವಾಗತಿಸಿ ಪ್ರಾಸ್ತವಿಕವಾಗಿ ಮಾತನಾಡಿದರು. ಶಿವಾಜಿ ಶಿಕ್ಷಣ ಮಹಾ ವಿದ್ಯಾಲಯದ ಎನ್.ಎಸ್.ಎಸ್ ಕರ್ಯಕ್ರಮದ ಅಧಿಕಾರಿ ನವೀನ್ ದೇವರಭಾವಿ ನಿರೂಪಿಸಿ, ವಂದಿಸಿದರು.

ಹೆಗಡೆ ವೇದಿಕೆ ಟ್ರಸ್ಟ್ ಆಗಿ ಪರಿವರ್ತನೆ

ಶಿರಸಿ: ರಾಮಕೃಷ್ಣ ಹೆಗಡೆ ಅಭಿಮಾನ ವೇದಿಕೆಯನ್ನು ಇನ್ನು ಮುಂದೆ ಟ್ರಸ್ಟ್ ಆಗಿ ಬದಲಾಯಿಸಿ ಇನ್ನಷ್ಟು ಹೆಗಡೆ ಅವರ ನೆನಪಿನಲ್ಲಿ ಕಾರ್ಯಕ್ರಮ ಜೋಡಿಸಿಕೊಳ್ಳಲಾಗುತ್ತದೆ ಎಂದು ವೇದಿಕೆ ಕಾರ್ಯಾಧ್ಯಕ್ಷ ವೆಂಕಟೇಶ ಹೆಗಡೆ ಹೊಸಬಾಳೆ ತಿಳಿಸಿದ್ದಾರೆ.

ಅವರು ರಾಷ್ಟ್ರ ಕಂಡ ಮುತ್ಸದ್ದಿ ರಾಜಕಾರಣಿ, ಮಾಜಿ ಸಿಎಂ ದಿ. ರಾಮಕೃಷ್ಣ ಹೆಗಡೆ ಅವರ ಸಂಸ್ಮರಣ ಕಾರ್ಯಕ್ರಮದ ಭಾಗವಾಗಿ ನಗರದ ಯಲ್ಲಾಪುರ ನಾಕಾದಲ್ಲಿನ ರಾಮಕೃಷ್ಣ ಹೆಗಡೆ ಪುತ್ಥಳಿಗೆ ಮಾಲಾರ್ಪಣೆ ನಡೆಸಿ ಮಾತನಾಡಿದರು.

ಈವರೆಗೆ ವೇದಿಕೆಯಾಗಿದ್ದನ್ನು ಇನ್ನೊಂದು ವಾರದೊಳಗೆ ಟ್ರಸ್ಟ್ ಆಗಿ ರಚಿಸಲಾಗುತ್ತದೆ. ಹನ್ನೊಂದು ಜನರು ಟ್ರಸ್ಟ್ ನ ಸದಸ್ಯರಾಗಿ ಕಾರ್ಯ ಮಾಡಲಿದ್ದಾರೆ. ಏಪ್ರಿಲ್ ತಿಂಗಳಲ್ಲಿ ಹೆಗಡೆ ಅವರ ಅಭಿಮಾನಿಗಳ ಜೊತೆ ಸೇರಿ ಹೆಗಡೆ ಜನ್ಮ ಶತಮಾನೋತ್ಸವ ಆಚರಿಸಲಾಗುತ್ತದೆ ಎಂದರು. ಟಿಎಂಎಸ್ ಅಧ್ಯಕ್ಷ, ಹೆಗಡೆ ಅವರ ಒಡನಾಡಿ ಜಿ.ಟಿ.ಹೆಗಡೆ ತಟ್ಟಿಸರ, ಶಿರಸಿ ಎಟಿಎಂಎಸ್ ಸಹಕಾರಿಯ ಒಡನಾಟ ಹಾಗೂ ಹೆಗಡೆ ಅವರೊಂದಿಗಿನ ತಮ್ಮ ಬಾಂಧವ್ಯ ಹಂಚಿಕೊಂಡರು. ಈ ವೇಳೆಚಿತ್ರನಟ ನೀರ್ನಳ್ಳಿ ರಾಮಕೃಷ್ಣ, ದೀಪಕ ದೊಡ್ಡೂರು, ಆರ್.ಎಂ.ಹೆಗಡೆ, ಎಂ.ಆರ್.ಕಾನಗೋಡ, ಕೆ.ಆರ್.ಹೆಗಡೆ, ರಾಜು ಉಗ್ರಾಣಕರ, ಶಕುಂತಲಾ ಶೆಟ್ಟಿ ಹುಬ್ಬಳ್ಳಿ, ಶಾಂತಾರಾಮ್ ಬಂಡಿ ಮನೆ, ಮುಖೇಶ, ನರಸಿಂಹ ಭಟ್ಟ ಮಣದೂರು ಸೇರಿದಂತೆ ಅನೇಕರಿದ್ದರು.

ದಿ. ರಾಮಕೃಷ್ಣ ಹೆಗಡೆ ಅವರ ಸಂಸ್ಮರಣ ಕಾರ್ಯಕ್ರಮದ ಭಾಗವಾಗಿ ನಗರದ ಯಲ್ಲಾಪುರ ನಾಕಾದಲ್ಲಿನ ರಾಮಕೃಷ್ಣ ಹೆಗಡೆ ಪುತ್ಥಳಿಗೆ ವೆಂಕಟೇಶ ಹೆಗಡೆ ಹೊಸಬಾಳೆ ಅವರು ಮಾಲಾರ್ಪಣೆ ಮಾಡಿದರು.

ಭಾರತ ನಿರಾಶ್ರಿತರಿಗೆ ಆಶ್ರಯ ನೀಡುವ ಪುಣ್ಯಭೂಮಿ

ಮುಂಡಗೋಡ: ಬೇರೆ ಬೇರೆ ದೇಶದಲ್ಲಿ ದಬ್ಬಾಳಿಕೆಗೊಳಗಾಗಿ ನೆಲೆ ಕಳೆದುಕೊಂಡವರಿಗೆ ಆಶ್ರಯ ನೀಡುವ ಪುಣ್ಯ ಭೂಮಿ ಇದಾಗಿದ್ದು, ಹಿಂದು ರಾಷ್ಟ್ರವಾಗಿರುವುದರಿಂದ ಮಾತ್ರ ಇದು ಸಾಧ್ಯವಾಗಿದೆ ಎಂದು ಪುಣ್ಯಕ್ಷೇತ್ರ ಸಂರಕ್ಷಣಾ ಸಮಿತಿ ಸಂಚಾಲಕ ವಸಂತ ಗಿಳಿಯಾರ ಹೇಳಿದರು.

ಭಾನುವಾರ ಸಂಜೆ ಪಟ್ಟಣದ ವಿವೇಕಾನಂದ ಬಯಲು ರಂಗ ಮಂದಿರದಲ್ಲಿ ನಡೆದ ಹಿಂದೂ ಸಮ್ಮೇಳನದಲ್ಲಿ ಅವರು ಮಾತನಾಡಿದರು. ಟಿಬೇಟಿಯನ್ ಸೇರಿದಂತೆ ಹಲವಾರು ನಿರಾಶ್ರಿತರಿಗೆ ಆಶ್ರಯ ನೀಡಿದ ದೇಶ ನಮ್ಮದು. ಭಾರತ ಹಿಂದೂ ರಾಷ್ಟ್ರವಾಗಿದ್ದಕ್ಕೆ ಆಶ್ರಯ ನೀಡಲು ಸಾಧ್ಯವಾಗಿದೆ. ಹೊರತು ಅನ್ಯ ಧರ್ಮಿಯರ ರಾಷ್ಟ್ರಗಳಲ್ಲಿ ಇದು ಸಾಧ್ಯವಿಲ್ಲ ಎಂದರು.

ಜ್ಞಾನದಿಂದ ಆಳುವ ಧ್ಯೇಯ ಹಿಂದು ಧರ್ಮದ್ದು, ಜಗತ್ತಿಗೆ ಯೋಗ ಶಾಸ್ತ್ರವನ್ನು ಹೇಳಿಕೊಟ್ಟಿದ್ದು ಭಾರತ. ಅದನ್ನು ಇತರೆ ದೇಶಗಳು ಅಳವಡಿಸಿಕೊಂಡರೆ ನಾವು ಕಡೆಗಣಿಸುತ್ತಿರುವುದು ವಿಷಾದನಿಯ ಸಂಗತಿ ಎಂದರು. ಮೊದಲೆಲ್ಲ ಬೆಳಗಾಗುತ್ತಿದ್ದಂತೆ ನಮ್ಮ ಮಹಿಳೆಯರು ರಂಗೋಲಿ ಹಾಕುತ್ತಿದ್ದರು. ಸಂಜೆಯಾದರೆ ಪ್ರತಿ ಮನೆಗಳಲ್ಲಿ ಭಜನೆಗಳು ನಡೆಯುತ್ತಿದ್ದವು. ಆದರೆ ಇಂದು ಅವುಗಳನ್ನು ಮರೆತುಬಿಟ್ಟಿದ್ದಾರೆ. ಹಿಂದೂ ಧರ್ಮದಲ್ಲಿ ಮಣ್ಣನ್ನು ಕೂಡ ಮಾತೆ ಎಂದು ಪೂಜಿಸಲಾಗುತ್ತದೆ. ಜಗತ್ತಿನ ಬೇರೆ ಧರ್ಮದವರು ಹೆಣ್ಣು ಮಕ್ಕಳ ಹಿಜಾಬಿನ ಕತ್ತಲ ಕೂಪದಲ್ಲಿ ಕೂಡಿಹಾಕುತ್ತಾರೆ ಎಂದು ತಿಳಿಸಿದರು. ಆರೆಸ್ಸೆಸ್ ಶಿರಸಿ ವಿಭಾಗದ ಸಂಪರ್ಕ ಪ್ರಮುಖ ಶ್ರೀಧರ ಹಿರೇಹದ್ದ ಮಾತನಾಡಿ, ಒಬ್ಬ ವ್ಯಕ್ತಿ ಸಿಕ್ಕರೆ ನೆಚ್ಚಿನ ಬಂಧು ಆಗಬೇಕು ಎನ್ನುವುದು ಹಿಂದೂವಿನ ಅರ್ಥ ಎಂದು ವಿವೇಕಾನಂದರು ಹೇಳಿದ್ದರು. ಈ ಹಿಂದೆ ಪರ್ಷಿಯನ್ನರು ಸಿಂಧೂ ನದಿಯನ್ನು ಉಚ್ಚರಿಸಲಾಗದೆ ಹಿಂದೂ ಎಂದು ಕರೆದರು. ಭಾರತಕ್ಕೆ ಮೂರು ಹೆಸರು ಇದೆ ಎಂಬುದು ಇತಿಹಾಸ. ಧರ್ಮಕ್ಕೆ ಜಾತಿ ಉಲ್ಲೇಖಿಸಬಾರದು. ಧರ್ಮ ಶಬ್ಧಕ್ಕೆ ವಿವೇಚನೆ ಕಳೆದಕೊಂಡಿದೆ ಎಂದರು. ಆರೆಸ್ಸೆಸ್ ವ್ಯಕ್ತಿಗೆ ಸಂಸ್ಕಾರ ಕಲಿಸಿದೆ. ಲಕ್ಷಾಂತರ ಸ್ವಯಂ ಸೇವಕರು ಸಮಾಜ ಸೇವೆ ಮಾಡುತ್ತಿದ್ದಾರೆ ಎಂದರು.

ಮುಂಡಗೋಡ ಭಾನುವಾರ ಸಂಜೆ ಪಟ್ಟಣದಲ್ಲಿ ಹಿಂದೂ ಸಮ್ಮೇಳನ ನಡೆಯಿತು.

ಕುಮಟಾದಲ್ಲಿ ಅದ್ದೂರಿಯಾಗಿ ಜರುಗಿದ ಸ್ನೇಹಕೂಟ

ಸ್ನೇಹಕೂಟದಲ್ಲಿ ರಾಮನಾಥ ಶ್ರೀಧರ ಶಾನಭಾಗ (ಧೀರೂ) ದಂಪತಿಗಳನ್ನು ಯುವ ಸೇವಾವಾಹಿನಿ ವತಿಯಿಂದ ಸನ್ಮಾನಿಸಲಾಯಿತು.

ಕುಮಟಾ: ಇಲ್ಲಿನ ಗೌಡ ಸಾರಸ್ವತ ಬ್ರಾಹ್ಮಣ ಸಮಾಜ ಯುವ ಸೇವಾವಾಹಿನಿ ವತಿಯಿಂದ ಪ್ರತಿವರ್ಷ ನಡೆಸಲಾಗುವ ಸ್ನೇಹಕೂಟ ಅದ್ದೂರಿಯಾಗಿ ಚಿತ್ರಗಿಯ ವಿಷ್ಣು ತೀರ್ಥದ ಪರಿಸರದಲ್ಲಿ ರವಿವಾರ ಸಂಪನ್ನಗೊಂಡಿತು.

ಮುಸ್ಸಂಜೆಯಲ್ಲಿ ನಡೆದ 30ನೇ ವರ್ಷದ ಈ ಸ್ನೇಹಕೂಟದಲ್ಲಿ ರಂಗು ರಂಗಿನ ದೀಪಾಲಂಕಾರದೊಂದಿಗೆ ವಿಷ್ಣು ತೀರ್ಥದ ಕೆರೆ ಹಾಗೂ ಆವರಣವನ್ನು ಅಲಂಕರಿಸಿದ್ದು ಕಾರ್ಯಕ್ರಮಕ್ಕೆ ಇನ್ನಷ್ಟು ಮೆರಗು ತಂದಿತ್ತು. ಜಿಎಸ್ಬಿ ಸಮಾಜ ಬಾಂಧವರು ಸಂತೋಷದಿಂದ ಸ್ನೇಹಕೂಟದಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

ಸ್ನೇಹಕೂಟದಲ್ಲಿ ಚಿಕ್ಕ ಮಕ್ಕಳಿಗೆ ಹಾಗೂ ಸಮಾಜ ಬಾಂಧವರಿಗೆಲ್ಲ ವಿವಿಧ ಆಟದ ಸ್ಪರ್ಧೆ,ಪ್ರಾಥಮಿಕ ಹಾಗೂ ಮಾಧ್ಯಮಿಕ ವಿದ್ಯಾರ್ಥಿಗಳಿಗೆ ಛದ್ಮವೇಶ ಸ್ಪರ್ಧೆ ಏರ್ಪಡಿಸಲಾಗಿತ್ತು. ಬಂಧು, ಭಗಿನಿಯರಿಗೂ ಕೂಡ ತಮ್ಮ ತಮ್ಮ ಆಸಕ್ತಿಯ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶಿಸಲು ಅವಕಾಶ ಕಲ್ಪಿಸಲಾಗಿತ್ತು.

ಸನ್ಮಾನ: ಪಟ್ಟಣದ ಮೂರೂಕಟ್ಟೆಯ ರಥಬೀದಿಯಲ್ಲಿರುವ ವೆಂಕಟರಮಣ ದೇವಸ್ಥಾನದ(ಮಠ) ಪೂರ್ವ ವೈವಾಟಿ ಮೊಕ್ತೇಸರ ವಸುದೇವ ಯಶ್ವಂತ ಪ್ರಭು, ಕೊಂಕಣ ಎಜ್ಯುಕೇಶನ್ ಟ್ರಸ್ಟ್ನ ಬಾಲಮಂದಿರದ ಶಿಕ್ಷಕಿ ಜಯಾ ಅರುಣ ಶಾನಭಾಗ ಹಾಗೂ ಈ ಕುಮಟಾ ಅರ್ಬನ್ ಬ್ಯಾಂಕ್‌ನ ಅಧ್ಯಕ್ಷ ರಾಮನಾಥ ಶ್ರೀಧರ ಶಾನಭಾಗ (ಧೀರೂ) ದಂಪತಿಗಳನ್ನು ಸಮಾಜ ಯುವ ವಾಹಿನಿ ವತಿಯಿಂದ ಸನ್ಮಾನಿಸಲಾಯಿತು.

ಸನ್ಮಾನಕ್ಕೆ ಪ್ರತಿಯಾಗಿ ಮಾತನಾಡಿದ ಧೀರೂ ಶಾನಭಾಗ, ಈ ಸನ್ಮಾನಕ್ಕೆ ನಾವು ಯುವವಾಹಿಸಿ ಹಾಗೂ ಸಮಾಜಕ್ಕೆ ಆಭಾರಿಯಾಗಿದ್ದೇವೆ. ಇವತ್ತು ಈ ಕಾರ್ಯಕ್ರಮ ಸೇವಾ ವಾಹಿನಿ ಯುವಕರೆಲ್ಲ ಸೇರಿ ಉತ್ತಮವಾಗಿ ಸಂಘಟಿಸಿದ್ದಾರೆ. ಮಕ್ಕಳಿಗೆ ಉತ್ತಮ ಸಂಸ್ಕಾರ, ಶಿಕ್ಷಣ ನೀಡಿ ಜತೆಗೆ ಅವರ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಿ. ದೊಡ್ಡವರೂ ಕೂಡ ಇಂದಿನ ದಿನಗಳಲ್ಲಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಸಿಕ್ಕ ಸಿಕ್ಕ ತಿಂಡಿ ತಿನಿಸುಗಳನ್ನು ತಂದುಕೊಟ್ಟು ಮಕ್ಕಳ ಆರೋಗ್ಯ ಕೆಡಿಸಬೇಡಿ. ಮಕ್ಕಳಿಗೆ ಶಿಕ್ಷಣ ಉತ್ತಮ ಆರೋಗ್ಯದೊಂದಿಗೆ ಅವರನ್ನು ಬೆಳೆಸಿ ಎಂದರು.

ಯುವ ಸೇವಾವಾಹಿನಿ ಅಧ್ಯಕ್ಷ ಅನಂತ ಬಾಬು ಶಾನಭಾಗ ಸ್ವಾಗತಿಸಿದರು. ಚೇತನ ಪ್ರಭು ವರದಿ ವಾಚಿಸಿದ್ದರು. ಕಾರ್ಯಕ್ರಮ ಸಂಘಟನೆಯನ್ನು ಯುವ ಸೇವಾ ವಾಹಿನಿಯ ಎಲ್ಲ ಸದಸ್ಯರು ಅಚ್ಚುಕಟ್ಟಾಗಿ ನಿರ್ವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದರು. ಲಕ್ಷ್ಮೀದಾಸ ನಾಯಕ ಉಪಸ್ಥಿತರಿದ್ದರು.

ಮಾರಿಕಾಂಬಾ ಕ್ರೀಡಾಂಗಣದಲ್ಲಿ ಸಂಸದ್ ಖೇಲ್ ಮಹೋತ್ಸವ, ತಾಲೂಕು ಮಟ್ಟದ ಕ್ರೀಡಾಕೂಟ

ವ್ಯಸನ ಮುಕ್ತ ಸಮಾಜ ನಿರ್ಮಾಣ ಅಗತ್ಯ: ಸಂಸದ

ಶಿರಸಿ: ಮಾದಕ ವ್ಯಸನ ಮುಕ್ತ ಸಮಾಜ ನಿರ್ಮಾಣದ ಗುರಿಯೊಂದಿಗೆ ಕ್ರೀಡೆಗೆ ಮಹತ್ವ ನೀಡುವುದು ಸಂಸದ್ ಖೇಲ್ ಕ್ರೀಡಾ ಮಹೋತ್ಸವದ ಮೂಲ ಉದ್ದೇಶವಾಗಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಅವರು ಸೋಮವಾರ ನಗರದ ಮಾರಿಕಾಂಬಾ ಕ್ರೀಡಾಂಗಣದಲ್ಲಿ ಸಂಸದ್ ಖೇಲ್ ಮಹೋತ್ಸವದ ತಾಲೂಕಾ ಮಟ್ಟದ ಕ್ರೀಡಾಕೂಟದಲ್ಲಿ ಕ್ರೀಡಾ ಧ್ವಜಾರೋಹಣ ನೇರವೇರಿಸಿ ಮಾತನಾಡಿದರು.

ಇತ್ತೀಚಿನ ಯುವ ಜನತೆ ಮೊಬೈಲ್, ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆಯಿಂದ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಂದ ವಿಮುಖರಾಗುತ್ತಿರುವುದು ವಿಷಾದನೀಯ. ಯುವಶಕ್ತಿಯು ಕ್ರೀಡೆಗಳಲ್ಲಿ ಸದ್ಬಳಕೆಯಾಗಬೇಕು ಎಂಬುದು ನಮ್ಮ ಆಶಯವಾಗಿದ್ದು, ಗ್ರಾಮೀಣ ಭಾಗದ ಯುವಕರಲ್ಲಿ ಬಡತನ ಇತ್ಯಾದಿ ಕಾರಣಗಳಿಂದ ಅವಕಾಶ ವಂಚಿತರಾಗಬಾರದು. ಅವರ ಪ್ರತಿಭೆ ಗುರುತಿಸುವ ಕೆಲಸ ಇಂತಹ ಕ್ರೀಡಾಕೂಟದಿಂದ ಮಾಡಲಾಗುತ್ತಿದೆ. ಭಾರತವು 2036 ರಲ್ಲಿ ಒಲಂಪಿಕ್ ಕ್ರೀಡೆ ಸಂಘಟಿಸಲು ಇದ್ದತೆ ಮಾಡಿಕೊಂಡಿದ್ದು, ದೂರದೃಷ್ಟಿಯಿಂದ ದೇಶದ ಯುವಕರು ಈಗಿಂದಲೇ ತಯಾರಿಗೊಳ್ಳಬೇಕಾಗಿದೆ. 2030 ರಲ್ಲಿ ಕಾಮನ್ವೆಲ್ತ್ ಕ್ರೀಡಾ ಕೂಟ ಸಂಘಟಿತವಾಗುತ್ತಿದೆ. ಆ ಕ್ರೀಡಾಕೂಟದಲ್ಲಿ ಇಂದಿನಿಂದಲೇ ಸಿದ್ಧರಾಗಬೇಕು ಎಂದು ಕರೆ ನೀಡಿದರು.

ಸಂಸದ ಖೇಲ್ ಮಹೋತ್ಸವದ ತಾಲೂಕಾ ಸಂಚಾಲಕ ನವೀನ ಶೆಟ್ಟಿ ಚಿಪಗಿ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ಆಶಯದಂತೆ ಕ್ಷೇತ್ರದ ಯುವಕರಲ್ಲಿ ಕ್ರೀಡಾ ಪ್ರತಿಭೆಯನ್ನು ಉತ್ತೇಜಿಸಲು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ನೇತೃತ್ವದಲ್ಲಿ ಅತ್ಯುತ್ತಮ ರೀತಿಯಲ್ಲಿ ಕ್ರೀಡಾಕೂಟವನ್ನು ಸಂಘಟಿಸಲಾಗಿದೆ ಎಂದರು. ಉದ್ಯಮಿ ಶ್ರೀನಿವಾಸ ಹೆಬ್ಬಾರ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರುಪ್ರಸಾದ ಹೆಗಡೆ ಹರ್ತೆಬೈಲ್, ಗ್ರಾಮೀಣ ಮಂಡಲಾಧ್ಯಕ್ಷೆ ಉಷಾ ಹೆಗಡೆ, ಶಿರಸಿ ನಗರ ಮಂಡಲಾಧ್ಯಕ್ಷ ಆನಂದ ಸಾಲೇರ, ಬನವಾಸಿ ಮಂಡಲಾಧ್ಯಕ್ಷ ರಮೇಶ ನಾಯ್ಕ ಕುಪ್ಪಳ್ಳಿ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಪ್ರೇಮಕುಮಾರ ನಾಯ್ಕ, ಪ್ರಮುಖರಾದ ಅನಂತಮೂರ್ತಿ ಹೆಗಡೆ, ರಮಾಕಾಂತ ಭಟ್, ಸದಾನಂದ ಭಟ್ಟ ನಿಡಗೋಡ, ನಾಗರಾಜ ನಾಯ್ಕ, ರಾಘವೇಂದ್ರ ಶೆಟ್ಟಿ, ಶಿಲ್ಪಾ ನಾಯ್ಕ, ವೀಣಾ ಶೆಟ್ಟಿ, ಯುವಜನ ಸೇವಾ ಹಾಗೂ ಕ್ರೀಡಾಧಿಕಾರಿ ಕಿರಣಕುಮಾರ ನಾಯ್ಕ, ಪರಿವೀಕ್ಷಕ ಬಿ.ವಿ.ಗಣೇಶ, ನಗರ ಪ್ರಾಥಮಿಕ ಕೇಂದ್ರ ವೈದ್ಯಾಧಿಕಾರಿ ಡಾ.ಭಾರತಿ ಹೊಸ್ಮನೆ ಮತ್ತಿತರರು ಉಪಸ್ಥಿತರಿದ್ದರು. ನಾಗರಾಜ ನಾಯ್ಕ ನಿರೂಪಿಸಿದರು.

ತಾಲೂಕಾ ಮಟ್ಟದ ಕ್ರೀಡಾಕೂಟದಲ್ಲಿ ಕ್ರೀಡಾ ಧ್ವಜಾರೋಹಣ ನೇರವೇರಿಸಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಮಾತನಾಡಿದರು.

> **ಭಾರತವು 2036 ರಲ್ಲಿ ಒಲಂಪಿಕ್ ಕ್ರೀಡೆ ಸಂಘಟಿಸಲು ಇದ್ದತೆ ಮಾಡಿಕೊಂಡಿದ್ದು, ದೂರದೃಷ್ಟಿಯಿಂದ ದೇಶದ ಯುವಕರು ಈಗಿಂದಲೇ ತಯಾರಿಗೊಳ್ಳಬೇಕಾಗಿದೆ. 2030 ರಲ್ಲಿ ಕಾಮನ್ವೆಲ್ತ್ ಕ್ರೀಡಾ ಕೂಟ ಸಂಘಟಿತವಾಗುತ್ತಿದೆ. ಆ ಕ್ರೀಡಾಕೂಟದಲ್ಲಿ ಇಂದಿನಿಂದಲೇ ಸಿದ್ಧರಾಗಬೇಕು.**
> **-ವಿಶ್ವೇಶ್ವರ ಹೆಗಡೆ ಕಾಗೇರಿ,** ಸಂಸದ

ವಿದ್ಯಾರ್ಥಿ ಸನ್ನಿಧಿಗೆ ರಾಷ್ಟ್ರೀಯ ಪ್ರಶಸ್ತಿ

ಶಿರಸಿ: ಸ್ನೇಹಜೀವಿ ಫೌಂಡೇಶನ್ ಕರ್ನಾಟಕ, ಅಕ್ಷರ ದೀಪ ಫೌಂಡೇಶನ್ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಆಶ್ರಯದಲ್ಲಿ ಭಾನುವಾರ ಧಾರವಾಡದ ಜಿಲ್ಲಾ ಸಾಹಿತ್ಯ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಇಲ್ಲಿನ ಸರ್ಕಾರಿ ಪದವಿ ಕಾಲೇಜಿನ ವಿದ್ಯಾರ್ಥಿ ಸನ್ನಿಧಿ ವಿ ಅವರಿಗೆ ಸ್ವಾಮಿ ವಿವೇಕಾನಂದ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸನ್ನಿಧಿ ಯವರ ಪರಿಸರ ಸ್ನೇಹಿ ಲೇಖನಗಳು ಹಾಗೂ ಸಾಮಾಜಿಕ ಚಟುವಟಿಕೆಗಳನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಇವರು ಕಳೆದ 6 ವರ್ಷಗಳಿಂದ ಯೂತ್ ಫಾರ್ ಸೇವಾ ಸಂಸ್ಥೆಯ ಸ್ವಯಂ ಸೇವಕಿ ಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಮಕ್ಕಳಿಗೆ ಪರಿಸರದ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಪರಿಸರ ಸಂರಕ್ಷಣೆಗೆ ತಮ್ಮದೇ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಧಾರವಾಡ ಕಸಾಪ ಅಧ್ಯಕ್ಷ ಡಾ. ಲಿಂಗರಾಜ ಅಂಗಡಿ, ಅಕ್ಷರ ದೀಪ ಫೌಂಡೇಶನ್ ಅಧ್ಯಕ್ಷ ಪ್ರವೀಣಕುಮಾರ ಕನ್ಯಾಳ, ಪೂಜಾ ಅಶೋಕ ಸೇರಿದಂತೆ ಹಲವರು ಇದ್ದರು.

ಶಿವಾಜಿ ಸರ್ಕಲ್‌ನಲ್ಲಿ ಮಾನವ ಸರಪಳಿ | ಮಿನಿ ವಿಧಾನಸೌಧ, ತಾಲೂಕು ಪಂಚಾಯಿತಿಗೆ ತೆರಳಿ ಮನವಿ ಸಲ್ಲಿಕೆ

ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಮೊದಲಿನಂತೆಯೇ ಇರಲಿ

ಮುಂಡಗೋಡ: ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸರಳಿಕರಣ ಮಾಡಿ ಮುಂದುವರಿಸುವಂತೆ ಆಗ್ರಹಿಸಿ ತಾಲೂಕು ಚುನಾಯಿತ ಗ್ರಾಮ ಪಂಚಾಯತ ಸದಸ್ಯರ ಮಹಾ ಒಕ್ಕೂಟ ಮುಂಡಗೋಡ ಹಾಗೂ ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ಸೋಮವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಇಲ್ಲಿಯ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳ ಮೂಲಕ ಸಂಚರಿಸಿ ಶಿವಾಜಿ ಸರ್ಕಲ್ನಲ್ಲಿ ಮಾನವ ಸರಪಳಿ ನಿರ್ಮಿಸಿ, ಕೆಲ ಕಾಲ ರಸ್ತೆ ತಡೆ ನಡೆಸಿದ ಬಳಿಕ ಮಿನಿ ವಿಧಾನಸೌದ ಹಾಗೂ ತಾಲೂಕಾ ಪಂಚಾಯತಕ್ಕೆ ತೆರಳಿ ಮನವಿ ಸಲ್ಲಿಸಲಾಯಿತು.

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯು ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಪ್ರತಿಯೊಂದು ಪಂಚಾಯತ ವರ್ಷಕ್ಕೆ ಕನಿಷ್ಠ ಒಂದು ಕೋಟಿ ರೂ. ಮತ್ತು ಅದಕ್ಕಿಂತ ಹೆಚ್ಚಿನ ಹಣವನ್ನು ಬಳಸಿಕೊಂಡು ಕೆರೆಗಳ ಹೂಳೆತ್ತಿ ಅಭಿವೃದ್ಧಿ ಪಡಿಸುವುದು, ಕಾಲುವೆಗಳು, ಮನೆಗಳು, ಕೊಟ್ಟಿಗೆಗಳು, ಅಡಕೆ ತೋಟ, ಬಾಳೆ ತೋಟ, ಮಾವಿನ ತೋಟ, ಬದು ಹಾಕುವುದು, ಭೂಮಿ ಸಮತಟ್ಟಾಗಿ ಮಾಡುವುದು, ಚೆಕ್ ಡ್ಯಾಮ್ ನಿರ್ಮಾಣ, ಕುರಿ ಶೆಡ್ಡು, ಕೋಳಿ ಶೆಡ್ಡು, ಅರಣ್ಯದಲ್ಲಿ ಬದುಗಳ ನಿರ್ಮಾಣ, ಕೆರೆಗಳ ನಿರ್ಮಾಣ, ಅರಣ್ಯದಲ್ಲಿ ಪ್ರಾಣಿ ಪಕ್ಷಿಗಳಿಗೆ ಕುಡಿಯಲು ನೀರಿನ ವ್ಯವಸ್ಥೆಯ ಸಲುವಾಗಿ ಗುಂಡಿ ನಿರ್ಮಾಣ, ಸಿಡಿ ನಿರ್ಮಾಣ, ಸಿಮೆಂಟ್ ಕಾಂಕ್ರಿಟ್ ರಸ್ತೆಗಳ ನಿರ್ಮಾಣ, ರಾಜೀವ್ ಗಾಂಧಿ ಸೇವಾ ಕೇಂದ್ರ ನಿರ್ಮಾಣ, ಶಾಲೆಗಳಿಗೆ ಕಾಂಪೌಂಡ್ ವ್ಯವಸ್ಥೆ, ಶೌಚಾಲಯ ನಿರ್ಮಾಣ, ಅಡುಗೆ ಕೋಣೆ ನಿರ್ಮಾಣ, ಕೊಟ್ಟಿಗೆ ನಿರ್ಮಾಣ, ಚೆಕ್ ಡ್ಯಾಮ್ ನಿರ್ಮಾಣ, ಹೀಗೆ ಒಂದಲ್ಲ ಎರಡಲ್ಲ ನೂರಾರು ಕಾಮಗಾರಿಗಳನ್ನು ತೆಗೆದುಕೊಂಡು ಕಾಮಗಾರಿ ಮಾಡುತ್ತ ಬರಲಾಗಿದೆ.

ತಾಲೂಕು ಚುನಾಯಿತ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟ ಶಿವಾಜಿ ಸರ್ಕಲ್ ನಲ್ಲಿ ಮಾನವ ಸರಪಳಿ ನಡೆಸಿ ಪ್ರತಿಭಟನೆ ನಡೆಸಿದರು.

ಬೇರೆ ಬೇರೆ ಯೋಜನೆಯಿಂದ ಹಣ ಬರದೆ ಇದ್ದರೂ ಉದ್ಯೋಗ ಖಾತ್ರಿ ಕಾಮಗಾರಿ ನಡೆಸಲು ಅನುಕೂಲವಾಗಿತ್ತು. ಕೋಟ್ಯಾಂತರ ರೈತರು ತಮ್ಮ ಹೊಲದಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆದು ಆರ್ಥಿಕವಾಗಿ ಶ್ರೀಮಂತರಾಗಿದ್ದನ್ನು ಕಂಡಿದ್ದೇವೆ.

ಆದರೆ ಇತ್ತೀಚಿನ ಒಂದು ವರ್ಷದಿಂದ ಈ ಯೋಜನೆಯನ್ನು ಬಂದ್ ಮಾಡುವ ದೃಷ್ಟಿಯಿಂದ ಕಠಿಣ ಕಾನೂನುಗಳನ್ನು ತಂದು ಉದ್ಯೋಗ ಖಾತ್ರಿ ಕೆಲಸವೇ ಬೇಡ ಎನ್ನುವ ಮಟ್ಟಿಗೆ ಕೆಲಸ ಮಾಡದ ಹಾಗೆ ಮಾಡಲಾಗಿದೆ. ಅಲ್ಲದೇ ಕೇಂದ್ರ ಸರಕಾರ ನಮ್ಮ ದೇಶದ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಹೆಸರನ್ನು ತೆಗೆದು ಮಹಾತ್ಮ ಗಾಂಧೀಜಿಯವರಿಗೆ ಅಗೌರವವನ್ನು ತೋರಿಸುವ ಮುಖಾಂತರ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯ ಶೇ 30 ರಷ್ಟು ಹಣವನ್ನು ಕಡಿತ ಮಾಡಿ 60:40 ರಂತೆ ಹಣವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಕಬೇಕೆಂದು ಕಾನೂನನ್ನು ರೂಪಿಸಿದ್ದಾರೆ. ರಾಜ್ಯ ಸರಕಾರಗಳು ಈ ಹಣವನ್ನು ತುಂಬಲು ಸಾಧ್ಯವೇ ಇಲ್ಲ.

ಈ ಯೋಜನೆ ಸ್ಥಗಿತಗೊಳಿಸುವ ಉದ್ದೇಶದಿಂದಲೇ ಈ ರೀತಿಯಾಗಿ ಬೇಕಾಬಿಟ್ಟಿ ಕಾನೂನನ್ನು ರೂಪಿಸಿದ್ದು ಇದನ್ನು ಒಪ್ಪಲು ಸಾಧ್ಯವೇ ಇಲ್ಲ. ರಾಜ್ಯ ರಾಜ್ಯಗಳಿಂದ ಲಕ್ಷಾಂತರ ಕೋಟಿ ರೂ. ಟ್ಯಾಕ್ಸ್ ಮುಖಾಂತರ ಕೇಂದ್ರ ಸರ್ಕಾರಕ್ಕೆ ಹೋಗುತ್ತಿದ್ದು, ರಾಜ್ಯಗಳಿಗೆ ಬರುತ್ತಿರುವುದು ಕೇವಲ ಕೆಲವು ಪರ್ಸೆಂಟ್ ಮಾತ್ರ. ಹೀಗಿದ್ದಾಗ ಈ ಕಾಯ್ದೆಯನ್ನು ಬದಲಾವಣೆ ಮಾಡಿ ರಾಜ್ಯಗಳಿಗೆ ಹೊರೆ ಹಾಕಿ ರಾಜ್ಯಗಳು ಕೊಡದಿದ್ದರೆ ನಾವು ಕೊಡಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಲಿಕ್ಕೆ ಸಂಚು ಮಾಡಿ ವಿಬಿ ಜಿ ರಾಮ್ ಜಿ ಯೋಜನೆಯನ್ನು ಜಾರಿಗೆ ತಂದಿದೆ. ಹಾಗಾಗಿ ಈ ಯೋಜನೆಯನ್ನು ರದ್ದು ಮಾಡಿ ಮೊದಲಿದ್ದ ಹಾಗೆ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೆ ತರಬೇಕು ಎಂದು ಒತ್ತಾಯಿಸಲಾಗಿದೆ. ತಾಲೂಕು ಚುನಾಯಿತ ಗ್ರಾಮ ಪಂಚಾಯತ ಸದಸರ ಮಹಾ ಒಕ್ಕೂಟ ಧರ್ಮರಾಜ ನಡಗೇರ, ಬಸವರಾಜ ಸಂಗಮೇಶ್ವರ ಹಾಗೂ ಗ್ರಾ.ಪಂ. ಅಧ್ಯಕ್ಷರು ಸದಸ್ಯರು ವಿವಿಧ ಸಂಘಟನೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

100 ಖಾತ್ರಿ ದಿನಗಳ ಕೆಲಸ

ಕೂಲಿಕಾರರಿಗೆ ವರ್ಷಕ್ಕೆ 100 ಖಾತ್ರಿ ದಿನಗಳ ಕೆಲಸವನ್ನು ಕೊಡುವ ಮುಖಾಂತರ ಕೂಲಿಕಾರರಿಗೆ ನಿರ್ಗತಿಕರಿಗೆ ಹಸಿವು ಮುಕ್ತ ಸಮಾಜ ನಿರ್ಮಾಣ ಮಾಡಲು ಡಾ. ಮನಮೋಹನ್ ಸಿಂಗ್ ನೇತೃತ್ವದ ಸರಕಾರ ಯೋಜನೆಯನ್ನು ಜಾರಿ ಮಾಡಿತ್ತು. ಅಲ್ಲದೇ ಶೇ 90 ರಷ್ಟು ಹಣವನ್ನು ನೇರವಾಗಿ ಗ್ರಾಮ ಪಂಚಾಯಿತಿಗೆ ನೀಡಿ, ಭಾರತದ ಮೂಲೆ ಮೂಲೆಯಲ್ಲಿ ಇರುವ ಕೂಲಿಕಾರರಿಗೆ ಕೆಲಸದ ಜತೆಗೆ ಪ್ರತಿಯೊಂದು ಹಳ್ಳಿಗಳ ಅಭಿವೃದ್ಧಿ ಮಾಡಲು ಸಹಕಾರಿಯಾಗಿತ್ತು.

ಸಮಾಚಾರ ಸಣ್ಣದಲ್ಲ

ಜೆಎಸ್ಎಸ್‌ನಲ್ಲಿ ಸಂಕ್ರಾಂತಿ ಸಂತೆ ಇಂದು

ಧಾರವಾಡ: ವಿದ್ಯಾಗಿರಿಯ ಜೆ.ಎಸ್.ಎಸ್ ಶ್ರೀ ಮಂಜುನಾಥೇಶ್ವರ ಸಿ.ಬಿ.ಎಸ್.ಇ ಶಾಲೆಯ ಆವರಣದಲ್ಲಿ ಜ.13 ರಂದು ಬೆಳಗ್ಗೆ 10.30ರಿಂದ ರ್‍ಯಾಪಿಡ್ ಹಾಗೂ ವೇದಾ ಎನ್.ಜಿಒ ಸಂಯುಕ್ತಾಶ್ರಯದಲ್ಲಿ ಸಂಕ್ರಾಂತಿ ಹಬ್ಬದ ಆಚರಣೆ ಮತ್ತು ಸಂಕ್ರಾಟತಿ ಸಂತೆ ಆಯೋಜಿಸಲಾಗಿದೆ. ಶಾಲಾ ಮಕ್ಕಳು ನೃತ್ಯ ಮಾಡುವ ಮೂಲಕ ಹಬ್ಬವನ್ನು ಸಂಭ್ರಮಿಸಲಿದ್ದಾರೆ. ಶಾಲೆಯ ಮಕ್ಕಳು, ಸಿಬ್ಬಂದಿ ಮತ್ತು ಎನ್.ಜಿ.ಓ ದವರು ಕುಸರೆಳ್ಳು, ಕಡಲೇಕಾಯಿ, ಜೋಳದ ರೊಟ್ಟಿ, ಸಜ್ಜಿರೊಟ್ಟಿ, ಕಬ್ಬು, ಚಟ್ನಿಪುಡಿ, ತರಕಾರಿ, ಚಿಗಳಿ, ಉಪ್ಪಿಕಾಯಿ ಹಾಗೂ ಇತರೇ ಒಟ್ಟು 60 ಮಾರಾಟ ಮಳಿಗೆಗಳನ್ನು ಈ ಸಂತೆಯಲ್ಲಿ ತೆರೆಯಲಾಗಿದ್ದು, ಎಲ್ಲ ಪಾಲಕರು ಹಾಗೂ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಲು ಈ ಮೂಲಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಸನ್ಮತಿ ಕಿಡ್ಸ್ ವಾರ್ಷಿಕೋತ್ಸವ

ಧಾರವಾಡ: ಸನ್ಮತಿ ಎಜುಕೇಶನ್ ಟ್ರಸ್ಟ್ನ ಸನ್ಮತಿ ಕಿಡ್ಸ್ ವರ್ಡ್ ಪ್ರೀ-ಪ್ರೈಮರಿ ಸ್ಕೂಲ್‌ನ ವಾರ್ಷಿಕೋತ್ಸವ ಸಮಾರಂಭ ಜ.13ರಂದು ಸಂಜೆ 4ಕ್ಕೆ ನಗರದ ಆಲೂರ್ ವೆಂಕಟರಾವ್ ಸಭಾಭವನದಲ್ಲಿ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಜೆಎಸ್‌ಎಸ್ ಡಾ.ಡಿ.ವೀರೇಂದ್ರ ಹೆಗ್ಗಡೆ ರಿಸರ್ಚ್ ಸೆಂಟರ್‌ನಿರ್ದೇಶಕ ಡಾ.ಜೀನದತ್ತ ಹಡಗಲಿ, ಅತಿಥಿಗಳಾಗಿ ಜನಪದ ರಿಸರ್ಚ್ ಸೆಂಟರ್‌ಅಧ್ಯಕ್ಷ ಗುರು ಕಲ್ಮಟ್ ಆಗಮಿಸಲಿದ್ದಾರೆ. ಟ್ರಸ್ಟ್ ಉಪಾಧ್ಯಕ್ಷ ಡಾ. ಅಶೋಕ ರೋಖಡೆ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಾಚಾರ್ಯ ಅನುಪಮಾ ರೋಖಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಕರ ಸಂಕ್ರಮಣ ಉತ್ಸವ ನಾಳೆ

ಧಾರವಾಡ: ಇಲ್ಲಿನ ಹೆಬ್ಬಳ್ಳಿ ರಸ್ತೆಯ ಮಣಿಕಂಠ ನಗರದ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಜ.14ರಂದು ಮಕರ ಸಂಕ್ರಮಣ ಉತ್ಸವ ಏರ್ಪಡಿಸಲಾಗಿದೆ. ಅಂದು ಮುಂಜಾನೆ 7 ರಿಂದ 11 ಗಂಟೆಯವರೆಗೆ ಶ್ರೀ ಅಯ್ಯಪ್ಪ ಸ್ವಾಮಿಗೆ ನಿರಂತರ ತುಪ್ಪದಭಿಷೇಕ, ಮಧ್ಯಾಹ್ನ 12ಕ್ಕೆ ಮಂಗಳಾರತಿ, ಮಧ್ಯಾಹ್ನ 3ಕ್ಕೆ ಅಗ್ನಿಕುಂಡಕ್ಕೆ ಅಗ್ನಿ ಪ್ರಜ್ವಲನೆ, ಸಾಯಂಕಾಲ 4ಕ್ಕೆ ನಗರೇಶ್ವರ ಗುಡಿಯಿಂದ ಪಲ್ಲಕ್ಕಿ ಉತ್ಸವ, ಸಾಯಂಕಾಲ 7ಕ್ಕೆ ಆಭರಣ ಸಮೇತ ಪುಷ್ಪಾಲಂಕಾರ ನಡೆಯಲಿದೆ. ಸಾಯಂಕಾಲ 7 ಗಂಟೆಗೆ ಮಕರ ಜ್ಯೋತಿದರ್ಶನ, ಮಹಾಮಂಗಳಾರತಿ ನಂತರ ಮಹಾಪ್ರಸಾದ ಅನ್ನಸಂತರ್ಪಣೆ ನೆರವೇರುವುದು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀ ಅಯ್ಯಪ್ಪ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ಪ್ರಕಟಣೆ ತಿಳಿಸಿದೆ.

ಉಪಾಧ್ಯಕ್ಷರಾಗಿ ಸಂಜು ನೇಮಕ

ಧಾರವಾಡ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ರಾಜ್ಯ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯಾಧ್ಯಕ್ಷ

ಮಧು ಬಂಗಾರಪ್ಪ ಅನುಮೋದನೆಯ ಮೇರೆಗೆ ಹುಬ್ಬಳ್ಳಿ ಧಾರವಾಡ ಮಹಾನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ವಿಭಾಗದ ಜಿಲ್ಲಾ ಉಪಾಧ್ಯಕ್ಷ ಸ್ಥಾನಕ್ಕೆ ನಗರದ ಸಂಜು ಚುರಮರಿ ಅವರನ್ನು ನೇಮಕ ಮಾಡಲಾಗಿದ್ದು, ವಿಭಾಗದ ಅಧ್ಯಕ್ಷ ರಾಜು ಎಚ್.ಎಮ್. ನೇಮಕಾತಿ ಆದೇಶ ನೀಡಿದ್ದಾರೆ.

18ರಿಂದ ಆಯೋಗದ ಅಧ್ಯಕ್ಷರ ಪ್ರವಾಸ

ಹಾವೇರಿ: ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ.ಮೂರ್ತಿ.ಎಲ್, ಸದಸ್ಯರಾದ ಎಂ. ಕುಂಬಯ್ಯ ಹಾಗೂ ಸುನೀಲ್ ಎಂ.ಉಕ್ಕಲಿ ಜ.18 ಮತ್ತು 19 ರಂದು ಜಿಲ್ಲೆಯಲ್ಲಿ ಪ್ರವಾಸಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಜ.18 ರಂದು ಮಧ್ಯಾಹ್ನ 2 ಗಂಟೆಗೆ ಬೆಂಗಳೂರಿನಿಂದ ಹೊರಟು, ರಾತ್ರಿ 8 ಕ್ಕೆ ಹಾವೇರಿಗೆ ಆಗಮಿಸಿ ವಾಸ್ತವ್ಯ ಮಾಡುವರು. ಜ.19 ರಂದು ಬೆಳಗ್ಗೆ 11 ಗಂಟೆಗೆ ಹಾವೇರಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆ ಹಾಗೂ ಕುಂದುಕೊರತೆಗಳ ಸಭೆ ಹಾಗೂ ಅಹವಾಲು ಸ್ವೀಕರ ಮಾಡಲಿದ್ದಾರೆ. ಸಂಜೆ 4 ಗಂಟೆಗೆ ದಾವಣಗೆರೆ ಪ್ರಯಾಣ ಬೆಳೆಸಲಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ಡಿ.ಕೆ.ಶಿವಕುಮಾರ್} ಡಿಸಿಎಂ

ದೇಶದಲ್ಲೇ ಮೊದಲ ಬಾರಿಗೆ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಜಾರಿಗೆ ತಂದ ಕೀರ್ತಿ ನಮ್ಮ ಸರಕಾರಕ್ಕೆ ಸಲ್ಲುತ್ತದೆ. ಮಲ್ಲಬಾದ್ ಏತ ನೀರಾವರಿ ಯೋಜನೆಗೆ 365 ಕೋಟಿ ರು. ಅನುದಾನ ನೀಡಿ ಕಾಮಗಾರಿ ಆರಂಭಿಸಲಾಗಿದೆ. ಸಾರ್ವಜನಿಕರ ಅನುಕೂಲಕ್ಕಾಗಿ ಪ್ರಜಾಸೌಧದಂತಹ ವಿನೂತನ ಆಡಳಿತ ಭವನಗಳನ್ನು ನಿರ್ಮಿಸಲಾಗುತ್ತಿದೆ.

ಪ್ರಧಾನಿ ಮೋದಿ ಸರಕಾರ ನರೇಗಾ ಹೆಸರು ಬದಲಿಸಿ ಮಹಾತ್ಮ ಗಾಂಧಿ ಹೆಸರಿಗೆ ಅಗೌರವ ತೋರಿಸಿದ್ದಾರೆ: ಶಾಸಕ ಮಾನೆ

ರಾಮ್ ಜಿ ಕಾಯಿದೆ ಜಾರಿ ಕೈ ಬಿಡಲು ಸತ್ಯಾಗ್ರಹ

ಹಾವೇರಿ: ಮನರೇಗಾ ಯೋಜನೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಾಗಿದ್ದು, ಕೇಂದ್ರ ಸರಕಾರ ಹೆಸರು ಬದಲಾಯಿಸಿ ಭಾವನಾತ್ಮಕವಾಗಿ ಸೆಳೆಯುವ ಕೀಳುಮಟ್ಟದ ತಂತ್ರಗಾರಿಕೆ ಮಾಡುತ್ತಿದೆ. ಗ್ರಾಮ ಪಂಚಾಯಿತಿಗಳ ಆಕಾರ ಮೊಟಕುಗೊಳಿಸಿದ್ದು, ಗ್ರಾಪಂ ಅಕಾರ ವಿಕೇಂದ್ರೀಕರಣ ವಿರುದ್ಧದ ನಡೆಯಾಗಿದೆ ಎಂದು ಹಾನಗಲ್ ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದಿನ ಯುಪಿಎ ಸರಕಾರ ಗ್ರಾಮೀಣ ಭಾಗದ ಜನತೆ ವಲಸೆ ಹೋಗದಂತೆ ತಡೆಯಲು ಹಾಗೂ ಸ್ಥಳೀಯವಾಗಿ ಉದ್ಯೋಗ ಒದಗಿಸುವ ಮೂಲಕ ಮನರೇಗಾ ಯೋಜನೆ ಜಾರಿಗೊಳಿಸಿತ್ತು. ಈ ಯೋಜನೆ ಪ್ರತಿ ಗ್ರಾಪಂಗಳಿಗೆ ಆರ್ಥಿಕ ಶಕ್ತಿಯನ್ನು ನೀಡುವುದರ ಜತೆಗೆ ಪ್ರತಿ ವರ್ಷ 1 ಕೋಟಿ ಕಾಮಗಾರಿ ಮಾಡುವ ಮೂಲಕ ಯಶಸ್ಸು ಕಂಡಿದ್ದವು. ಅಲ್ಲದೇ ಬಹಳಷ್ಟು ಜನ ಬದುಕು ಕಟ್ಟಿಕೊಂಡಿದ್ದರು. ಆದರೀಗ ಕೇಂದ್ರ ಬಿಜೆಪಿ ಸರಕಾರ ಹೊಸ ಯೋಜನೆ, ಹೊಸ ಕಾರ್ಯಕ್ರಮ ಜಾರಿಗೆ ತರದೇ ನರೇಗಾ ಯೋಜನೆಯ ಹೆಸರು ಬದಲಾಯಿಸಿ, ಜನರನ್ನು ಭಾವನಾತ್ಮಕವಾಗಿ ಸೆಳೆಯುವ ಕೀಳು ಮಟ್ಟದ ತಂತ್ರಗಾರಿಕೆ ಮಾಡುತ್ತಿದೆ

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಶಾಸಕ ಶ್ರೀನಿವಾಸ ಮಾನೆ ಮಾತನಾಡಿದರು.

ಎಂದು ಆರೋಪಿಸಿದರು.

ಕಾಂಗ್ರೆಸ್ ಅವಯ ನಿರ್ಮಲ್ ಭಾರತ್‌ವನ್ನು ಸ್ವಚ್ಛ ಭಾರತ, ಇಂದಿರಾ ಆವಾಸ್ ಯೋಜನೆಯನ್ನು ಪ್ರಧಾನ ಮಂತ್ರಿ ಆವಾಸ್ ಅಂತಾ ಹೀಗೆ 30ಕ್ಕೂ ಹೆಚ್ಚು ಹಳೆ ಯೋಜನೆಗಳ ಹೆಸರು ಬದಲಾಯಿಸಿದರೆ ವಿನಃ ಯಾವುದೇ ಜನೋಪಯೋಗಿ ಕೆಲಸ ಮಾಡಲಿಲ್ಲ. ಹೆಸರು ಬದಲಿಸೋದಷ್ಟೆ ಅಲ್ಲ, ಮಹಾತ್ಮ ಗಾಂಧಿ ಹೆಸರು ತೆಗೆದು ಅಗೌರವ ತೋರಿಸಿದ್ದಾರೆ. ವಿಕಸಿತ ಭಾರತ್ ಗ್ಯಾರಂಟಿ ರೋಜಗಾರ್‌ಯೋಜನೆ ಗ್ರಾಮ ಕಲ್ಪನೆ, ತತ್ವ ಸಿದ್ಧಾಂತಕ್ಕೆ ವಿರುದ್ಧವಾಗಿದೆ. ಇದು ಗ್ರಾಪಂಗಳ ಆಕಾರ ವಿಕೇಂದ್ರೀಕರಣದ ವಿರುದ್ಧವಾಗಿದೆ. ಕೂಲಿ ದರ ನಿಗದಿ ಸ್ಪಷ್ಟತೆ ಇಲ್ಲ. ಕಾರ್ಪೊರೇಟ್ ದಬ್ಬಾಳಿಕೆಗೆ ಕೂಲಿ ಕಾರ್ಮಿಕರನ್ನು ಸಿಲುಕಿಸುತ್ತಾರೆಂಬ ಅನುಮಾನ ಮೂಡುತ್ತಿದೆ. ಗ್ರಾಮೀಣ ಕಾರ್ಮಿಕರು, ರೈತರ ಕೂಲಿ ಹಕ್ಕನ್ನು ಮೊಟಕುಗೊಳಿಸಲಾಗುತ್ತಿದೆ. ಕಾಯಿದೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ, ಕರಾಳ ಕೃಷಿ ಕಾಯಿದೆಗಳನ್ನು ಹಿಂಪಡೆದಂತೆ ಇದನ್ನೂ ಹಿಂಪಡೆದು ಮನರೇಗಾ ಯೋಜನೆ ಮುಂದುವರೆಸುವಂತೆ ಹಂತ ಹಂತವಾಗಿ ಪ್ರತಿಭಟನೆ, ಜಾಗೃತಿ ಮೂಡಿಸಲಿಕ್ಕೆ ಮುಂದಾಗುತ್ತೇವೆ ಎಂದರು.

ಹಿರೇಕೆರೂರು ಶಾಸಕ ಯು.ಬಿ ಬಣಕಾರ ಮಾತನಾಡಿ, ಮನರೇಗಾ ಯೋಜನೆಯನ್ನು ಬಡ ಕೂಲಿ ಕಾರ್ಮಿಕರು ಕಾಮದೇನು ಅಂತ ಕರೆಯುತ್ತಿದ್ದರು. ಕೇಂದ್ರ ಸರಕಾರ ಗ್ರಾಮೀಣ ಜನರ ಆಶಾಕಿರಣವಾಗಿದ್ದ ಯೋಜನೆಯನ್ನು ಕಾಯಿದೆ ಬದಲಾಯಿಸಿ ಏಕಾಏಕಿ ಕಿತ್ತುಕೊಂಡಿದೆ. ಕಾಯಿದೆ ಜಾರಿಗೆ ತರುವ ಮುನ್ನ ಚರ್ಚೆಗೆ ಆಹ್ವಾನ ಮಾಡಬೇಕಿತ್ತು. ಆಗ ಗ್ರಾಮ ಸಭೆಗಳಲ್ಲಿ ಕಾಮಗಾರಿ ಸಿದ್ಧಪಡಿಸಲಾಗುತ್ತಿತ್ತು, ಈಗ ಕೇಂದ್ರ ನಿಗದಿಪಡಿಸಿದ ಏರಿಯಾ ಭಾಗದಲ್ಲಿ ಮಾತ್ರ ಕಾಮಗಾರಿ ಕೈಗೊಳ್ಳಬೇಕಿದೆ.

ಇದರಿಂದ ಕೃಷಿ ಕಾರ್ಮಿಕರು ತೊಂದರೆ ಅನುಭವಿಸುತ್ತಿದ್ದು, ಹಿಂಪಡೆಯುವಂತೆ ಹೋರಾಟ ನಡೆಸಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಎಂ.ಎಂ.ಹಿರೇಮಠ, ಎಸ್ ಎಫ್‌ಎನ್ ಗಾಜೀಗೌಡ್ರ, ಶಂಕರ ಮೆಹರವಾಡೆ, ಮಲ್ಲಿಕಾರ್ಜುನ ಬುರಡಿಕಟ್ಟಿ, ರಾಘವೇಂದ್ರ ಬಾಸೂರ, ಜಮೀರ ಜಿಗರಿ, ದಾಸಪ್ಪ ಕರ್ಜಗಿ ಇದ್ದರು.

> ಕೇಂದ್ರ ಸರಕಾರದ ವಿಬಿ ಜೀರಾಮ ಜೀ ಯೋಜನೆಯನ್ನು ಹಿಂಪಡೆದು, ಮನರೇಗಾ ಯೋಜನೆಯನ್ನು ಮುಂದುವರೆಸುವಂತೆ ಒತ್ತಾಯಿಸಿ ಜ.18ರಂದು ಹಾವೇರಿಯ ಎಂ.ಎಂ ವೃತ್ತದಲ್ಲಿ ಒಂದು ದಿನದ ಸಾಂಕೇತಿಕ ಉಪವಾಸ ಸತ್ಯಾಗ್ರಹ ನಡೆಸಲಾಗುವುದು. ಇದಕ್ಕೂ ಪೂರ್ವದಲ್ಲಿ ಅಂಬೇಡ್ಕರ್, ಗಾಂಜಿ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು. ಅಂದು ಬೆಳಗ್ಗೆ 11 ರಿಂದ ಸಂಜೆ 4ರ ವರೆಗೆ ಸತ್ಯಾಗ್ರಹ ಮಾಡುತ್ತಿದ್ದು, ಪಕ್ಷದ ಕಾರ್ಯಕರ್ತರು, ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು.
>
> – ಸಂಜೀವಕುಮಾರ ನೀರಲಗಿ, ಅಧ್ಯಕ್ಷರು, ಜಿಲ್ಲಾ ಕಾಂಗ್ರೆಸ್

ಸ್ವಾಮಿ ವಿವೇಕಾನಂದರು ಯುವಕರಿಗೆ ಪ್ರೇರಣೆ

ಹಾನಗಲ್: ಶಾಸಕ ಶ್ರೀನಿವಾಸ ಮಾನೆ ಅವರ ಇಲ್ಲಿನ ಜನಸಂಪರ್ಕ ಕಚೇರಿಯಲ್ಲಿ ಸೋಮವಾರ ಅದಮ್ಯ ಚೇತನ ಸ್ವಾಮಿ ವಿವೇಕಾನಂದ ಜಯಂತಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಮುಖಂಡರು, ಸ್ವಾಮಿ ವಿವೇಕಾನಂದರು ಯುವಶಕ್ತಿಗೆ ದಿಕ್ಕು ತೋರಿದ ಮಹಾನ್ ಚಿಂತಕರಾಗಿದ್ದು, ಅವರ 'ಏಳಿರಿ, ಎಚ್ಚರಗೊಳ್ಳಿರಿ, ಗುರಿ ತಲುಪುವವರೆಗೂ ನಿಲ್ಲಬೇಡಿ' ಎಂಬ ಸಂದೇಶ ಇಂದಿಗೂ ಪ್ರೇರಣೆಯಾಗಿದೆ. ಅವರ ಜನ್ಮದಿನವನ್ನು ರಾಷ್ಟ್ರೀಯ ಯುವ ದಿನವಾಗಿ ಆಚರಿಸುವುದರ ಹಿಂದೆ ಯುವಜನರನ್ನು ರಾಷ್ಟ್ರ ನಿರ್ಮಾಣಕ್ಕೆ ತೊಡಗಿಸುವ ಉದ್ದೇಶವಿದೆ.

1893ರ ಚಿಕಾಗೋ ವಿಶ್ವ ಧರ್ಮ ಸಂಸತ್ತಿನಲ್ಲಿ ಭಾರತದ ಸಂಸ್ಕೃತಿ, ವೇದಾಂತ ಹಾಗೂ ಮಾನವೀಯ ಮೌಲ್ಯಗಳನ್ನು ಜಗತ್ತಿಗೆ ಪರಿಚಯಿಸಿದವರು ಸ್ವಾಮಿ ವಿವೇಕಾನಂದರು. ಶಿಕ್ಷಣವು ವ್ಯಕ್ತಿತ್ವ ನಿರ್ಮಾಣಕ್ಕೆ ನೆರವಾಗಬೇಕು, ಸೇವೆಯಲ್ಲೇ ಸಾರ್ಥಕತೆ ಇದೆ ಎಂಬ ಅವರ ವಿಚಾರಗಳು ಇಂದಿನ ಸಮಾಜಕ್ಕೆ ಇನ್ನಷ್ಟು ಪ್ರಸ್ತುತವಾಗಿವೆ ಎಂದು ಅಭಿಪ್ರಾಯಪಟ್ಟರು. ಕೆಪಿಸಿಸಿ ಸದಸ್ಯ ಖ್ವಾಜಾಮೊಹಿದ್ದೀನ ಜಮಾದಾರ, ನಗರ ಕಾಂಗ್ರೆಸ್ ಅಧ್ಯಕ್ಷ ಮತೀನ್ ಶಿರಬಡಗಿ, ಪುರಸಭೆ ಮಾಜಿ ಅಧ್ಯಕ್ಷ ಪರಶುರಾಮ ಖಂಡೂನವರ, ಲಿಂಗರಾಜ ಮಡಿವಾಳರ, ವಿನಯ ಬಂಕನಾಳ, ವಸಂತ ವೆಂಟಾಪೂರ ಇದ್ದರು.

ವಿವಿಧ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಹಾವೇರಿ: ಕ.ರಾ.ಮು.ವಿ ಪ್ರಾದೇಶಿಕ ಕೇಂದ್ರದಲ್ಲಿ 2025-26ನೇ ಸಾಲಿನ ಯುಜಿಸಿ ಅನುಮೋದಿತ ಕೋರ್ಸ್‌ಗಳ ಜನವರಿ ಆವೃತ್ತಿ ಪ್ರವೇಶಾತಿಗೆ ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಸ್ನಾತಕ, ಸ್ನಾತಕೋತ್ತರ, ಪಿ.ಜಿ.ಸರ್ಟಿಫಿಕೇಟ್, ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸಗಳಿಗೆ ಪ್ರವೇಶಾತಿ ಮಾಡಿಕೊಳ್ಳಲಾಗುತ್ತಿದೆ.

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕೆಲವೊಂದು ವರ್ಗದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮತ್ತು ಉಚಿತ ಪ್ರವೇಶಾತಿ ನೀಡಲಾಗಿದೆ.

ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳಿಗೆ, ಡಿಫೆನ್ಸ್, ಮಾಜಿ ಸೈನಿಕ ವಿದ್ಯಾರ್ಥಿಗಳಿಗೆ, ಆಟೋ/ ಕ್ಯಾಬ್ ಚಾಲಕರು ಮತ್ತು ಅವರ ಪತಿ/ಪತ್ನಿ ಹಾಗೂ ಇಬ್ಬರು ಮಕ್ಕಳಿಗೆ, ಕೆ.ಎಸ್.ಆರ್ .ಟಿ.ಸಿ., ಬಿ.ಎಂ.ಟಿಸಿ, ಎನ್.ಡಬ್ಲ್ಯೂ ಕೆಎಸ್‌ಆರ್‌ಟಿಸಿ ನೌಕರರಿಗೆ ಸ್ನಾತಕ/ ಸ್ನಾತಕೋತ್ತರ ಪದವಿಗಳ ಕೋರ್ಸಗಳ ಬೋಧನಾ ಶುಲ್ಕದಲ್ಲಿ ಶೇ.10ರಿಯಾಯಿತಿ ಇರುತ್ತದೆ. ಹೆಚ್ಚಿನ ವಿವರಗಳಿಗಾಗಿ ಪ್ರಾದೇಶಿಕ ನಿರ್ದೇಶಕರು, ಕರಾಮುವಿ ಪ್ರಾದೇಶಿಕ ಕೇಂದ್ರ ಶಿವಲಿಂಗೇಶ್ವರ ವಿದ್ಯಾಪೀಠ ಹುಕ್ಕೇರಿಮಠ ಹಾವೇರಿ ಮೊ. 9743276734, 9481683318, 7996724258, 8123770545 ಹಾಗೂ 8951721592 ಗಳನ್ನು ಸಂಪರ್ಕಿಸಬಹುದು ಎಂದು ಪ್ರಾದೇಶಿಕ ನಿರ್ದೇಶಕ ಸತೀಶ್ .ಎಮ್ .ಪಾಟೀಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಸ್ ನಿಲ್ದಾಣ ನಿರ್ಮಾಣಕ್ಕೆ ಮನವಿ

ಹಾವೇರಿ: ಹಾನಗಲ್ ರಸ್ತೆಯಲ್ಲಿರುವ ಶ್ರೀಕಂಠಪ್ಪ ಬಡಾವಣೆಗೆ ತಾತ್ಕಾಲಿಕ ಬಸ್ ತಂಗುದಾಣ ನಿರ್ಮಿಸುವಂತೆ ಕೋರಿ ಬಡಾವಣೆಯ ನಿವಾಸಿಗಳು ಸೋಮವಾರ ನಗರಸಭೆ ಕಚೇರಿ ಯಲ್ಲಿ ಶಾಸಕರು ರುದ್ರಪ್ಪ ಲಮಾಣಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಶ್ರೀಕಂಠಪ್ಪ ಬಡಾವಣೆಯಲ್ಲಿ ಎರಡು ಹಾಸ್ಟೆಲ್ ಹಾಗೂ ಒಂದು ಶಾಲೆ ಇದೆ, ಅಲ್ಲದೆ ಬಡಾವಣೆಯ ನಿವಾಸಿಗಳು ಸೇರಿದಂತೆ ಸಾವಿರಾರು ಜನರು ದಿನ ನಿತ್ಯ ಸಂಚರಿಸುತ್ತಿದ್ದು, ಬಸ್ ಗಾಗಿ ರಸ್ತೆಯಲ್ಲಿ ನಿಲ್ಲುವ ಪರಿಸ್ಥಿತಿಯಿದೆ. ನಿವಾಸಿಗಳ ಮನವಿಗೆ ಸೂಕ್ತವಾಗಿ ಸ್ಪಂದಿಸಿದ ಶಾಸಕ ರುದ್ರಪ್ಪ ಲಮಾಣಿ ಅವರು ಬಸ್ ತಂಗುದಾಣ ನಿರ್ಮಿಸುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಶ್ರೀಕಂಠಪ್ಪ ಬಡಾ ವಣೆ ನಿವಾಸಿಗಳ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಎಸ್.ಎನ್ ಪಾಟೀಲ, ಕಾರ್ಯದರ್ಶಿ ಕೊಟ್ರ ಗೌಡ ಸಿ ಹಾಗೂ ನಿವಾಸಿಗಳಾದ ಶಂಕ್ರಪ್ಪ ಮಾಳಮ್ಮನವರ, ಬಸವ ರಾಜ ಪೂಜಾರ, ವೀರೇಶ ಸಜ್ಜನ, ಮಹೇಶ ಇದ್ದರು.

ಬಡಾವಣೆಯ ನಿವಾಸಿಗಳು ನಗರಸಭೆ ಕಚೇರಿಯಲ್ಲಿ ಶಾಸಕರು ರುದ್ರಪ್ಪ ಲಮಾಣಿ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಲಿಂಗರಾಜರು ಸಮಾಜಕ್ಕೆ ನೀಡಿದ ಕೊಡುಗೆ ಅಪಾರ

ಧಾರವಾಡ: ಶಿರಸಂಗಿ ಲಿಂಗರಾಜರು ತಮ್ಮೆಲ್ಲ ಆಸ್ತಿಯನ್ನು ಸಮಾಜಕ್ಕೆ ಕೊಡುಗೆ ನೀಡಿದ ದಿನವನ್ನು ಮಹಾದಾಸೋಹ ದಿನವನ್ನಾಗಿ ಆಚರಿಸಬೇಕು ಎಂದು ಸಿ.ಎಸ್.ಐ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ಶಂಭು ಹೆಗಡಾಳ ಹೇಳಿದರು.

ಇಲ್ಲಿನ ಚನ್ನಬಸವೇಶ್ವರ ನಗರದಲ್ಲಿನ ಲಿಂಗಾಯತ ಭವನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ವತಿಯಿಂದ ಆಯೋಜಿಸಿದ್ದ ತ್ಯಾಗವೀರ ಲಿಂ.ಶಿರಸಂಗಿ ಲಿಂಗರಾಜ ದೇಸಾಯಿಯವರ ಜಯಂತಿ ಕಾರ್ಯಕ್ರಮದಲ್ಲಿ ಅವರು ಲಿಂಗರಾಜ ದೇಸಾಯಿಯವರ ಕುರಿತು ಉಪನ್ಯಾಸ ನೀಡಿದರು.

ಈ ಮಧ್ಯೆ ತಮಗೂ ಸಂತಾನಭಾಗ್ಯ ಇಲ್ಲದಾಯಿತು. ಅಷ್ಟೊತ್ತಿಗೆ ಸಮಾಜಮುಖಿ ಸೇವೆಗೆ ಸಿದ್ಧವಾಗಿದ್ದ ಲಿಂಗರಾಜರು, ತಮ್ಮ ಒಡೆತನದ ದಾಖಲೆಯ ಪ್ರಕಾರ 27 ಸಾವಿರಕ್ಕೂ ಹೆಚ್ಚು ಎಕರೆ ಭೂಮಿಯನ್ನು ಸಮಾಜಕ್ಕೆ ದಾನ ಮಾಡಿದರು. 1906ರ ಜೂನ್ 6 ರಂದು ಲಿಂಗರಾಜರು, ತಮ್ಮ ಸರ್ವಸ್ವವನ್ನು ಸಮಾಜಕ್ಕೆ

ತ್ಯಾಗವೀರ ಲಿಂ.ಶಿರಸಂಗಿ ಲಿಂಗರಾಜ ದೇಸಾಯಿಯವರ ಜಯಂತಿ ಕಾರ್ಯಕ್ರಮದಲ್ಲಿ ಡಾ.ಶಂಭು ಹೆಗಡಾಳ, ಪ್ರೊ.ವಿ.ಸಿ.ಸವಡಿ, ಡಾ.ಪಾರ್ವತಿ ಹಾಲಭಾವಿ ಭಾಗವಹಿಸಿದ್ದರು.

ಅರ್ಪಿಸಿ, ದಾನ ಪತ್ರ ಬರೆದರು. ಆ ದಿನವನ್ನು ಮಹಾದಾಸೋಹ ದಿನವನ್ನಾಗಿ ಆಚರಿಸುವ ಮೂಲಕ ತ್ಯಾಗವೀರರನ್ನು ಸ್ಮರಿಸಬೇಕು ಎಂದು ಅಭಿಪ್ರಾಯಪಟ್ಟರು. ಮಾಜಿ ಸಚಿವೆ ಲೀಲಾದೇವಿ ಪ್ರಸಾದ ಮಾತನಾಡಿ, ತ್ಯಾಗವೀರ ಲಿಂಗರಾಜರ ಸಮಾಜದ ಉದ್ಧಾರಕ್ಕಾಗಿ ಮಾಡಿದ ಮಹಾನ್ ಕಾರ್ಯಗಳನ್ನು ಸಮಾಜ ಮರೆಯಬಾರದು. ಅವರನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕೆಲಸಗಳು ಇನ್ನಷ್ಟು ಆಗಬೇಕಿದೆ ಎಂದರು. ಮಹಾಸಭಾದ ಜಿಲ್ಲಾ ಘಟಕದ ಉಪಾಧ್ಯಕ್ಷ ಪ್ರೊ.ವಿ.ಸಿ.ಸವಡಿ ಅಧ್ಯಕ್ಷತೆ ವಹಿಸಿದ್ದರು. ಡಾ.ಪಾರ್ವತಿ ಹಾಲಭಾವಿ ವೇದಿಕೆಯಲ್ಲಿದ್ದರು. ಸುಧಾ ಕಬ್ಬೂರ ಪ್ರಾರ್ಥಿಸಿದರು. ಮಂಜುನಾಥ ಮುಗ್ಗನವರ ನಿರೂಪಿಸಿದರು. ರವಿ ಬಡ್ನಿ ಸ್ವಾಗತಿಸಿದರು. ಸುವರ್ಣ ಬಿರಾದಾರ ಪರಿಚಯಿಸಿದರು. ಬಸವರಾಜ ಸೂರಗೊಂಡ ನುಡಿಗಳನ್ನಾಡಿದರು. ಮಡಿವಾಳಪ್ಪ ಶಿರಿಯಣ್ಣವರ ವಂದಿಸಿದರು.

ಶಿವಶರಣ ಕಲಬಶೆಟ್ಟರ, ಶಂಕರ ಕುಂಬಿ, ಐ.ಸಿ.ಗೋಕುಲ, ಸವಿತಾ ಅಮರಶೆಟ್ಟಿ ಉಪಸ್ಥಿತರಿದ್ದರು.

> ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದಲ್ಲಿ ಸುಮಾರು 700 ಸಂಸ್ಥಾನಗಳಿದ್ದವು. ಅವುಗಳಲ್ಲಿ ಶಿರಸಂಗಿ ಸಂಸ್ಥಾನ ಸಹ ಒಂದು. ಶಿರಸಂಗಿ ಸಂಸ್ಥಾನಕ್ಕೆ ದತ್ತು ಪುತ್ರನಾಗಿ ಬಂದ ಲಿಂಗರಾಜರು, ಬಾಲ್ಯದಲ್ಲಿಯೇ ಹಲವು ಬಗೆಯ ಸಂಕಷ್ಟಗಳನ್ನು ಕಂಡವರು. ದೊಡ್ಡ ಪ್ರಮಾಣದ ಸಂಪತ್ತು ನಿರ್ವಹಿಸುವ ಸಂದರ್ಭದಲ್ಲಿ ಅನೇಕ ಸವಾಲುಗಳು ಹಾಗೂ ಸಮಸ್ಯೆಗಳನ್ನು ಎದುರಿಸಿದರು.
>
> – ಡಾ.ಶಂಭು ಹೆಗಡಾಳ, ಸಿ.ಎಸ್.ಐ ಮಹಾವಿದ್ಯಾಲಯದ ಪ್ರಾಧ್ಯಾಪಕ

ಡಿಜಿಟಲ್ ತಂತ್ರಜ್ಞಾನದಿಂದ ಶಿಕ್ಷಣದಲ್ಲಿ ಬದಲಾವಣೆ

ಧಾರವಾಡ: ಡಿಜಿಟಲ್ ತಂತ್ರಜ್ಞಾನದ ಪರಿವರ್ತನೆಯಿಂದ ಶಿಕ್ಷಣದಲ್ಲಿ ಕ್ರಾಂತಿಕಾರಿ ಬದಲಾವಣೆ ಆಗುತ್ತಿದೆ ಎಂದು ಅಮೇರಿಕಾದ ಸ್ಟೋನ್ ಹಿಲ್ ಕಾಲೇಜಿನ ಸ್ಟ್ರಾಟಜಿಕ್ ಅಡ್ವೈಸರ ಡಾ.ಶ್ರೀರಾಮ ಬೆಲ್ಲೋನಾ ಹೇಳಿದರು.

ನಗರದ ಕರ್ನಾಟಕ ವಿಶ್ವವಿದ್ಯಾಲಯದ ಕೌಸಾಳಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ 50 ವರ್ಷದ ಸಂಭ್ರಮಾಚರಣೆಯ ನಿಮಿತ್ತವಾಗಿ ಕಿಮ್ಸ್ ಆವರಣದಲ್ಲಿ ಆಯೋಜಿಸಿದ ದರ್ಪಣ್-2026 ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದರು.ಪ್ರಸ್ತುತ ಭಾರತದಲ್ಲಿ 6500 ಕ್ಕಿಂತ ಹೆಚ್ಚು ವಿವಿಧ ಬಿಸಿನೆಸ್ ಕೋರ್ಸ್ ಗಳು ಲಭ್ಯವಿವೆ ಅವುಗಳಲ್ಲಿ ಪ್ರಸ್ತುತ ವ್ಯವಹಾರದ ಸ್ಥಿತಿ ಗತಿಯನ್ನು ಅರಿತು ಇಂದಿನ ಯುವ ಸಮುದಾಯಕ್ಕೆ ಒದಗಿಸಬೇಕಾಗಿದೆ. ಯಶಸ್ಸು ಸಿಗಬೇಕಾದರೆ ನಿರಂತರ ಶ್ರಮದ ಅಗತ್ಯತೆ ಇದೆ ಎಂದರು.

ಕೌಸಾಳಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ. ಅಶೋಕ ಚಚಡಿ ಮಾತನಾಡಿ,

ಕಿಮ್ಸ್ ಆವರಣದಲ್ಲಿ ಆಯೋಜಿಸಿದ ''ದರ್ಪಣ್-2026 ಸುವರ್ಣ ಮಹೋತ್ಸವವನ್ನು ಗಣ್ಯರು ಉದ್ಘಾಟಿಸಿದರು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಿಮ್ಸ್ ಬೆಳಸಬೇಕಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಕರ ಪಾತ್ರ ಬಹಳ ಇದೆ. ಭವಿಷ್ಯದಲ್ಲಿ ಹೆಚ್ಚು ಸವಾಲುಗಳು ಇವೆ. ಅವುಗಳನ್ನು ಎದುರಿಸಿ ಮುನ್ನಡೆಯ ಬೇಕಾಗಿದೆ ಎಂದರು.

ಕೌಸಾಳಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ. ಎಮ್.ಎಸ್.ಸುಭಾಷ್ ಮಾತನಾಡಿ, ಕಿಮ್ಸ್ ಬೆಳವಣಿಗೆಯಲ್ಲಿ ಹಳೆಯ ವಿದ್ಯಾರ್ಥಿಗಳ ಪಾತ್ರ ಅಪಾರವಾಗಿದೆ. ಕಿಮ್ಸ್ ಸಂಸ್ಥೆಯನ್ನು ಇನ್ನಷ್ಟು ಬೆಳಸಲು ಇಲ್ಲಿನ ಪ್ರಾಧ್ಯಾಪಕರು ಹೆಚ್ಚು ಗಮನ ನೀಡಬೇಕು. ದೇಶದಲ್ಲಿ ಕಿಮ್ಸ್ ಸಂಸ್ಥೆಯನ್ನು ಮಾದರಿ ಸಂಸ್ಥೆಯನ್ನಾಗಿ ಮಾಡಲು ಪಣ ತೊಡಬೇಕು ಎಂದರು.

ಕಿಮ್ಸ್ ನಿರ್ದೇಶಕ ಪ್ರೊ.ಉತ್ತಮ ಕಿನಂಗೆ ಮಾತನಾಡಿದರು. ಹೈದರಾಬಾದಿನ ಐ.ಎಸ್.ಬಿ ಹಿರಿಯ ಡೀನ್ ಮದನ್ ಪಿಲ್ಲುಟ್ಲಾ, ಕೌಸಾಳೆ ಕುಟುಂಬ ಸದಸ್ಯ ಡಾ.ವಿವೇಕ ಗಬ್ಬೂರ, ಕವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಬಿ.ಗುಡಸಿ ಮಾತನಾಡಿದರು.ಡಾ.ಉತ್ತಮ ಕಿನಂಗೆ, ನರೇಶ ಷಾ, ಸಂಜಯ ಗನಾಟೆ, ಡಾ.ಎನ್.ರಾಮಾಂಜನಯಲು, ಡಾ.ಪುಷ್ಪಾ ಹೊಂಗಲ್, ಪ್ರೊ. ಮಹೇಶ ಕುಲಕರ್ಣಿ ಇದ್ದರು.

> ಪ್ರಸ್ತುತ ಕಲಿಕೆಯಲ್ಲಿ ಬೋಧನಾ ವಿಧಾನಗಳು ಬದಲಾಗುತ್ತಿದ್ದು, ಡಿಜಿಟಲ್ ತಂತ್ರಜ್ಞಾನ ಹೆಚ್ಚು ಮುನ್ನಲೆಗೆ ಬಂದಿದ್ದು, ಇಂದು ಸಮಾಜಿಕ ಮಾಧ್ಯಮ ತಂತ್ರಜ್ಞಾನವು ಹೆಚ್ಚು ಅವಕಾಶಗಳನ್ನು ಒದಗಿಸುತ್ತದೆ.ಎಂಬತ್ತರ ದಶಕದ ವ್ಯವಹಾರದ ಶಿಕ್ಷಣವು ಸಾಂಪ್ರದಾಯಿಕ ಬೋಧನಾ ವಿಧಾನ ಒಳಗೊಂಡಿತ್ತು. ಈಗ ತಂತ್ರಜ್ಞಾನದ ಸಹಾಯದಿಂದ ಬೋಧನೆಯಲ್ಲಿ ಬಹಳಷ್ಟು ಬದಲಾವಣೆ ಆಗಿದೆ.
>
> – ಡಾ.ಶ್ರೀರಾಮ ಬೆಲ್ಲೋನಾ, ಸ್ಟ್ರಾಟಜಿಕ್ ಅಡ್ವೈಸರ

ವಿವೇಕಾನಂದರ ಜಯಂತಿ ಆಚರಣೆ

ನಗರದ ಬಿಜೆಪಿ ಪಕ್ಷದ ಕಾರ್ಯಾಲಯದಲ್ಲಿ ಸ್ವಾಮಿ ವಿವೇಕಾನಂದರ 163ನೇ ಜಯಂತಿ ವಿಜೃಂಭಣೆಯಿಂದ ಆಚರಿಸಲಾಯಿತು.

ಧಾರವಾಡ: ನಗರದ ಬಿಜೆಪಿ ಪಕ್ಷದ ಕಾರ್ಯಾಲಯದಲ್ಲಿ ಸ್ವಾಮಿ ವಿವೇಕಾನಂದರ 163ನೇ ಜಯಂತಿ ಸೋಮವಾರ ವಿಜೃಂಭಣೆಯಿಂದ ಆಚರಿಸಲಾಯಿತು.

ಈ ಮೊದಲು ಸ್ವಾಮಿ ವಿವೇಕಾನಂದರ ಪುತ್ಥಳಿಗೆ ಶ್ರೀ ವಿಜಯಾನಂದ ಸರಸ್ವತಿ ಸ್ವಾಮೀಜಿಗಳಿಂದ ಮಾಲಾರ್ಪಣೆ ಮಾಡಲಾಯಿತು. ನಂತರ ಪಕ್ಷದ ಕಾರ್ಯಾಲಯದಲ್ಲಿ ಸ್ವಾಮಿ ವಿವೇಕಾನಂದ ಶಿವಾಜಿ ಮಹಾರಾಜರ ತಾಯಿಯಾದ ಜಿಜಾಬಾಯಿ ಅವರ ಜನ್ಮ ಜಯಂತಿ ಆಚರಿಸಲಾಯಿತು.

ನಿಕಟ ಪೂರ್ವ ಜಿಲ್ಲಾಧ್ಯಕ್ಷ ಸಂಜಯ್ ಕಪಟಕರ್‌ಮಾತನಾಡಿ, ಸ್ವಾಮಿ ವಿವೇಕಾನಂದರ ಆದರ್ಶ ಹಿಂದುತ್ವ ಹಾಗೂ ಯುವಕರ ಪ್ರೇರಣೆಯಾಗಿದ್ದರು. ಪ್ರತಿಯೊಬ್ಬ ತಾಯಿಗೂ ಶಿವಾಜಿ ಅಂತ ಮಗ ಹುಟ್ಟಬೇಕು ಎಂದು ತಿಳಿಸಿದರು.

ವಿಜಯಾನಂದ ಶೆಟ್ಟಿ, ಮಂಜುನಾಥ ಮಲ್ಲಿಗವಾಡ, ರಾಜೇಶ್ವರಿ ಸಾಲಗಟ್ಟಿ, ಬಸವರಾಜ ಮುತ್ತಳ್ಳಿ, ಅಶೋಕ ವಾಲಿಕಾರ, ಗುರುರಾಜ ಕಾಟೇನವರ್,ಆನಂದ ಯಾವಗಲ, ರೂಪ ಚೌದರಿ, ಪ್ರಮೋದ ಬಾಗಿಲು, ಪ್ರಮೋದ ಕಾರ್ಕೂನ, ಮಾಲತಿ ಹುಲಿಕಟ್ಟಿ, ವಾಣಿ ಮೋಟೆಕರ, ಮಂಜುನಾಥ ಹೆಬಸೂರ, ಕರಿಯಪ್ಪ ಸುಣಗಾರ ಭಾಗವಹಿಸಿದ್ದರು.

ಗೋಕಾಕ ಚಳವಳಿ ಹೋರಾಟದಿಂದ ಕನ್ನಡ ಕೆಲಸಗಳಿಗೆ ವೇಗ

ಧಾರವಾಡ: ಗೋಕಾಕ ಭಾಷಾ ಚಳವಳಿಯ ಹೋರಾಟದ ಫಲದಿಂದ ಕನ್ನಡದ ಕೆಲಸಗಳಿಗೆ ವೇಗ ಸಿಕ್ಕಿತು ಮತ್ತು ಕನ್ನಡಿಗರಲ್ಲಿ ಭಾಷಾಭಿಮಾನ ಕಿಚ್ಚು ಹೊತ್ತಿತು ಎಂದು ಚಿಕ್ಕಮಗಳೂರಿನ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯ ಮಂಜುನಾಥ ಬಮ್ಮನಕಟ್ಟಿ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು, ಲಲಿತಾ ಮತ್ತು ಪ್ರೊ.ಸಿ.ವಿ.ಕೆರಿಮನಿ ದತ್ತಿ ಕಾರ್ಯಕ್ರಮದಲ್ಲಿ ಸಾಹಿತ್ಯ ದಂಪತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 'ಗೋಕಾಕ ಚಳುವಳಿ ಮತ್ತು ಕನ್ನಡ ಅಭಿವೃದ್ಧಿ' ವಿಷಯ ಕುರಿತು ಮಾತನಾಡಿದರು.

ಪ್ರಶಸ್ತಿ ಪ್ರದಾನ ಮಾಡಿ ಮಾಜಿ ಸಂಸದ ಪ್ರೊ.ಆಯ್.ಜಿ.ಸನದಿ ಅವರು, ಪ್ರೊ.ಸಿ.ವ್ಹಿ. ಕೆರಿಮನಿ ಅವರು ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ಸಾಹಿತ್ಯ ದಂಪತಿ ಪ್ರಶಸ್ತಿಯನ್ನು ಡಾ.ನಿಂಗಪ್ಪ ಮುದೇನೂರು ಮತ್ತು ಲಕ್ಷ್ಮೀ ಮುದೇನೂರು ದಂಪತಿಗಳಿಗೆ ನೀಡಿ ಗೌರವಿಸಿ, ಸನ್ಮಾನಿಸಲಾಯಿತು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಮುದೇನೂರ ದಂಪತಿಗಳು, ಈ ಪ್ರಶಸ್ತಿ ಸಾಹಿತ್ಯದ ಸೇವೆಗೆ ಇನ್ನೂ

ಸಾಹಿತ್ಯ ದಂಪತಿ ಪ್ರಶಸ್ತಿಯನ್ನು ಡಾ.ನಿಂಗಪ್ಪ ಮುದೇನೂರು ಮತ್ತು ಲಕ್ಷ್ಮೀ ಮುದೇನೂರು ದಂಪತಿಗಳಿಗೆ ನೀಡಿ ಗೌರವಿಸಿ, ಸನ್ಮಾನಿಸಲಾಯಿತು.

ಹೆಚ್ಚಿನ ಬಲ ಬಂದಂತಾಗಿದೆ ಎಂದು ಕೃತಜ್ಞತೆ ಸಲ್ಲಿಸಿದರು. ಲಕ್ಷ್ಮೀ ಮುದೇನೂರು ಕವನ ವಾಚಿಸಿದರು. ಚಂದ್ರಕಾಂತ ಬೆಲ್ಲದ ಮಾತನಾಡಿದರು. ದತ್ತಿ ದಾನಿ ಡಾ.ಸಂಪದಾ ಕೆರಿಮನಿ ವೇದಿಕೆ ಮೇಲೆ ಇದ್ದರು.

ಮೇಘಾ ಹುಕ್ಕೇರಿ ಮತ್ತು ಡಾ.ವಿಜಯಶ್ರೀ ಅಂಗಡಿ ಪ್ರಾರ್ಥಿಸಿದರು. ಶಂಕರ ಕುಂಬಿ ಸ್ವಾಗತಿಸಿದರು. ಶಂಕರ ಹಲಗತ್ತಿ ಮಾತನಾಡಿದರು. ಶಿವಾನಂದ ಭಾವಿಕಟ್ಟಿ ನಿರೂಪಿಸಿದರು. ಬಿ.ವಾಯ್ .ಪಾಟೀಲ ವಂದಿಸಿದರು.

ಪ್ರೊ.ಸೋಮಶೇಖರ ಕೆರಿಮನಿ, ಜಯಶ್ರೀ ಗುಡಗೇರಿ, ಮಲ್ಲಣ್ಣ ಗುಡಗೇರಿ, ರಮೇಶ ಕುರ್ಲಿ,ಪ್ರಭು ಹಂಚಿನಾಳ, ಲಿಂಗರಾಜ ಅಂಗಡಿ, ಮಹಾದೇವಿ ಕೆಲಗೇರಿ, ಬಸವರಾಜ ಹುಕ್ಕೇರಿ, ಕುಸುಮಾ ಓತಗೇರಿ, ಮಹಾಂತೇಶ ನರೇಗಲ್ಲ, ಉಷಾ ಗದ್ದಗಿಮಠ, ಪ್ರಮಿಳಾ ಜಕ್ಕಣ್ಣವರ, ಪ್ರೇಮಾ ನಡುವಿನಮನಿ, ಡಾ.ವೀಣಾ ಸಂಕನಗೌಡರ, ಶಶಿಕಲಾ ಶಾಸ್ತ್ರೀಮಠ, ಡಾ.ಮಾರ್ಕಂಡೇಯ ದೊಡಮನಿ, ಸುರೇಶ ಭಂಡಾರಿ, ನೀಲಮ್ಮಾ ತಳವಾರ, ಬಸನಗೌಡ ಪಾಟೀಲ, ಲಕ್ಷ್ಮೀ ಕೆರಿಮನಿ ಉಪಸ್ಥಿತರಿದ್ದರು.

> ಕನ್ನಡ ಭಾಷೆಯ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ಗೋಕಾಕ ಸಮಿತಿ ರಚನೆ ಹಾಗೂ ನಂತರ ಜರುಗಿದ ಚಳುವಳಿಯ ಪ್ರಭಾವದಿಂದ 44 ವರ್ಷಗಳ ಹಿಂದೆ ಅನಕ್ಷರಸ್ಥರಿಂದ ಹಿಡಿದು ಅಕ್ಷರಸ್ಥರವರೆಗೆ ಭಾಷೆಯ ಕುರಿತು ಹೋರಾಟದ ಕಿಚ್ಚನ್ನು ಹಚ್ಚುವುದರ ಜತೆಗೆ ಬೆಂಗಳೂರು ದೂರದರ್ಶನ, ಸರೋಜಿನಿ ಮಹಿಷಿ ವರದಿ, ಕನ್ನಡ ಕಾವಲು ಸಮಿತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಆಡಳಿತದಲ್ಲಿ ಕನ್ನಡ, ಹುಬ್ಬಳ್ಳಿ ನೈಋತ್ಯ ರೇಲ್ವೆ ವಲಯ, ಶಾಸ್ತ್ರೀಯ ಭಾಷೆ ಸ್ಥಾನಮಾನ ಸೇರಿದಂತೆ ಹಲವಾರು ಕನ್ನಡ ಕೆಲಸಗಳಿಗೆ ನಾಂದಿಯಾಯಿತು.
>
> –ಮಂಜುನಾಥ ಬಮ್ಮನಕಟ್ಟಿ, ಆಯೋಗದ ಸದಸ್ಯ

ಮನೆಗಳ ನಿರ್ಮಾಣಕ್ಕೆ ಹಣ ಮಂಜೂರು ಮಾಡಿ

ರಟ್ಟೀಹಳ್ಳಿ: ತಾಲೂಕಿನಲ್ಲಿ 2022 ಮತ್ತು 2023 ರಲ್ಲಿ ನೆರೆ ಹಾವಳಿಯಿಂದ ಹಾನಿಗೀಡಾದ ಮನೆಗಳ ಪುನರ್ವಸತಿ ನಿರ್ಮಾಣ ದುರಸ್ತಿ ಕಾಮಗಾರಿ ಹಣ ಬಿಡುಗಡೆ ಮಾಡದೇ ಇರುವುದು, ಹಣ ಬಿಡುಗಡೆ ಆಗದ ಫಲಾನುಭವಿಗಳಿಗೆ ಮನೆ ನಿರ್ಮಾಣ ಪೂರ್ಣಗೊಳ್ಳದೇ ಆರ್ಥಿಕ ಸಂಕಷ್ಟದಿಂದ ಬಳಲುತ್ತಿದ್ದಾರೆ. ಕೂಡಲೇ ಹಣ ಬಿಡುಗಡೆ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇವೆ. ನೆರೆ ಹಾವಳಿಗೆ ಮನೆ ಹಾನಿಯಾದ 5 ಲಕ್ಷ ರು. ಹಣ ಕೊನೆಯ ಕಂತು ಇದುವರೆಗೂ ಮಂಜೂರಾಗದೇ ಇರುವುದರಿಂದ ಮನೆಗಳು ಪೂರ್ಣಗೊಳಲು ಆಗುತ್ತಿಲ್ಲ. ಹಣವನ್ನು ಶೀಘ್ರ ಮಂಜೂರು ಮಾಡಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ (ಕನ್ನಡ ಸಂಘಟನೆ ಒಕ್ಕೂಟ) ಅಧ್ಯಕ್ಷ ಗಿರೀಶ ಬಾರ್ಕಿ ನುಡಿದರು. ತಾಲೂಕಿನ ಮಾಸೂರ ಗ್ರಾಮದಲ್ಲಿ ರಟ್ಟೀಹಳ್ಳಿ ತಾಲೂಕಿನ ವಿವಿಧ ಸಮಸ್ಯೆಗಳ ಬಗ್ಗೆ ಮಾಸೂರ ಗ್ರಾಮದಲ್ಲಿ ಸರ್ವಜ್ಞನ ಮೂರ್ತಿಯ ಹತ್ತಿರ ರಟ್ಟೀಹಳ್ಳಿ ತಾಲೂಕು ದಂಡಾಧಿ ಕಾರಿಗಳಿಗೆ ಮನವಿ ಸಲ್ಲಿಸಿ ಮಾತನಾಡಿದರು. ತಾಲೂಕ ಅಧ್ಯಕ್ಷ ಕರಿಯಪ್ಪ ಕೊರವರ ಮಾತನಾಡಿ, ಸರ್ವಜ್ಞನ ಮಾಸೂರ ಗ್ರಾಮ ದಲ್ಲಿ ಇರುವ ಬಸ್ ನಿಲ್ದಾಣಕ್ಕೆ 'ವರಕವಿ ಸರ್ವಜ್ಞ ಬಸ್ ನಿಲ್ದಾಣ' ಎಂದು ನಾಮಕರಣ ಮಾಡಬೇಕು. ವರಕವಿ ಸರ್ವಜ್ಞ ಪ್ರಾಧಿಕಾರ ವನ್ನು ಶೀಘ್ರದಲ್ಲಿ ಆರಂಭ ಮಾಡಬೇಕು. ಐತಿಹಾಸಿಕ ಪ್ರಸಿದ್ಧ ಮದಗ ಮಾಸೂರಿನ ಕೆರೆಯನ್ನು ಪ್ರವಾಸಿ ತಾಣವನ್ನಾಗಿ ಮಾಡಬೇಕು.

ರಾಜ್ಯ ಬಿಜೆಪಿ ನಿಯೋಗ, ಸಿಟಿಜನ್ಸ್ ಫಾರ್ ಡೆಮಾಕ್ರಸಿ ತಂಡದಿಂದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್‌ಗೆ ಆಗ್ರಹ

ದ್ವೇಷ ಭಾಷಣ ಬಿಲ್‌ಗೆ ಸಹಿ ಹಾಕದಂತೆ ಮನವಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದ್ವೇಷ ಭಾಷಣಕ್ಕೆ ಸಹಿ ಹಾಕದಂತೆ, ಬಳ್ಳಾರಿ ಗಲಾಟೆ ಪ್ರಕರಣ, ಅಕ್ರಮ ವಲಸಿಗರಿಗೆ ಪುನರ್ವಸತಿ, ಕಾನೂನು ಸುವ್ಯವಸ್ಥೆ ವಿಚಾರಗಳ ಸಂಬಂಧ ರಾಜ್ಯ ಬಿಜೆಪಿ ನಿಯೋಗ ರಾಜ್ಯಪಾಲರನ್ನು ಭೇಟಿಯಾಗಿ ಮನವಿ ಪತ್ರ ಸಲ್ಲಿಸಿದೆ. ಇದೇ ವೇಳೆ ದ್ವೇಷ ಭಾಷಣ ಮಸೂದೆ ಜಾರಿ ಮಾಡದಂತೆ ಆಗ್ರಹಿಸಿ ಹಿರಿಯ ವಕೀಲರ ಸಿಟಿಜನ್ಸ್ ಫಾರ್ ಡೆಮಾಕ್ರಸಿ ತಂಡ ರಾಜ್ಯಪಾಲರಿಗೆ ಮನವಿ ಸಲ್ಲಿಸಿದೆ.

ಕಾನೂನು ಸುವ್ಯವಸ್ಥೆ ವಿಚಾರ, ಬಳ್ಳಾರಿ ಪ್ರಕರಣ ಸಿಬಿಐಗೆ ವಹಿಸುವ ಬಗ್ಗೆ, ದ್ವೇಷ ಭಾಷಣ ಮಸೂದೆಗೆ ಸಹಿ ಹಾಕದಂತೆ ಹಾಗೂ ಅಕ್ರಮ ವಲಸಿಗರಿಗೆ ನಿಯಮಬಾಹಿರ ಪುನರ್ವಸತಿ ನಿಲ್ಲಿಸುವಂತೆ ರಾಜ್ಯಪಾಲರಿಗೆ ಮನವಿ ಮತ್ತು ದೂರು ಸಲ್ಲಿಕೆ ಮಾಡಿದರು.

ರಾಜ್ಯಪಾಲರ ಭೇಟಿ ಬಳಿಕ ಮಾತನಾಡಿದ ಪ್ರತಿಪಕ್ಷ ನಾಯಕ ಆರ್.ಅಶೋಕ, ರಾಜ್ಯಪಾಲರನ್ನು ಭೇಟಿ ಮಾಡಿದ್ದೇವೆ. ರಾಜ್ಯದಲ್ಲಿ ಆಡಳಿತ ಕುಸಿದಿದೆ, ಗೂಂಡಾ ರಾಜ್ಯ, ಜಂಗಲ್ ರಾಜ್ ಆಗಿದೆ. ರಾಜ್ಯವನ್ನು ಗೂಂಡಾ ರಾಜ್ಯದಿಂದ ಕಾಪಾಡಿ ಅಂತ ಮನವಿ ಮಾಡಿದ್ದೇವೆ. ದ್ವೇಷ ಭಾಷಣ ಮಸೂದೆ ಬಗ್ಗೆ ಸರಕಾರ ಸದನದಲ್ಲಿ ಚರ್ಚೆಗೆ ಅವಕಾಶ ಕೊಡಲಿಲ್ಲ. ಕೈಸನ್ನೆ, ಕಣ್ಣು ಮಿಟುಕಿಸಿದರು. ಮಾತಾಡಿನಾಡಿದರೂ ಕೇಸ್ ಹಾಕುವ ಮಸೂದೆ ಇದು. ಈ ಮಸೂದೆಗೆ ಸಹಿ ಹಾಕಬೇಡಿ ಅಂತ ಮನವಿ ಮಾಡಿದ್ದೇವೆ ಎಂದು ತಿಳಿಸಿದರು.

ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಕಾಂಗ್ರೆಸ್ ಸರಕಾರ ತಾರತಮ್ಯ ಮಾಡುತ್ತಿದೆ. ಕಾನೂನು- ಸುವ್ಯವಸ್ಥೆ ಹಾಳಾಗಿದೆ. ಕೆಲವರಿಗೆ ಸುಣ್ಣ- ಇನ್ನೂ ಕೆಲವರಿಗೆ ಬೆಣ್ಣೆ ಇಡುವ ಕೆಲಸವನ್ನು ಕಾಂಗ್ರೆಸ್ ಸರಕಾರ ಮಾಡುತ್ತಿದೆ. ಈ ಎಲ್ಲ ವಿಷಯಗಳನ್ನು ರಾಜ್ಯಪಾಲರ ಗಮನಕ್ಕೆ ತಂದಿದ್ದೇವೆ ಎಂದರು. ಕಾನೂನು- ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ. ಬಳ್ಳಾರಿಯಲ್ಲಿ ಜನಾರ್ಧನ ರೆಡ್ಡಿಯವರ ವಿರುದ್ಧ ಷಡ್ಯಂತ್ರಗಳು ನಡೆದಿವೆ. ಅಲ್ಲಿ ಕಾಂಗ್ರೆಸಿನ ರಾಜಶೇಖರ್ ಎಂಬ ವ್ಯಕ್ತಿಯನ್ನು ಅವರೇ ಕೊಲೆ ಮಾಡಿರುವುದು. ಶಾಸಕ ಭರತ್ ರೆಡ್ಡಿಯವರ ಗನ್ ಮ್ಯಾನ್‌ಗಳು ಇದನ್ನು ಮಾಡಿದ್ದಾರೆ. ಆದರೆ, ಅದು ಕೊಲೆ ಆಗಿದ್ದರೂ ಅವರನ್ನು ಬಂಧಿಸಿಲ್ಲ ಎಂದು ಆರೋಪಿಸಿದರು.

ಹುಬ್ಬಳ್ಳಿಯಲ್ಲಿ ಹೆಣ್ಣುಮಗಳನ್ನು ವಿವಸ್ತ್ರಗೊಳಿಸಿ ಮತ್ತೆ ಅವರ ಮೇಲೆ ಕೊಲೆ ಯತ್ನದ ಕೇಸ್ ಹಾಕಿದ್ದಾರೆ ಎಂದರು.

ಪ್ರತಿಪಕ್ಷ ನಾಯಕ ಆರ್.ಅಶೋಕ ನೇತೃತ್ವದ ಬಿಜೆಪಿ ನಿಯೋಗ ಲೋಕಭವನಕ್ಕೆ ತೆರಳಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಅವರಿಗೆ ಮನವಿ ಪತ್ರ ಸಲ್ಲಿಸಿತು. ನಿಯೋಗದಲ್ಲಿ ಛಲವಾದಿ ನಾರಾಯಣ ಸ್ವಾಮಿ, ಗೋವಿಂದ ಕಾರಜೋಳ, ಎಸ್.ಆರ್.ವಿಶ್ವನಾಥ್, ಎನ್. ರವಿಕುಮಾರ್ ಸೇರಿ ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

ದ್ವೇಷ ಭಾಷಣ ಮಸೂದೆಯಿಂದ ದುಷ್ಪರಿಣಾಮ: ಎಂ.ಸಿ.ನಾಣಯ್ಯ

ಬೆಂಗಳೂರು: ದ್ವೇಷ ಭಾಷಣ ಸಂಬಂಧಿತ ಮಸೂದೆಯನ್ನು ಪ್ರಧಾನಿಯಾಗಿದ್ದ ರಾಜೀವ್ ಗಾಂಧಿಯವರು ಲೋಕಸಭೆಯಲ್ಲಿ ಮಂಡಿಸಿದ್ದರು. ರಾಜ್ಯಸಭೆಯಲ್ಲಿ ಚರ್ಚಿಸಿದ ಬಳಿಕ ಅದು ಲೋಕಸಭೆಗೆ ಬಂದಿತ್ತು. ಜನರು ಇದನ್ನು ತೀವ್ರವಾಗಿ ಖಂಡಿಸಿದ್ದರು. ಆದ್ದರಿಂದ ಅದನ್ನು ಜಾರಿ ಮಾಡಿರಲಿಲ್ಲ ಎಂದು ಹಿರಿಯ ವಕೀಲ ಎಂ.ಸಿ. ನಾಣಯ್ಯ ತಿಳಿಸಿದರು.

ಸಿಟಿಜನ್ಸ್ ಫಾರ್ ಡೆಮಾಕ್ರಸಿ ವತಿಯಿಂದ ರಾಜ್ಯಪಾಲರಿಗೆ ಮನವಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಈ ಮಸೂದೆ ಕಾನೂನಾದರೆ ಬಹಳಷ್ಟು ಜನರಿಗೆ ತೊಂದರೆ ಆಗಲಿದೆ. ಸಾಂಸಾರಿಕ ಸಮಸ್ಯೆ ಸಂಭವಿಸಬಹುದು. ಕಾನೂನಿನಲ್ಲಿ ಇದು ಈಗಾಗಲೇ ಇದೆ. ಕೆಟ್ಟ ಭಾಷೆ ಬಳಸಿದ ತಪ್ಪಿತಸ್ಥರಿಗೆ ಕನಿಷ್ಠ 3 ವರ್ಷ ಶಿಕ್ಷೆ, 50 ಸಾವಿರ ದಂಡ ವಿಧಿಸಲು ಸೂಚನೆ ಇದೆ. ಇದು ಪುನರಾವರ್ತನೆ ಆದರೆ, 10 ವರ್ಷ ಶಿಕ್ಷೆ, 1 ಲಕ್ಷ ದಂಡ ವಿಧಿಸಲು ಅವಕಾಶವಿದೆ. ದ್ವೇಷ ಭಾಷಣ ಮಸೂದೆಯಿಂದ ತೀವ್ರ ದುಷ್ಪರಿಣಾಮ ಆಗಲಿದೆ ಎಂದರು.

ಹಿರಿಯ ವಕೀಲ ವಿವೇಕ್ ಸುಬ್ಬಾರೆಡ್ಡಿ ಮಾತನಾಡಿ, ಬಿಎನ್‌ಎಸ್ ಅಧಿನಿಯಮದ ಅನೇಕ ಸೆಕ್ಷನ್‌ಗಳು ದ್ವೇಷ ಭಾಷಣದ ಕುರಿತು ಉಲ್ಲೇಖಿಸುತ್ತವೆ. ಕೇಂದ್ರ ಕಾನೂನಿನಲ್ಲಿ ಇದೆಲ್ಲ ಇದ್ದಾಗ ರಾಜ್ಯದಲ್ಲಿ ಪ್ರತ್ಯೇಕ ಕಾನೂನು ಬೇಕೇ? ಎಂದರು. ಹಿರಿಯ ವಕೀಲ ಹರಿರಾಮ್, ಲಕ್ಷ್ಮಿ ಅಯ್ಯಂಗಾರ್ ಇದ್ದರು.

ಬಳ್ಳಾರಿಯಲ್ಲಿ ಜನಾರ್ದನ ರೆಡ್ಡಿಯವರ ಮೇಲೆ ಗುಂಡಿನ ದಾಳಿ, ಕಾಂಗ್ರೆಸ್ ಕಾರ್ಯಕರ್ತನ ಮೇಲಿನ ಹಲ್ಲೆ ಬಗ್ಗೆ ರಾಜ್ಯಪಾಲರ ಗಮನಕ್ಕೆ ತಂದಿದ್ದೇವೆ. ಬಳ್ಳಾರಿಯಲ್ಲಿ ಇದೇ ತಿಂಗಳ 17ಕ್ಕೆ ಸಮಾವೇಶ ಮಾಡುತ್ತೇವೆ. ಪ್ರಕರಣ ಹಳ್ಳ ಹಿಡಿಸಲು ಕಾಂಗ್ರೆಸ್ ಹೊರಟಿದೆ. ಈ ಸರಕಾರದಿಂದ ನ್ಯಾಯ ಸಿಗಲ್ಲ. ಈ ಪ್ರಕರಣ ಸಿಬಿಐಗೆ ಕೊಡಿ ಅಂತ ಮನವಿ ಮಾಡಿದ್ದೇವೆ.

-ಆರ್.ಅಶೋಕ, ಪ್ರತಿಪಕ್ಷ ನಾಯಕ

ಮೆಕ್ಕೆಜೋಳ ಖರೀದಿ ಕೇಂದ್ರಕ್ಕೆ ಆಗ್ರಹ

ಚಿಕ್ಕಬಳ್ಳಾಪುರ: ಜಿಲ್ಲೆಯಲ್ಲಿ ಈ ಬಾರಿ ಭರಪೂರ ಮೆಕ್ಕೆಜೋಳ ಬೆಳೆದಿದ್ದು, ಬರೋಬ್ಬರಿ 2 ಲಕ್ಷ ಟನ್ ನಷ್ಟು ಮೆಕ್ಕೆಜೋಳ ಸಂಗ್ರಹ ಮಾಡಿದ್ದಾರೆ. ಆದರೆ ಜಿಲ್ಲಾಡಳಿತ ಸರಕಾರದ ನಿರ್ದೇಶನಕ್ಕೂ ಕ್ಯಾರೆ ಎನ್ನದೆ, ಮೆಕ್ಕೆಜೋಳ ಖರೀದಿ ಕೇಂದ್ರ ತೆರೆಯದೇ ಕೂತಿದೆ. ಇದರಿಂದ ಆಕ್ರೋಶಗೊಂಡ ರೈತರು ಚಿಕ್ಕಬಳ್ಳಾಪುರ ಜಿಲ್ಲಾಡಳಿತ ಭವನದ ಮುಂದೆ ಮೆಕ್ಕೆಜೋಳ ಸುರಿದು ಪ್ರತಿಭಟನೆ ನಡೆಸಿದರು. ಚಿಕ್ಕಬಳ್ಳಾಪುರ ಜಿಲ್ಲೆಯೊಂದರಲ್ಲೇ ಈ ಬಾರಿ 45,000 ಹೆಕ್ಟರ್ ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆಯಲಾಗಿದೆ. ಇದರಿಂದ ಜಿಲ್ಲೆಯ ಬರೊಬ್ಬರಿ 2 ಲಕ್ಷ ಟನ್ ನಷ್ಟು ಮೆಕ್ಕೆಜೋಳ ಬೆಳೆಯಲಾಗಿದೆ. ಆದರೆ ಕೆಎಂಎಫ್, ಎಂಎಸ್‌ಪಿ ದರದಲ್ಲಿ ಅಲ್ಪ ಪ್ರಮಾಣದಲ್ಲಿ ಮೆಕ್ಕೆಜೋಳ ಖರೀದಿ ಮಾಡಿಕೊಂಡಿದೆ. ಆದ್ರೆ ಚಿಕ್ಕಬಳ್ಳಾಪುರ ಜಿಲ್ಲಾಡಳಿತ ಇದುವರೆಗೂ ಸಕಾಲಕ್ಕೆ ಮೆಕ್ಕೆಜೋಳ ಖರೀದಿ ಕೇಂದ್ರ ತೆರೆದಿಲ್ಲಎಂದುರೈತರು ಜಿಲ್ಲಾಡಳಿತ ಭವನದ ಮುಂದೆ ಪ್ರತಿಭಟನೆ ನಡೆಸಿದರು.

ಪ್ರಯಾಣಿಕರ ಚಿನ್ನಾಭರಣ ಕಳವು: ಬಂಧನ

ಚಿಕ್ಕಬಳ್ಳಾಪುರ: ಕೆಎಸ್‌ಆರ್‌ಟಿಸಿ ಬಸ್‌ಗಳನ್ನೇ ಗುರಿಯಾಗಿಸಿ ಕೊಂಡು ಬರೋಬ್ಬರಿ 22 ಲಕ್ಷ ರು. ಮೌಲ್ಯದ 240 ಗ್ರಾಂ ಚಿನ್ನಾಭರಣ ಕಳವು ಮಾಡಿದ್ದ ಮಹಿಳೆಯನ್ನ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ. ಚಿಂತಾಮಣಿ ತಾಲೂಕಿನ ತಳಗವಾರ ಗ್ರಾಮದ ಮಹಿಳೆ ವನಜಾಕ್ಷಿ ಎಂಬಾಕೆ ದೇವಸ್ಥಾನಕ್ಕೆ ಹೋಗುವ ಸಲುವಾಗಿ ಜಂಗಮ ಕೋಟೆ ಕ್ರಾಸ್ ನಿಂದ ಸೂಲಿಬೆಲೆಗೆ ತೆರಳಲು ಬಸ್ ಹತ್ತುತ್ತಿದ್ದ ವೇಳೆ ಚಿನ್ನಾಭರಣ ಕಳವು ಮಾಡುತ್ತಿದ್ದಳಂತೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಶಿಡ್ಲಘಟ್ಟ ಗ್ರಾಮಾಂತರ ಪೊಲೀಸರು ಕುಪ್ಪಂ ಮೂಲದ ಮೀನಾಕ್ಷಿ ಎಂಬಾಕೆಯನ್ನ ಬಂಧಿಸಿದ್ದಾರೆ. ಬಂಧಿತ ಮಹಿಳೆ ಬಳಿ 22 ಲಕ್ಷ ಮೌಲ್ಯದ 240 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆದುಕೊಂಡಿದ್ದಾರೆ.

ನೇಮಕಾತಿ ಪರೀಕ್ಷೆ ಕೀ ಉತ್ತರ ಪ್ರಕಟ

ಬೆಂಗಳೂರು: ತಾಂತ್ರಿಕ ಶಿಕ್ಷಣ, ಬಿಡಿಎ, ಬೆಂಗಳೂರು ಜಲಮಂಡಳಿ, ಕೃಷಿ ಮಾರಾಟ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳ ನೇಮಕಾತಿಗೆ ಇದೇ ಜ.10 ಮತ್ತು 11ರಂದು ನಡೆಸಿದ್ದ ಪರೀಕ್ಷೆಗಳ ಕೀ ಉತ್ತರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸೋಮವಾರ ಪ್ರಕಟಿಸಿದೆ. ಕೀ ಉತ್ತರಗಳಿಗೆ ಆಕ್ಷೇಪಣೆಗಳು ಇದ್ದಲ್ಲಿ ಜ.14ರಂದು ಬೆಳಗ್ಗೆ 11 ಗಂಟೆ ಒಳಗೆ ನಿಗದಿತ ಲಿಂಕ್ ಮೂಲಕ ಸಲ್ಲಿಸಬೇಕು. ಬಳಿಕ ಪರಿಶೀಲಿಸಿ ಅಂತಿಮ ಫಲಿತಾಂಶ ಪ್ರಕಟಿಸಲಾಗುತ್ತದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಮಕ್ಕಳ ಅಪಹರಣ: ವ್ಯಕ್ತಿ ಬಂಧನ

ಧಾರವಾಡ: ನಗರದ ಕಮಲಾಪುರದ ಸರಕಾರಿ ಮಾದರಿ ಕನ್ನಡ ಪ್ರಾಥಮಿಕ ಶಾಲೆಯ ಮೂರನೇ ತರಗತಿಯ ಇಬ್ಬರು ವಿದ್ಯಾರ್ಥಿಗಳನ್ನು ಸೋಮವಾರ ಅಪಹರಿಸಿ ಕರೆದೊಯ್ದಿದ್ದ ವ್ಯಕ್ತಿ ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ಸಮೀಪ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ. ಮಕ್ಕಳನ್ನು ರಕ್ಷಣೆ ಮಾಡಲಾಗಿದೆ. ಆಸ್ತಿನಗರದ ಅಬ್ದುಲ್ ಕರೀಂ ಮೇಸ್ತ್ರಿ (50) ಸಿಕ್ಕಿಬಿದ್ದ ಆರೋಪಿ. ತನ್ವೀರ್ ದೊಡ್ಡಮನಿ ಮತ್ತುಲಕ್ಷ್ಮೀ ಕರೆಪ್ಪನವರ ಅವರನ್ನು ರಕ್ಷಿಸಲಾಗಿದೆ.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂ:(0831) 2463850/ಫ್ಯಾಕ್ಸ್ ಸಂ:(0831) 2423008
No.EE/MI&GWDDD/BGM/TND/AE/2025-26/4720 Date: 12-01-2026

ಅವಧಿ ವಿಸ್ತರಣೆ ಅಲ್ಪಾವಧಿ ಟೆಂಡರ ಪ್ರಕಟಣೆ (ಕೆ.ಡಬ್ಲ್ಯೂ-4)

ಈ ಕಛೇರಿ ಟೆಂಡರ ಪ್ರಕಟಣೆ No.EE/MI&GWDDD/BGM/TND/AE/2025-26/4617 Dated:03–01–2026ರಲ್ಲಿ 4702 ಲೆಕ್ಕ ಶೀರ್ಷಿಕೆ ಕಾಮಗಾರಿಗಳಿಗಾಗಿ ಅವ್ಹಾನಿಸಲಾದ ಅಲ್ಪಾವಧಿ ಟೆಂಡರ ಪ್ರಕಟಣೆಗೆ ತಾಂತ್ರಿಕ ಕಾರಣಗಳಿಂದ ಈ ಕೆಳಗಿನಂತೆ ದಿನಾಂಕಗಳನ್ನು ಪರಿಷ್ಕರಿಸಲಾಗಿದೆ. (3 ಕಾಮಗಾರಿಗಳು ಮಾತ್ರ)
1.ಪೂರ್ವ ಟೆಂಡರ ಸಭೆ ದಿನಾಂಕ:16–01–2026 ಸಂಜೆ 16.00 ಗಂಟೆ 2.ಟೆಂಡರ ಕ್ವಾರಿಜ್ ದಿನಾಂಕ:16–01–2026 ಸಂಜೆ 17–30 ಘಂಟೆವರೆಗೆ 3. ಟೆಂಡರ ಸ್ವಿಕರಿಸುವ ಕೊನೆಯ ದಿನಾಂಕ:17–01–2026ರ ಸಂಜೆ 16–00ಘಂಟೆವರೆಗೆ. 4. ತಾಂತ್ರಿಕ ಬಿಡ್ ಭಾಗ–1 ದಿನಾಂಕ:19–01–2026 ರಂದು ತೆರೆಯಲಾಗುವುದು. (ಸಾಧ್ಯವಾದಲ್ಲಿ)
ಉಳಿದ ಉಪವಿಧಿಗಳಲ್ಲಿ / ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವದಿಲ್ಲ.
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.
DIPR/BGM/RO-NO-1627/KSMCA/2025-26

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಕಾರ್ಯನಿರ್ವಾಹಕ ಇಂಜಿನೀಯರರ ಕಚೇರಿ, ಬಂದರು ವಿಭಾಗ, ಬೈತಖೋಲ್, ಕಾರವಾರ, ಉತ್ತರ ಕನ್ನಡ ಜಿಲ್ಲೆ–581302
ದೂ: 08382-229672 ಇ–ಮೇಲ್: eepdkwr4@gmail.com
ನಂ:ಕಾನಿಇಂ/ಬಂವಿಕಾ/ಟೆಂಡರ್/2025–26/891 ದಿನಾಂಕ: 12–01–2026

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ "ಒಟ್ಟು 10 ಸಂಖ್ಯೆಯ ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್ ಕರೆಯಲಾಗಿದ್ದು, ಕಾಮಗಾರಿಗಳ ಟೆಂಡರಿಗಿಟ್ಟ ಮೊತ್ತವು ಸುಮಾರು ರೂ.169069.7 ದಿಂದ ರೂ.1666998.55 ವರೆಗಿದ್ದು, ಇವುಗಳಲ್ಲಿ 2 ಕಾಮಗಾರಿಗಳು–ಪರಿಶಿಷ್ಟಜಾತಿ ಹಾಗೂ ಪಂಗಡಗಳಿಗೆ, 2 ಸಂಖ್ಯೆಯ ಕಾಮಗಾರಿಗಳು ಕೆಟಗರಿ IIA ಹಾಗೂ 6 ಕಾಮಗಾರಿಗಳು ಇತರೆ ಇವರಿಗೆ ಮೀಸಲಿಡಲಾಗಿರುತ್ತದೆ. www.kppp.karnataka.gov.in ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿ: 16–01–2026 ರಂದು 17.00 ಗಂಟೆಯವರೆಗೆ ಮತ್ತು ಟೆಂಡರ್ ಪಡೆಯುವ ದಿನಾಂಕ ಮತ್ತು ವೇಳೆ: ದಿ: 19–01–2026 ರಂದು 17.00 ಗಂಟೆಯವರೆಗೆ ಹಾಗೂ ಟೆಂಡರ್ ಮುಂದೂಡಿಕೆಯ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ವಿಭಾಗ, ಕಾರವಾರ (ಉ.ಕ)
DIPR/KWR/KSMCA/939/25-26 Dt.12.01.2026

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಕೃಷಿ ನಗರ ಧಾರವಾಡ–580005
ಮಿಂಚಂಚೆ : spo@uasd.in ದೂರವಾಣಿ ಸಂಖ್ಯೆ: 0836–2214291
ನಂ. ನಿ.ಅ/ಆಅ/ಟೆಂಡರ್.ಇಪ್ರೋಕ್–14/2025–26 ದಿನಾಂಕ : 09.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ) (2ನೇ ಕರೆ)

ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ Supply, Installation, testing and commissioning of solar roof top grid connected power plants ಟೆಂಡರನ್ನು ಆಹ್ವಾನಿಸಿದ್ದು ಅರ್ಹ, ನೋಂದಾಯಿತ, ಅಧಿಕೃತ ಸರಬರಾಜುದಾರರರು ಟೆಂಡರಿನಲ್ಲಿ ಭಾಗವಹಿಸಲು ಮುಂದೆ ಹೇಳಿದ ವೆಬ್‌ಸೈಟನ್ನು ಆನ್‌ಲೈನ ಮುಖಾಂತರ ಸಂಪರ್ಕಿಸುವುದು http://kppp.karnataka.gov.in ಹಾಗೂ ಟೆಂಡರ ದಸ್ತಾವೇಜುಗಳನ್ನು ಡೌನಲೋಡ ಮಾಡಿಕೊಳ್ಳಬಹುದು. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 21.01.2026 (ಬುಧವಾರ) ಸಾಯಂಕಾಲ 04.00 ಗಂಟೆಯವರೆಗೆ. ಟೆಂಡರ ವೇಳಾಪಟ್ಟಿಯ ಇತರ ಮಾಹಿತಿಯನ್ನು ಇ ಪೋರ್ಟಲ್‌ನಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ 0836–2214291 ದೂರವಾಣಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಟೆಂಡರಿನಲ್ಲಿ ಭಾಗವಹಿಸಲಿಚ್ಚಿಸುವ ಸರಬರಾಜುದಾರರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಬೆಂಗಳೂರು, ಇವರಲ್ಲಿ ನೋಂದಣಿ ಮಾಡಿಕೊಂಡಿರಬೇಕು. ನೋಂದಣಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080–46010000. ಭಾಗವಹಿಸುವ ಸರಬರಾಜುದಾರರು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಬಿಡ್‌ಗಳನ್ನು ಸಲ್ಲಿಸುವುದು. ಬಿಡ್‌ದಾರರು ಟೆಂಡರಿನ ಒಟ್ಟಾರೆ ಅವಧಿಯಲ್ಲಿ ಆನ್‌ಲೈನ್ ಮೂಲಕ http://kppp.karnataka.gov.in ನಲ್ಲಿ ನೀಡಲಾಗುವ ತಿದ್ದುಪಡಿ / ಸೇರ್ಪಡೆ (ಇದ್ದಲ್ಲಿ) ತಪ್ಪದೇ ಗಮನಿಸುವುದು.
ಸಹಿ/– ಆಸ್ತಿ ಅಧಿಕಾರಿಗಳು ಕೃ.ವಿ.ವಿ. ಧಾರವಾಡ
ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/1089/2025–26

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಚೇರಿ, ಕೂಡ್ಲು ವಿಭಾಗ, ಬೇಗೂರು ಮುಖ್ಯರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು – 560 068.
ಸಂಖ್ಯೆ: ಬೆಂ.ದ.ನ.ಪಾ/ಕಾಪಾಅ/ಕೂವಿ/ಟೆಂಡರ್–03/2025–26 ದಿನಾಂಕ:12–01–2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿಲಕೋಟೆ ಟೆಂಡರ್)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರ, ಕೂಡ್ಲು ವಿಭಾಗ, ದಕ್ಷಿಣ ವಲಯ–2, ಬೆಂ.ದ.ನ.ಪಾಲಿಕೆ, ಬೆಂಗಳೂರು–560068, ಇವರು ಬೆಂಗಳೂರು ದಕ್ಷಿಣ ನಗರ ಪಾಲಿಕೆ, ಬೆಂಗಳೂರು ಅಥವಾ ಸಮನಾಂತರವಾಗಿ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆಳಗೆ ತಿಳಿಸಿರುವ ಕಾಮಗಾರಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1	ಕ್ಯಾಪಿಟಲ್ ಸಪೋರ್ಟ್ ಫಾರ್ ಸ್ಪೆಷಲ್ ಇನ್ಫ್ರಾಪ್ರಾಜೆಕ್ಟ್ (ಸಿಎಸ್‌ಎಸ್‌ಐಪಿ) ಅಡಿಯಲ್ಲಿ ಆಯ್ದ ಪ್ರಧಾನ, ಉಪಪ್ರಧಾನ ಮತ್ತು ಇತರೆ ಪ್ರಮುಖ ರಸ್ತೆಗಳಿಗೆ ಸೂಕ್ತ ಚೇಂಬರ್, ಶೋಲ್ಡರ್ ರಚನೆ ಬದಿ ಚರಂಡಿ ಸುಧಾರಣೆ ಮತ್ತು ರಸ್ತೆ ಸುರಕ್ಷತಾ ಮಾನದಂಡಗಳನ್ನು ಒಳಗೊಂಡಂತೆ ರೀಸರ್ಫೇಸಿಂಗ್ ಮಾಡುವುದರೊಂದಿಗೆ ಪ್ರಸ್ತುತವಿರುವ ಡಾಂಬರು ರಸ್ತೆಗಳಿಗೆ ಸುಧಾರಣೆ ಮಾಡುವುದು. (ಸರ್ಕಾರಿ ಆದೇಶ ಬೆಂ.ದ.ನ.ಪಾ ಕ್ರಮ ಸಂಖ್ಯೆ. 34, 50, 49, 78ರಲ್ಲಿ 4 ಕಾಮಗಾರಿಗಳನ್ನು ಒಳಗೊಂಡಂತೆ) ಪ್ಯಾಕೇಜ್ ಸಂಖ್ಯೆ: ಸಿಎಸ್‌ಎಸ್‌ಐಪಿ ಬಿಹೆಚ್–03 (2ನೇ ಕರೆ) **ಟೆಂಡರ್‌ಗಿಟ್ಟ ಅಂದಾಜು ಮೊತ್ತ: ₹.799.10 ಲಕ್ಷಗಳು, ಇಎಂಡಿ:** ಇ–ಪೋರ್ಟಲ್ ಮೂಲಕ ಒಂದು ಲಕ್ಷ ರೂಪಾಯಿಗಳನ್ನು ವರ್ಗಾಯಿಸುವುದು ಮತ್ತು ಉಳಿಕೆ ಮೊತ್ತವನ್ನು ಬಿಜಿ/ಡಿಡಿ/ಎಫ್‌ಡಿಆರ್ ಮೂಲಕ) ₹.11,98,650.00

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ 22–01–2026ರ ಸಂಜೆ 4:00 ಗಂಟೆಯವರೆಗೆ. (2) ಟೆಂಡರ್ ದಾಖಲೆಗಳನ್ನು ದಿನಾಂಕ: 13–01–2026ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: 15–01–2026 ಬೆಳ್ಳಿಗೆ 11:00 ಗಂಟೆಗೆ ನಡೆಸಲಾಗುವುದು. (4) ಟೆಂಡರ್‌ಗಳನ್ನು ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 22–01–2026ರ ಸಂಜೆ 4:00 ಗಂಟೆಯವರೆಗೆ ಅಥವಾ ಮುಂಚಿತವಾಗಿ. (5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 23–01–2026ರ ಸಂಜೆ 4:30 ಗಂಟೆಯಿಂದ ತೆರೆಯಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು –ಕೂಡ್ಲು ವಿಭಾಗ

ಜಿಲ್ಲಾ ಶಸ್ತ್ರಚಿಕಿತ್ಸಕರ ಕಚೇರಿ, ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆ, ಕೋಲಾರ
ದೂರವಾಣಿ ಸಂ: 08152–222035 ಇ–ಮೇಲ್: dskolar@gmail.com
ಸಂಖ್ಯೆ: ಎಸ್.ಎನ್.ಆರ್/ಸರಬ/ಆರ್‌ಸಿ/53/2025–26 ದಿನಾಂಕ: 05.01.2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2026–27ನೇ ಸಾಲಿಗೆ ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆ, ಕೋಲಾರ ಇಲ್ಲಿಗೆ ಔಷಧಿಗಳು, ರಾಸಾಯಿನಿಕಗಳು ಡಿಸ್ಪೋಸಬಲ್ಸ್ ಹಾಗೂ ಆರ್ಥೋ ಇಂಪ್ಲಾಂಟ್ಸ್ ಸರಬರಾಜಿಗೆ ಧರ ನಿಗಧಿಪಡಿಸಲು ಆಸಕ್ತ ಮೂಲ ತಯಾರಿಕರು/ಸರಬರಾಜುದಾರರಿಂದ ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಇ–ಟೆಂಡರ್ ನಮೂನೆಗಳು ಹಾಗೂ ಷರತ್ತು ನಿಬಂಧನೆಗಳನ್ನು http://kppp.karnataka.gov.inವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿದೆ. ಟೆಂಡರ್‌ಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ನಿಯಮಗಳು ಹಾಗೂ ಟೆಂಡರ್ ಸಮಿತಿಯ ಇತರೆ ಷರತ್ತಿಗೆ ಒಳಪಟ್ಟಿರುತ್ತದೆ. (1) ಔಷಧಿಗಳು, ಡಿಸ್ಪೋಸಬಲ್ಸ್ ಹಾಗೂ ಇತರೆ ಐಟಂಗಳ ಸರಬರಾಜಿಗೆ ಒದಗಿಸುವ ಟೆಂಡರ್: ಅಧಿಸೂಚನೆ ಸಂಖ್ಯೆ:ಎಸ್.ಎನ್.ಆರ್/ಸರಬ/ಆರ್‌ಸಿ/53/2025–26, ದಿನಾಂಕ: 05.01.2026. ಟೆಂಡರ್ ಮೊತ್ತ ರೂ: 50 ಲಕ್ಷ, ಇ.ಎಂ.ಡಿ. ರೂ. 1,00,000/–, ಟೆಂಡರ್ ಸಲ್ಲಿಸಲು **ಕೊನೆ ದಿನಾಂಕ: 15.01.2026 ಸಂಜೆ 5.00 ರವರೆಗೆ. (2)** ಪ್ರಯೋಗಶಾಲಾ ರಾಸಾಯಿನಿಕಗಳು, ಡಿಸ್ಪೋಸಬಲ್ಸ್ ಹಾಗೂ ಇತರೆ ಐಟಂಗಳ ಸರಬರಾಜಿಗೆ ಒದಗಿಸುವ ಟೆಂಡರ್: ಅಧಿಸೂಚನೆ ಸಂಖ್ಯೆ: ಎಸ್.ಎನ್.ಆರ್/ಸರಬ/ಆರ್‌ಸಿ/54/2025–26, ದಿನಾಂಕ: 05.01.2026. ಟೆಂಡರ್ ಮೊತ್ತ ರೂ: 50 ಲಕ್ಷ, ಇ.ಎಂ.ಡಿ. ರೂ. 1,00,000/–, ಟೆಂಡರ್ ಸಲ್ಲಿಸಲು **ಕೊನೆ ದಿನಾಂಕ: 15.01.2026 ಸಂಜೆ 4.00 ರವರೆಗೆ. (3)** ಆರ್ಥೋ ಹಾಗೂ ಓ.ಎಂ.ಎಫ್.ಎಸ್. ಇಂಪ್ಲಾಂಟ್ಸ್ ಸರಬರಾಜಿಗೆ ಒದಗಿಸುವ ಟೆಂಡರ್: ಅಧಿಸೂಚನೆ ಸಂಖ್ಯೆ: ಎಸ್.ಎನ್.ಆರ್/ಸರಬ/ಇಂಪ್ಲಾಂಟ್ಸ್/49/2025–26, ದಿನಾಂಕ: 05.01.2026. ಟೆಂಡರ್ ಮೊತ್ತ ರೂ: 50 ಲಕ್ಷ, ಇ.ಎಂ.ಡಿ. ರೂ. 1,00,000/–, ಟೆಂಡರ್ ಸಲ್ಲಿಸಲು ಕೊನೆ **ದಿನಾಂಕ: 04.02.2026 ಸಂಜೆ 4.00 ರವರೆಗೆ.** ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಶಸ್ತ್ರಚಿಕಿತ್ಸಕರು, ಎಸ್.ಎನ್.ಆರ್. ಜಿಲ್ಲಾ ಆಸ್ಪತ್ರೆ, ಕೋಲಾರರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/– ಜಿಲ್ಲಾ ಶಸ್ತ್ರಚಿಕಿತ್ಸಕರು, ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:435/ಕೆಎಸ್‌ಎಂಸಿಎ/2025–26

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ನ್ಯಾಕ್ 'ಎ' ಮಾನ್ಯತೆ,
ಆಸ್ತಿ ಅಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಸಂಖ್ಯೆ.ಇ.ಓ/ಎಸ್.ಪಿ.ಓ/ಕೆಪಿಪಿಪಿ/14/2025–26 ದಿನಾಂಕ: 09–01–2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಜಿಕೆವಿಕೆ, ಬೆಂಗಳೂರು, ಅವಶ್ಯವಿರುವ ಉಪಕರಣಗಳು ಸರಬರಾಜು ಕೆ.ಜಿ–2, ಟೆಂಡರ್ ನಿಬಂಧನೆಗೊಳಪಟ್ಟಂತೆ ಟೆಂಡರನ್ನು ಆಹ್ವಾನಿಸಲಾಗಿದೆ.
ವಿವರ: ಪ್ರಿ–ಬಿಡ್ ಮೀಟಿಂಗ್ **ದಿನಾಂಕ: 19.01.2026 ರಂದು ಬೆಳಿಗ್ಗೆ 11:30 ಕ್ಕೆ** ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 24.01.2026 ಸಂಜೆ 4:00 ಗಂಟೆ**ಯವರೆಗೆ ಮತ್ತು ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 27.01.2026 ರ ಬೆಳಿಗ್ಗೆ 10:30 ಕ್ಕೆ** ಮತ್ತು ಆರ್ಥಿಕ ಬಿಡ್ ತೆರೆಯುವ **ದಿನಾಂಕ: 29.01.2026ರ ಬೆಳಿಗ್ಗೆ 10:30 ಕ್ಕೆ.** ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. ಸೂಚನೆ: ಯಾವುದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್: www.kppp.karnataka.gov.in ರಲ್ಲಿ ದೊರೆಯುತ್ತದೆ ಹಾಗೂ ಈ ಕಚೇರಿಯನ್ನು, ಕಚೇರಿಯ ವೇಳೆಯಲ್ಲಿ ಸಹಾಯವಾಣಿ ದೂರವಾಣಿ ಸಂಖ್ಯೆ: 91-8046010000, +91-8068948777, support@eprochelpdesk.com ಅಥವಾ www.uasbangalore.edu.in ದೂರವಾಣಿ ಸಂಖ್ಯೆ: 23630128 ಸಂಪರ್ಕಿಸಬಹುದು.
ಸಹಿ/– ಆಸ್ತಿ ಅಧಿಕಾರಿಗಳು
DIPR/CP/RO4978/AAPL/2025-26

ಕರ್ನಾಟಕ ಸರ್ಕಾರ
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ದಾವಣಗೆರೆ.
ಸಂ:ಕಾಪಾಇಂ/ಪಂರಾಇಂ/ವಿ/ದಾ/ಸ.ಇಂ/ಟೆಂಡರ್/2025–26/2236
ದಿನಾಂಕ:–12/01/2026

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
("ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್" ಮೂಲಕ)

ಈ ವಿಭಾಗ ವ್ಯಾಪ್ತಿಯ 2025–26 ನೇ ಸಾಲಿನ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಮತ್ತು 2024–25 ನೇ ಸಾಲಿನ ಮಳೆಹಾನಿ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಗಳನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಏಕ ಮತ್ತು ದ್ವಿ–ಲಕೋಟೆಯಲ್ಲಿ ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆ–3ರಲ್ಲಿ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ:09 (ಇಂಡೆಂಟ್ ಸಂಖ್ಯೆ: 22899, 22900, 22901, 22902, 22903, 22904, 22905, 22906 & 22946) ಟೆಂಡರ್‌ಗಿಟ್ಟ ಮೊತ್ತ ರೂ.42.06 ಲಕ್ಷಗಳಿಂದ 84.00 ಲಕ್ಷಗಳವರೆಗೆ ಇರುತ್ತವೆ. ಕಾಮಗಾರಿ ಸ್ವರೂಪ ರಸ್ತೆ ಮತ್ತು ಸೇತುವೆ ನಿರ್ಮಾಣ ಟೆಂಡರ್ ಫಾರಂಗಳನ್ನು ದಿನಾಂಕ: 12/01/2025 ರಿಂದ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: 19/01/2026 ಸಂಜೆ 4.00 ಗಂಟೆಯವರೆಗೆ ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192–250156 ಅಥವಾ www.KPPP.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.
ವಾಸಾಇ/ಡಿವಿಜಿ/642/ಕೆಎಸ್‌ಎಂಸಿಎ/2025–26
ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ದಾವಣಗೆರೆ.

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ
ಸಂ.ಕಾನಿಅ/ಲೋಇ/ಯಾವಿ/ತಾಶಾ–1/ಇ–ಟೆಂಡರ್ ಪ್ರಕಟಣೆ/2025–26/ 2476, ದಿನಾಂಕ:09.01.2026

ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–1 ಮತ್ತು ಕೆಡಬ್ಲ್ಯೂ–4 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಲೆಕ್ಕಶೀರ್ಷಿಕೆ 2024–25ನೇ ಸಾಲಿನ 8443–ಅಲ್ಪಸಂಖ್ಯಾತರ, 4202 ಶಿಕ್ಷಣ ಹಾಗೂ 4059–ಅಪೆಂಡಿಕ್ಸ್–ಇ ಅಡಿಯಲ್ಲಿ ಸುರಪೂರ ತಾಲೂಕಿನ (1)29228, (2)29229, (3)29230, (4)27945, (5)25550, ಮತ್ತು (6)20314/2ನೇ ಕರೆ ಒಟ್ಟು 6 (ಆರು) ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. **2) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ. 18.00 ಲಕ್ಷಗಳು ಹಾಗೂ ಗರಿಷ್ಠ ರೂ:200.00 ಲಕ್ಷಗಳು **3) ಗುತ್ತಿಗೆದಾರರ ಅರ್ಹತೆ ವಿವರ:** ಸಿವಿಲ್ 4ನೇ ದರ್ಜೆ ಹಾಗೂ ಮೇಲ್ಪಟ್ಟು **4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, **5) ಪ್ರೀ ಬಿಡ್ ಮೀಟಿಂಗ್ ದಿನಾಂಕ:** 20.01.2026 (11.30 ಗಂಟೆ ನಂತರ) **6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 23.01.2026 (17.30 ಗಂಟೆವರೆಗೆ) **7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 28.01.2026 (16.00 ಗಂಟೆವರೆಗೆ) **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 29.01.2026 (16.30 ಗಂಟೆ ನಂತರ) **9) ಆರ್ಥಿಕ ಬಿಡ್ ತೆರೆಯುವ ದಿನಾಂಕ:** 31.01.2026 (11.30 ಗಂಟೆ ನಂತರ) **10) ಹೆಚ್ಚಿನ ವಿವರಗಳಿಗೆ:** ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ 11) ಅಂತರ್ಜಾಲ ತಾಣದ ವಿಳಾಸ: https://kppp.karnataka.gov.in
ವಿಶೇಷ ಸೂಚನೆ: ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ.
ವಾ.ಸಾ.ಸಂ.ಇ/ಯಾದಗಿರಿ/466/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.
ಸಂ:ಪಿಬಿ/ಟೆಂಡರ್ ಪ್ರಕಟಣೆ/ AE-2 /2025–26/3361 ದಿ:–08.01.2025

ಅಲ್ಪಾವದಿ ಇ–ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹತಿಯನ್ನು ಪಡೆಯಬಹುದು.

ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
RESERVED FOR SC-CATOGERY					
1	PWD/2025-26/BR/WORK_INDENT31295	8.50	6	PWD/2025-26/BD/WORK_INDENT29511	5.00
2	PWD/2025-26/RD/WORK_INDENT29668	100.00	7	PWD/2025-26/OW/WORK_INDENT30860	1.50
3	PWD/2025-26/RD/WORK_INDENT29670	15.00	8	PWD/2025-26/RD/WORK_INDENT28525/CALL-2	50.00
4	PWD/2025-26/BD/WORK_INDENT31420	3.00	9	PWD/2025-26/RD/WORK_INDENT29434/CALL-2	50.00
5	PWD/2025-26/BR/WORK_INDENT32146	30.00	10	PWD/2025-26/RD/WORK_INDENT28522/CALL-2	50.00
RESERVED FOR ST-CATOGERY					
11	PWD/2025-26/BR/WORK_INDENT29226	3.00	13	PWD/2025-26/RD/WORK_INDENT28446/CALL-2	50.00
12	PWD/2025-26/BR/WORK_INDENT31679	5.00			
RESERVED FOR CATOGERY-2A					
14	PWD/2025-26/BR/WORK_INDENT31297	5.15	18	PWD/2025-26/BD/WORK_INDENT29523	8.00
15	PWD/2025-26/BD/WORK_INDENT30919	4.00	19	PWD/2025-26/RD/WORK_INDENT28523	100.00
16	PWD/2025-26/RD/WORK_INDENT30786	35.74	20	PWD/2025-26/RD/WORK_INDENT29029	50.00
17	PWD/2025-26/BD/WORK_INDENT31676	10.00			
RESERVED FOR CATOGERY-1					
21	PWD/2025-26/BR/WORK_INDENT31508	4.35	22	PWD/2025-26/BD/WORK_INDENT29336/CALL-2	6.70
GENERAL					
23	PWD/2025-26/BR/WORK_INDENT31318	7.50	38	PWD/2025-26/BR/WORK_INDENT30233	3.00
24	PWD/2025-26/BD/WORK_INDENT30911	5.00	39	PWD/2025-26/BR/WORK_INDENT31735	6.00
25	PWD/2025-26/BD/WORK_INDENT30909	10.00	40	PWD/2025-26/RD/WORK_INDENT28300/CALL-2	50.00
26	PWD/2025-26/BD/WORK_INDENT30916	2.00	41	PWD/2025-26/RD/WORK_INDENT29100/CALL-2	50.00
27	PWD/2025-26/RD/WORK_INDENT30787	70.00	42	PWD/2025-26/RD/WORK_INDENT28362/CALL-2	50.00
28	PWD/2025-26/BG/WORK_INDENT31441	3.00	43	PWD/2025-26/RD/WORK_INDENT28361/CALL-2	50.00
29	PWD/2024-25/BD/WORK_INDENT19291	18.50	44	PWD/2025-26/RD/WORK_INDENT28363/CALL-2	50.00
30	PWD/2025-26/BD/WORK_INDENT31682	13.50	45	PWD/2025-26/RD/WORK_INDENT29742	95.00
31	PWD/2025-26/BD/WORK_INDENT31685	5.00	46	PWD/2025-26/RD/WORK_INDENT28519	150.00
32	PWD/2025-26/BD/WORK_INDENT29935	3.80	47	PWD/2025-26/BG/WORK_INDENT28727	500.00
33	PWD/2025-26/BD/WORK_INDENT31325	1.00	48	PWD/2025-26/OW/WORK_INDENT28587	300.00
34	PWD/2025-26/BD/WORK_INDENT32170	7.50	49	PWD/2025-26/RD/WORK_INDENT31574	100.00
35	PWD/2025-26/BD/WORK_INDENT32173	2.50	50	PWD/2025-26/RD/WORK_INDENT30220	100.00
36	PWD/2025-26/BR/WORK_INDENT30227	2.00	51	PWD/2025-26/RD/WORK_INDENT28518	100.00
37	PWD/2025-26/BR/WORK_INDENT30239	2.50	52	PWD/2025-26/RD/WORK_INDENT28401	100.00
			53	PWD/2025-26/BD/WORK_INDENT30459	100.00

		ಕ್ರ.ಸಂ:2,19 ಹಾಗೂ 46 ರಿಂದ 53 ರವರೆಗೆ	ಉಳಿದ ಕಾಮಗಾರಿಗಳು
1	ಗುತ್ತಿಗೆದಾರರ ಕ್ವಾರೀಸ್ ದಿನಾಂಕ:	KPP Portal ನಲ್ಲಿ ಇರುವಂತೆ	KPP Portal ನಲ್ಲಿ ಇರುವಂತೆ
2	ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ:	28.01.2026(16.00 ಗಂಟೆಗೆ)	20.01.2026(16.00 ಗಂಟೆಗೆ)
3	ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ:	29.01.2026(16.30 ಗಂಟೆಗೆ)	21.01.2026(16.30 ಗಂಟೆಗೆ)
4	ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಆರ್ಥಿಕ ಬಿಡ್ ತೆರೆಯುವ ದಿನಾಂಕ:	KPP Portal ನಲ್ಲಿ ಇರುವಂತೆ	KPP Portal ನಲ್ಲಿ ಇರುವಂತೆ

ವಿಷೇಶ ಸೂಚನೆ:– ಎಲ್ಲಾ ಕಾಮಗಾರಿ ಟೆಂಡರ್‌ಗಳನ್ನು / ಒಪ್ಪಿಗೆ / ತಿರಸ್ಕರಿಸುವ ಅಥವಾ ಯಾವುದೇ ಕಾರಣ ನೀಡದೆ ಹಿಂತೆಗೆದುಕೊಳ್ಳುವ ಹಾಗೂ ಅನುಮೋದಿಸುವ ಅಧಿಕಾರ ಸಕ್ಷಮ ಪ್ರಾಧಿಕಾರಕ್ಕೆ ಇರುತ್ತದೆ.
ಸಹಿ/–ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.
ವಾ.ಸಾ.ಸಂ.ಇ/ವಿಜಯನಗರ/2025–26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/456

ಕಲಬುರಗಿ ಜಿಲ್ಲೆಯಲ್ಲಿ ಕೈಗೊಂಡ 906 ಕೋಟಿ ರು. ವೆಚ್ಚದ ನಾನಾ ಕಾಮಗಾರಿಗಳಿಗೆ ಸಿಎಂ ಸಿದ್ದರಾಮಯ್ಯ ಚಾಲನೆ

ವಿರೋಧಿಗಳಿಗೆ ನಮ್ಮ ಅಭಿವೃದ್ಧಿ ಕೆಲಸಗಳೇ ಉತ್ತರ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ರಾಜ್ಯ ಸರಕಾರ ದಿವಾಳಿಯಾಗಿದೆ ಎಂದು ಸುಳ್ಳು ಹೇಳುತ್ತಿರುವ ವಿರೋಧ ಪಕ್ಷಗಳಿಗೆ ನಮ್ಮ ಅಭಿವೃದ್ಧಿ ಕೆಲಸಗಳೇ ಉತ್ತರ. ರಾಜ್ಯ ಬೊಕ್ಕಸ ಸದೃಢವಾಗಿದ್ದರಿಂದಲೇ ಇಂದು ಜೇವರ್ಗಿ ಮತ್ತು ಯಡ್ರಾಮಿ ಕ್ಷೇತ್ರವೊಂದರಲ್ಲೇ ಸುಮಾರು 906 ಕೋಟಿ ರು. ಮೊತ್ತದ ಕಾಮಗಾರಿಗಳಿಗೆ ಚಾಲನೆ ನೀಡಲು ಸಾಧ್ಯವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕಂದಾಯ, ಶಿಕ್ಷಣ ಇಲಾಖೆ ಹಾಗೂ ಕೆಕೆಆರ್‌ಡಿಬಿ ಸಹಯೋಗದಲ್ಲಿ ಜಿಲ್ಲೆಯ ಯಡ್ರಾಮಿಯಲ್ಲಿ ಆಯೋಜಿಸಿದ್ದ 'ಪ್ರಜಾಸೌಧ' ನಿರ್ಮಾಣಕ್ಕೆ ಅಡಿಗಲ್ಲು, 300 ಕೆಪಿಎಸ್ ಶಾಲೆಗಳ ಮಂಜೂರಾತಿ, ಜೇವರ್ಗಿ ಹಾಗೂ ಯಡ್ರಾಮಿ ತಾಲೂಕುಗಳಲ್ಲಿ 906 ಕೋಟಿ ರು. ವೆಚ್ಚದಲ್ಲಿ ಕೈಗೊಂಡಿರುವ ವಿವಿಧ ಕಾಮಗಾರಿಗಳಿಗೆ ಸೋಮವಾರ ಚಾಲನೆ ನೀಡಿ ಮಾತನಾಡಿದ ಅವರು, ನಾವು ನುಡಿದಂತೆ ನಡೆದಿದ್ದೇವೆ. ಒಂದು ವರ್ಷದಲ್ಲಿ 1.12 ಲಕ್ಷ ಕೋಟಿ ರು. ಗ್ಯಾರಂಟಿ ಯೋಜನೆಗಳಿಗೆ ಯಶಸ್ವಿಯಾಗಿ ವಿನಿಯೋಗಿಸಿದ್ದೇವೆ. ಕಳೆದ ಚುನಾವಣೆಯ 590 ಭರವಸೆಗಳ ಪೈಕಿ ಶೇ. 90 ರಷ್ಟನ್ನು ಈಡೇರಿಸಿದ್ದೇವೆ. ಆದರೆ, ಬಿಜೆಪಿ ತನ್ನ ಅವಧಿಯಲ್ಲಿ ನೀಡಿದ್ದ 600 ಭರವಸೆಗಳಲ್ಲಿ ಶೇ. 10 ರಷ್ಟನ್ನೂ ಪೂರೈಸದೆ ಜನರಿಗೆ ಸುಳ್ಳು ಹೇಳುತ್ತಿದೆ ಎಂದು ಸಿಎಂ ಟೀಕಿಸಿದರು.

ಶೈಕ್ಷಣಿಕ ಕ್ರಾಂತಿ ಹಾಗೂ ಪ್ರಜಾಸೌಧ: ಕೆಕೆಆರ್‌ಡಿಬಿ ಅಧ್ಯಕ್ಷ ಡಾ. ಅಜಯ್ ಸಿಂಗ್ ಮನವಿಯಂತೆ ಕಲ್ಯಾಣ ಕರ್ನಾಟಕದ 17 ತಾಲೂಕುಗಳಲ್ಲಿ ಬೆಳಗಾವಿ ಸುವರ್ಣ ಸೌಧ ಮಾದರಿಯ 'ಪ್ರಜಾಸೌಧ' ನಿರ್ಮಾಣಕ್ಕೆ ಅಡಿಗಲ್ಲು ಹಾಕಲಾಗಿದೆ. ಶಿಕ್ಷಣಕ್ಕೆ ಒತ್ತು ನೀಡಲು ಈ ಭಾಗದಲ್ಲಿ 300 ಕೆಪಿಎಸ್ ಶಾಲೆಗಳನ್ನು ಮಂಜೂರು ಮಾಡಲಾಗಿದ್ದು, ಮುಂದಿನ 10 ವರ್ಷಗಳಲ್ಲಿ ಅಸಮಾನತೆ ಅಳಿಸಿ ಈ ಭಾಗ ಸಮಾನತೆಯತ್ತ ಸಾಗಲಿದೆ ಎಂದು ಸಿಎಂ ವಿಶ್ವಾಸ ವ್ಯಕ್ತಪಡಿಸಿದರು.

ಕಲಬುರಗಿ ಜಿಲ್ಲೆಯ ಯಡ್ರಾಮಿಯಲ್ಲಿ ಕೈಗೊಂಡಿರುವ ಪ್ರಜಾಸೌಧ ಕಟ್ಟಡಕ್ಕೆ ಅಡಿಗಲ್ಲು ಸೇರಿ 906 ಕೋಟಿ ರು.ವೆಚ್ಚದ ವಿವಿಧ ಕಾಮಗಾರಿಗಳಿಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ರಾಜ್ಯಸಭೆ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಚಾಲನೆ ನೀಡಿದರು.

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಡಾ. ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ಕಲ್ಯಾಣ ಕರ್ನಾಟಕದಲ್ಲಿ ಸುಸಜ್ಜಿತ ಕಟ್ಟಡಗಳಿವೆ, ಅಧಿಕಾರಿಗಳಿದ್ದಾರೆ. ಆದರೆ, ಶಿಕ್ಷಕರ ಕೊರತೆಯಿಂದಾಗಿ ನಮ್ಮ ಮಕ್ಕಳು ಹಿಂದುಳಿಯುತ್ತಿದ್ದಾರೆ. ಮೊದಲು ಈ ಭಾಗಕ್ಕೆ ಶಿಕ್ಷಕರನ್ನು ನೀಡಿ, ಆಮೇಲೆ ಮೈಸೂರು-ಬೆಂಗಳೂರು ಕಡೆಗೆ ನೇಮಕ ಮಾಡಿ. ಗಿಡದ ಕೆಳಗೆ ಓದಿಸಿದರೂ ಪರವಾಗಿಲ್ಲ, ಪಾಠ ಮಾಡಲು ಶಿಕ್ಷಕರಿರಬೇಕು ಎಂದು ಮಾರ್ಮಿಕವಾಗಿ ಹೇಳಿದರು.

ಈ ಭಾಗದ ಅಭಿವೃದ್ಧಿಗೆ ಶಿಕ್ಷಕರ ನೇಮಕಾತಿ ಅನಿವಾರ್ಯವಾಗಿದ್ದು, ಮೊದಲು ಕಲ್ಯಾಣ ಕರ್ನಾಟಕಕ್ಕೆ ಶಿಕ್ಷಕರನ್ನು ನೀಡಿ ನಂತರ ಬೇರೆ ಜಿಲ್ಲೆಗಳತ್ತ ಗಮನಹರಿಸಿ ಎಂದು ಈ ಭಾಗದ ಶೈಕ್ಷಣಿಕ ಹಿನ್ನಡೆಯ ಕುರಿತು ಗಂಭೀರ ಕಳವಳ ವ್ಯಕ್ತಪಡಿಸಿದರು.

> **ಮೋದಿ ಸರಕಾರ ಬಡವರ ಹೊಟ್ಟೆಯ ಮೇಲೆ ಹೊಡೆಯುತ್ತಿದೆ. ಅಂಬೇಡ್ಕರ್ ಅವರ ಸಂವಿಧಾನದ ಆಶಯಗಳನ್ನು ತುಳಿಯಲಾಗುತ್ತಿದೆ. ಧರ್ಮದ ಹೆಸರಿನಲ್ಲಿ ವೋಟ್ ಬ್ಯಾಂಕ್ ರಾಜಕಾರಣ ಮಾಡುತ್ತಿರುವ ಮೋದಿಯವರಿಗೆ ಜನರು ಹೋರಾಟದ ಮೂಲಕವೇ ಬುದ್ಧಿ ಕಲಿಸಬೇಕು.**
>
> **-ಮಲ್ಲಿಕಾರ್ಜುನ ಖರ್ಗೆ,**
> ವಿರೋಧ ಪಕ್ಷದ ನಾಯಕ ರಾಜ್ಯಸಭೆ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, 371(ಜೆ) ಜಾರಿಯ ನಂತರ ಈ ಭಾಗದ ಜನರ ಬದುಕು ಬದಲಾಗಿದೆ. ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್ ಅವರು ತಮ್ಮ ತಂದೆ ಧರ್ಮಸಿಂಗ್ ಅವರಿಗಿಂತಲೂ ಒಂದು ಕೈ ಮೇಲಾಗಿ ಕೆಲಸ ಮಾಡಿ ಕ್ಷೇತ್ರಕ್ಕೆ ಸಾವಿರಾರು ಕೋಟಿ ತಂದಿದ್ದಾರೆ ಎಂದು ಶ್ಲಾಘಿಸಿದರು.

ಪ್ರಜಾಸೌಧಕ್ಕೆ ಪ್ರಭಾವತಿ ಧರ್ಮಸಿಂಗ್ ಭೂದಾನ: ಅಧ್ಯಕ್ಷತೆ ವಹಿಸಿದ್ದ ಡಾ.ಅಜಯ್ ಸಿಂಗ್, ಕಲ್ಯಾಣ ಕರ್ನಾಟಕದ 17 ತಾಲೂಕುಗಳಲ್ಲಿ ಬೆಳಗಾವಿ ಸುವರ್ಣ ಸೌಧ ಮಾದರಿಯ 'ಪ್ರಜಾಸೌಧ' ನಿರ್ಮಾಣವಾಗಲಿದೆ. ಯಡ್ರಾಮಿಯಲ್ಲಿ 5 ಎಕರೆ ಭೂಮಿ ನೀಡಿದ ಪ್ರಭಾವತಿ ಧರ್ಮಸಿಂಗ್ ಹಾಗೂ ಸಹಕರಿಸಿದ ಎಲ್ಲ ಗಣ್ಯರನ್ನು ಸ್ಮರಿಸಿದರು. ಮುಂದಿನ ಒಂದೂವರೆ ವರ್ಷದಲ್ಲಿ 350 ಕೆಪಿಎಸ್ ಶಾಲೆಗಳು ಈ ಭಾಗದಲ್ಲಿ ತಲೆಎತ್ತಲಿವೆ ಎಂದು ಪ್ರಸ್ತಾವಿಕ ನುಡಿಗಳನ್ನಾಡಿದರು.

ಕಾರ್ಯಕ್ರಮದಲ್ಲಿ ಸಚಿವರಾದ ಪ್ರಿಯಾಂಕ್ ಖರ್ಗೆ, ಡಾ. ಶರಣಪ್ರಕಾಶ್ ಪಾಟೀಲ್, ಕೃಷ್ಣಬೈರೇಗೌಡ, ಎಸ್.ಮಧು ಬಂಗಾರಪ್ಪ, ಶರಣಬಸಪ್ಪ ದರ್ಶನಾಪುರ, ರಹೀಂ ಖಾನ್, ಶಾಸಕರಾದ ಎಂ.ವೈ. ಪಾಟೀಲ್, ಖನೀಜ್ ಫಾತಿಮಾ, ಅಲ್ಲಮಪ್ರಭು ಪಾಟೀಲ್, ವಿಧಾನ ಪರಿಷತ್ ಸದಸ್ಯರಾದ ತಿಪ್ಪಣ್ಣಪ್ಪ ಕಮಕನೂರ್, ಜೆಸ್ಕಾಂ ಅಧ್ಯಕ್ಷ ಪ್ರವೀಣ್ ಹರವಾಳ್, ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್, ಕೆಕೆಆರ್‌ಡಿಬಿ ಕಾರ್ಯದರ್ಶಿ ನಳಿನ್ ಅತುಲ್, ಎಸ್.ಪಿ. ಅಡ್ಡೂರು ಶ್ರೀನಿವಾಸಲು, ಸಹಾಯಕ ಆಯುಕ್ತೆ ಸಾಹಿತ್ಯ ಆಲದಕಟ್ಟೆ ಸೇರಿ ಹಲವು ಅಧಿಕಾರಿಗಳು ಭಾಗವಹಿಸಿದ್ದರು. ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಸ್ವಾಗತಿಸಿದರೆ, ಕೃಷಿ ಜಂಟಿ ನಿರ್ದೇಶಕ ಸಮದ್ ಪಟೇಲ್ ವಂದಿಸಿದರು.

ಯಾವ್ಯಾವ ಕಾಮಗಾರಿಗೆ ಚಾಲನೆ?

- ಯಡ್ರಾಮಿಯಲ್ಲಿ 'ಪ್ರಜಾಸೌಧ' ನಿರ್ಮಾಣಕ್ಕೆ ಅಡಿಗಲ್ಲು
- ಕಲ್ಯಾಣ ಕರ್ನಾಟಕದಲ್ಲಿ 300 ಕೆಪಿಎಸ್ ಶಾಲೆಗಳ ಮಂಜೂರಾತಿ
- ಜೇವರ್ಗಿ, ಯಡ್ರಾಮಿ ತಾಲೂಕುಗಳಲ್ಲಿ 906 ಕೋಟಿ ರು.ವೆಚ್ಚದಲ್ಲಿ ಕೈಗೊಂಡ ವಿವಿಧ ಕಾಮಗಾರಿಗಳಿಗೆ ಚಾಲನೆ

ನಮ್ಮದು ರೈತ ಪರ ಸರಕಾರ

ರಾಜ್ಯದ 21 ಲಕ್ಷ ರೈತರಿಗೆ ಬೆಳೆ ಹಾನಿ ಪರಿಹಾರ ನೀಡಲಾಗಿದ್ದು, ಕಲಬುರಗಿ ಜಿಲ್ಲೆಯೊಂದಕ್ಕೇ 498 ಕೋಟಿ ರು. ವಿತರಿಸಲಾಗಿದೆ. ಕಲಬುರಗಿ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ರೈತರಿಗೆ 498 ಕೋಟಿ ರು. ಬೆಳೆ ಹಾನಿ ಪರಿಹಾರ ತೊಗರಿ ನೆಟೆ ರೋಗಕ್ಕೆ 233 ಕೋಟಿ ರು.ಬಿಡುಗಡೆ ಮಾಡಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು. ಸರಕಾರ ರೈತರ ಪರವಾಗಿ ನಿಂತಿದೆ ಎನ್ನುವುದನ್ನು ಸ್ಮರಿಸಿದರು.

ಸಮಾಚಾರ ಸಣ್ಣದಲ್ಲ

ಭೀಮಣ್ಣ ಖಂಡ್ರೆ ಆರೋಗ್ಯ ಗಂಭೀರ

ಬೀದರ್: ನಮ್ಮ ತಂದೆ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ವೈದ್ಯರು ಸತತವಾಗಿ ಚಿಕಿತ್ಸೆ ನೀಡುತ್ತಿದ್ದಾರೆ. ಮನೆ ಯಲ್ಲೇ ಕೊನೆಯುಸಿರೆಳೆಯ ಬೇಕೆಂಬುದು ಅವರ ಆಸೆ, ಹೀಗಾಗಿ ಆಸ್ಪತ್ರೆಯಿಂದ ಮನೆಗೆ ಶಿಫ್ಟ್ ಮಾಡಿದ್ದೇವೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಮಾಹಿತಿ ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸದ್ಯ ಸ್ವಲ್ಪಮಟ್ಟಿಗೆ ಆರೋಗ್ಯ ಸ್ಥಿರವಾಗಿದೆ. ಬಿಪಿ ಮತ್ತು ಪಲ್ಸ್ ರೇಟ್ ಕಡಿಮೆಯಾಗಿ, ಸ್ಥಿತಿ ಗಂಭೀರವಾಗಿದೆ. ಆದರೆ ಮನೆಯಲ್ಲೇ ಕೊನೆಯುಸಿರೆಳೆಯಬೇಕು ಎಂಬುದು ನನ್ನಪ್ಪನ ಆಸೆ. ಹೀಗಾಗಿ ನಾವು ಅವರನ್ನು ಆಸ್ಪತ್ರೆ ಯಿಂದ ಮನೆಗೆ ಶಿಫ್ಟ್ ಮಾಡಿದ್ದೇವೆ. ಆಕ್ಸಿಜನ್ ಮೇಲೆ ವೈದ್ಯರು ಸತತವಾಗಿ ಚಿಕಿತ್ಸೆ ನೀಡುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಸಿಎಂ ಅವರು ಫೋನ್ ಮಾಡಿ, ತಂದೆಯವರ ಆರೋಗ್ಯ ವಿಚಾರಿಸಿದ್ದಾರೆ. ನಾನು ನಮ್ಮ ತಂದೆಯ ಆರೋಗ್ಯದ ಬಗ್ಗೆ ಮಾಹಿತಿ ನೀಡಿದ್ದೇನೆ. ನಮ್ಮ ತಂದೆ ಭೀಮಣ್ಣ ಖಂಡ್ರೆ, ಶಿಕ್ಷಣ, ಧಾರ್ಮಿಕ, ಸಹಕಾರ, ಸಾಮಾಜಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಎಲ್ಲಾ ಅವರ ಬೆಂಬಲಿಗರು, ಹಿತೈಷಿಗಳು, ಸ್ವಾಮಿಗಳು ಬಂದು ನೋಡಿಕೊಂಡು ಹೋಗುತ್ತಿದ್ದಾರೆ. ಎಲ್ಲರೂ ನಮ್ಮ ತಂದೆ ಆರೋಗ್ಯಕ್ಕಾಗಿ ಪ್ರಾರ್ಥಿಸಿ ಎಂದಿದ್ದಾರೆ.

ಶರಾವತಿ ಹಿನ್ನೀರಲ್ಲಿ ಪಶುವೈದ್ಯ ಸಾವು

ಶಿವಮೊಗ್ಗ: ಸಾಗರದ ಹಕ್ರೆ ಬಳಿಯ ಶರಾವತಿ ಹಿನ್ನೀರಿನಲ್ಲಿ ಮುಳುಗಿ ಪಶುವೈದ್ಯರೊಬ್ಬರು ಸಾವನ್ನಪ್ಪಿದ್ದಾರೆ. ಮೃತರನ್ನು ಸುನೀಲ್ (38) ಎಂದು ಗುರುತಿಸಲಾಗಿದೆ. ಸಾಗರದ ಮಾಸೂರಿನ ಪಶು ಆಸ್ಪತ್ರೆಯಲ್ಲಿ ವೈದ್ಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಭಾನುವಾರ (ಜ.11) ಕುಟುಂಬ ಸಮೇತರಾಗಿ ಶರಾವತಿ ಹಿನ್ನೀರಿಗೆ ಪಿಕ್‌ನಿಕ್ ಹೋಗಿದ್ದರು. ಈ ವೇಳೆ ಈಜಲು ನೀರಿಗಿಳಿದಿದ್ದಾಗ ಮುಳುಗಿ ಸಾವನ್ನಪ್ಪಿದ್ದಾರೆ. ಸುನೀಲ್ ನೀರಲ್ಲಿ ಮುಳುಗಿ ನಾಪತ್ತೆಯಾಗುತ್ತಿದ್ದಂತೆ ಕುಟುಂಬಸ್ಥರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕಾಗಮಿಸಿ ನೀರಿನಿಂದ ಶವ ಮೇಲಕ್ಕೆತ್ತಿದ್ದಾರೆ. ಈ ಸಂಬಂಧ ಸಾಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಹಳೆಬೇತೂರು ರಸ್ತೆ, ದಾವಣಗೆರೆ**

ಸಮಸ್ಯೆಯೇನು..?

- ಹಳೆಬೇತೂರು ರಸ್ತೆಯ ಶಾವಿಗೆ ಗಲ್ಲಿಯಲ್ಲಿ ಆಗಿರುವ ಚರಂಡಿ ಬ್ಲಾಕ್ ಸರಿಪಡಿಸುವ ಬಗ್ಗೆ.
- **ಪರಿಹಾರ:** ಚರಂಡಿ ಬ್ಲಾಕ್ ಆಗಿ ನೀರು ಸರಾಗವಾಗಿ ಹರಿಯದೆ ದುರ್ವಾಸನೆ ಬೀರಿ, ಜನರಲ್ಲಿ ಅನಾರೋಗ್ಯ ಉಂಟಾಗುತ್ತಿದೆ. ಕೂಡಲೇ ಚರಂಡಿ ಸ್ವಚ್ಛಗೊಳಿಸಿ ಎಂದು ಸ್ಥಳೀಯರೊಬ್ಬರು ದೂರು ಕೊಟ್ಟಿದ್ದರು. ಸ್ಥಳ ಪರಿಶೀಲನೆ ನಡೆಸಿದ ಮಹಾನಗರ ಪಾಲಿಕೆ ಅಧಿಕಾರಿಗಳು ಜೆಸಿಬಿ ಮೂಲಕ ಬ್ಲಾಕ್ ಆಗಿದ್ದ ಚರಂಡಿಯನ್ನು ಸ್ವಚ್ಛಗೊಳಿಸಿ ನೀರು ಸರಾಗವಾಗಿ ಅರಿಯಲು ಅನುವು ಮಾಡಿಕೊಟ್ಟಿದ್ದಾರೆ.

ದಿನ ವಿಶೇಷ

12 ಜನವರಿ 2026 ಮಂಗಳವಾರ

» ಸೂರ್ಯೋದಯ	: 06-46
» ಸೂರ್ಯಾಸ್ತ	: 06-11
» ತಿಥಿ	: ದಶಮಿ
» ನಕ್ಷತ್ರ	: ವಿಶಾಖ
» ಸಂವತ್ಸರ	: ವಿಶ್ವಾವಸು
» ಆಯನ	: ಉತ್ತರಾಯಣ
» ಋತು	: ಶಿಶಿರ
» ಮಾಸ	: ಪುಷ್ಯ
» ಪಕ್ಷ	: ಕೃಷ್ಣ ಪಕ್ಷ

- ಪಾರ್ಶ್ವನಾಥ ಜನ್ಮದಿನ

ವಿಶ್ವವಾಣಿ ಕ್ಲಬ್ ಹೌಸ್
13.01.2026
ಸಂಜೆ: 06.55 ರಿಂದ 08.05 ರವರೆಗೆ



ಬುಧವಾರದ ಅತಿಥಿ
ಶ್ರೀಮತಿ ಮಂಗಳ ರವಿ/ ರವಿ ಕೃಷ್ಣಮೂರ್ತಿ
ವಿಷಯ
ಸಿ. ಅಶ್ವತ್ ನೆನಪುಗಳು

vishwavani.news

ಫೋಟೊಗಳಿಗೆ ಕಿಡಿಗೇಡಿಗಳಿಂದ ಅವಾಚ್ಯವಾಗಿ ಟೀಕೆ

ನಯನಾ ಮೋಟಮ್ಮ ವಾರ್ನಿಂಗ್

ಬೆಂಗಳೂರು: ನಟಿ ರಮ್ಯಾ ಮತ್ತು ವಿಜಯಲಕ್ಷ್ಮಿ ದರ್ಶನ್ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ಕಾಮೆಂಟ್ ಮಾಡಿದ ಕಿಡಿಗೇಡಿಗಳಿಗೆ ಕಾನೂನಿನ ಮೂಲಕ ತಕ್ಕ ಪಾಠ ಕಲಿಸಿದ್ದ ಘಟನೆ ಮಾಸುವ ಮುನ್ನವೇ, ಈಗ ಮೂಡಿಗೆರೆ ಶಾಸಕಿ ನಯನಾ ಮೋಟಮ್ಮ ಅವರು ತಮ್ಮ ವೈಯಕ್ತಿಕ ಫೋಟೋಗಳಿಗೆ ಬಂದಿರುವ ಅಸಭ್ಯ ಪ್ರತಿಕ್ರಿಯೆಗಳ ವಿರುದ್ಧ ಅವರು ಧ್ವನಿ ಎತ್ತಿದ್ದಾರೆ.

ಮೂಡಿಗೆರೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕಿ ನಯನಾ ಮೋಟಮ್ಮ ಅವರು ತಮ್ಮ ವೈಯಕ್ತಿಕ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡಿದ್ದ ಫೋಟೋಗಳಿಗೆ ಕೆಲವು ಕಿಡಿಗೇಡಿಗಳು ವೇಶ್ಯೆ ಎಂದು ಹಿಯಾಳಿಸಿದ್ದಾರೆ. ಈ ಬಗ್ಗೆ ಅವರು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್‌ವೊಂದನ್ನು ಮಾಡಿದ್ದು, ನನ್ನ ರಾಜಕೀಯ ಕೆಲಸಕ್ಕೆ ಇಂದು ನಾ ಧರಿಸಿದ್ದ ಡ್ರೆಸ್ ಇದು. ಮಹಿಳಾ ರಾಜಕಾರಣಿಯಾಗಿ ಮಹಿಳಾ ವಿರೋಧಿ ಮನೋಭಾವಗಳನ್ನು ಎದುರಿಸುತ್ತಿದ್ದೇನೆ. ನಾ ಈ ರೀತಿ ಡ್ರೆಸ್, ಪ್ಯಾಂಟ್, ಜೀನ್ಸ್ ಅಥವಾ ಸ್ಲೀವ್‌ಲೆಸ್ ಬಟ್ಟೆ ಹಾಕಿಕೊಂಡರೆ, ಕೆಲಸ ಮಾಡದ ರಾಜಕಾರಣಿ, ರಸ್ತೆಗಳ ಗುಂಡಿ ಮುಚ್ಚದ ಶಾಸಕರು, ತೆರಿಗೆದಾರರ ಹಣದಲ್ಲಿ ಬದುಕುವವರು ಎಂದು ಹೇಳುತ್ತಾರೆ. ಇಷ್ಟಕ್ಕೇ ಮುಗಿಸದೇ ನನ್ನನ್ನು ವೇಶ್ಯೆ ಎಂದು ಕರೆಯುವ ಮಟ್ಟಕ್ಕೂ ಇಳಿಯುತ್ತಾರೆ. ಒಮ್ಮೆ ಯೋಚಿಸಿ ನೋಡಿ ಪುರುಷ ರಾಜಕಾರಣಿಯ ಉಡುಪಿನ ಬಗ್ಗೆ ಎಂದಿಗೂ ಪ್ರಶ್ನೆ ಕೇಳೋದಿಲ್ಲ. ಬಹುಶಃ ಅವರು ಸ್ಲೀವ್‌ಲೆಸ್ ಡ್ರೆಸ್ ಹಾಕಿಕೊಳ್ಳಲು ಸಾಧ್ಯವಿಲ್ಲ ಅನ್ನೋ ಕಾರಣಕ್ಕಾ? ಈ ರೀತಿಯ ಕಾಮೆಂಟ್ ಮಾಡುವವರನ್ನು ನೇರವಾಗಿ ಪ್ರಶ್ನೆ ಮಾಡಬೇಕು ಅನ್ನಿಸುತ್ತೆ. ಆದರೆ ಇನ್‌ಸ್ಟಾ ಗ್ರಾಂನಲ್ಲಿ ಒಂದು ಪೋಸ್ಟ್ ಕೂಡಾ ಇಲ್ಲದವರಿದ್ದಾರೆ. ಒಂದು ದಿನ ಅವರನ್ನು ನೇರವಾಗಿ ಎದುರಿಸುತ್ತೇನೆ ಎಂದರು.

ಗ್ರಾಮ ಒನ್ ಕೇಂದ್ರದಲ್ಲಿ ಬಸ್ ಟಿಕೆಟ್

ಬೆಂಗಳೂರು: ಕೆಎಸ್‌ಆರ್‌ಟಿಸಿಯು ಪ್ರಯಾಣಿಕರ ಅನುಕೂಲಕ್ಕಾಗಿ ಬೆಂಗಳೂರು-ಒನ್ ಮತ್ತು ಕರ್ನಾಟಕ-ಒನ್ ಕೇಂದ್ರಗಳ ಮೂಲಕ ಮುಂಗಡ ಟಿಕೆಟ್ ಕಾಯ್ದಿರಿಸುವಿಕೆಗೆ ಅವಕಾಶ ನೀಡಲಾಗಿದೆ.

ಕೆಎಸ್‌ಆರ್‌ಟಿಸಿ ಈ ಕುರಿತು ಮಾಹಿತಿ ನೀಡಿದ್ದು, ಪ್ರಯಾಣಿಕರ ಪ್ರಯಾಣವನ್ನು ಇನ್ನಷ್ಟು ಸುಲಭ ಮತ್ತು ಆರಾಮದಾಯಕವಾಗಿಸಲು ಆನ್‌ಲೈನ್ ಮುಂಗಡ ಟಿಕೆಟ್ ಕಾಯ್ದಿರಿಸುವ ವ್ಯವಸ್ಥೆಯನ್ನು ಒದಗಿಸುತ್ತಿದೆ. ಕೆಎಸ್‌ಆರ್‌ಟಿಸಿ ವೆಬ್‌ಸೈಟ್, ಮೊಬೈಲ್ ಆ್ಯಪ್, ಇಲಾಖಾ ಕೌಂಟರ್‌ಗಳು ಹಾಗೂ ಫ್ರಾಂಚೈಸಿ ಕೌಂಟರ್‌ಗಳ ಜತೆಗೆ, ಪ್ರಯಾಣಿಕರು ಮನೆಗೆ ಸಮೀಪದಲ್ಲಿರುವ ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳ ಮೂಲಕವೂ ಮುಂಗಡ ಬಸ್ ಟಿಕೆಟ್‌ಗಳನ್ನು ಬುಕ್ ಮಾಡಬಹುದು. ಈ ಸೇವೆ ಬೆಂಗಳೂರು-ಒನ್ ಕೇಂದ್ರಗಳಲ್ಲಿ ಹಾಗೂ ರಾಜ್ಯದ ಜಿಲ್ಲಾ ಕೇಂದ್ರ ಮತ್ತು ತಾಲೂಕು ಕೇಂದ್ರಗಳಲ್ಲಿರುವ 1021 ಕರ್ನಾಟಕ-ಒನ್ ಕೇಂದ್ರಗಳಲ್ಲಿ ಲಭ್ಯವಿದೆ. ಪ್ರಯಾಣಿಕರು ಈ ಸುಲಭ ಮತ್ತು ಹತ್ತಿರದ ಟಿಕೆಟ್ ಬುಕ್ಕಿಂಗ್ ಸೇವೆಯನ್ನು ಬಳಸಿಕೊಳ್ಳುವಂತೆ ಕೋರಲಾಗಿದೆ. ಟಿಕೆಟ್ ಕಾಯ್ದಿರಿಸುವಿಕೆ ಅಥವಾ ಯಾವುದೇ ಸಹಾಯಕ್ಕಾಗಿ, ಪ್ರಯಾಣಿಕರು ಕೆಎಸ್‌ಆರ್‌ಟಿಸಿ ಕರೆ ಕೇಂದ್ರವನ್ನು 080-26252625 (24X7) ಅಥವಾ ಅವತಾರ್ ಸೆಲ್‌ನ್ನು 7760990034 / 7760990035 (ಬೆ.7ರಿಂದ ರಾತ್ರಿ 10ರವರೆಗೆ) ಅಥವಾ ಬೆಂಗಳೂರು-ಒನ್ ಕರೆ ಕೇಂದ್ರವನ್ನು 080-49203888 ಸಂಪರ್ಕಿಸಬಹುದು ಎಂದು ತಿಳಿಸಿದೆ.

ನರೇಗಾ: ಇಂದು ಕಾಂಗ್ರೆಸ್ ಸಭೆ

ಬೆಂಗಳೂರು: ಕೇಂದ್ರ ಸರಕಾರ ವಿಬಿ ಜಿ ರಾಮ್ ಜಿ ಯೋಜನೆಯ ವಿರುದ್ಧ ದೇಶಾದ್ಯಂತ ಸಮರ ಸಾರಿರುವ ಕಾಂಗ್ರೆಸ್, ಇದೀಗ ಕರ್ನಾಟಕದಲ್ಲಿ ಈ ಹೋರಾಟ ಯಶಸ್ವಿಯಾಗಬೇಕು ಎನ್ನುವ ನಿಟ್ಟಿನಲ್ಲಿ ಮಂಗಳವಾರ ಬೃಹತ್ ಸಭೆ ಕರೆದಿದೆ.

'ನರೇಗಾ ಬಚಾವ್ ಸಂಗ್ರಾಮ' ಆಯೋಜನೆಗೆ ಸಿದ್ಧತೆ ನಡೆಸಿರುವ ಕಾಂಗ್ರೆಸ್, ಈ ಸಂಬಂಧ ಸಿದ್ಧತೆ ಕುರಿತು ಜ.13ರಂದು ಅರಮನೆ ಮೈದಾನದಲ್ಲಿ ಪಕ್ಷದ ಮುಖಂಡರ ಸಭೆ ಕರೆದಿದೆ. ಬೆಳಗ್ಗೆ ನಡೆಯಲಿರುವ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಎಐಸಿಸಿ ಕಾರ್ಯದರ್ಶಿಗಳು, ಪಕ್ಷದ ಸಂಸದರು, ಶಾಸಕರು, ಪರಿಷತ್ತಿನ ಸದಸ್ಯರು, ನಿಗಮ-ಮಂಡಳಿಗಳ ಅಧ್ಯಕ್ಷರು, ಪರಾಜಿತ ಅಭ್ಯರ್ಥಿಗಳು, ಮುಂಚೂಣಿ ಘಟಕಗಳ ಅಧ್ಯಕ್ಷರು, ಕೆಪಿಸಿಸಿ ಪದಾಧಿಕಾರಿಗಳು ಸೇರಿದಂತೆ ನಾಯಕರು ಭಾಗವಹಿಸಲಿದ್ದಾರೆ ಎಂದು ತಿಳಿದುಬಂದಿದೆ. ನರೇಗಾ ವಿಚಾರದಲ್ಲಿ ಕೇಂದ್ರ ಸರ್ಕಾರದ ನಡೆಯನ್ನು ಖಂಡಿಸಿ ಕಾಂಗ್ರೆಸ್ ದೇಶಾದ್ಯಂತ ಪ್ರತಿಭಟನೆ ಹಮ್ಮಿಕೊಂಡಿದೆ. ಅದರಂತೆ ರಾಜ್ಯದಲ್ಲೂ ತೀವ್ರ ಸ್ವರೂಪದ ಹೋರಾಟಕ್ಕೆ ರಾಜ್ಯ ಕಾಂಗ್ರೆಸ್ ನಿರ್ಧರಿಸಿದ್ದು, ಅದರ ರೂಪುರೇಷೆ ಕುರಿತು ಅಂದು ನಡೆಯುವ ಸಭೆಯಲ್ಲಿ ಚರ್ಚಿಸಲಾಗುವುದು. ಇದರೊಂದಿಗೆ ಜತೆಗೆ ಸ್ಥಳೀಯ ಸಂಸ್ಥೆಗಳ ಚುನಾವಣೆ, ಬೂತ್ ಮಟ್ಟದ ಏಜೆಂಟರ ತಯಾರಿ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ತಿಳಿದುಬಂದಿದೆ.

ಹದ್ದಾಗಿ ಕುಕ್ಕಿದ ಸಾಕಿದ ಗಿಣಿ

ಹಾಸನ: ನಾನು ಸಾಕಿದ ಗಿಣಿ ಹದ್ದಾಗಿ ಕುಕ್ಕಿತು. ಈ ಜಿಲ್ಲೆಯಲ್ಲಿ ಕೆಲವರು ನಂಬಿಕೆ ದ್ರೋಹಿಗಳಿದ್ದಾರೆ ಎಂದು ಶಾಸಕ ಕೆ.ಎಂ.ಶಿವಲಿಂಗೇಗೌಡರಿಗೆ ಮಾಜಿ ಸಚಿವ ಹೆಚ್.ಡಿ.ರೇವಣ್ಣ ತಿರುಗೇಟು ನೀಡಿದ್ದಾರೆ. ಬೇಲೂರಿನಲ್ಲಿ ನಡೆದ ಕಾರ್ಯಕರ್ತರ ಸಭೆ ಯಲ್ಲಿ ಮಾತನಾಡಿದ ಅವರು, ಈ ವೇಳೆ ಇವತ್ತಿನ ರಾಜಕಾರಣಿಗಳು ನಂಬಿಕೆ ದ್ರೋಹಿ ಗಳಿದ್ದಾರೆ ಎಂದು ಸಾಣೇನಹಳ್ಳಿ ಸ್ವಾಮೀಜಿ ಹೇಳಿದ್ರು. ಅದು ರೇವಣ್ಣ ಅವರಿಗೆ ಅನ್ವಯ ಆಗಲ್ಲ ಅಂದ್ರು. ಸಾಣೇನಹಳ್ಳಿ ಸ್ವಾಮೀಜಿಗಳು ಹೇಳಿದ ಮಾತು ಸತ್ಯ. ಈ ಜಿಲ್ಲೆಯಲ್ಲೂ ಕೆಲವರು ನಂಬಿಕೆ ದ್ರೋಹಿಗಳಿದ್ದಾರೆ ಎಂದು ಶಿವಲಿಂಗೇಗೌಡರಿಗೆ ಕುಟುಕಿದರು. ಕೆಲವು ಟೈಂನಲ್ಲಿ ಕುಮಾರಣ್ಣ ಒಳ್ಳೆಯವ ರನ್ನು ನಂಬಲ್ಲ. ಕೆಲವರು ಅವರನ್ನು ನಂಬಿಸಿ ಬಿಡ್ತಾರೆ. ಈ ಜಿಲ್ಲೆಯಲ್ಲಿ ಜೆಡಿಎಸ್ ಮುಗಿಸ ಬೇಕು ಎಂದು ಕಾಂಗ್ರೆಸ್‌ನವರು ಪಣ ತೊಟ್ಟಿದ್ದಾರೆ. ಕಾಂಗ್ರೆಸ್ 31 ಜಿಲ್ಲೆಯಲ್ಲಿ ಸಭೆ ಮಾಡ ಲಿಲ್ಲ. ದೇವೇಗೌಡರ ಶಕ್ತಿ ಕುಂದಿಸಲು ಹಾಸನ ದಲ್ಲಿ ಎರಡು ಸಭೆ ಮಾಡಿದರು ಎಂದು ಕಿಡಿಕಾರಿದರು. ಜ.11ರಂದು ಅರಸೀಕೆರೆ ಕಾರ್ಯಕ್ರಮದಲ್ಲಿ ಶಿವಲಿಂಗೇಗೌಡರು ರೇವಣ್ಣ ವಿರುದ್ಧ ವಾಗ್ದಾಳಿ ನಡೆಸಿದ್ದರು.

ಆರೋಪಿಗಳ ಪಾದಯಾತ್ರೆ

ಮೈಸೂರು: ಬಿಜೆಪಿ ಆಡಳಿತದಲ್ಲಿ ಬಳ್ಳಾರಿ ಹೇಗೆ ರಿಪಬ್ಲಿಕ್ ಆಗಿತ್ತು. ಸಂಪತ್ತು ಯಾರ ಕೈಯಲ್ಲಿ ಇತ್ತು ಎಂಬುದು ಗೊತ್ತಿದೆ. ಆರೋಪಿಗಳೇ ಪಾದಯಾತ್ರೆ-ಸಮಾವೇಶ ಮಾಡುತ್ತೇವೆ ಎನ್ನುವುದು ಹಾಸ್ಯಾಸ್ಪದ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಟೀಕಿಸಿದರು. ಬಳ್ಳಾರಿ ಘಟನೆ ಖಂಡಿಸಿ ಬಿಜೆಪಿಯು ಪಾದಯಾತ್ರೆಗೆ ಸಿದ್ಧತೆ ನಡೆಸಿರುವ ಕುರಿತು ಸೋಮವಾರ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯೆ ನೀಡಿದ ಅವರು, ರಾಜಕೀಯ ಉದ್ದೇಶಕ್ಕೆ ನಡೆಯುವ ಯಾತ್ರೆಯಿಂದ ಪ್ರಯೋಜನವಿಲ್ಲ. ಖಾಸಗಿ ಕ್ಷೇತ್ರದ ಉದ್ಯೋಗಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ಜಾರಿಗೆ ಕಿರಣ್ ಮಜುಂದಾರ್ ಶಾ ಸೇರಿದಂತೆ ಹಲವರು ವಿರೋಧಿಸುತ್ತಿರುವ ಪ್ರತಿಕ್ರಿಯಿಸಿ, ರಾಜ್ಯದಲ್ಲಿನ ಕಂಪನಿಗಳಲ್ಲಿ ಕನ್ನಡಿಗರಿಗೆ ಆದ್ಯತೆ ಸಿಗಬೇಕು. ಇಲ್ಲವಾದರೆ ನಾವು ಏನು ಮಾಡಬೇಕೋ ಮಾಡುತ್ತೇವೆ. ಉದ್ಯೋಗ ಖಾತ್ರಿ ಯೋಜನೆಗೆ ತಿದ್ದುಪಡಿ ವಿಚಾರದಲ್ಲಿ ಯಾರು ಬಂದರೂ ಚರ್ಚೆಗೆ ಸಿದ್ಧರಿದ್ದೇವೆ. ಇದೊಂದು ಸಂವಿಧಾನ ವಿರೋಧಿ ನಡೆ. ಅದಕ್ಕಾಗಿಯೇ ಕಾಂಗ್ರೆಸ್ ನರೇಗಾ ಬಚಾವೊ ಆಂದೋಲನ ಹಮ್ಮಿಕೊಳ್ಳುತ್ತಿದೆ ಎಂದರು.

ಕಾರ್ಮಿಕರ ಹಕ್ಕು ಕಸಿಯುವ ಯತ್ನ

ರಾಯಚೂರು: ರೈತರ, ದುಡಿಯುವ ವರ್ಗದ, ಕೃಷಿ, ಕೂಲಿ ಕಾರ್ಮಿಕರನ್ನು ಹತ್ತಿಕ್ಕಲು ನರೇಗಾ ಯೋಜನೆಗೆ ತಿದ್ದುಪಡಿ ತಂಡು ವಿಬಿ ರಾಮಜಿ ಯೋಜನೆ ಅನುಷ್ಠಾನಗೊಳಿಸಲಾಗಿದೆ. ಈ ಮೂಲಕ ಗ್ರಾಮೀಣ ಜನರ ಉದ್ಯೋಗ ಕಸಿಯಲಾಗಿದೆ ಎಂದು ರಾಯಚೂರು ಸಂಸದ ಜಿ.ಕುಮಾರ ನಾಯಕ ವಾಗ್ದಾಳಿ ನಡೆಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಶೋಷಿತ ಹಾಗೂ ದುಡಿಯುವ ವರ್ಗದ ಮೂಲಭೂತ ಹಕ್ಕಿಗೆ ಕೊಡಲಿ ಏಟು ಕೊಡಲಾಗಿದೆ. ನರೇಗಾದಲ್ಲಿ ಎಲ್ಲ ಗ್ರಾಮಗಳಲ್ಲೂ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಸಾಧ್ಯವಿತ್ತು. ಆದರೆ, ಇದೀಗ ಆಯ್ದ ಗ್ರಾಮಗಳಲ್ಲಿ ಅದರಲ್ಲೂ ಕೇಂದ್ರ ಒಪ್ಪಿಗೆ ನೀಡಿದರೆ ಮಾತ್ರ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗಲಿದೆ ಎಂದರು. ಹೊಸ ಕಾಯ್ದೆಯಿಂದ ದೇಶದ ಎಲ್ಲ ಗ್ರಾಮೀಣ ಪ್ರದೇಶಗಳಿಗೆ ಅನ್ಯಾಯವಾಗಲಿದೆ. ಉದ್ಯೋಗವು ಸಾಂವಿಧಾನಿಕ ಹಕ್ಕು. ಅದು ನಿರಂತರವಾಗಿ ಲಭ್ಯವಾಗಬೇಕು. ಆದರೆ, ಪ್ರತಿ ಗ್ರಾಮದಲ್ಲೂ ನಿರಂತರ ಉದ್ಯೋಗಕ್ಕೆ ಕಡಿವಾಣ ಹಾಕಲಾಗಿದೆ ಎಂದು ದೂರಿದರು.

ಜ.15ರಿಂದ ಸುತ್ತೂರು ಜಾತ್ರೆ

ಮೈಸೂರು: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವವು ಜ.15ರಿಂದ 20ರವರೆಗೆ ಶ್ರೀ ಕ್ಷೇತ್ರ ಪೀಠಾಧಿಪತಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಲಾಗಿದೆ. ನಂಜನಗೂಡು ತಾಲೂಕಿನ ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆಯುವ ಜಾತ್ರಾ ಮಹೋತ್ಸವ ಮೈಸೂರು ಭಾಗದ ಅತಿದೊಡ್ಡ ಜಾತ್ರಾ ಮಹೋತ್ಸವ ಆಗಿದ್ದು, ಐದು ದಿನಗಳ ಕಾಲ ವೈವಿಧ್ಯಮಯ ಕಾರ್ಯಕ್ರಮಗಳು ಮೇಳೈಸಲಿವೆ ಎಂದು ಸುತ್ತೂರು ಶ್ರೀಕ್ಷೇತ್ರದ ಕಾರ್ಯದರ್ಶಿ ಮಂಜುನಾಥ್ ತಿಳಿಸಿದರು. ಜ.16ರಂದು ಸಾಮೂಹಿಕ ವಿವಾಹ ಮತ್ತು ಹಾಲ್ಹರವಿ ಉತ್ಸವ, 17ರಂದು ರಥೋತ್ಸವ ಹಾಗೂ ಶ್ರೀ ವೀರಭದ್ರೇಶ್ವರ ಕೊಂಡೋತ್ಸವ, 18ರಂದು ಶ್ರೀ ಮಹದೇಶ್ವರ ಕೊಂಡೋತ್ಸವ ಮತ್ತು ಲಕ್ಷದೀಪೋತ್ಸವ, 19ರಂದು ತೆಪ್ಪೋತ್ಸವ ಹಾಗೂ 20ರಂದು ಅನ್ನಬ್ರಹ್ಮೋತ್ಸವ ನಡೆಯಲಿವೆ. ಇವುಗಳೊಟ್ಟಿಗೆ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಕ್ರೀಡಾಚಟುವಟಿಕೆಗಳು ಜರುಗಲಿವೆ. ಜ. 15 ಗುರುವಾರದಂದು ಗ್ರಾಮೀಣ ಕಲೆ ರಂಗೋಲಿ ಸ್ಪರ್ಧೆ ಏರ್ಪಡಿಸಿದೆ. 15 ಮತ್ತು 16ರಿಂದ ಮೂರು ದಿನ ಸೋಬಾನೆಪದ ಸ್ಪರ್ಧೆ ಆಯೋಜಿಸಲಾಗಿದೆ ಎಂದರು.

ಜನಸಂಪರ್ಕ ಸಭೆ ಬೇಕಾಬಿಟ್ಟಿ ಮಾಡ್ತಿವಾ? ಎಂಎಲ್‌ಸಿ ಯತೀಂದ್ರ

ಕೆರೆ ತುಂಬಿಸಲು ವಿಳಂಬ: ಅಧಿಕಾರಿಗಳಿಗೆ ತರಾಟೆ

ವರುಣ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ಹನುಮನಪುರ ಬಳಿ ಕೆರೆ ಪರಿಶೀಲನೆ ನಡೆಸಿದ ಎಂಎಲ್‌ಸಿ ಯತೀಂದ್ರ ಸಿದ್ದರಾಮಯ್ಯ ಅವರು ದೂರವಾಣಿ ಮೂಲಕ ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡರು.

ಮೈಸೂರು: ಕೆರೆ ತುಂಬಿಸಲು ವಿಳಂಬ ಮಾಡಿದ ನೀರಾವರಿ ಇಲಾಖೆ ಅಧಿಕಾರಿಗಳಿಗೆ ಎಂಎಲ್‌ಸಿ ಡಾ. ಯತೀಂದ್ರ ಸಿದ್ದರಾಮಯ್ಯ ದೂರವಾಣಿಯಲ್ಲಿ ತರಾಟೆಗೆ ತೆಗೆದುಕೊಂಡರು.

ನಂಜನಗೂಡು ತಾಲೂಕಿನ ವರುಣ ವಿಧಾನ ಸಭಾ ಕ್ಷೇತ್ರಕ್ಕೆ ಸೇರುವ ಹನುಮನಪುರ ಬಳಿ ಇರುವ ಕೆರೆಗೆ ಕಪಿಲಾ ನದಿಯಿಂದ ನೀರು ತುಂಬಿಸುವ ಯೋಜನೆ ಪೂರ್ಣಗೊಂಡು, ಈ ಕಾಮಗಾರಿಗೆ ಚಾಲನೆ ನೀಡಿ ಎರಡು ವರ್ಷ ಆದರೂ ಕೂಡ ಕೆರೆಗೆ ಸರಿಯಾಗಿ ನೀರು ಹರಿಸದ ಅಧಿಕಾರಿಗಳ ವಿರುದ್ಧ ಹನುಮನಪುರ ಮತ್ತು ಸುತ್ತಮುತ್ತಲ ಗ್ರಾಮಗಳ ರೈತರು ಯತೀಂದ್ರ ಸಿದ್ದರಾಮಯ್ಯನವರ ಗಮನಕ್ಕೆ ತಂದರು. ಕೆರೆಗೆ ತೆರಳಿ ಪರಿಶೀಲನೆ ನಡೆಸಿದ ಯತೀಂದ್ರ ಅವರು ಸ್ಥಳದಿಂದಲೇ ನೀರಾವರಿ ಇಲಾಖೆ ಹಿರಿಯ ಅಧಿಕಾರಿಗಳಿಗೆ ಕರೆ ಮಾಡಿ ಮುಖ್ಯಮಂತ್ರಿಗಳ ಕ್ಷೇತ್ರ ಎಂದರೆ ಸುಮ್ಮನೆನಾ? ಬೇರೆ ಕಡೆ ಹೇಗೆ ಎಂದು ತರಾಟೆಗೆ ತೆಗೆದುಕೊಂಡರು.

ಅಧಿಕಾರಿಗಳೇ ಜನ ಸಂಪರ್ಕ ಸಭೆಗೆ ಬರೆದಿದ್ದರೆ ಹೇಗೆ?: ಜನ ಸಂಪರ್ಕ ಸಭೆ ಮೂಲಕ ಜನರ ಕಷ್ಟ ಸಮಸ್ಯೆಗಳನ್ನು ಆಲಿಸಲು ಅವರ ಸಮಸ್ಯೆಗಳನ್ನು ಸ್ಥಳದಲ್ಲಿ ಬಗೆಹರಿಸಬೇಕಾದ ಅಧಿಕಾರಿಗಳೇ ಜನ ಸಂಪರ್ಕ ಸಭೆಗೆ ಬರೆದಿದ್ದರೆ ಹೇಗೆ? ಕೆರೆ ಸುತ್ತಮುತ್ತಲ ಗ್ರಾಮಗಳ ರೈತರ ಜಮೀನುಗಳಿಗೆ ಅಂತರ್ಜಲ ಹೆಚ್ಚಿಸುವ ಮೂಲಕ ರೈತರ ಮತ್ತು ಗ್ರಾಮಗಳ ಜೀವನಾಡಿಯಾಗಿದ್ದು, ಕೆರೆ ತುಂಬಿಸುವ ಯೋಜನೆಗೆ ನೂರಾರು ಕೋಟಿ ರೂಪಾಯಿ ಸರಕಾರ ಅನುದಾನ ಮಂಜೂರು ಮಾಡಿದೆ. ಕೆಲಸ ಪೂರ್ಣಗೊಂಡು ನೀರು ಏಕೆ ಬಂದಿಲ್ಲ ಎಂದು ಅಧಿಕಾರಿಗಳಿಗೆ ಪ್ರಶ್ನಿಸಿದರು.

ಈಗ ಭ್ರಷ್ಟಾಚಾರ ಅರಿವಾಯಿತೆ?

ದಾವಣಗೆರೆ: ಮನರೇಗಾ ಯೋಜನೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಎನ್‌ಡಿಎ ನೇತೃತ್ವದ ಕೇಂದ್ರ ಸರಕಾರಕ್ಕೆ 11 ವರ್ಷ ಬೇಕಾಯಿತೇ ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಪ್ರಶ್ನಿಸಿದರು. ಯೋಜನೆಯಲ್ಲಿ ಅವ್ಯವಹಾರ ನಡೆಯುತ್ತಿದ್ದರೆ ತನಿಖೆ ನಡೆಸಲು ಕೇಂದ್ರ ಸರಕಾರಕ್ಕೆ ಅವಕಾಶವಿತ್ತು. ಇದನ್ನು ಬಿಟ್ಟು ಯೋಜನೆಯ ಮೂಲಸ್ವರೂಪವನ್ನೇ ಬದಲಿಸಿದೆ ಎಂದು ಹರಿಹಾಯ್ದರು. ಮನರೇಗಾ ಯೋಜನೆಯ ಸ್ವರೂಪ ಬದಲಿಸಿದ ಕೇಂದ್ರ ಸರಕಾರದ ಕ್ರಮ ವಿರೋಧಿಸಿ ರಾಜ್ಯದಲ್ಲಿ ಕಾಂಗ್ರೆಸ್ ಹೋರಾಟ ಕೈಗೆತ್ತಿಕೊಂಡಿದೆ. ಪಕ್ಷದ ಕಾರ್ಯ ಕರ್ತರು, ಕಾರ್ಮಿಕರು ಹೋರಾಟದಲ್ಲಿ ಪಾಲ್ಗೊಳ್ಳಬೇಕು ಎಂದರು.

ಅಕ್ರಮ ಗಣಿಗಾರಿಕೆ ಮೂಲಕ ಕುಖ್ಯಾತಿ | ನರೇಗಾ ಬಹಿರಂಗ ಚರ್ಚೆಗೆ ನಾವು ಸಿದ್ಧ

ರೆಡ್ಡಿ ಜತೆ ಕೈಜೋಡಿಸಿದ್ದೇಕೆ?: ಎಂ.ಬಿ.ಪಾಟೀಲ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಜನಾರ್ದನ ರೆಡ್ಡಿ ಬಳಿಯಿರುವ ಹಣಕ್ಕಾಗಿ ಬಿಜೆಪಿಯವರು ರೆಡ್ಡಿ ಜತೆ ಕೈಜೋಡಿಸಿದರೇ? ಅಕ್ರಮ ಗಣಿಗಾರಿಕೆ ಮೂಲಕ ವಿಶ್ವದಲ್ಲಿಯೇ ಕುಖ್ಯಾತಿ ಪಡೆದ ವ್ಯಕ್ತಿಯನ್ನು ಮೊದಲು ಪಕ್ಷದಿಂದ ಹೊರಹಾಕಲಿ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಕ್ರಮ ಗಣಿಗಾರಿಕೆಯ ಮೂಲಕ ಕುಖ್ಯಾತಿ ಗಳಿಸಿದಂತಹ ಗಾಲಿ ಜನಾರ್ದನ ರೆಡ್ಡಿ ಅವರನ್ನು ಬಿಜೆಪಿ ಹೊರ ಹಾಕಿತ್ತು. ಇದೀಗ ಅವರ ಜತೆಯಲ್ಲೆ ಕೈಜೋಡಿಸಿದ್ದು ಏಕೆ?. ರೆಡ್ಡಿ ಬಳಿ ಇರುವ ದುಡ್ಡಿಗಾಗಿಯೇ? ಅಥವಾ ಅಕ್ರಮ ಗಣಿಗಾರಿಕೆಯ ಪಾಲುದಾರಿಕೆಗಾಗಿಯೇ? ಈ ಹಿಂದೆ ಜನಾರ್ದನ ರೆಡ್ಡಿ ಮತ್ತವರ ಬೆಂಬಲಿಗರು ಅಕ್ರಮ ಗಣಿಗಾರಿಕೆ ಮಾಡಿದ್ದಕ್ಕಾಗಿ ಬಿಜೆಪಿ ಅವರನ್ನು ಹೊರ ಹಾಕಿತ್ತು. ಈಗ ರೆಡ್ಡಿಯ ಬೆಂಬಲಕ್ಕೆ ಬಿಜೆಪಿ ನಾಯಕರು ನಿಲ್ಲುತ್ತಿದ್ದು, ಇದರ ಗೂಡಾರ್ಥ ಜನರಿಗೆ ಅರ್ಥವಾಗುತ್ತದೆ ಎಂದು ಟೀಕಿಸಿದರು.

ಈ ಹಿಂದೆ ಅಕ್ರಮ ಗಣಿಗಾರಿಕೆ ವಿರೋಧಿಸಿ ಕಾಂಗ್ರೆಸ್ ಪಕ್ಷ ಬೆಂಗಳೂರಿನಿಂದ ಬಳ್ಳಾರಿಯ ವರೆಗೂ ಪಾದಯಾತ್ರೆ ಮಾಡಿತ್ತು. ಈಗ ಬಿಜೆಪಿ ಯಾವ ಕಾರಣಕ್ಕೆ ಪಾದಯಾತ್ರೆ ಮಾಡುತ್ತಿದೆ. ಬಳ್ಳಾರಿ ಬ್ಯಾನರ್ ಗಲಾಟೆ ಇಬ್ಬರು ವ್ಯಕ್ತಿಗಳ ನಡುವಿನ ಜಗಳ. ಅದಕ್ಕಾಗಿ ಪಾದಯಾತ್ರೆ ಮಾಡುವುದು ಉಚಿತವೇ? ಜನಾರ್ದನ ರೆಡ್ಡಿ ಸಚಿವರಾಗಿದ್ದಾಗ ತಮ ದುರಾಸೆಗಾಗಿ ರಿಪಬ್ಲಿಕ್ ಆಫ್ ಬಳ್ಳಾರಿ ಮಾಡಿಕೊಂಡಿದ್ದರು. ರಾಜ್ಯದ ಗಡಿ ಧ್ವಂಸ ಮಾಡಿ ಅಕ್ರಮ ಗಣಿಗಾರಿಕೆ ಮಾಡಿದ್ದರು ಎಂದರು.

ಬಹಿರಂಗ ಚರ್ಚೆಗೆ ಬರಲಿ

ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ವಿಚಾರವಾಗಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ರಾಜ್ಯದ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರೊಂದಿಗೆ ಬಹಿರಂಗ ಚರ್ಚೆಗೆ ಬರಲಿ. ಯಾವುದಾದರೂ ಸಭಾಂಗಣದಲ್ಲಿ ಮಾಧ್ಯಮದವರ ಸಮುಖದಲ್ಲಿಯೇ ಚರ್ಚೆ ನಡೆಯಲಿ. ನಾನು ಪ್ರಿಯಾಂಕ್ ಖರ್ಗೆ ಅವರನ್ನು ಚರ್ಚೆಗೆ ಒಪ್ಪಿಸುತ್ತೇನೆ. ಕುಮಾರಸ್ವಾಮಿ ಬಹಿರಂಗ ಚರ್ಚೆಗೆ ಬರಲು ಸಿದ್ಧರಿದ್ದಾರೆಯೇ ? ಎಂದು ಸಚಿವ ಎಂ.ಬಿ.ಪಾಟೀಲ್ ಸವಾಲು ಹಾಕಿದರು.

ಜ.15ರಿಂದ ವಿಬಿಜಿರಾಮ್‌ಜಿ ಜಾಗೃತಿ ಅಭಿಯಾನ

ಗಾಂಧೀಜಿಗೆ ಅವಮಾನ ಎಂದು ಕಾಂಗ್ರೆಸ್ ಅಪಪ್ರಚಾರ: ನಡಹಳ್ಳಿ

ದಾವಣಗೆರೆ: ವಿಕಸಿತ ಭಾರತ ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ ಗ್ರಾಮೀಣ (ವಿಬಿಜಿರಾಮ್‌ಜಿ) ಯೋಜನೆ ಕುರಿತು ಅರಿವು ಮೂಡಿಸಲು ಜ.15ರಿಂದ ಫೆ.28ರವರೆಗೆ ರಾಜ್ಯವ್ಯಾಪಿ ಜನಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಎ.ಎಸ್. ಪಾಟೀಲ ನಡಹಳ್ಳಿ ತಿಳಿಸಿದರು.ಮನರೇಗಾ ಹೆಸರು ಬದಲಿಸಿ ಮಹಾತ್ಮ ಗಾಂಧಿ ಅವರನ್ನು ಅವಮಾನಿಸಲಾಗಿದೆ ಎಂಬುದಾಗಿ ಕಾಂಗ್ರೆಸ್ ಅಪಪ್ರಚಾರ ಮಾಡುತ್ತಿದೆ. ಜಿರಾಮ್‌ಜಿ ಯೋಜನೆ ಕುರಿತ ಸುಳ್ಳು ಆರೋಪಗಳ ವಿರುದ್ಧ ಬಿಜೆಪಿ ಅಭಿಯಾನ ಕೈಗೆತ್ತಿಕೊಂಡಿದೆ. ಮಂಡಲ, ಜಿಲ್ಲಾ ಮಟ್ಟದಲ್ಲಿ ಸಮಾವೇಶ ನಡೆಸಲಿದೆ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ರಾಜ್ಯದಲ್ಲಿ ಜಿರಾಮ್‌ಜಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಬೇಕು. ರಾಜ್ಯ ಸರಕಾರ ತನ್ನ ಪಾಲಿನ ಅನುದಾನ ಬಿಡುಗಡೆ ಮಾಡಬೇಕು. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿ, ಜನರಿಗೆ ಉದ್ಯೋಗ ಭದ್ರತೆ ಕಲ್ಪಿಸಿದ ಯೋಜನೆಯ ವಿಚಾರದಲ್ಲಿ ರಾಜಕೀಯ ಬೇಡ ಎಂದರು.

ವಿಶ್ವವಾಣಿ

ಸಂಪಾದಕೀಯ

ಡಿಜಿಟಲ್ ಗುಮ್ಮನ ಕಾಟ

ದೇಶದ ಉದ್ದಗಲಕ್ಕೂ ಸಾಕಷ್ಟು ಅರಿವು ಮೂಡಿಸಿದ್ದರ ಹೊರತಾಗಿಯೂ 'ಡಿಜಿಟಲ್ ಅರೆಸ್ಟ್'ಗೆ ಒಳಗಾಗುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ದೆಹಲಿಯ ವಯೋವೃದ್ಧ ವೈದ್ಯದಂಪತಿ ಇದಕ್ಕೆ ಬಲಿಪಶುವಾಗಿರುವುದು 'ವರದಿಯಾಗಿರುವ' ಇತ್ತೀಚಿನ ನಿದರ್ಶನ; ವರದಿಯಾಗದೇ ಇರುವುದು ಇನ್ನೆಷ್ಟೋ? ಇವರಿಬ್ಬರೂ ವಿಶ್ವಸಂಸ್ಥೆಗಾಗಿ ಅಮೆರಿಕದಲ್ಲಿ 48 ವರ್ಷಗಳ ಕಾಲ ವೈದ್ಯಕೀಯ ಸೇವೆಯಲ್ಲಿದ್ದು ನಿವೃತ್ತಿ ಬಳಿಕ ದೆಹಲಿಯಲ್ಲಿ ನೆಲೆಗೊಂಡು ಸಮಾಜಸೇವೆಯಲ್ಲಿ ತೊಡಗಿದ್ದವರು ಎನ್ನುತ್ತದೆ ಸುದ್ದಿ. ಇಂಥವರಿಗೆ ಕರೆಮಾಡಿ 'ಅಕ್ರಮ ಹಣ ವರ್ಗಾವಣೆ ಮಾಡಿದ್ದರ ಪ್ರಯುಕ್ತ ನಿಮ್ಮಿಂದ ರಾಷ್ಟ್ರೀಯ ಭದ್ರತಾ ನಿಯಮಗಳ ಉಲ್ಲಂಘನೆಯಾಗಿದೆ' ಎಂದು ಬೆದರಿಸಿ ಬರೋಬ್ಬರಿ 2 ವಾರಗಳ ಕಾಲ ಡಿಜಿಟಲ್ ಅರೆಸ್ಟ್‌ಗೆ ಒಳಪಡಿಸಿದ್ದಾರೆ ದುರುಳರು. ಈ ಅವಧಿಯಲ್ಲಿ ಸದರಿ ವೃದ್ಧದಂಪತಿಯು ಹಂತಹಂತವಾಗಿ ಕಳೆದುಕೊಂಡಿರುವ ಹಣದ ಪ್ರಮಾಣ 15 ಕೋಟಿ ರುಪಾಯಿ! ಪ್ರಾಯಶಃ ಇದು ಆ ದಂಪತಿಯ ಒಂದಿಡೀ ಜೀವಮಾನದ ಗಳಿಕೆ ಆಗಿದ್ದಿರಲಿಕ್ಕೂ ಸಾಕು. ಅಷ್ಟೂ ಮೊತ್ತವು ಇಡುಗಂಟಾಗಿ ಪರರ ದೋಚುವಿಕೆಗೆ ಒಳಗಾಯಿತು ಎಂದರೆ, ಜೀವನದ ಸಂಧ್ಯಾಕಾಲದಲ್ಲಿ ಆ ದಂಪತಿಗೆ ಅದಿನ್ನೆಂಥಾ ಆಘಾತವಾಗಿರಬೇಕು! ಇಂಥ ವೃದ್ಧರು ಹಾಗೂ ಅಮಾಯಕರನ್ನೇ ತಮ್ಮ ವಂಚನೆಗೆ ಬಲಿಪಶುಗಳನ್ನಾಗಿಸಿಕೊಳ್ಳುವ ದುರುಳರ ಹೆಡೆಮುರಿ ಕಟ್ಟುವಂಥ ನಿಷ್ಠುರ ಕ್ರಮಗಳು ಇನ್ನೂ ಕಾರ್ಯರೂಪಕ್ಕೆ ಬರದಿರುವುದು ಇಂಥವರನ್ನು ರಕ್ತಬೀಜಾಸುರನ ಸಂತತಿಯನ್ನಾಗಿಸಿದೆ ಎನ್ನಲಡ್ಡಿಯಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ, ಸಾಕಷ್ಟು ವಿದ್ಯಾವಂತರು ಹಾಗೂ ವ್ಯಾವಹಾರಿಕ ಜ್ಞಾನವಿರುವವರೇ ದುರುಳರ ಇಂಥ ಸಂಚಿಗೆ ಬಲಿಯಾದರೆ, ಮಿಕ್ಕ ಸಾಮಾನ್ಯರ ಪಾಡೇನು? ಎಂಬುದಿಲ್ಲಿ ಪ್ರಶ್ನೆ. ಆಳುಗರು ಇನ್ನಾದರೂ ನಿಷ್ಠುರ ಕ್ರಮಕ್ಕೆ ಮುಂದಾಗಲಿ...

ಸೊಂಪಾದಕೀಯ

ಕನ್ನಡಿಗರು ಬ್ಯಾಡ್ವಂತೆ

ಬೆಂಗಳೂರಿನ ಕಂಪನಿಯೊಂದು ಈಗ ಕನ್ನಡಿಗರನ್ನು ಎದುರು ಹಾಕಿಕೊಂಡು ತಗಲಾಕಿಕೊಂಡಿದೆ. ಇಲ್ಲೇ ಕೆಲಸ ಮಾಡಿಕೊಂಡು ಇಲ್ಲೇ ಹಣ ಮಾಡಿಕೊಂಡು ಇರುವ ಕಂಪನಿಗಳ ಕನ್ನಡ ವಿರೋಧಿ ನಡವಳಿಕೆ ಹೊಸದೇನೂ ಅಲ್ಲ. ಈಗ ತೀರಾ ಬೀದಿಗೆ ಬರುವಷ್ಟು ರಾಜಾರೋಷವಾಗಿ ನಡೆಯುತ್ತಾ ಇದೆ. ಬೆಂಗಳೂರಿನ ಕಂಪನಿಯೊಂದು ಕೆಲಸಕ್ಕೆ ಅರ್ಜಿ ಕರೆಯುವಾಗ 'ಕನ್ನಡಿಗರು ಬೇಡ' ಅಂತ ಸ್ಪಷ್ಟವಾಗಿ ಉಲ್ಲೇಖಿಸಿದೆ. ಆನ್‌ಲೈನ್‌ನಲ್ಲಿ ಹಾಕಿರುವ ಈ ಪೋಸ್ಟ್‌ನಲ್ಲಿ 'ನಾನ್ ಕನ್ನಡಿಗ ಎಚ್.ಆರ್. ವಾಂಟೆಡ್' ಅನ್ನೋದನ್ನ ಸ್ಪಷ್ಟವಾಗಿ ಹೇಳಿದ್ದಾರೆ. ಎಂಪ್ಲಾಯಿಗಳ ಎದುರು ಕೂತು ಮಾತನಾಡುವ ಎಚ್.ಆರ್. ಕೆಲಸಕ್ಕೆ ಕನ್ನಡಿಗರು ಬೇಡ ಅಂತ ಹೇಳಿ ಕನ್ನಡಿಗರನ್ನು ಎದುರು ಹಾಕಿಕೊಂಡಿದೆ ಕಂಪನಿ. ಈಗ ಈ ಕಂಪನಿ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ. ಈ ಪೋಸ್ಟ್ ಅನ್ನು ತೆಗೆಯಬೇಕು ಅನ್ನೋ ಕೂಗು ಎದ್ದಿದೆ. ಆದರೆ ಕೇವಲ ಪೋಸ್ಟ್ ಅನ್ನು ತೆಗೆದರೆ ಏನು ಲಾಭ? ಅವರ ಮನಸ್ಸಲ್ಲಿ ಇರೋ ಕನ್ನಡ ವಿರೋಧಿ ಮನೋಭಾವವನ್ನು ತೆಗೆಯಲು ಸಾಧ್ಯವಿಲ್ಲ. ಅಲ್ಲದೆ ಪೋಸ್ಟ್ ತೆಗೆದರೂ ಎಚ್.ಆರ್. ಪೋಸ್ಟಿಗೆ ಮಾತ್ರ ಅವರು ಆಯ್ಕೆ ಮಾಡೋದು 'ನಾನ್ ಕನ್ನಡಿಗ'ರನ್ನೇ ಮತ್ತು ಇದು ಹೊಸತೇನೂ ಅಲ್ಲ. ನೇರವಾಗಿ ನಮಗೆ ಮಲಯಾಳಿಗಳು, ನಾರ್ತ್ ಇಂಡಿಯಾದವರು ಬೇಕು ಅನ್ನೋದನ್ನು ಅವರು ಈ ಮೂಲಕ ಹೇಳಿದ್ದಾರೆ. ಅನೇಕ ಸಾಫ್ಟ್‌ವೇರ್ ಕಂಪನಿಗಳಲ್ಲಿ ಇಂದು ನಡೀತಾ ಇರೋದೇ ಇದು. ಕಂಪನಿಯಲ್ಲಿ ಮುಖ್ಯವಾದ ಕೆಲಸ ಮಾಡಬೇಕು ಅಂದಾಗ ಅವರಿಗೆ ಕನ್ನಡಿಗರು ನೆನಪಾಗುತ್ತಾರೆ. ಅವರಿಗೆ ಜವಾಬ್ದಾರಿ ವಹಿಸಲಾಗುತ್ತದೆ ಮತ್ತು ಕೆಲಸ ಮಾಡಿಸಿಕೊಳ್ಳಲಾಗುತ್ತದೆ. ಆದರೆ ಪ್ರಮೋಷನ್ ಅಂತ ಬಂದಾಗ ಇವರಿಗೆ ಕನ್ನಡಿಗರು ಕಾಣೋದೇ ಇಲ್ಲ. ಯಾಕಂದ್ರೆ, ಮೊದಲಿನಿಂದಲೂ ಉನ್ನತ ಪೋಸ್ಟ್‌ಗಳಲ್ಲಿ ಇರೋದು ಮಲಯಾಳಿಗಳು ಇಲ್ಲವೇ ಉತ್ತರ ಭಾರತದವರು. ಹಾಗಾಗಿ ಅವರು ಮತ್ತಿತರ ಪ್ರಮುಖ ಪೋಸ್ಟ್‌ಗಳ ವಿಷಯ ಬಂದಾಗ ತಮ್ಮವರನ್ನೇ ಕರೆದು ಕೂಡಿಸುತ್ತಾರೆಯೇ ಹೊರತು ಕನ್ನಡಿಗರನ್ನಲ್ಲ. ಅದನ್ನು ಓಪನ್ ಆಗಿ ಹೇಳೋದಿಲ್ಲ ಅಷ್ಟೇ. ಆದರೆ ಈ ಕಂಪನಿ ವಿಶಾಲ ಮನೋಭಾವದಿಂದ 'ಕನ್ನಡಿಗರು ಬೇಡ' ಅಂತ ಹೇಳಿರೋದ್ರಿಂದ ಇವರನ್ನು ವಿಶಾಲ ಮನೋಭಾವದ ಕನ್ನಡಿಗರು ಕ್ಷಮಿಸಬಹುದು ಅಷ್ಟೇ.

ಸಂಪಾದಕರ ಸದ್ಯಶೋಧನೆ

ತಾವಾಗಿಯೇ ಲ್ಯಾಂಡ್ ಆಗಬಲ್ಲವು!

ವಿಮಾನಗಳು ತಾವಾಗಿಯೇ ಲ್ಯಾಂಡ್ ಆಗಬಲ್ಲವು ಅಂದ್ರೆ, ಅಚ್ಚರಿ ತರಬಹುದು. ಆದರೆ, ಈ ತಂತ್ರಜ್ಞಾನವು ಕಳೆದ ಹಲವಾರು ದಶಕಗಳಿಂದ ಅತ್ಯಂತ ಸದ್ದಿಲ್ಲದೆ ವಿಮಾನಯಾನ ಕ್ಷೇತ್ರದಲ್ಲಿ ಬಳಕೆಯಾಗುತ್ತಿದೆ. ದಟ್ಟವಾದ ಮಂಜು ಮುಸುಕಿದಾಗ ಅಥವಾ ಕಣ್ಣಿಗೆ ಏನೂ ಕಾಣಿಸದಂಥ ಪರಿಸ್ಥಿತಿಗಳಲ್ಲಿ ವಿಮಾನಗಳು ಹೇಗೆ ಸುರಕ್ಷಿತವಾಗಿ ಇಳಿಯುತ್ತವೆ? ಇದಕ್ಕೆ ಉತ್ತರವೇ 'ಆಟೋಲ್ಯಾಂಡ್' ಸಿಸ್ಟಮ್. ಆಟೋಲ್ಯಾಂಡ್ ಎಂದರೇನು? ಆಟೋಲ್ಯಾಂಡ್ ಎಂಬುದು ಆಧುನಿಕ ವಿಮಾನಗಳಲ್ಲಿರುವ ಒಂದು ಅತ್ಯಾಧುನಿಕ ವ್ಯವಸ್ಥೆಯಾಗಿದ್ದು, ಇದು ಪೈಲಟ್‌ನ ನೇರ ಹಸ್ತಕ್ಷೇಪವಿಲ್ಲದೆಯೇ ವಿಮಾನವನ್ನು ರನ್‌ವೇ ಮೇಲೆ ಇಳಿಸಲು ಅನುವು ಮಾಡಿಕೊಡುತ್ತದೆ. ಏರ್‌ಬಸ್ A320 ಅಥವಾ ಬೋಯಿಂಗ್ 787 ಡ್ರೀಮ್‌ಲೈನರ್‌ನಂಥ ಆಧುನಿಕ ಜೆಟ್‌ಗಳು ಈ ವ್ಯವಸ್ಥೆಯನ್ನು ಹೊಂದಿವೆ. ಇದು ಕೇವಲ ವಿಮಾನವನ್ನು ಕೆಳಕ್ಕೆ ಇಳಿಸುವುದಲ್ಲ, ಬದಲಿಗೆ ರನ್‌ವೇ ಮೇಲೆ ಸರಿಯಾದ ಜಾಗದಲ್ಲಿ ಚಕ್ರಗಳು ಸ್ಪರ್ಶಿಸುವಂತೆ ಮಾಡುವುದು ಮತ್ತು ವಿಮಾನವು ರನ್‌ವೇ ಮಧ್ಯದಲ್ಲೇ ಇರುವಂತೆ ನೋಡಿಕೊಳ್ಳುವ ಕೆಲಸವನ್ನೂ ಮಾಡುತ್ತದೆ. ಇದು ಹೇಗೆ ಕೆಲಸ ಮಾಡುತ್ತದೆ? ಆಟೋಲ್ಯಾಂಡ್ ಸಿಸ್ಟಮ್ ತನ್ನ ಕೆಲಸ ಮಾಡಲು ಇನ್‌ಸ್ಟ್ರುಮೆಂಟ್ ಲ್ಯಾಂಡಿಂಗ್ ಸಿಸ್ಟಮ್ ಎಂಬ ನೆಲದ ಮೇಲಿನ ರೇಡಿಯೋ ಬೀಕನ್‌ಗಳನ್ನು ಅವಲಂಬಿಸಿದೆ. ವಿಮಾನವು ರನ್‌ವೇಯ ಮಧ್ಯಭಾಗಕ್ಕೆ ಸರಿಯಾಗಿ ನೇರವಾಗಿದೆಯೇ ಎಂಬುದನ್ನು ಲೋಕಲೈಸರ್ ಖಚಿತಪಡಿಸುತ್ತದೆ. ವಿಮಾನವು ಯಾವ ಕೋನದಲ್ಲಿ ಮತ್ತು ಎಷ್ಟು ವೇಗದಲ್ಲಿ ಕೆಳಕ್ಕೆ ಇಳಿಯಬೇಕು ಎಂಬುದನ್ನು ಗ್ಲೈಡ್ ಸ್ಲೋಪ್ ನಿರ್ಧರಿಸುತ್ತದೆ. ವಿಮಾನವು ನೆಲದಿಂದ ಎಷ್ಟು ಎತ್ತರದಲ್ಲಿದೆ ಎಂಬುದನ್ನು ರೇಡಿಯೋ ಅಲ್ಟಿಮೀಟರ್ ನಿಖರವಾಗಿ ಅಳೆಯುತ್ತಾ, ಇಳಿಯುವ ಕೊನೆಯ ಕ್ಷಣದಲ್ಲಿ ವೇಗವನ್ನು ಕಡಿಮೆ ಮಾಡುತ್ತದೆ. ನಿಮ್ಮ ಕಾರನ್ನು ದಟ್ಟವಾದ ಮಂಜಿನಲ್ಲಿ, ಅತಿ ವೇಗವಾಗಿ ಹೋಗುತ್ತಿರುವಾಗ ಪಾರ್ಕಿಂಗ್ ಮಾಡುವುದನ್ನು ಕಲ್ಪಿಸಿಕೊಳ್ಳಿ. ನಿಮಗೆ ರಸ್ತೆ ಕಾಣಿಸದಿದ್ದರೂ ಕಾರು ತಾನಾಗಿಯೇ ಪಾರ್ಕ್ ಆದರೆ ಹೇಗಿರುತ್ತದೆ? ಆಟೋಲ್ಯಾಂಡ್ ಕೂಡ ಇದೇ ರೀತಿ ಕೆಲಸ ಮಾಡುತ್ತದೆ. ದಟ್ಟವಾದ ಮಂಜು ಅಥವಾ ಮಳೆಯ ಕಾರಣದಿಂದ ಪೈಲಟ್‌ಗಳಿಗೆ ರನ್‌ವೇ ಕಾಣಿಸದಿದ್ದಾಗ, ಈ ಸಿಸ್ಟಮ್ ವಿಮಾನವನ್ನು ಸುರಕ್ಷಿತವಾಗಿ ನೆಲಕ್ಕೆ ತರುತ್ತದೆ. ವಿಮಾನವು ರನ್‌ವೇ ಮೇಲೆ ಇಳಿದ ತಕ್ಷಣ 'ಆಟೋಬ್ರೇಕ್' ವ್ಯವಸ್ಥೆಯು ಕಾರ್ಯಾರಂಭ ಮಾಡಿ ವಿಮಾನವನ್ನು ನಿಧಾನಗೊಳಿಸುತ್ತದೆ. ವಿಮಾನ ತಾನಾಗಿಯೇ ಇಳಿಯುತ್ತದೆ ಎಂದಾಕ್ಷಣ ಪೈಲಟ್‌ಗಳು ಸುಮ್ಮನೆ ಕುಳಿತಿರುತ್ತಾರೆ ಎಂದು ಭಾವಿಸಬೇಡಿ. ಆಟೋಲ್ಯಾಂಡ್ ಸಮಯದಲ್ಲಿ ಪೈಲಟ್‌ಗಳ ಜವಾಬ್ದಾರಿ ಹತ್ತು ಪಟ್ಟು ಹೆಚ್ಚಾಗಿರುತ್ತದೆ. ಪೈಲಟ್‌ಗಳು ಪ್ರತಿಯೊಂದು ಕಂಪ್ಯೂಟರ್ ಮತ್ತು ಸಂವೇದಕಗಳ (ಸೆನ್ಸರ್) ಮೇಲೆ ಕಣ್ಣಿಟ್ಟಿರುತ್ತಾರೆ. ಆಟೋಲ್ಯಾಂಡ್ ಕೆಲಸ ಮಾಡಬೇಕಾದರೆ ವಿಮಾನದ ಕನಿಷ್ಠ 3 ಕಂಪ್ಯೂಟರ್‌ಗಳು ಮತ್ತು ಸಂವೇದಕಗಳು ಒಂದೇ ರೀತಿಯ ಮಾಹಿತಿಯನ್ನು ನೀಡಬೇಕು. ಒಂದು ವೇಳೆ ಒಂದು ಕಂಪ್ಯೂಟರ್ ಸ್ವಲ್ಪ ಭಿನ್ನವಾದ ಮಾಹಿತಿ ನೀಡಿದರೂ, ಆಟೋಲ್ಯಾಂಡ್ ಸಿಸ್ಟಮ್ ತಕ್ಷಣವೇ ಆಫ್ ಆಗುತ್ತದೆ. ಅಂಥ ಸಮಯದಲ್ಲಿ ಪೈಲಟ್‌ಗಳು ಸೆಕೆಂಡಿನ ನೂರನೇ ಒಂದು ಭಾಗದಷ್ಟು ವೇಗದಲ್ಲಿ ವಿಮಾನವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಸಿದ್ಧರಿರುತ್ತಾರೆ. ಕಂಪ್ಯೂಟರ್‌ಗಳು ಮನುಷ್ಯರಿಗಿಂತ ಉತ್ತಮವೇ? ಪೈಲಟ್‌ಗಳು ಸೋಮಾರಿಗಳಾದ ಕಾರಣ ಆಟೋಲ್ಯಾಂಡ್ ಮಾಡಿಸುವುದಿಲ್ಲ. ಬದಲಿಗೆ, ಕೆಲವು ಸನ್ನಿವೇಶಗಳಲ್ಲಿ ಕಂಪ್ಯೂಟರ್‌ಗಳು ಮನುಷ್ಯರಿಗಿಂತ ಹೆಚ್ಚು ನಿಖರವಾಗಿ ಕೆಲಸ ಮಾಡುತ್ತವೆ. ಮನುಷ್ಯರಿಗೆ ದೃಷ್ಟಿ ಭ್ರಮೆಯಾಗಬಹುದು (Visual illusions). ಆದರೆ ಕಂಪ್ಯೂಟರ್‌ಗಳಿಗೆ ಡೇಟಾ ಮುಖ್ಯ. ಒಂದೇ ರೀತಿಯ ಕೆಲಸವನ್ನು ಸಾವಿರಾರು ಬಾರಿ ಯಾವುದೇ ತಪ್ಪಿಲ್ಲದೆ ಮಾಡಲು ಕಂಪ್ಯೂಟರ್‌ಗಳು ಹೆಚ್ಚು ಸಮರ್ಥವಾಗಿವೆ. ತೀವ್ರವಾದ ಗಾಳಿ ಅಥವಾ ಅತಿ ಕಡಿಮೆ ಬೆಳಕು ಇದ್ದಾಗ, ಆಟೋಲ್ಯಾಂಡ್ ವ್ಯವಸ್ಥೆಯು ವಿಮಾನದ ಸ್ಥಿರತೆಯನ್ನು ಕಾಪಾಡಲು ಸಹಾಯಮಾಡುತ್ತದೆ. ಆಟೋಲ್ಯಾಂಡ್ ಯಾವಾಗ ಬಳಸುತ್ತಾರೆ? ಎಲ್ಲ ಲ್ಯಾಂಡಿಂಗ್‌ಗಳೂ ಆಟೋಲ್ಯಾಂಡ್ ಆಗಿರುವುದಿಲ್ಲ. ಶೇ. 90ಕ್ಕೂ ಹೆಚ್ಚು ಬಾರಿ ಪೈಲಟ್‌ಗಳೇ ವಿಮಾನವನ್ನು ಮ್ಯಾನುಯಲ್ ಆಗಿ ಇಳಿಸುತ್ತಾರೆ. ಹವಾಮಾನ ತೀರಾ ಹದಗೆಟ್ಟಾಗ ಅಥವಾ ವಿಮಾನ ನಿಲ್ದಾಣದ ನಿಯಮಗಳ ಪ್ರಕಾರ ಮಾತ್ರ ಇದನ್ನು ಬಳಸಲಾಗುತ್ತದೆ. ಅಲ್ಲದೇ, ಎಲ್ಲ ವಿಮಾನ ನಿಲ್ದಾಣಗಳಲ್ಲಿ ಈ ಸೌಲಭ್ಯ ಇರುವುದಿಲ್ಲ; ಅತ್ಯಾಧುನಿಕ ಸೌಲಭ್ಯವಿರುವ ನಿಲ್ದಾಣಗಳಲ್ಲಿ ಮಾತ್ರ ಇದು ಸಾಧ್ಯ. ವಿಮಾನಯಾನದ ಅದ್ಭುತಗಳಲ್ಲಿ ಆಟೋಲ್ಯಾಂಡ್ ಕೂಡ ಒಂದು. ಇದು ಮನುಷ್ಯನ ಬುದ್ಧಿವಂತಿಕೆ ಮತ್ತು ಕಂಪ್ಯೂಟರ್‌ನ ನಿಖರತೆಯ ಸಮ್ಮಿಶ್ರಣವಾಗಿದೆ.

ಶಿಕ್ಷಣದಲ್ಲಿ ಮಾತೃಭಾಷೆ ಕಡ್ಡಾಯ ನಿಜಕ್ಕೂ ಸಾಧ್ಯವೇ?

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ

ನೆರೆರಾಜ್ಯ ಕೇರಳ ಚುನಾವಣೆಗೆ ದಿನಗಣನೆ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್ ಹಾಗೂ ಸಿಪಿಎಂ ನಡುವಿನ ಜಟಾಪಟಿ ದಿನದಿಂದ ದಿನಕ್ಕೆ ತೀವ್ರವಾಗುತ್ತಿದೆ; ಮೊದಲಿಗೆ ಕೋಗಿಲು ಅಕ್ರಮ ಕಟ್ಟಡ ವಿಷಯದಲ್ಲಿ ಉಭಯ ರಾಜ್ಯಗಳ ನಾಯಕರು ವಾಕ್ಸಮರ ನಡೆಸಿಕೊಂಡರೆ, ಇದೀಗ ಕೇರಳ ಸರಕಾರ ತಂದಿರುವ ಮಲಯಾಳಂ ಭಾಷಾ ವಿಧೇಯಕಕ್ಕೆ ಸಂಬಂಧಿಸಿದಂತೆ ಹಗ್ಗ-ಜಗ್ಗಾಟ ಜೋರಾಗಿದೆ.

ಕೇರಳ ಸರಕಾರ ತರಲು ಮುಂದಾಗಿರುವ ವಿಧೇಯಕದಲ್ಲಿ ಕೇರಳದ ಕಾಸರಗೋಡು ಕನ್ನಡಿಗರಿಗೆ ಅನ್ಯಾಯವಾಗಲಿದೆ ಎನ್ನುವ ವಾದ ಒಂದೆಡೆಯಾದರೆ, ಕೆಲ ಕನ್ನಡಪರ ಹೋರಾಟಗಾರರು ಕರ್ನಾಟಕದಲ್ಲಿ ಕನ್ನಡವನ್ನು ಉಳಿಸುವುದಕ್ಕೆ ನಮ್ಮ ಸರಕಾರಗಳು ಈ ರೀತಿಯ ಕಠಿಣ ನಿಲುವುಗಳನ್ನು ತೆಗೆದುಕೊಳ್ಳಬೇಕು ಎನ್ನುವ ಒತ್ತಡವನ್ನು ಸರಕಾರದ ಮೇಲೆ ಹೇರುತ್ತಿದ್ದಾರೆ.

ರಾಜಕೀಯ ಕಿತ್ತಾಟ ನೋಡುವುದಕ್ಕಿಂತ ಕೇರಳ ಸರಕಾರದ ವಿಧೇಯಕದಲ್ಲಿ ಏನಿದೆ ಎನ್ನುವುದು ಮುಖ್ಯವಾಗುತ್ತದೆ. ಪಿಣರಾಯಿ ವಿಜಯನ್ ನೇತೃತ್ವದ ಸರಕಾರ ಜಾರಿಗೊಳಿಸಿರುವ ಮಲಯಾಳಂ ವಿಧೇಯಕದಲ್ಲಿ ಪ್ರಮುಖವಾಗಿ, ಮಲಯಾಳಂ ಅನ್ನು ಕೇರಳದ ಅಧಿಕೃತ ಭಾಷೆಯೆಂದು ಘೋಷಿಸುವುದರೊಂದಿಗೆ, ಸರಕಾರಿ ವ್ಯವಸ್ಥೆಯಲ್ಲಿ ಮಲಯಾಳಂ ಅಧಿಕೃತ ಸಂವಹನ ಭಾಷೆಯಾಗಿರಬೇಕು ಎಂದಿದೆ. ಆದರೆ ವಿವಾದಕ್ಕೆ ಕಾರಣವಾಗಿರುವ ಅಂಶವೆಂದರೆ, ಕೇರಳದಲ್ಲಿರುವ ಸರಕಾರಿ, ಅನುದಾನಿತ ಶಾಲೆಗಳಲ್ಲಿ ಪ್ರಥಮ ಭಾಷೆಯಾಗಿ ಮಲಯಾಳಂ ಅನ್ನು ಬೋಧಿಸಬೇಕು ಎನ್ನುವ ಅಂಶವನ್ನು ಸೇರಿಸಿರುವುದು. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಸೇರಿದಂತೆ ಹಲವರು, ಈ ವಿಧೇಯಕದಿಂದ ಕೇರಳದಲ್ಲಿ ಭಾಷಾ ಅಲ್ಪಸಂಖ್ಯಾತರಾಗಿರುವ ಕನ್ನಡಿಗರು ಹಾಗೂ ತಮಿಳಿಗರಿಗೆ ಅವರ ಭಾಷೆಯಲ್ಲಿ ಅಧ್ಯಯನ ಮಾಡಲು ಯಾವುದೇ ಸಮಸ್ಯೆಯಾಗುವುದಿಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ. ಆದರೆ ಪ್ರಥಮ ಭಾಷೆ ಮಲಯಾಳಂ ಆಗಬೇಕು ಎನ್ನುವುದು ವಿಧೇಯಕದಲ್ಲಿರುವುದರಿಂದ ಕನ್ನಡಿಗರಿಗೆ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯಲು ಸಮಸ್ಯೆಯಾಗುತ್ತದೆ ಎನ್ನುವುದಾಗಿದೆ.

ಭಾಷೆಯ ವಿಷಯಗಳಿಗೆ ಸಂಬಂಧಿಸಿದಂತೆ ಸಂವಿಧಾನದ ಆರ್ಟಿಕಲ್ 29 ಹಾಗೂ 30 ಇವೆ. ಅದರಲ್ಲಿಯೂ ಭಾಷಾ ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ಸಂವಿಧಾನದಲ್ಲಿ ನೀಡಲಾಗಿದೆ. ಕೇರಳ ಸರಕಾರವು ಮಲಯಾಳಂ ಅನ್ನು ಕಡ್ಡಾಯಗೊಳಿಸಲು ಮುಂದಾಗಿರುವುದು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ ಎನ್ನುವ ವಾದವೂ ಶುರುವಾಗಿದೆ. ಏಕೆಂದರೆ, ಸಂವಿಧಾನದ 350-ಎ ವಿಧಿಯಲ್ಲಿ, ರಾಜ್ಯ ಸರಕಾರಗಳು, ಭಾಷಾ ಅಲ್ಪಸಂಖ್ಯಾತರಿಗೆ ಮಾತೃಭಾಷೆಯಲ್ಲಿಯೇ ಶಿಕ್ಷಣ ಕೊಡಬೇಕು ಎಂದು ಸ್ಪಷ್ಟವಾಗಿ ಸೂಚಿಸಲಾಗಿದೆ. ರಾಜ್ಯ ಸರಕಾರಗಳು ತಮ್ಮ ತಮ್ಮ ರಾಜ್ಯಭಾಷೆಯನ್ನು ಬೆಳೆಸಲು ಸರಕಾರಿ ಕಚೇರಿಗಳಲ್ಲಿ ಆಯಾ ರಾಜ್ಯಗಳ ಅಧಿಕೃತ ಭಾಷೆಗಳ ಬಳಕೆ ಮಾಡಬಹುದು. ದಾಖಲೆಗಳನ್ನು ನಿಮ್ಮ ನಿಮ್ಮ ಭಾಷೆಯಲ್ಲಿ ಕೊಡಬಹುದು. ಆದರೆ ಅಲ್ಪಸಂಖ್ಯಾತ ಭಾಷೆಗಳ ಶಾಲೆಗಳ ಮುಚ್ಚುವ ಅಥವಾ ಮಗುವಿಗೆ ತಮ್ಮ ಮಾತೃಭಾಷೆಯಲ್ಲದೇ ಬೇರೆ ಭಾಷೆಯಲ್ಲಿ ಕಲಿಕೆ ಮಾಡಬೇಕು ಎನ್ನುವ ಒತ್ತಡವನ್ನು ಹೇರುವ ಯಾವುದೇ ಅಧಿಕಾರ ಸರಕಾರಗಳಿಗೆ ಇಲ್ಲ. ಸಂವಿಧಾನದಲ್ಲಿರುವ ಈ ಅಂಶಗಳ ಆಧಾರದಲ್ಲಿ ನೋಡಿದರೆ, ಕೇರಳ ಸರಕಾರದ ವಿಧೇಯಕದ ಭವಿಷ್ಯದ ಬಗ್ಗೆ ಹಲವರಿಗೆ ಅನುಮಾನವಿದೆ.

ಕೇರಳ ಹಾಗೂ ಕರ್ನಾಟಕದ ನಡುವೆ ಬಹುತೇಕ ವಿವಾದಕ್ಕೆ ಕಾರಣವಾಗುವುದೇ ಕಾಸರಗೋಡಿನಲ್ಲಿ ಮಲಯಾಳಂ ಹಾಗೂ ಕನ್ನಡ ಭಾಷಾ ವಿಷಯಕ್ಕೆ. ಹಾಗೆ ನೋಡಿದರೆ, ಈ ಹಿಂದೆ ಕಾಸರಗೋಡು ಕರ್ನಾಟಕದ ಭಾಗವೇ ಆಗಿತ್ತು. ಆದರೆ 1956ರ ರಾಜ್ಯಗಳ ಪುನರ್‌ವಿಂಗಡನೆ ಸಮಯದಲ್ಲಿ ಕಾಸರಗೋಡು ಕೇರಳದ ಭಾಗವಾಯಿತು. ಆದರೂ, ಕಾಸರಗೋಡಿನಲ್ಲಿ ಕನ್ನಡದ ಕಂಪು ಈಗಲೂ ಇದೆ. ಕಾಸರಗೋಡಿನ ಬಹುಪಾಲು ಜನರು ಮಂಗಳೂರಿನೊಂದಿಗೆ ವ್ಯವಹಾರ ಹೊಂದಿದ್ದಾರೆ. ಇದಿಷ್ಟೇ ಅಲ್ಲದೇ, ಕಾಸರಗೋಡು ಹಾಗೂ ಮಂಜೇಶ್ವರದಲ್ಲಿಯೇ ಈಗಲೂ 45ಕ್ಕೂ ಹೆಚ್ಚು ಕನ್ನಡ ಮಾಧ್ಯಮ ಸರಕಾರಿ ಶಾಲೆಗಳಿದ್ದರೆ, ಇಡೀ ಕಾಸರಗೋಡು ಜಿಲ್ಲೆಯಲ್ಲಿ 74ಕ್ಕೂ ಹೆಚ್ಚು ಕನ್ನಡ ಶಾಲೆಗಳಿದ್ದು, 40 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಈಗಲೂ ಅಲ್ಲಿ ಕನ್ನಡವನ್ನೇ ತಮ್ಮ ಮಾಧ್ಯಮವನ್ನಾಗಿ ತೆಗೆದುಕೊಂಡು ಅಭ್ಯಾಸ ಮಾಡುತ್ತಿದ್ದಾರೆ. ಕೇರಳ ರಾಜ್ಯದಲ್ಲಿದ್ದರೂ, ಅಲ್ಲಿರುವ ಅನೇಕರು ಕನ್ನಡದೊಂದಿಗಿನ ನಂಟನ್ನು ಬಿಟ್ಟುಕೊಡಲು ತಯಾರಿಲ್ಲ. ಆದರೆ ಕೇರಳ ಸರಕಾರ ಹಲವು ಬಾರಿ ಕಾಸರಗೋಡಿನ ಕನ್ನಡಿಗರ ಮೇಲೆ ಮಲಯಾಳಂ ಹೇರುವುದಕ್ಕೆ ವಿವಿಧ ರೀತಿಯ ಕಾನೂನನ್ನು ಜಾರಿಗೊಳಿಸಿದೆ. ಕೆಲವೊಂದಷ್ಟು ಕನ್ನಡ ಮಾಧ್ಯಮ ಶಾಲೆಗಳನ್ನು ಮಲಯಾಳಂ ಶಾಲೆಯನ್ನಾಗಿ ಮಾಡುವ ಪ್ರಯತ್ನದಲ್ಲಿಯೂ ಯಶಸ್ವಿಯಾಗಿದೆ.

ಹಾಗೆ ನೋಡಿದರೆ, ತಮ್ಮ ಭಾಷೆಯನ್ನು ಉಳಿಸಿಕೊಳ್ಳಲು ಈ ರೀತಿಯ ಪ್ರಯತ್ನ ನಡೆದಿರುವುದು ಇದೇ ಮೊದಲಲ್ಲ. ಈ ಹಿಂದೆ ಕರ್ನಾಟಕದಲ್ಲಿಯೂ ಕನ್ನಡವನ್ನು ಕಡ್ಡಾಯಗೊಳಿಸುವ ಹಲವು ಪ್ರಯತ್ನಗಳು ನಡೆದಿದ್ದವು. ಗೋಕಾಕ್ ಚಳವಳಿಯ ಬಳಿಕ ಕರ್ನಾಟಕದಲ್ಲಿ ಪ್ರಥಮ ಭಾಷೆಯಾಗಿ ಕನ್ನಡವೇ ಇರಬೇಕು ಎನ್ನುವ ನಿಯಮವನ್ನು ರೂಪಿಸಲು ಅಂದಿನ ಸರಕಾರ ಮುಂದಾಗಿತ್ತು. ಆದರೆ ಕೇರಳ ಸರಕಾರ ಮಲಯಾಳಂ ಕಡ್ಡಾಯ ಮಾಡಲು ಹೊರಟಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಸ್ತಾಪಿಸಿರುವ ಸಂವಿಧಾನದ ಅಂಶಗಳನ್ನೇ ಪ್ರಶ್ನಿಸಿ ಅನೇಕರು ಹೈಕೋರ್ಟ್ ಮೆಟ್ಟಿಲೇರಿದ್ದರು. ಆಗ ಸರಕಾರದ ಕ್ರಮವನ್ನು ಹೈಕೋರ್ಟ್ ಒಪ್ಪಿರಲಿಲ್ಲ. ಏಕೆಂದರೆ, ಸಂವಿಧಾನದ ಆರ್ಟಿಕಲ್ 29 ಹಾಗೂ 30ರಲ್ಲಿ ಭಾಷಾ ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಂಬಂಧಿಸಿದಂತೆ ಸ್ಪಷ್ಟ ನಿರ್ದೇಶನಗಳನ್ನು ನೀಡಲಾಗಿದೆ. ಭಾರತದಲ್ಲಿ ಯಾವುದೇ ವ್ಯಕ್ತಿ, ತನ್ನ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯಲು ಅರ್ಹರಾಗಿದ್ದಾರೆ. ಉದಾಹರಣೆಗೆ, ಮಧ್ಯಪ್ರದೇಶದಲ್ಲಿ ಕನ್ನಡಿಗ ವಿದ್ಯಾರ್ಥಿಯೊಬ್ಬ ಕನ್ನಡದಲ್ಲಿ ಶಿಕ್ಷಣ ಪಡೆಯಲು ಬಯಸಿದರೆ ಆ ಹುಡುಗನಿಗೆ ಶಿಕ್ಷಣ ಕೊಡುವುದು ಆ ಸರಕಾರದ ಜವಾಬ್ದಾರಿಯಾಗಿರುತ್ತದೆ. ಅದೇ ರೀತಿ, ಕೇರಳದಲ್ಲಿರುವ ಕನ್ನಡಿಗರು ತಮ್ಮ ಮಕ್ಕಳಿಗೆ ಕನ್ನಡ ಭಾಷೆಯಲ್ಲಿಯೇ ಶಿಕ್ಷಣ ಕೊಡಿಸಲು ಇಚ್ಛಿಸಿದರೆ ಕೊಡಿಸುವುದು ಆ ಸರಕಾರದ ಹೊಣೆಯಾಗಿರುತ್ತದೆ. ಈ ಕಾರಣಕ್ಕಾಗಿಯೇ ಕೇರಳದಲ್ಲಿ ಮಲಯಾಳಂ ಮಾಧ್ಯಮದಲ್ಲಿ ಶಿಕ್ಷಣ ಪಡೆಯಬೇಕು ಎನ್ನುವ ಕೇರಳ ಸರಕಾರದ ವಿಧೇಯಕಕ್ಕೆ ಕಾನೂನಾತ್ಮಕವಾಗಿ ಮಾನ್ಯತೆ ಎಷ್ಟರ ಮಟ್ಟಿಗೆ ಸಿಗಲಿದೆ ಎನ್ನುವುದು ಈಗಿರುವ ಪ್ರಶ್ನೆ.

ಕೇರಳ ಸರಕಾರದ ನಡೆಯನ್ನು ರಾಜ್ಯ ಕಾಂಗ್ರೆಸ್ ವಿರೋಧಿಸುವುದಕ್ಕೂ ಕಾರಣಗಳು ಭಿನ್ನ ರೀತಿಯಲ್ಲಿವೆ. ಒಂದು, ಕಾಸರಗೋಡಿನ ಕನ್ನಡಿಗರಿಗೆ ಮಾತೃಭಾಷೆ ಕಲಿಯುವ ಹಕ್ಕನ್ನು ಕಲ್ಪಿಸುವುದಾದರೆ, ಇದನ್ನೂ ಮೀರಿ ರಾಜಕೀಯ ಲೆಕ್ಕಾಚಾರಗಳಿವೆ. ಕೇರಳದಲ್ಲಿ ಮೇ ತಿಂಗಳಲ್ಲಿ ಎದುರಾಗಲಿರುವ ವಿಧಾನಸಭಾ ಚುನಾವಣೆಗೆ ಈಗಾಗಲೇ ಪಕ್ಷಗಳು ಸಜ್ಜಾಗುತ್ತಿವೆ. ಈ ಹಿಂದೆ ಅಸ್ತಿತ್ವದಲ್ಲಿಯೇ ಇಲ್ಲದ ಬಿಜೆಪಿ ಈ ಬಾರಿ ಅಧಿಕಾರಕ್ಕೆ ಬಾರದಿದ್ದರೂ, ಅಧಿಕಾರಕ್ಕೆ ಬರುವವರಿಗೆ ಅಡ್ಡಗಾಲು ಹಾಕುವ ಹಂತ ಹಾಗೂ ಲೆಕ್ಕಾಚಾರದಲ್ಲಿದೆ. ಇನ್ನು ಕಳೆದೊಂದು ದಶಕದಿಂದ ಆಡಳಿತ ನಡೆಸುತ್ತಿರುವ ಪಿಣರಾಯಿ ವಿಜಯನ್ ನೇತೃತ್ವದ ಸಿಪಿಎಂಗೆ ಈ ಬಾರಿ ತೀವ್ರ ಆಡಳಿತ ವಿರೋಧಿ ಅಲೆಯಿದೆ. ಇನ್ನೊಂದೆಡೆ ಸರಣಿ ಸೋಲುಗಳ ಹೊರತಾಗಿಯೂ ಕೇರಳ ಮುಖ್ಯಮಂತ್ರಿ ಗಾದಿ

ಯ ಮೇಲೆ ಕಟ್ಟಿರುವ ಕಾಂಗ್ರೆಸ್ ತನ್ನದೇ ಆದ ರಣತಂತ್ರವನ್ನು ಹೂಡುತ್ತಿದೆ. ಅದರಲ್ಲಿಯೂ ಶಶಿ ತರೂರ್ ಪಕ್ಷದಿಂದ ಸಾಧ್ಯವಾದಷ್ಟು ಅಂತರ ಕಾಯ್ದುಕೊಳ್ಳುತ್ತಿರುವುದರಿಂದ, ಸಿಎಂ ಗಾದಿಯ ಮೇಲೆ ಕಣ್ಣಿಟ್ಟಿರುವ ಕೆ.ಸಿ. ವೇಣುಗೋಪಾಲ್ ಶತಾಯಗತಾಯ ಅಧಿಕಾರಕ್ಕೆ ಬರಬೇಕು ಎನ್ನುವ ಲೆಕ್ಕಾಚಾರದಲ್ಲಿದ್ದಾರೆ.

'ಇಂಡಿ' ಒಕ್ಕೂಟದಲ್ಲಿಯೇ ಇದ್ದರೂ ಸಿಪಿಎಂ ಹಾಗೂ ಕಾಂಗ್ರೆಸ್ ನಡುವಿನ ಈ ಹೋರಾಟದಲ್ಲಿ ಲಾಭ ಪಡೆಯುವ ಆಲೋಚನೆ ಬಿಜೆಪಿಯದ್ದಾಗಿದೆ. ಕೇರಳದಲ್ಲಿ ಮುಸ್ಲಿಂ ಮತಗಳು ನಿರ್ಣಾಯಕವಾಗಿರುವುದರಿಂದ ಕೆಲ ದಿನಗಳ ಹಿಂದೆ ಪಿಣರಾಯಿ ವಿಜಯನ್ ಬೆಂಗಳೂರಿನ ಕೋಗಿಲು ಲೇಔಟ್ ಅಕ್ರಮ ಮನೆಗಳ ತೆರವಿನ ವಿಷಯವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್‌ಗೆ ಡ್ಯಾಮೇಜ್ ಮಾಡಲು ಪ್ರಯತ್ನಿಸಿದರು. ಇದಾದ ಬಳಿಕ ಕೇರಳದಲ್ಲಿ 'ಮಲಯಾಳಂ' ಭಾಷೆಯ ಹೆಸರಲ್ಲಿ ಒಂದಿಷ್ಟು ಮತಗಳನ್ನು ಸೆಳೆಯುವ ನಿಟ್ಟಿನಲ್ಲಿ ಕೇರಳ ಸರಕಾರ ಮಲಯಾಳಂ ಭಾಷಾ ವಿಧೇಯಕ 2025ನ್ನು ಅನುಮೋದನೆ ಮಾಡಿ, ರಾಜ್ಯಪಾಲರಿಗೆ ರವಾನಿಸಿದೆ. ಈ ವಿಧೇಯಕ ತರುವುದರಿಂದ ಕಾಸರಗೋಡು ಭಾಗದಲ್ಲಿ ಸಿಪಿಎಂಗೆ ಹೊಡೆತ ಬೀಳುವುದು ಗೊತ್ತಿದ್ದರೂ, ಕೇರಳದ ಇತರೆ ಭಾಗದಲ್ಲಿ ಭಾಷೆಯ ಅಸ್ಮಿತೆಯನ್ನು ಮುಂದಿಟ್ಟುಕೊಂಡು ಚುನಾವಣೆಗೆ ಹೋಗುವ ಲೆಕ್ಕಾಚಾರ ಪಿಣರಾಯಿ ಅವರದ್ದಾಗಿದೆ. ಈ ವಿಧೇಯಕದಿಂದ ಕಾಸರಗೋಡು ಜಿಲ್ಲೆಯ ಮಂಜೇಶ್ವರ, ಕಾಸರಗೋಡು, ಉದ್ಮಾ, ಕಾಞ್ಞಂಗಾಡ್ ಹಾಗೂ ತ್ರಿಕ್ಕರಿಪುರ ವಿಧಾನಸಭಾ ಕ್ಷೇತ್ರದಲ್ಲಿ ಹಿನ್ನಡೆಯಾದರೂ, ಇನ್ನುಳಿದ 135 ಕ್ಷೇತ್ರದಲ್ಲಿ ಕನಿಷ್ಠ ಪ್ರಮಾಣದಲ್ಲಿ ಆದರೂ ಪ್ರಭಾವ ಬೀರಲಿದೆ ಎನ್ನುವ ಕಾರಣಕ್ಕೆ ವಿಧೇಯಕವನ್ನು ತಂದಿದ್ದಾರೆ. ಈ ವಿಧೇಯಕವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದರೆ ಏನಾಗುತ್ತದೆ ಎನ್ನುವುದಕ್ಕಿಂತ ಚುನಾವಣೆಯಲ್ಲಿ ಉತ್ತಮ 'ವಿಷಯ' ಎನ್ನುವುದು ಪಿಣರಾಯಿ ಲೆಕ್ಕಾಚಾರವಾಗಿದೆ.

ಕೋಗಿಲು ಪ್ರಕರಣದಲ್ಲಿ ಕರ್ನಾಟಕ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದ್ದ ಕೇರಳ ಸರಕಾರಕ್ಕೆ ಟಕ್ಕರ್ ಕೊಡಲು ಹಾಗೂ ಕಾಸರಗೋಡು ಕನ್ನಡಿಗರ ಮಾತೃಭಾಷೆ ರಕ್ಷಣೆಯ ಜತೆಜತೆಗೆ 'ಮತ'ಗಳನ್ನು ಸೆಳೆಯುವುದಕ್ಕೆ ಕಾಂಗ್ರೆಸ್ ಇದರ ವಿರುದ್ಧ ಧ್ವನಿ ಎತ್ತಿದೆ. ಸಂವಿಧಾನದಲ್ಲಿ ಭಾಷಾ ಅಲ್ಪಸಂಖ್ಯಾತರಿಗೆ ರಕ್ಷಣೆಯಿರುವುದರಿಂದ ನೇರವಾಗಿ ಕನ್ನಡ ಕಲಿಸುವುದಿಲ್ಲ ಎಂದು ಹೇಳಲು ಬರುವುದಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಕಾಸರಗೋಡು ಭಾಗದಲ್ಲಿ ಈಗಾಗಲೇ ಕೇರಳ ಸರಕಾರ ಹಂತಹಂತವಾಗಿ ಮಲಯಾಳಂ 'ಹೇರಿಕೆ' ಮಾಡುತ್ತಲೇ ಬಂದಿದ್ದು, ಇದರ ಮುಂದುವರಿದ ಭಾಗವೇ ಈ ವಿಧೇಯಕ ಎನ್ನುವುದು ಸ್ಪಷ್ಟ.

ಯಾವ ಕಾರಣಕ್ಕೆ ಕರ್ನಾಟಕ ಸರಕಾರ ಕೇರಳದ ನಿರ್ಧಾರದ ವಿರುದ್ಧ ಧ್ವನಿ ಎತ್ತಿತ್ತು ಎನ್ನುವುದಕ್ಕಿಂತ, ಕಾಸರಗೋಡಿನಲ್ಲಿರುವ ಕನ್ನಡಿಗರ ರಕ್ಷಣೆಗೆ ಇದು ಉತ್ತಮ ಬೆಳವಣಿಗೆ. ಆದರೆ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ನಾರಾಯಣಗೌಡ ಅವರು ಹೀಗೆನ್ನುತ್ತಾರೆ: ''ಕಾಸರಗೋಡು ಕನ್ನಡಿಗರ ರಕ್ಷಣೆ ಮಾಡುವ ಸಲುವಾಗಿ ಕೇರಳ ಸರಕಾರ ತನ್ನ ರಾಜ್ಯ ಭಾಷೆಯನ್ನು ಉಳಿಸಿಕೊಳ್ಳಲು ತಂದಿರುವ ಈ ವಿಧೇಯಕವನ್ನು ಸಾರಾಸಗಟಾಗಿ ತಿರಸ್ಕರಿಸಿದರೆ, ಮುಂದೆ ಕರ್ನಾಟಕದಲ್ಲಿ ಬಹುದೊಡ್ಡ ಸಮಸ್ಯೆಯಾಗುವ ಆತಂಕವಿದೆ. ಕೇರಳದಲ್ಲಿ ಮಲಯಾಳಂ ಕಲಿಸಿದಂತೆ, ಕರ್ನಾಟಕದಲ್ಲಿ ಕನ್ನಡ ಕಲಿಸುತ್ತೇವೆ ಎನ್ನುವ ದಿಟ್ಟ ತೀರ್ಮಾನವನ್ನು ಸರಕಾರ ಕೈಗೊಳ್ಳಬೇಕು. ಜತೆಗೆ ಆ ನಿಟ್ಟಿನಲ್ಲಿ ಕೇರಳ ಸರಕಾರ ತೆಗೆದುಕೊಂಡಿರುವ ತೀರ್ಮಾನದಂತೆ ಕರ್ನಾಟಕದಲ್ಲಿಯೂ ಕಠಿಣ ನಿಲುವು ತಳೆಯಬೇಕಾಗಿದೆ. ಇಲ್ಲದಿದ್ದರೆ, ಮುಂದೊಂದು ದಿನ ಕರ್ನಾಟಕದಲ್ಲಿ ಕನ್ನಡ ಕಲಿಯುವುದಿಲ್ಲ ಎಂದು ಇಲ್ಲಿರುವ 'ಭಾಷಾ ಅಲ್ಪಸಂಖ್ಯಾತರು' ಹೇಳಲು ಶುರುಮಾಡಿದರೆ ಕನ್ನಡ ಅಸ್ಮಿತೆಗೆ ಏನಾಗಲಿದೆ?''. ನಾರಾಯಣಗೌಡ ಅವರ ವಾದವನ್ನು ಸಾರಸಗಟಾಗಿ ತಳ್ಳಿಹಾಕುವುದಕ್ಕೂ ಸಾಧ್ಯವಿಲ್ಲ. ಆದರೆ ಕರ್ನಾಟಕದಲ್ಲಿ ಭಾಷೆಯ ವಿಷಯದಲ್ಲಿ ಈ ಪ್ರಮಾಣದಲ್ಲಿ ಗಟ್ಟಿ ನಿಲುವು ತಾಳಲು ಸಾಧ್ಯವೇ? ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಕೆಲ ಕಠಿಣ ನಿಲುವು ತೆಗೆದುಕೊಂಡರು. ಈ ಬಾರಿಯ ಅವಧಿಯಲ್ಲಿಯೂ ಶೇ.60ರಷ್ಟು ಕನ್ನಡ ನಾಮಫಲಕ, ಕನ್ನಡಿಗರಿಗೆ ಉದ್ಯೋಗ ಎನ್ನುವ ಕೆಲ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಆದರೆ ಅವುಗಳ ಅನುಷ್ಠಾನದ ಪ್ರಮಾಣ ಹೇಳಿಕೊಳ್ಳುವಷ್ಟಿಲ್ಲ. ಈ ಎಲ್ಲವನ್ನು ಮೀರಿ ತಮಿಳುನಾಡು, ಕೇರಳ ರಾಜ್ಯಗಳಂತೆ ಕರ್ನಾಟಕದಲ್ಲಿ ಬಹುಪಾಲು ಚುನಾವಣೆಗಳಲ್ಲಿ ಭಾಷೆ ಎನ್ನುವುದು ಚುನಾವಣಾ ವಿಷಯವೇ ಆಗಿಲ್ಲ. ಆದ್ದರಿಂದ ಕನ್ನಡ ಎನ್ನುವುದು ರಾಷ್ಟ್ರೀಯ ಪಕ್ಷಗಳಿಗೆ ರಾಜಕೀಯ ವಿಷಯವೇ ಆಗಿಲ್ಲ. ಕಾಂಗ್ರೆಸ್ ನಾಯಕರು ಕೇರಳ ಸರಕಾರದ ಮಲಯಾಳಂ ವಿಧೇಯಕದ ವಿರುದ್ಧ ಎತ್ತಿರುವ ಧ್ವನಿ, ಕಾಸರಗೋಡು ಭಾಗದ ಚುನಾವಣೆ ಮುಗಿಯುವ ತನಕವೋ ಅಥವಾ ಅಲ್ಲಿ ನೆಲೆಸಿರುವ ಕನ್ನಡಿಗರಿಗೆ ನಿಜಕ್ಕೂ ಮಾತೃಭಾಷೆಯಲ್ಲಿ ಶಿಕ್ಷಣ ಕೊಡಿಸುವುದಕ್ಕಾಗಿ ಎನ್ನುವ ನೈಜ ಕಾಳಜಿ ಇದೆಯೋ ಎನ್ನುವುದಕ್ಕೆ ಕಾಲವೇ ಉತ್ತರಿಸಬೇಕಿದೆ.

ಗಾರ್ಡನ್ ಸಿಟಿಯಲ್ಲ, ಸಿಲಿಕಾನ್ ಸಿಟಿಯೂ ಅಲ್ಲ.. ಕ್ರೈಂ ಸಿಟಿ!

ಬೆಂಗಳೂರಿನ ಕಾನೂನು ಮತ್ತು ಸುವ್ಯವಸ್ಥೆ ಅದೆಷ್ಟು ಕುಲಗೆಟ್ಟಿದೆ ಎಂಬುದಕ್ಕೆ ಸಾಕಷ್ಟು ಪುರಾವೆಗಳನ್ನು ಕೊಡಬಹುದು. ಆದರೆ ಇದನ್ನು ಸರಿಪಡಿಸುವ ವಿಷಯದಲ್ಲಿ ಯಾರನ್ನು ಪ್ರಶ್ನಿಸಬೇಕು? ರಕ್ಷಣೆಗೆ ಯಾರಲ್ಲಿ ಮೊರೆ ಹೋಗಬೇಕು? ಈ ಪರಿಸ್ಥಿತಿಯಲ್ಲಿ ಮನೆ ಹೊಸ್ತಿಲಿನಿಂದ ಹೊರಗೆ ಕಾಲಿಟ್ಟವರು ಸುರಕ್ಷಿತವಾಗಿ ಮನೆಗೆ ವಾಪಸ್ ಆಗುತ್ತಾರೆ ಎಂಬುದಕ್ಕೆ ಏನು ಖಾತರಿ?

ಪದಸಾಗರ

ನವೀನ್ ಸಾಗರ್

vveditoped@gmail.com

ಮೂರು ಪ್ರತ್ಯೇಕ ಘಟನೆಗಳ ಬಗ್ಗೆ ಮೊದಲು ಮಾತನಾಡ್ತೀನಿ. ಈ ಮೂರೂ ಬೆಂಗಳೂರಿನಲ್ಲೇ ನಡೆದಿರುವ ಘಟನೆಗಳು.

ಘಟನೆ 1: ಮಧ್ಯಾಹ್ನ ಮೂರು ಗಂಟೆಯ ಸಮಯ. ಮೆಜೆಸ್ಟಿಕ್‌ನಿಂದ ಮಲ್ಲೇಶ್ವರಕ್ಕೆ ಹೋಗುವ ಮಾರ್ಗ. ಸದಾ ವಾಹನಗಳಿಂದ ಮತ್ತು ಜನಸಂದಣಿಯಿಂದ ತುಂಬಿರುವ ರಸ್ತೆಯದು. ಮಂತ್ರಿ ಮಾಲ್‌ಗೆ ಕೇವಲ 150-200 ಮೀಟರ್ ದೂರವಷ್ಟೆ, ಶೇಷಾದ್ರಿಪುರಂ ಪೊಲೀಸ್ ಠಾಣೆಗೆ ಅರ್ಧ ಕಿಲೋಮೀಟರ್ ದೂರವಿದ್ದರೆ, ಮಲ್ಲೇಶ್ವರ ಪೊಲೀಸ್ ಠಾಣೆಗೆ ಒಂದೂವರೆ ಕಿಲೋಮೀಟರ್ ದೂರ. ಡಬಲ್ ರೋಡ್‌ನ ಒಂದು ರಸ್ತೆಯಲ್ಲಿ ದಿಢೀರ್ ಟ್ರಾಫಿಕ್ ಜಾಮ್ ಆಗುತ್ತದೆ. ರಸ್ತೆಯ ಇಕ್ಕೆಲದಲ್ಲೂ ರಾಶಿ ರಾಶಿ ಜನರು ಭಯಭೀತರಾಗಿ ನೋಡ್ತಿದ್ದಾರೆ. ನೋಡನೋಡುತ್ತಿದ್ದಂತೆ 18-20ರ ವಯಸ್ಸಿನ ಯುವಕನೊಬ್ಬ ಕಾಣಿಸಿಕೊಳ್ಳುತ್ತಾನೆ. ಸ್ಲಮ್‌ನಿಂದ ಎದ್ದು ಬಂದಂತೆ ಕಾಣುವ, ರೌಡಿಸಂ ಸಿನಿಮಾದ ಪುಡಿ ವಿಲನ್‌ನಂತಿರುವ ತಮಿಳನಂತೆ ಕಾಣುತ್ತಿದ್ದಾನೆ. ಮಧ್ಯಾಹ್ನದ ಬಿಸಿಲಿಗೆ ಬೆವರಿದ್ದಾನೆ, ಕೆರಳಿದ್ದಾನೆ. ಟ್ರಾಫಿಕ್ ಯಾಕೆ ಜಾಮ್ ಆಗಿದೆ ಎಂದು ನೋಡುವಷ್ಟರಲ್ಲಿ ಸುಮಾರು ಹತ್ತು ಕೆಜಿ ತೂಕದ ದಪ್ಪ ಕಲ್ಲನ್ನೆತ್ತಿ ಒಂದು ಕಾರಿನ ವಿಂಡ್‌ಶೀಲ್ಡ್ ಮೇಲೆ ಕುಕ್ಕುತ್ತಾನೆ. ಇಡೀ ನೂರು ಮೀಟರ್ ಸುತ್ತಕ್ಕೂ ಬ್ಲಾಸ್ಟ್ ಆದಂಥ ಸೌಂಡ್ ಕೇಳುತ್ತದೆ. ಜನರೆಲ್ಲ ನೋಡುತ್ತಿದ್ದಾರೆ. ಯಾರೊಬ್ಬರೂ ತಡೆಯೋಕಾಗಲೀ ವಿರೋಧಿಸುವುದಕ್ಕಾಗಲೀ ಹೋಗುತ್ತಿಲ್ಲ. ಶೂಟಿಂಗ್ ಇರಬಹುದಾ ಎಂದು ಸುತ್ತ ನೋಡಿದರೆ ಯಾವ ಕ್ಯಾಮೆರಾವೂ ಇಲ್ಲ, ಸಿನಿಮಾ ತಂಡವೂ ಅಲ್ಲಿಲ್ಲ. ಮರುಕ್ಷಣವೇ ಆ ಕಲ್ಲನ್ನೆತ್ತಿ ಮತ್ತೆರಡು ಹೆಜ್ಜೆ ಬಂದು, ಹಿಂದಿರುವ ಇನ್ನೊಂದು ಕಾರಿನ ಮುಂಬದಿ ಗಾಜನ್ನು ಅದೇ ರೀತಿ ಪುಡಿಗಟ್ಟುತ್ತಾನೆ. ಏನು ನಡೀತಾ ಇದೆ ಅಂತ ಯೋಚಿಸಲೂ ಪುರುಸೊತ್ತು ಕೊಡದಂತೆ, ಒಂದಾದ ಮೇಲೊಂದು ಕಾರ್ ಬಳಿ ಬಂದು ಕಾರೊಳಗೆ ಇರುವವರನ್ನು ಕೆಕ್ಕರಿಸಿ ಅವರ ಕಾರ್‌ಗಳ ಗಾಜನ್ನು ಒಡೆದು ರಾಜಾರೋಷದಿಂದ ಫಿಲ್ಮಿ ಸ್ಟೈಲಿನಲ್ಲಿ ನಡೆದುಹೋಗಿಬಿಡುತ್ತಾನೆ. ಕಾರ್ ಒಳಗಿದ್ದವರು ಯಾವ ಧೈರ್ಯ ಇಟ್ಟುಕೊಂಡು ಆತನನ್ನು ತಡೆಯಲು ಹೋದಾರು? ಕಾರ್ ಮೇಲೆ ಕಲ್ಲು ಎತ್ತಿ ಚಚ್ಚುವ ಆತ, ವಿರೋಧಿಸಲು ಹೊರಬಂದರೆ ತಲೆಮೇಲೆ ಕಲ್ಲೆತ್ತಿ ಹಾಕೋದಿಲ್ಲ ಅಂತ ಏನು ಗ್ಯಾರಂಟಿ? ಒಂದು ವೇಳೆ ಕಾರಲ್ಲಲ್ಲದೆ ಬೈಕಲ್ಲಿದ್ದವರ ಮೇಲೆ ಆತ ದಾಳಿ ಮಾಡಿದ್ದಿದ್ದರೆ ಅಂದು ಕನಿಷ್ಠ ಐದು ಜೀವಗಳು ಸ್ಥಳದಲ್ಲೇ ಹೋಗುತ್ತಿದ್ದವೇನೋ! ಕೆಲವರು ಜೀವ ಉಳಿದ ನಿಟ್ಟುಸಿರಲ್ಲಿ ಅಲ್ಲಿಂದ ಮೊದಲು ಕಾರ್ ಚಲಾಯಿಸಿಕೊಂಡು ಹೋದರೆ, ಕೆಲವರು ಪೊಲೀಸ್ ಠಾಣೆಗೆ ಹೋದರು. ಆದರೆ ಪೊಲೀಸ್ ಠಾಣೆಯಲ್ಲಿ ಸಿಕ್ಕಿದ್ದು ನಿರಾಶಾದಾಯಕ ಪ್ರತಿಕ್ರಿಯೆ. ಜೀವ ಉಳಿದಿದೆಯಲ್ಲ, ಹೋಗ್ರೀ ಇನ್ಶೂರೆನ್ಸ್ ಕ್ಲೈಮ್ ಮಾಡ್ಕೊಳ್ಳಿ ಎಂಬ ಉಡಾಫೆಯ ಉತ್ತರ. ಅಷ್ಟು ಮಂದಿ ರಸ್ತೆಯಲ್ಲಿ ಶೂಟಿಂಗ್ ನೋಡಿದಂತೆ ನೋಡ್ತಾ ಇದ್ದರೂ ಸಹಾಯಕ್ಕೆ ಧಾವಿಸದೇ ಇದ್ದದ್ದಕ್ಕೆ ಕಾರಣ ಏನು? ಪೊಲೀಸರ ನಿರ್ಲಕ್ಷ್ಯದ ಪ್ರತಿಕ್ರಿಯೆಗೆ ಕಾರಣ ಏನು? ಸ್ಥಳೀಯವಾಗಿ ವಿಚಾರಿಸಿದಾಗ ಗೊತ್ತಾದದ್ದೇನಂದರೆ ಆ ಹುಡುಗರು ಗಾಂಜಾ ಮತ್ತು ಡ್ರಗ್ ಮೇಲೆ ಬದುಕುತ್ತಿರುವವರು. ಸ್ಥಳೀಯರಾಗಲೀ ಜನಸಾಮಾನ್ಯರಾಗಲೀ ಅವರ ವಿರುದ್ಧ ಹೋಗಲು ಸಾಧ್ಯವೇ ಇಲ್ಲ, ಪೊಲೀಸರೇ ಇಂಥವರನ್ನು ಬೆಳೆಸಿಟ್ಟುಕೊಳ್ಳುತ್ತಿದ್ದಾರೆ. ಗಾಂಜಾ ವ್ಯವಹಾರದ ಹಿಂದೆ ಅವರಿದ್ದಾರೆ. ಆಗೊಮ್ಮೆ ಈಗೊಮ್ಮೆ ಹಿಡಿದಂತೆ ಮಾಡುವುದು, ಬಿಟ್ಟು ಕಳಿಸುವುದು, ಒಂದು ಕಡೆ ಸೀಜ್ ಮಾಡೋ ಗಾಂಜಾ, ಇನ್ನೊಂದು ಕಡೆ ತಂದು ಮಾರುವುದು ಇಂಥ ಹಲವು ದಂಧೆಗಳನ್ನು ಪೊಲೀಸರೇ ಮಾಡುತ್ತಿದ್ದಾರೆ. ರಾಜಕಾರಣಿಗಳಿಗೂ ಪೊಲೀಸರಿಗೂ ಗಾಂಜಾ ಗಿರಾಕಿಗಳಿಗೂ ನಂಟಿದೆ. ಹೀಗಾಗಿ ಅವರನ್ನು ತಡೆಯೋವ್ರೇ ಇಲ್ಲದಂತಾಗಿದೆ.

ಘಟನೆ 2: ಸಂಜೆ ಏಳು ಗಂಟೆ. ಮೆಜೆಸ್ಟಿಕ್ ಬಸ್ ಸ್ಟ್ಯಾಂಡ್‌ನಲ್ಲಿ ಬಸ್ ಹಿಡಿಯಲೆಂದು ಎಪ್ಪತ್ತೆಂಟರ ವೃದ್ಧರೊಬ್ಬರು ನಡೆದು ಹೋಗುತ್ತಿದ್ದಾರೆ. ವ್ಯಕ್ತಿಯೊಬ್ಬ ಬಂದು ವೃದ್ಧರ ಬಳಿ ನೂರು ರುಪಾಯಿ ಕೇಳುತ್ತಾನೆ. ಕೊಡುವುದಿಲ್ಲ ಎಂದಾಗ ನಿಮ್ಮನ್ನು ಆಟೋದಲ್ಲಿ ಮನೆ ತಲುಪಿಸುತ್ತೇನೆ, ನೂರು ರುಪಾಯಿ ಕೊಡಿ ಎಂದು ಆಫರ್ ಕೊಡುತ್ತಾನೆ. ಅವನನ್ನು ನೋಡಿದರೆ ಒಳ್ಳೆಯ ವ್ಯಕ್ತಿ ಅನಿಸುವ ಯಾವ ಕುರುಹೂ ಕಾಣುವುದಿಲ್ಲ. ತಪ್ಪಿಸಿಕೊಂಡು ಹೋಗ್ತಾ ಇದ್ದರೆ ಹಿಂದೆ ಬೀಳುತ್ತಾನೆ. ಲಕ್ಷಾಂತರ ಜನರಿರುವ, ಹೆಜ್ಜೆಹೆಜ್ಜೆಗೂ ಪೊಲೀಸ್ ಇರುವ ಮೆಜೆಸ್ಟಿಕ್‌ನಲ್ಲಿ ವೃದ್ಧರನ್ನು ಬೆದರಿಸಿ ನಿಲ್ಲಿಸಿಕೊಳ್ಳುತ್ತಾನೆ. ವೃದ್ಧರು ಸಹಾಯಕ್ಕಾಗಿ ಕೂಗುತ್ತಾರೆ. ಮೆಜೆಸ್ಟಿಕ್‌ನ ಸದ್ದಿನ ನಡುವೆ ಅವರ ಕೂಗಿಗೆ ಯಾರೂ ಕಿವಿಗೊಡುವುದಿಲ್ಲ. ಏಕಾಏಕಿ ಆಟೋವೊಂದು ಬರುತ್ತದೆ. ಆಟೋ ಡ್ರೈವರ್ ಮತ್ತು ಈ ಅಪರಿಚಿತ ಇಬ್ಬರೂ ಸೇರಿ ವೃದ್ಧರನ್ನು ಎಳೆದುಕೊಂಡು ಆಟೋದಲ್ಲಿ ತುಂಬುತ್ತಾರೆ. ಶರವೇಗದಲ್ಲಿ ಆಟೋ ಚಲಿಸಲಾರಂಭಿಸುತ್ತದೆ. ಕೂಗಲೂ ಆಗದಂತೆ, ತಪ್ಪಿಸಿಕೊಳ್ಳಲೂ ಸಾಧ್ಯವಾಗದಂತೆ ಹಿಡಿದುಕೊಂಡು ಮೆಜೆಸ್ಟಿಕ್ ದಾಟುತ್ತಾರೆ. ವೃದ್ಧರ ಕೈಲಿದ್ದ ಹಣ, ಮೊಬೈಲ್ ಎಲ್ಲವನ್ನೂ ಕಿತ್ತುಕೊಂಡು ದೈಹಿಕವಾಗಿ ಹಲ್ಲೆ ನಡೆಸುತ್ತಾರೆ. ಯಾವುದೋ ಒಂದು ಕ್ಷಣದಲ್ಲಿ ಜೀವ ಹೋದರೂ ಸರಿಯೆಂದು ವೃದ್ಧರು ತಮ್ಮೆಲ್ಲ ಶಕ್ತಿ ಬಳಸಿ ಆಟೋದಿಂದ ಜಿಗಿದೇ ಬಿಡುತ್ತಾರೆ. ಜಿಗಿದ ವೇಗಕ್ಕೆ ಮೈಕೈ ಗಾಯಗಳಾಗುತ್ತವೆ. ಆಟೋ ನಂಬರ್ ನೋಡಲು ಸಾಧ್ಯವಾಗುವುದಿಲ್ಲ. ಆಟೋ ಕ್ಷಣಾರ್ಧದಲ್ಲಿ ಮಾಯವಾಗುತ್ತದೆ. ಮೊಬೈಲ್ ಮತ್ತು ಹಣದೊಂದಿಗೆ.

ಘಟನೆ 3: ಕುಕ್ಕೆ ಸುಬ್ರಹ್ಮಣ್ಯದಿಂದ ನಡುರಾತ್ರಿ ಮೂರರ ಹೊತ್ತಿಗೆ ಕುಟುಂಬವೊಂದು ಬಂದು ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಇಳಿಯುತ್ತದೆ. ಆಟೋಚಾಲಕರು ಎಂದಿನಂತೆಯೇ ಬಂದು ಕುಟುಂಬವನ್ನು ಮುತ್ತುತ್ತಾರೆ. ಓಲಾ, ಊಬರ್ ಬುಕ್ ಮಾಡಲೂ ಬಿಡದಂತೆ ಕಾಡುತ್ತಾರೆ. ಅವರಲ್ಲೊಬ್ಬ 'ಓಲಾದಲ್ಲೂ ಡಬಲ್ ಮೀಟರ್‌ನಷ್ಟೇ ಆಗುತ್ತದೆ. ಡಬಲ್ ಕೊಡಿ ಸಾಕು' ಎಂದು ಹೇಳುತ್ತಾನೆ. ಆಟೋದಲ್ಲಿ ಓಡಾಡಿ ಅರಿವಿರುವ ಕುಟುಂಬದ ಯಜಮಾನನಿಗೆ ಮೆಜೆಸ್ಟಿಕ್‌ನಿಂದ ತನ್ನ ಮನೆಗೆ ಎಷ್ಟಾಗಬಹುದೆಂಬ ಅಂದಾಜಿರುತ್ತದೆ. ಸಾಮಾನ್ಯವಾಗಿ ಮೆಜೆಸ್ಟಿಕ್‌ನಿಂದ ಇವರಿರುವ ಜಾಗಕ್ಕೆ 175 ರುಪಾಯಿ ಆಗುತ್ತಿತ್ತು. ಹೀಗಾಗಿ ಡಬಲ್ ಅಂದರೂ 400 ರುಪಾಯಿ ಕೊಡಲು ಆತ ಮಾನಸಿಕವಾಗಿ ಸಿದ್ಧನಾಗಿದ್ದ. ಆದರೆ ಮೀಟರ್ ತೋರಿಸಿದ್ದು ಬರೋಬ್ಬರಿ 333 ರುಪಾಯಿ. ಚಾಲಕ 670 ರುಪಾಯಿ ಡಿಮ್ಯಾಂಡ್ ಮಾಡಲಾರಂಭಿಸುತ್ತಾನೆ. ಪ್ರಶ್ನಿಸಿದರೆ ತಿರುಗಿ ಬೀಳಲಾರಂಭಿಸಿದ ಅವನ ವರ್ತನೆಗೆ ಹೆದರಿ, ಹೆಂಡತಿ ಮಕ್ಕಳೆದುರು ಈ ನಡುರಾತ್ರಿಯಲ್ಲಿ ಜಗಳ ಬೇಡವೆಂದು ನಾಲ್ಕು ಪಟ್ಟು ಹಣ ಕೊಡಲು ಒಪ್ಪುತ್ತಾನೆ. ಡಿಜಿಟಲ್ ಪೇಮೆಂಟ್‌ಗೆ ಒಪ್ಪದೇ ನಗದು ಹಣಕ್ಕೆ ಒತ್ತಡ ಹೇರುತ್ತಾನೆ ಆಟೋ ಚಾಲಕ. ಹಣ ತೆಗೆದು ಎಣಿಸಿಕೊಡಲು ಟಾರ್ಚ್‌ಲೈಟ್ ಆನ್ ಮಾಡಿದರೆ, ಆಟೋದ ಗ್ಯಾಸ್ ಬರ್ಸ್ಟ್ ಆಗುತ್ತದೆ ಎಂದು ಗದರಿ ಟಾರ್ಚ್ ಆಫ್ ಮಾಡಿಸುತ್ತಾನೆ. ಹೇಳಿದಷ್ಟು ಹಣ ಕೊಟ್ಟ ನಂತರವೂ ಅವನ ಸುಲಿಗೆ ನಿಲ್ಲುವುದಿಲ್ಲ. 'ನೀನು ಕೊಟ್ಟದ್ದು ಇನ್ನೂರೇ ರುಪಾಯಿ' ಎಂದು ಸುಳ್ಳು ಹೇಳಿ ಬೆದರಿಸುತ್ತಾನೆ. ಆಟೋ ನಂಬರ್ ನೋಟ್ ಮಾಡಿಕೊಳ್ಳಲು ಹೋದರೆ ಅವರೆದುರು ಅಶ್ಲೀಲವಾಗಿ ಕುಣಿದು, ವಿಚಿತ್ರವಾಗಿ ವರ್ತಿಸಿ ಭಯಮೂಡಿಸುತ್ತಾನೆ. ನಿರ್ಜನ ರಸ್ತೆಯಲ್ಲಿ ನಡುರಾತ್ರಿಯಲ್ಲಿ ಜೀವಕ್ಕೇನಾದರೂ ಅಪಾಯ ಉಂಟುಮಾಡಿದರೆ ಎಂದು ಹೆದರಿ ಅವನು ಕೇಳಿದಷ್ಟು ಹಣ ಕೊಟ್ಟು ಕುಟುಂಬ ಪ್ರಾಣ ಕೈಲಿ ಹಿಡಿದುಕೊಂಡು ಮನೆ ಸೇರಿಕೊಳ್ಳುತ್ತದೆ.

ಈ ಮೂರು ಘಟನೆಗಳು ನನ್ನ ಸುತ್ತ ನಡೆದಿರುವ ಘಟನೆಗಳಾದ್ದರಿಂದ ಉದಾಹರಣೆಯಾಗಿ ತೆಗೆದುಕೊಂಡಿದ್ದೇನೆ. ಬೆಂಗಳೂರಿನ 'ಲಾ ಆ್ಯಂಡ್ ಆರ್ಡರ್' ಯಾವ ಹಂತಕ್ಕೆ ಕುಲಗೆಟ್ಟಿದೆ ಎಂಬುದಕ್ಕೆ ಇನ್ನೇನಾದರೂ ಪುರಾವೆಗಳು ಬೇಕೇ? ಯಾರನ್ನು ಪ್ರಶ್ನಿಸಬೇಕು? ಯಾರಲ್ಲಿ ರಕ್ಷಣೆಗೆ ಮೊರೆ ಹೋಗಬೇಕು? ಈ ಪರಿಸ್ಥಿತಿಯಲ್ಲಿ ಮನೆ ಹೊಸ್ತಿಲಿನಿಂದ ಹೊರಗೆ ಕಾಲಿಟ್ಟವರು ಸುರಕ್ಷಿತವಾಗಿ ಮನೆಗೆ ವಾಪಸ್ ಆಗುತ್ತಾರೆ ಎಂಬುದಕ್ಕೆ ಏನು ಖಾತರಿ?

ರಾಜಕೀಯವನ್ನು ಬದಿಗಿಟ್ಟೇ ನೋಡುವುದಾದರೂ ನಾವು ಪ್ರಶ್ನಿಸಬೇಕಿರುವುದು ಗೃಹಮಂತ್ರಿಯನ್ನೇ. ಪೊಲೀಸ್ ಇಲಾಖೆ ಇರುವುದು ಅವರದ್ದೇ ಸುಪರ್ದಿಯಲ್ಲಿ. ಆದರೆ ಹೋಮ್ ಮಿನಿಸ್ಟರ್ ನಿಜಕ್ಕೂ ಸಮರ್ಥರಿದ್ದಾರಾ? ಕಳೆದ ಮೂರು ವರ್ಷದಲ್ಲಿ ಇವರು ಹೋಮ್ ಮಿನಿಸ್ಟರೋ ಅಥವಾ ವರ್ಕ್ ಫ್ರಮ್ ಹೋಮ್ ಮಿನಿಸ್ಟರೋ ಎಂಬ ಅನು

(ಸಾಂದರ್ಭಿಕ ಚಿತ್ರ)

ಮಾನ ಮೂಡುತ್ತಿದೆ. ಗೃಹಮಂತ್ರಿ ಅಂದ್ರೆ ಮನೆಯೊಳಗೆ ಕೂತಿರುವ ಮಂತ್ರಿ ಅಂತೇನಾದರೂ ತಪ್ಪು ತಿಳಿದಿದ್ದಾರಾ? ವ್ಯಕ್ತಿಯಾಗಿ ಅತ್ಯಂತ ಘನತೆ ಉಳ್ಳವರಾಗಿರುವ ಪರಮೇಶ್ವರ್ ಗೃಹಮಂತ್ರಿಯಾಗಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ರಾಜ್ಯದಲ್ಲಿ ನಡೆಯುವ ಯಾವುದೇ ಕ್ರೈಂ ಅಥವಾ ಗಲಭೆ-ಗದ್ದಲಗಳ ಕುರಿತು ಕೇಳಿದರೆ ಅವರಿಂದ ಬರುವ ರೆಡಿಮೇಡ್ ಉತ್ತರ ಒಂದೇ- 'ಗೊತ್ತಿಲ್ಲ.. ಮಾಹಿತಿ ಇಲ್ಲ'! ಕಳೆದ ಸರಕಾರದ ಅವಧಿಯಲ್ಲೂ ನಾವು ನಿಷ್ಕ್ರಿಯ, ಅಸಮರ್ಥ ಅನಿಸುವ ಗೃಹಸಚಿವರನ್ನು ಕಂಡಿದ್ದೇವೆ. ಪ್ರತಿ ಕ್ರೈಮ್ ಅಥವಾ ಗಲಭೆ ಸಮಯದಲ್ಲೂ ಕಠಿಣ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳುತ್ತಿದ್ದ ಮಂತ್ರಿಗಳ ವರಸೆ ಸಾಕಷ್ಟು ಟ್ರೋಲ್‌ಗೆ ಗುರಿಯಾಗಿತ್ತು. ಆದರೆ ಪರಮೇಶ್ವರ್ ಗೃಹಖಾತೆಯನ್ನು ನಿಷ್ಕ್ರಿಯತೆಯ ಪಾತಾಳಕ್ಕೆ ಕರೆದೊಯ್ದಿದ್ದಾರೆ. ಪೊಲೀಸರು ರಕ್ಷಣೆ ಕೊಡುವಲ್ಲಿ ಅಸಮರ್ಥರಾಗಿದ್ದಾರೆ, ಶಿಕ್ಷಿಸುವ ಕೈಗಳನ್ನು ಕಳೆದುಕೊಂಡಿದ್ದಾರೆ. ಇನ್ನೂ ಬೇಸರವೆಂದರೆ ಪೊಲೀಸರ ಜೀವಕ್ಕೆ ಮಾನಕ್ಕೆ ಇಲ್ಲಿ ಭದ್ರತೆ ಇಲ್ಲದಂತಾಗಿದೆ. ಇದು ದುಸ್ಥಿತಿಯ ಪರಮಾವಧಿ ಅಲ್ಲದೇ ಇನ್ನೇನು? ಹುಬ್ಬಳ್ಳಿಯ ಮಹಿಳೆಯನ್ನು ವಿವಸ್ತ್ರಗೊಳಿಸಿದ ಪ್ರಕರಣದಲ್ಲಿ ತಕ್ಷಣ ಕಾರ್ಯಪ್ರವೃತ್ತರಾಗಬೇಕಿದ್ದುದು ಗೃಹಮಂತ್ರಿ. ಆದರೆ ಗೃಹಮಂತ್ರಿ ಈ ಬಗ್ಗೆ ಮಾಹಿತಿಯೇ ಇಲ್ಲದಂತೆ ವರ್ತಿಸುತ್ತಾರೆ. ಗೃಹಮಂತ್ರಿಯನ್ನು ಓವರ್‌ಟೇಕ್ ಮಾಡಿ ಡಿಸಿಎಂ ಪ್ರಕರಣಕ್ಕೆ ತೇಪೆ ಹಚ್ಚಲು ಹೋಗುತ್ತಾರೆ.

2023ರಿಂದ ಇಂದಿನ ತನಕ ನಡೆದ ಪ್ರತಿ ಪ್ರಕರಣದಲ್ಲೂ ಗೃಹಮಂತ್ರಿಗಳದ್ದು ಒಂದೇ ಪ್ರತಿಕ್ರಿಯೆ- 'ಗೊತ್ತಿಲ್ಲ, ಮಾಹಿತಿ ಇಲ್ಲ, ಅಂಥದ್ದೇನೂ ನಡೆದೇ ಇಲ್ಲ' ಎಂದು. ಇನ್ನೂ ಗಮನಿಸಬೇಕಾದ ಅಂಶ ಅಂದರೆ, ಮುಖ್ಯಮಂತ್ರಿಗಳ ಹಾಗೂ ಉಪಮುಖ್ಯಮಂತ್ರಿಗಳ ಹೇಳಿಕೆ ಹೊರಬರುವ ತನಕ ಗೃಹಮಂತ್ರಿಗಳು ಬಾಯಿ ತೆರೆಯುವುದೇ ಇಲ್ಲ. ಆನಂತರ ಅವರ ಹೇಳಿಕೆಯನ್ನೇ ಪುನರುಚ್ಚರಿಸುತ್ತಾರೆ. ಏನಿದರ ಅರ್ಥ? ಗೃಹಖಾತೆ ಸ್ವಾತಂತ್ರ್ಯ ಕಳೆದುಕೊಂಡಿದೆಯೇ? ಪರಮೇಶ್ವರ್ ರಬ್ಬರ್ ಸ್ಟ್ಯಾಂಪ್ ಆಗಿದ್ದಾರೆಯೇ?

ಹುಬ್ಬಳ್ಳಿಯ ನೇಹಾ ಹಿರೇಮಠ್ ಹತ್ಯೆ ಪ್ರಕರಣದಿಂದ ಇತ್ತೀಚಿನ ಅಪ್ರಾಪ್ತೆ ಮೇಲಿನ ಅತ್ಯಾಚಾರ ಪ್ರಕರಣದ ತನಕ ಯಾವ ಪ್ರಕರಣಕ್ಕೂ ತಾರ್ಕಿಕ ಅಂತ್ಯಗಳು ಸಿಗುತ್ತಿಲ್ಲ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಿಲ್ಲ, ಕಣ್ಮುಂದೆ ನಡೆದ ಹತ್ಯೆಗಳಿಗೂ ನ್ಯಾಯ ಸಿಗುತ್ತಿಲ್ಲವೆಂದರೆ ಇದರ ಹೊಣೆಗಾರಿಕೆ ಯಾರದ್ದು? ಕಲಬುರಗಿಯ ಟ್ರಿಪಲ್ ಮರ್ಡರ್, ದರ್ಶನ್ ಗ್ಯಾಂಗ್‌ನಿಂದ ರೇಣುಕಾಸ್ವಾಮಿ ಹತ್ಯೆ ಪ್ರಕರಣ, ಕೋಲಾರದ ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷನ ಹತ್ಯೆ, ಅಸೆಂಚರ್ ಉದ್ಯೋಗಿಯ ಹತ್ಯೆ, ನಿವೃತ್ತ ಐಪಿಎಸ್ ಆಫೀಸರ್ ಓಂಪ್ರಕಾಶ್ ಹತ್ಯೆ, ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣ, ಪಟ್ಟಿ ಮಾಡುತ್ತಾ ಹೋದರೆ ಮುಗಿಯಲಿಕ್ಕಿಲ್ಲ. ಇವೆಲ್ಲವೂ ಪತ್ರಿಕೆಯಲ್ಲಿ ಸುದ್ದಿಯಾಗಿ ಹೆಡ್ ಲೈನ್‌ಗಳಲ್ಲಿ ಮೆರೆದ ಪ್ರಕರಣಗಳು. ಸುದ್ದಿಯೇ ಆಗದೇ ಪೊಲೀಸ್ ಪುಸ್ತಕಗಳಲ್ಲಿ ದಾಖಲಾಗುತ್ತಿರುವ, ದಾಖಲೂ ಆಗದೇ ಹೋಗಿರುವ ಪ್ರಕರಣಗಳ ಸಂಖ್ಯೆ ಇನ್ನೆಷ್ಟಿರಬಹುದು?

ಸರಕಾರ ಕೊಡೋ ಅಂಕಿ-ಅಂಶಗಳ ಪ್ರಕಾರ ರಾಜ್ಯದಲ್ಲಿ ಕ್ರೈಂ ರೇಟ್ ಕಡಿಮೆಯಾಗಿದೆಯಂತೆ. 2023ರಲ್ಲಿ 1293 ಹತ್ಯೆಗಳಾಗಿದ್ದವು; ಈ ವರ್ಷ ಅದು 1,131ಕ್ಕೆ ಇಳಿದಿದೆ. ಅತ್ಯಾಚಾರ ಪ್ರಕರಣಗಳು 632ರಿಂದ 517ಕ್ಕೆ ಇಳಿದಿದೆ ಎಂದು ಗೃಹ ಇಲಾಖೆ ಬೆನ್ನು ತಟ್ಟಿಕೊಳ್ಳುತ್ತಿದೆ. ವರ್ಷಕ್ಕೆ ಐನೂರಕ್ಕೂ ಹೆಚ್ಚು ಅತ್ಯಾಚಾರ, ಸಾವಿರಕ್ಕೂ ಹೆಚ್ಚು ಕೊಲೆಗಳು ನಡೆಯುತ್ತಿದೆ ಎಂಬುದು ನಾಚಿಕೆಗೇಡಿನ ಸಂಗತಿ ಅಲ್ಲವೇ? ಬೆಂಗಳೂರು ಸೈಬರ್ ಅಪರಾಧಗಳ ಹಬ್ ಆಗಿ ಜಗತ್ತಿನಲ್ಲಿ ಗುರುತಿಸಿಕೊಳ್ಳುವಂತಾಗಿದೆ. ದಿನ ಬೆಳಗಾದರೆ ಬೆಂಗಳೂರಿನಲ್ಲಿ ನೂರಾರು ಸೈಬರ್ ವಂಚನೆಗಳು ನಡೆಯುತ್ತಿವೆ. ಹಣ ಕಳೆದುಕೊಂಡವರಿಗೆ ಹಣ ಸಿಗುತ್ತಿಲ್ಲ. ಬ್ಲ್ಯಾಕ್‌ಮೇಲ್‌ಗೆ ಒಳಗಾಗುತ್ತಿರುವವರಿಗೆ ನ್ಯಾಯ-ಅಭಯ ಸಿಗುತ್ತಿಲ್ಲ. ಇದರಿಂದಾಗಿ ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿವೆ. ಕೇವಲ ಬೆಂಗಳೂರಿನ ಕಥೆಯೇ ಹೀಗಾದರೆ, ಕರ್ನಾಟಕದ ಇತರ ಭಾಗಗಳ ಕಥೆ ಏನು? ಬೆಂಗಳೂರಿನಲ್ಲಿ ನಡೆದ ಕ್ರೈಮ್‌ಗಳ ಬಗ್ಗೆಯೇ ಗೃಹಸಚಿವರಿಗೆ ಮಾಹಿತಿ ಇರುವುದಿಲ್ಲ ಅಂದರೆ ರಾಜ್ಯದ ಇತರ ಭಾಗಗಳಲ್ಲಿ ನಡೆಯುವ ಕ್ರೈಮ್‌ಗಳ ಮಾಹಿತಿ ಹೇಗಿದ್ದೀತು? ಇನ್ಯಾವ ಖಾತೆ ಇನ್ಯಾವ ಮಂತ್ರಿ ನಿಷ್ಕ್ರಿಯರಾಗಿ ಅಸಮರ್ಥರಾಗಿ ಇದ್ದರೂ ನಡೆದೀತು. ಗೃಹ ಇಲಾಖೆ ನಿರ್ವೀರ್ಯವಾದರೆ ರಾಜ್ಯ ನೆಮ್ಮದಿ ಕಳೆದುಕೊಳ್ಳುತ್ತದೆ. ಪ್ರಜೆಗಳು ಸುಖನಿದ್ರೆ ಮಾಡದಂತಾಗುತ್ತದೆ. ಜೀವ ಕೈಲಿ ಹಿಡಿದುಕೊಂಡು ಬದುಕುವಂತಾಗುತ್ತದೆ. ಸಾಫ್ಟ್ ಆಗಿ ವರ್ತಿಸಬೇಕಿರುವ ಮಂತ್ರಿಗಳು ಇಲ್ಲಿ ವೈಲ್ಡ್ ಆಗಿ ವರ್ತಿಸುತ್ತಿದ್ದಾರೆ. ಟಫ್ ಆಗಿ ಇರಬೇಕಿರುವ ಗೃಹಮಂತ್ರಿ ಮೆದುವಾಗಿಬಿಟ್ಟಿದ್ದಾರೆ. ಇದು ರಾಜ್ಯದ ಸುರಕ್ಷತೆಗೆ ಒಳ್ಳೆಯದಲ್ಲ. ಇನ್ನಾದರೂ ಪರಮೇಶ್ವರ್ ಗೃಹಖಾತೆಗೆ ತಕ್ಕುದಾಗಿ ವರ್ತಿಸಲಿ. ರಸ್ತೆಗಳಲ್ಲಿ ಹಗಲು ಹೊತ್ತೇ ಲಾಂಗು-ಮಚ್ಚು ಮಿಂಚುತ್ತಿವೆ. ರಸ್ತೆಗಳಲ್ಲಿ ವೀಲಿಂಗ್ ಹಾವಳಿ ಮಿತಿಮೀರಿದೆ. ಡ್ರಗ್, ಗಾಂಜಾ ವ್ಯವಹಾರ ಮತ್ತು ಸೇವನೆ ಎಗ್ಗಿಲ್ಲದೆ ಸಾಗುತ್ತಿದೆ. ಚಿಕ್ಕಪುಟ್ಟ ಹಣಕ್ಕಾಗಿ ಡಕಾಯತಿ ಮರ್ಡರ್, ಹಾಫ್ ಮರ್ಡರ್‌ಗಳಾಗುತ್ತಿವೆ. ಆಟೋಚಾಲಕರ ವೇಷದಲ್ಲಿ ದರೋಡೆಕೋರರು ಸೃಷ್ಟಿಯಾಗಿದ್ದಾರೆ. ಇನ್ನಾದರೂ ಗೃಹಮಂತ್ರಿಗಳು ಮೈಚಳಿ ಬಿಟ್ಟು ಹೊರಬಂದು ಖದರ್ ತೋರಲಿ.

ಭಟ್ಟರ್ ಸ್ಕಾಚ್

- **ಶ್ಯಾಮ ಭಟ್ಟ, ಸಕ್ಕರೆಬೈಲು**
ಭಟ್ರೇ, ಸಕ್ಕರೆ ರೋಗದ ಜತೆಗೆ ಬಿಪಿ ಕೂಡ ಇರೋದು ಸರಕಾರಕ್ಕೆ ಗೊತ್ತಾದರೆ ಪರ್ಮನೆಂಟ್ ವರ್ಗಾವಣೆ ವೇಳೆ ನನ್ನನ್ನು ಎಲ್ಲಿ ಹೊತ್ತಾಕಬಹುದು?
– **ಉಪ್ಪಿನಂಗಡಿ!**

- **ರಾಘಣ್ಣ, ಮೈಸೂರು**
ಭಟ್ರೇ, ನವಬೃಂದಾವನ ನಡುಗಡ್ಡೆ ನೀರಿನ ವಿವಾದ ಇನ್ನು ಮುಂದೆ?
– **ನಿಂತ ನೀರಲ್ಲ!**

- **ಸುದರ್ಶನ ಪಡುಬಿದ್ರೆ, ಪಡುಬಿದ್ರೆ**
ಭಟ್ರೇ, ತಾಳಮದ್ದಳೆ ಅರ್ಥಧಾರಿಗಳ ವಿಷಯದಲ್ಲಿ ನಿಮ್ಮ ಮಾತನ್ನು ನೀವೇ ನುಂಗುವ ಪರಿಸ್ಥಿತಿ ಬರಬಹುದಾ?
– **ಅದೇ ವಾಸಿ, ಆದರೆ ಕೆಲವು ಅರ್ಥಧಾರಿಗಳು ತಮ್ಮ ಹಲ್ಲುಸೆಟ್ ಅನ್ನು ತಾವೇ ನುಂಗುವ ಸ್ಥಿತಿ ಬರಬಾರದಷ್ಟೇ!**

- **ರಾಜೇಶ ಶೆಣೈ, ಬ್ರಹ್ಮಾವರ**
ಭಟ್ರೇ, ನಿಜವಾದ ಅರ್ಥಧಾರಿಗಳು ಯಾರು?
– **ಪ್ರೌಢಿಮೆಯಿದ್ದೂ ವಿನಯವಂತರಾಗಿರುವವರು ಮತ್ತು ತಮ್ಮ ಬಗೆಗಿನ ತಿಳಿಹಾಸ್ಯ, ಟೀಕೆಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸುವವರು!**

- **ಎಂ.ಗಜಾನನ ಜೋಶಿ, ಹೊನ್ನಾವರ**
ಭಟ್ರೇ, ಒಂದು ಸಣ್ಣ ವಿಷಯವನ್ನೇ ಒಂದು ಗಂಟೆ ಕೊರೆಯುತ್ತಾನಲ್ಲ?
– **ಪಾರ್ಟ್-ಟೈಮ್ ಅರ್ಥಧಾರಿ ಇದ್ದಿರಬಹುದಾ?!**

- **ಗಣೇಶ ಭಟ್, ಮೂಡುಬಿದಿರೆ**
ಭಟ್ರೇ, ಡಾ.ಪ್ರಭಾಕರ ಜೋಶಿ ಅವರ ವಿದ್ವತ್ತಿನ ಪರಿಚಯ ನಿಮಗೆ ಇಲ್ಲ ಎಂದು ಇಲ್ಲೊಬ್ಬ ವಾದಿಸುತ್ತಾನಲ್ಲ?
– **ವಿದ್ವತ್ತಿನ ಪರಿಚಯ ಇತ್ತು, ತಿಕ್ಕಲುತನದ ಪರಿಚಯ ಆಯ್ತು!**

- **ರಾಮಣ್ಣ, ಉಡುಪಿ**
ಭಟ್ರೇ, ಕೆಲವರು ನಿಮ್ಮ ವಿರುದ್ಧ ಪತ್ರಿಕಾಗೋಷ್ಠಿ ಕರೆದು ಮಾತಾಡುತ್ತಾರಂತಲ್ಲ?
– **ಭಟ್ಟರ ಸ್ಕಾಚ್‌ಗೇ ಅವರಿಗೆ ಇಷ್ಟು ನಶೆ ಏರಿದರೆ, ಮುಂದೇನೋ..?!**

- **ರಾಮಕುಮಾರ ಹೆಜ್ಜಾಲ, (ಇಮೇಲ್ ಮೂಲಕ)**
ಭಟ್ರೇ, ತಾಳಮದ್ದಳೆ ಪ್ರಕರಣ ಯಾವಾಗ ಮುಗಿಯುತ್ತೆ?
– **ನನ್ನ ದೃಷ್ಟಿಯಲ್ಲಿ ಎಂದೋ ಮುಗಿದುಹೋಗಿದೆ.. ಮಳೆ ನಿಂತರೂ ಹನಿ ನಿಂತಿಲ್ಲ ಅಂತಾರಲ್ಲ..!**

- **ವೀಣಾ ಭಟ್, ಕುಂದಾಪುರ**
ಭಟ್ರೇ, ಇಡೀ ರಾತ್ರಿ ನಿದ್ದೆಗೆಟ್ಟು ತಾಳಮದ್ದಳೆ ನೋಡಲು ಬಂದ ಪ್ರೇಕ್ಷಕರಿಗೆ ಅರ್ಥಧಾರಿಗಳು ಕೊಡುವ ಅತ್ಯಂತ ದೊಡ್ಡ ಕೊಡುಗೆ?
– **ಮಹಾಭಾರತದ ಯುದ್ಧವನ್ನೇ ಮರೆಸಿ, ಕೇವಲ ಒಂದು ಶಬ್ದದ ಅರ್ಥಕ್ಕಾಗಿ ಸೂರ್ಯೋದಯದವರೆಗೆ ವಾದ ಮಾಡಿ ತಲೆ ತಿನ್ನುವುದು!**

ಇರಾನಿನಲ್ಲಿ ಏನಾಗುತ್ತಿದೆ? ಏಕಾಗುತ್ತಿದೆ?

ಇರಾನಿನಲ್ಲಿ ಶುರುವಾಗಿರುವ ಈ ಆಂತರಿಕ ಗಲಭೆಗೆ ಒಂದಲ್ಲ ಹತ್ತಾರು ಕಾರಣಗಳಿವೆ. ಇವೆಲ್ಲವೂ ಒಂದು ದಿನದಲ್ಲಿ ಸೃಷ್ಟಿಯಾದದ್ದಲ್ಲ. ಹಲವಾರು ವರ್ಷಗಳಿಂದ ನಿಧಾನವಾಗಿ ಆ ಸಮಾಜವನ್ನು ಈ ಕಾರಣಗಳು ಗೆದ್ದಲಿನಂತೆ ಒಳಗೇ ತಿನ್ನುತ್ತ ಬಂದಿವೆ. ಇವತ್ತಿಗೆ ಅದು ಸ್ಫೋಟಗೊಂಡು ಜಗಜ್ಜಾಹೀರಾಗಿದೆ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಇರಾನ್ ಹೊತ್ತಿ ಉರಿಯುತ್ತಿದೆ. ಈ ಸಾಲುಗಳನ್ನು ಬರೆಯುವಾಗ 44 ಜನ ಅಲ್ಲಿನ ಗಲಭೆಯಲ್ಲಿ ಸತ್ತಿದ್ದಾರೆ ಎನ್ನಲಾಗಿದೆ. ಈ ಸಂಖ್ಯೆ ಶುದ್ಧ ಸುಳ್ಳು ಎನ್ನುವುದು ನಮಗೆಲ್ಲಾ ಗೊತ್ತು. ಈ ರೀತಿಯ ಗಲಭೆಗಳು ನಡೆದಾಗ ನಿಖರವಾಗಿ ಎಷ್ಟು ಜನ ಸತ್ತರು ಎನ್ನುವುದು ಜಗತ್ತಿಗೆ ಗೊತ್ತಾಗಲು ಹಲವಾರು ವರ್ಷಗಳು ಬೇಕಾಗುತ್ತವೆ. ಇರಾನ್ ಶಾಂತವಾಗೇ ಇತ್ತಲ್ಲ? ಅದೇನಾಯ್ತು? ಏಕೆ ಈ ರೀತಿಯ ಗಲಭೆ ಶುರುವಾಗಿದೆ? ಒಟ್ಟಾರೆ ಇರಾನಿನಲ್ಲಿ ಅದೇನೋ ಗಲಾಟೆ ಆಗುತ್ತಿದೆ ಎನ್ನುವುದು ಚೂರುಪಾರು ಕಿವಿಗೆ ಬಿದ್ದಿರುತ್ತದೆ. ನಿಜವಾಗಿ ಏನಾಗುತ್ತಿದೆ ಎನ್ನುವ ಪ್ರಶ್ನೆ ಉದ್ಭವವಾಗುವುದು ಸಹಜ. ಬನ್ನಿ ಇರಾನಿನಲ್ಲಿ ಏನಾಗುತ್ತಿದೆ ಎನ್ನುವುದನ್ನು ಸ್ವಲ್ಪ ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಮಾಡೋಣ.

ನಿಮಗೆಲ್ಲಾ ಗೊತ್ತಿರಲಿ, ಇರಾನಿನಲ್ಲೋ, ಮತ್ತೆಲ್ಲೋ ಗಲಾಟೆಯಾದರೆ ನಮಗೇನು? ಎನ್ನುವ ಕಾಲಘಟ್ಟದಲ್ಲಿ ನಾವಿಲ್ಲ, ನಾವೆಷ್ಟೇ ಕಟ್ಟಾಡಿಕೊಂಡರೂ ಜಗತ್ತು ಇಂದು ಹಿಂದೆಂದಿಗಿಂತ ಹೆಚ್ಚು ಅವಲಂಬಿತವಾಗಿದೆ. ರಷ್ಯಾದ ಜತೆಜತೆಗೆ ನಾವು ಇರಾನಿನಿಂದ ಕೂಡ ಸಾಕಷ್ಟು ತೈಲವನ್ನು ಖರೀದಿಸುತ್ತಿದ್ದೇವೆ. ಹೀಗಾಗಿ ಇರಾನಿನಲ್ಲಿ ಆಗುತ್ತಿರುವ ಗಲಭೆಯ ಪರಿಣಾಮವು ಭಾರತಕ್ಕೂ ಒಂದಷ್ಟು ತಟ್ಟುವ ಸಾಧ್ಯತೆಗಳನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಇರಾನಿನಲ್ಲಿ ಶುರುವಾಗಿರುವ ಈ ಆಂತರಿಕ ಗಲಭೆಗೆ ಒಂದಲ್ಲ ಹತ್ತಾರು ಕಾರಣಗಳಿವೆ. ಇವೆಲ್ಲವೂ ಒಂದು ದಿನದಲ್ಲಿ ಸೃಷ್ಟಿಯಾದದ್ದಲ್ಲ. ಹಲವಾರು ವರ್ಷಗಳಿಂದ ನಿಧಾನವಾಗಿ ಆ ಸಮಾಜವನ್ನು ಈ ಕಾರಣಗಳು ಗೆದ್ದಲಿನಂತೆ ಒಳಗೇ ತಿನ್ನುತ್ತ ಬಂದಿವೆ. ಇವತ್ತಿಗೆ ಅದು ಸ್ಫೋಟಗೊಂಡು ಜಗಜ್ಜಾಹೀರಾಗಿದೆ. ಈ ರೀತಿಯ ಸ್ಫೋಟಕ್ಕೆ ತುರ್ತು ಕಾರಣವೇನು ಗೊತ್ತೇ? ಅದು ಆರ್ಥಿಕ ಕುಸಿತ. ಜಗತ್ತಿನ ಯಾವುದೇ ದೇಶವಿರಲಿ ಆರ್ಥಿಕತೆ ಕುಸಿತವಾದರೆ ಅಲ್ಲಿನ ಸಮಾಜ ಬೀದಿಗೆ ಇಳಿಯುವುದು ಅನಿವಾರ್ಯವಾಗುತ್ತದೆ. ಬೇರೆಲ್ಲಾ ಅಂಶಗಳನ್ನು ಹೇಗೋ ಸಹಿಸಿಕೊಳ್ಳುವ ಜನರು, ಆರ್ಥಿಕ ಕುಸಿತವನ್ನು ತಡೆದುಕೊಳ್ಳಲಾರರು.

ಒಂದು ವರ್ಷದಲ್ಲಿ ಹಣದುಬ್ಬರವು ಇರಾನಿನ ಜನತೆಯನ್ನು ಹೈರಾಣು ಮಾಡಿಬಿಟ್ಟಿದೆ. ಡೈರಿ ಪದಾರ್ಥಗಳು ಒಂದು ರುಪಾಯಿ ಇದ್ದದ್ದು ಎಂಟು ರುಪಾಯಿಯಾಗಿದೆ. ಇತರೆ ಪದಾರ್ಥಗಳು ಒಂದು ರುಪಾಯಿ ಇದ್ದದ್ದು ಹತ್ತು ರುಪಾಯಿಯಾಗಿದೆ. ಸಾಮಾನ್ಯ ಜನತೆ ಕುಸಿಯುತ್ತಿರುವ ತಮ್ಮ ಹಣದ ಮೌಲ್ಯವನ್ನು ತಡೆದುಕೊಳ್ಳಲು ಆಗದೆ ಬೀದಿಗೆ ಇಳಿದಿದ್ದಾರೆ. ಡಾಲರ್ ಮತ್ತು ರಿಯಾಲ್ ವಿನಿಮಯ ದರ ಮೇಲ್ನೋಟಕ್ಕೆ ಹೆಚ್ಚಿನ ಏರುಪೇರಾಗಿದ್ದಂತೆ ಕಾಣುವುದಿಲ್ಲ, ಅಂದರೆ ಸರಕಾರದ ವಿನಿಮಯ ದರಪಟ್ಟಿಯಲ್ಲಿ ಒಂದು ಅಮೆರಿಕನ್ ಡಾಲರಿಗೆ 42 ಸಾವಿರ ರಿಯಾಲ್ ಎನ್ನುವುದನ್ನು ನಾವು ಕಾಣಬಹುದು. ಆದರೆ ಫ್ರೀ ಮಾರ್ಕೆಟ್‌ನಲ್ಲಿ ಅಂದರೆ ಅನಧಿಕೃತ ಮಾರುಕಟ್ಟೆಯಲ್ಲಿ ಒಂದು ಡಾಲರಿಗೆ ಒಂದು ಲಕ್ಷ ನಲವತ್ತು ಸಾವಿರ ರಿಯಾಲ್ ಎನ್ನುವುದನ್ನು ಅಂಕಿ-ಅಂಶಗಳು ಹೇಳುತ್ತಿವೆ. ಗಮನಿಸಿ, ಯಾವಾಗ ಒಂದು ದೇಶದ ಜನ ತಮ್ಮ ಕರೆನ್ಸಿಯಲ್ಲಿ ನಂಬಿಕೆಯನ್ನು ಕಳೆದುಕೊಳ್ಳುತ್ತಾರೋ, ಆಗ ಅವರು ಜಾಗತಿಕ ಕರೆನ್ಸಿಯಾಗಿ ಕೆಲಸ ಮಾಡುತ್ತಿರುವ ಡಾಲರ್‌ನ ಸಂಗ್ರಹಣೆಗೆ ಮುಗಿಬೀಳುತ್ತಾರೆ. ಡಾಲರಿನ ಬೇಡಿಕೆ ಹೆಚ್ಚಾಗುತ್ತಾ ಹೋದಂತೆ ಅದನ್ನು ಕೊಳ್ಳುವ ತವಕ ಜನರಲ್ಲಿ ಹೆಚ್ಚಾಗುತ್ತಾ ಹೋಗುತ್ತದೆ. ತಮ್ಮ ಹಣ ಟಾಯ್ಲೆಟ್ ಪೇಪರಿಗೆ ಸಮವಾಗಿಬಿಡುತ್ತದೆ ಎನ್ನುವ ಭಯ ಈ ರೀತಿಯ ಡಾಲರ್ ಬೇಡಿಕೆಯನ್ನು ಹೆಚ್ಚಿಸುತ್ತದೆ. ನಮ್ಮ ಕಣ್ಣ ಮುಂದೆ ವೆನಿಜುವೆಲಾ, ಜಿಂಬಾಂಬ್ವೆ, ಅರ್ಜೆಂಟೀನಾ ದೇಶಗಳನ್ನು ಇದಕ್ಕೆ ಉದಾಹರಣೆಯಾಗಿ ಕಾಣಬಹುದು.

ಯಾವುದೇ ದೇಶದ ಕರೆನ್ಸಿಯು, ಇಂದಿಗೂ ಜಾಗತಿಕ ಕರೆನ್ಸಿಯಾಗಿರುವ ಡಾಲರ್ ಮುಂದೆ ಏರಿಳಿತ ಕಾಣುವುದು ಸಹಜ. ಇದು ಗಳಿಗೆ ಗಳಿಗೆಗೂ ಆಗುತ್ತಿರುತ್ತದೆ. ಒಮ್ಮೊಮ್ಮೆ ಡಾಲರಿನ ಮುಂದೆ ಹೆಚ್ಚು ಕುಸಿತವನ್ನು ಕಾಣುತ್ತದೆ. ಭಾರತದ ರುಪಾಯಿ ಕೂಡ ಡಾಲರಿನ ಮುಂದೆ ಆರೇಳು ಪ್ರತಿಶತ ಕುಸಿತ ಕಂಡದ್ದನ್ನು ನಾವೀಗ ನೋಡುತ್ತಿದ್ದೇವೆ. ಇರಾನಿನಲ್ಲಿ ಅದು ಕಳೆದ ಆರು ತಿಂಗಳಲ್ಲಿ 56 ಪ್ರತಿಶತಕ್ಕಿಂತ ಹೆಚ್ಚಿನ ಮೌಲ್ಯವನ್ನು ಕಳೆದುಕೊಂಡಿದೆ. ಇದನ್ನು ಸರಳವಾಗಿ ಹೇಳಬೇಕೆಂದರೆ ಸ್ಥಳೀಯ ಹಣವು ತನ್ನ ಖರೀದಿ ಶಕ್ತಿಯನ್ನು ಕಳೆದುಕೊಳ್ಳುತ್ತಾ ಹೋಗುತ್ತದೆ. ಅಂದರೆ ಗಮನಿಸಿ, ವರ್ಷದ ಹಿಂದೆ ಒಂದು ಕಾಫಿ ಹತ್ತು ರಿಯಾಲ್‌ಗೆ ಸಿಗುತ್ತಿದ್ದದ್ದು, ಇಂದು ಅದಕ್ಕೆ ನೂರು ರಿಯಾಲ್ ನೀಡಬೇಕಾದ ಪರಿಸ್ಥಿತಿ ಬಂದಿದೆ. ಇದನ್ನು ಬೇರೆಲ್ಲಾ ಪದಾರ್ಥಗಳಿಗೂ ಅನ್ವಯಿಸಿಕೊಂಡು ನೋಡಿದಾಗ ಇದೆಷ್ಟು ದೊಡ್ಡ ಸಮಸ್ಯೆ ಎನ್ನುವುದರ ಅರಿವಾಗುತ್ತದೆ. ಜನರ ಆದಾಯ ಮಾತ್ರ ಅಷ್ಟೇ ಇರುತ್ತದೆ. ವರ್ಷದ ಹಿಂದೆ ತಿಂಗಳಿಗೆ ಹತ್ತು ಸಾವಿರ ರಿಯಾಲ್ ದುಡಿಯುತ್ತಿದ್ದ ವ್ಯಕ್ತಿಯ ಆದಾಯ ಈ ವರ್ಷ ತಿಂಗಳಿಗೆ ಒಂದು ಲಕ್ಷ ರಿಯಾಲ್ ಆಗಿಲ್ಲ. ಆತನ ಆದಾಯ ಹತ್ತು ಸಾವಿರದಲ್ಲೇ ಕುಳಿತಿದೆ. ಆದರೆ ಖರ್ಚು ಮಾತ್ರ ಒಂದು ಲಕ್ಷ ಬೇಕು! ಹೀಗಾಗಲು ಸಾಧ್ಯವೇ? ಒಂದು ವರ್ಷದಲ್ಲಿ ಹೀಗೇಕೆ ಆಗುತ್ತದೆ? ಎನ್ನುವ ಸಂಶಯ ಓದುಗರಲ್ಲಿ ಬಂದಿರುತ್ತದೆ. ಈ ರೀತಿ ಆದ ದೇಶಗಳನ್ನು ಬಹಳ ಹತ್ತಿರದಿಂದ ಕಂಡಿದ್ದೇನೆ. ಅಲ್ಲಿನ ವ್ಯವಸ್ಥೆ ಕುಸಿದದ್ದನ್ನು ನೋಡಿದ್ದಕ್ಕೆ ಸಾಕ್ಷಿಯಾಗಿ ಈ ಮಾತುಗಳನ್ನು ಬರೆಯುತ್ತಿದ್ದೇನೆ. ಇಂಥ ದೇಶಗಳು ಜಾಗತಿಕವಾಗಿ ಸ್ಯಾಂಕ್ಷನ್ ಅಂದರೆ ಬಹಿಷ್ಕಾರಕ್ಕೆ ಒಳಗಾಗಿರುತ್ತವೆ. ನಿಮಗೆಲ್ಲಾ ಗೊತ್ತಿರಲಿ ರಷ್ಯಾದ ನಂತರ ಅತಿ ಹೆಚ್ಚು ಈ ರೀತಿಯ ನಿಷೇಧಕ್ಕೆ ಒಳಗಾಗಿರುವ ದೇಶ ಇರಾನ್. ಮೂರನೇ ಸ್ಥಾನದಲ್ಲಿ ನಾರ್ತ್ ಕೊರಿಯಾ, ನಾಲ್ಕನೇ ಸ್ಥಾನದಲ್ಲಿ ಸಿರಿಯಾ ಮತ್ತು ಐದನೇ ಸ್ಥಾನದಲ್ಲಿ ವೆನಿಜುವೆಲಾ ದೇಶಗಳಿವೆ.

ಈ ರೀತಿಯ ಜಾಗತಿಕ ಬಹಿಷ್ಕಾರಕ್ಕೆ ಒಳಗಾದಾಗ ಇಂಥ ದೇಶಗಳಿಗೆ ಜಾಗತಿಕ ಹಣಕಾಸು ವ್ಯವಸ್ಥೆಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲ, ತಮ್ಮ ದೇಶದ ಪದಾರ್ಥಗಳನ್ನು ಇತರ ದೇಶಗಳಿಗೆ ರಫ್ತು ಮಾಡಲು ಸಾಧ್ಯವಾಗುವುದಿಲ್ಲ. ಆದರೆ ವಿಧಿಯಿಲ್ಲದೇ ತಮ್ಮ ದೇಶಕ್ಕೆ ಅವಶ್ಯಕವಾದ ವಸ್ತುಗಳನ್ನು ಅವು ತರಿಸಿಕೊಳ್ಳಬೇಕಾಗುತ್ತದೆ. ಅಂದರೆ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಲಾಗುವುದಿಲ್ಲ. ಯಾವಾಗ ಒಂದು ದೇಶದ ಆಮದು ತನ್ನ ರಫ್ತಿಗಿಂತ ಹೆಚ್ಚಾಗುತ್ತದೆ, ಆಗ ನಿಧಾನವಾಗಿ ಆ ದೇಶದ ವಿದೇಶಿ ವಿನಿಮಯ ಕರಗುತ್ತಾ ಹೋಗುತ್ತದೆ. ವಿದೇಶಿ ವಿನಿಮಯ ಕರಗಿದಂತೆ ಆ ದೇಶ ಬೇರೆ ದೇಶಗಳ ಜತೆಗೆ ವ್ಯಾಪಾರದಲ್ಲಿ ಚೌಕಾಸಿ ಮಾಡುವ ಕ್ಷಮತೆಯನ್ನು ಕಳೆದುಕೊಳ್ಳುತ್ತದೆ. ಹೀಗಾಗಿ ಮಾರುಕಟ್ಟೆಯಲ್ಲಿ ಬೇರೆ ದೇಶಗಳು ಹೇಳುವ ಬೆಲೆಯನ್ನು ಕೊಟ್ಟು ಕೊಳ್ಳಬೇಕಾಗುತ್ತದೆ. ಇದು ಪದಾರ್ಥದ ಬೆಲೆಯನ್ನು ಹೆಚ್ಚಿಸುತ್ತದೆ. ಆಮದು ಹೆಚ್ಚಾದ ಕಾರಣ ಮತ್ತು ವಿದೇಶಿ ವಿನಿಮಯ ಸಾಕಷ್ಟು ಇಲ್ಲದ ಕಾರಣ ತನ್ನ ಹಣದ ಮೌಲ್ಯವನ್ನು ಕೂಡ ಕಳೆದುಕೊಳ್ಳುತ್ತಾ ಹೋಗುತ್ತದೆ. ಹೀಗಾಗಿ ಸಮಾಜದಲ್ಲಿ ಹಣದುಬ್ಬರ ಹೆಚ್ಚಾಗುತ್ತದೆ. ಇಂಥ ಆರ್ಥಿಕ ಸೂಕ್ಷ್ಮಗಳನ್ನು ಅರಿತುಕೊಂಡವರು ಆಡಳಿತ ನಡೆಸುತ್ತಿದ್ದರೆ ಇರಾನಿಗೆ ಇಂದಿನ ಪರಿಸ್ಥಿತಿ ಬರುತ್ತಿರಲಿಲ್ಲ, ಅಲ್ಲಿರುವುದು ಮೂಲಭೂತವಾದವನ್ನು ಹೆಚ್ಚು ನಂಬುವ ಸರಕಾರ. 1979ರಿಂದ ಇಸ್ಲಾಮಿಕ್ ಮೂಲಭೂತವಾದದಲ್ಲಿ ನಂಬಿಕೆಯಿಡುವ ಸರಕಾರ ಅಲ್ಲಿದೆ. ಆರ್ಥಿಕ ಕುಸಿತ ಇದೀಗ ಕೇವಲ ಆರ್ಥಿಕ ಕುಸಿತವಾಗಿ ಉಳಿಯದೆ, ಅಲ್ಲಿನ ಸರಕಾರವನ್ನು ಬದಲಿಸಲು ಜನತೆ ದಂಗೆ ಎದ್ದಿದ್ದಾರೆ.



ಇರಾನಿನಲ್ಲಿ ಈ ರೀತಿಯ ದಂಗೆ ಇದು ಮೊದಲನೆಯದೇನೂ ಅಲ್ಲ, ಐದು ವರ್ಷದ ಹಿಂದಿನ ಇತಿಹಾಸ ಕೆದಕಿದರೂ ಸಾಕು, ಇಸ್ರೇಲ್ ದೇಶದ ಜತೆಗಿನ ಹೊಡೆದಾಟದಲ್ಲಿ ಇರಾನಿಯರು 15-20 ದಿನಗಳ ಕಾಲ ನೀರಿಗಾಗಿ ಬೀದಿಗೆ ಇಳಿದದ್ದನ್ನು ಕಾಣುತ್ತೇವೆ. ಮಹಿಳೆಯರ ಅಭಿವ್ಯಕ್ತಿ ಸ್ವಾತಂತ್ರ್ಯದ ವಿಚಾರದಲ್ಲಿ ಕೂಡ ಇರಾನಿ ಸಮಾಜ ಬೀದಿಗಿಳಿದದ್ದು ಮತ್ತು ಅಲ್ಲಿನ ಸರಕಾರ ಯಾವುದೇ ಕರುಣೆ ತೋರಿಸದೆ ನೂರಾರು ಜನರನ್ನು ಕೊಂದು ಆ ಹೋರಾಟವನ್ನು ಹತ್ತಿಕ್ಕಿದ್ದು ಕಾಣಸಿಗುತ್ತದೆ. ಈ ಎರಡು ಪ್ರಬಲ ಹೋರಾಟಕ್ಕಿಂತ ಈ ಬಾರಿಯ ಹೋರಾಟ ಹೆಚ್ಚು ಮನ್ನಣೆ ಪಡೆದುಕೊಂಡಿರುವುದಕ್ಕೆ ಕಾರಣ ಅದಕ್ಕಿರುವ ಕಾಮನ್ ಬೇಸ್! ಹೌದು ಮೊದಲೆರಡು ವಿಚಾರದಲ್ಲಿ ಎಲ್ಲರೂ ಸಂಕಷ್ಟಕ್ಕೆ ಈಡಾಗಿರಲಿಲ್ಲ, ಯಾರಿಗೆ ಇಷ್ಟವಾಗಿರಲಿಲ್ಲ ಅವರು ಮಾತ್ರ ಬೀದಿಗೆ ಇಳಿದಿದ್ದರು. ಆದರೆ ಹಣ ಎನ್ನುವುದು ಎಲ್ಲಾ ವರ್ಗವನ್ನೂ, ಲಿಂಗವನ್ನೂ, ಧರ್ಮವನ್ನೂ ತಟ್ಟುವ ಏಕೈಕ ಸಾಧನ. ತುತ್ತು ಕೂಳಿಗೆ ತತ್ವಾರ ಬಂದರೆ ಆಗ ಎಲ್ಲರೂ ಬೀದಿಗೆ ಇಳಿಯುತ್ತಾರೆ ಎನ್ನುವುದಕ್ಕೆ ಇರಾನ್ ಸಾಕ್ಷಿಯಾಗಿ ನಿಂತಿದೆ.

ಒಂಬತ್ತು ಕೋಟಿಗಿಂತ ಹೆಚ್ಚಿರುವ ಜನಸಂಖ್ಯೆಯಲ್ಲಿ ಬಹುಸಂಖ್ಯಾತರು 150ರಿಂದ 250 ಅಮೆರಿಕನ್ ಡಾಲರ್ ಮಾಸಿಕ ವೇತನವನ್ನು ಗಳಿಸಿಕೊಳ್ಳುತ್ತಿದ್ದಾರೆ. ಇದು ಜಗತ್ತಿನ ಬಹುತೇಕ ದೇಶದ ಅವರೇಜ್. ಆದರೆ ಹಣದುಬ್ಬರ ಎನ್ನುವುದು ಈ ಹಣಕ್ಕೆ ಬೆಲೆ ಇಲ್ಲದಂತೆ ಮಾಡಿದೆ. ಹೀಗಾಗಿ ಈ ಬಾರಿ ಮೆಜಾರಿಟಿ ಜನ ಬೀದಿಗೆ ಇಳಿದಿದ್ದಾರೆ. ಕೂಲಿ ಕೆಲಸ ಮಾಡುವ ವ್ಯಕ್ತಿಯಿಂದ ಮೊದಲ್ಗೊಂಡು, ಕಚೇರಿಯಲ್ಲಿ ಕೆಲಸ ಮಾಡುವವರು, ವ್ಯಾಪಾರಿಗಳು ಹೀಗೆ ಬಹುತೇಕರ ಆಕ್ರೋಶವು 'ಸರಕಾರ ಹಣದುಬ್ಬರವನ್ನು ನಿಯಂತ್ರಿಸುತ್ತಿಲ್ಲ' ಎನ್ನುವುದೇ ಆಗಿದೆ. ಮೊದಲೇ ಹೇಳಿದಂತೆ ಸಮಾಜ ಬೇರೆಲ್ಲಾ ಸಮಸ್ಯೆಗಳನ್ನು ಹೇಗೋ ಹಲ್ಲುಕಚ್ಚಿ ಸಹಿಸಿಕೊಳ್ಳುತ್ತದೆ, ಆದರೆ ನಿತ್ಯಜೀವನ ನಡೆಸಲು ಕೂಡ ಆಗದ ಸನ್ನಿವೇಶ ಸೃಷ್ಟಿಯಾದರೆ ಆಗ ಜನರು ಬೀದಿಗೆ ಇಳಿದೇ ಇಳಿಯುತ್ತಾರೆ. ಇರಾನಿನ ರಸ್ತೆಯಲ್ಲಿ ಹಸಿವು ತಾಂಡವವಾಡುತ್ತಿದೆ. ಹಸಿವು ಎನ್ನುವ ಅಗ್ನಿಗೆ ಸರಕಾರವನ್ನು ಕೆಡಹುವ ಶಕ್ತಿಯಿದೆ. ಇರಾನಿ ಸರಕಾರದ ವಿರುದ್ಧ ದಿನದಿಂದ ದಿನಕ್ಕೆ ಜನರಲ್ಲಿ ಆಕ್ರೋಶ ಹೆಚ್ಚಾಗುತ್ತಿದೆ. 'ನಮಗೆ ಮೌಲ್ವಿಗಳ ಆಡಳಿತ ಬೇಡ' ಎನ್ನುವ ಕೂಗು ಹೆಚ್ಚಾಗುತ್ತಿದೆ. ಜಾಗತಿಕ ರಾಜಕೀಯದಾಟದಲ್ಲಿ ಇರಾನಿನ ರಿಯಾಲ್ ಕಸವಾಗಿ ಮಾರ್ಪಾಟಾಗುತ್ತಿದೆ. ಈ ಆಟಗಳ ನಡುವೆ ನಿಜವಾಗಿ ಹಸಿವಿನಿಂದ ಸಾಯುವ ಒಂದು ಬಹುದೊಡ್ಡ ವರ್ಗಕ್ಕೆ ಮೌಲ್ವಿ ಅಥವಾ ಪ್ರಜಾಪ್ರಭುತ್ವ ಯಾವುದಾದರೇನು? ಬೇಕಿರುವುದು ಹೊಟ್ಟೆಗೆ ಅನ್ನ ಮಾತ್ರ. ಅದು ಸಿಗುವವರೆಗೂ ಈ ಸಂಘರ್ಷ ನಿಲ್ಲುವಂತೆ ಕಾಣುತ್ತಿಲ್ಲ. ಇದು ಇನ್ನೊಂದಷ್ಟು ದೊಡ್ಡ ರೂಪವನ್ನು ಪಡೆದುಕೊಳ್ಳುತ್ತದೆ.

ಈ ರೀತಿಯ ಜಾಗತಿಕ ರಾಜಕೀಯಕ್ಕೆ ಮತ್ತು ಸ್ಥಳೀಯ ಸರಕಾರದ ಅಸಡ್ಡೆಗೆ ಕಾರಣ ವೆನಿಜುವೆಲಾ ಎನ್ನುವ ದೇಶ ಭೂಮಿಯ ಮೇಲಿನ ನರಕವಾಗಿ ಮಾರ್ಪಾಟಾಗಿದೆ. ಆ ದೇಶವು ಹಸಿವಿನ ಕಾರಣ ಸರಾಸರಿ ಹನ್ನೊಂದು ಕೆಜಿ ತೂಕವನ್ನು ಕಳೆದುಕೊಂಡಿದೆ. ಹನ್ನೆರಡು, ಹದಿನಾಲ್ಕು ವರ್ಷದ ಮಕ್ಕಳು ಐದಾರು ವರ್ಷದ ಮಕ್ಕಳಂತೆ ಕಾಣುತ್ತಿದ್ದಾರೆ. ಇರಾನ್ ಒಂದೇ ಅಂತಲ್ಲ, ಜಗತ್ತಿನ ಎಲ್ಲಾ ದೇಶಗಳಲ್ಲೂ ಹಣದುಬ್ಬರ ಎನ್ನುವುದು ಅತಿದೊಡ್ಡ ಸಮಸ್ಯೆಯಾಗಿದೆ. ಯುರೋಪ್, ಇಂಗ್ಲೆಂಡಿನಲ್ಲಿ ಕೂಡ ಜನ ಹಣದುಬ್ಬರದಿಂದ ತತ್ತರಿಸಿಹೋಗಿದ್ದಾರೆ. ಈ ಹಣ ಎನ್ನುವುದನ್ನು ನಾವು ಸೃಷ್ಟಿಸಿಕೊಂಡಿರುವ ಕಾರಣ ಎಲ್ಲವೂ ಕಣ್ಣೆದುರೇ ಇದ್ದು ಕೂಡ ನಾವು ಅದನ್ನು ಖರೀದಿಮಾಡಲು ಆಗುವುದಿಲ್ಲ. ಆಹಾರ ಬೇಕಾದಷ್ಟು ಇದ್ದು ಕೂಡ ಸಮಾಜದಲ್ಲಿ ಜನ ಹಸಿವಿನಿಂದ ಪ್ರಾಣಬಿಡುತ್ತಾರೆ. ಅವರ ಕೈಲಿರುವ ಹಣವು ಆಹಾರವನ್ನು ಖರೀದಿಸುವ ಶಕ್ತಿಯನ್ನು ಕಳೆದುಕೊಂಡುಬಿಟ್ಟಿರುತ್ತದೆ ಎನ್ನುವುದು ನಾವೇ ಸೃಷ್ಟಿಸಿಕೊಂಡ ಈ ಸಮಾಜದ ಅತಿದೊಡ್ಡ ವಿಪರ್ಯಾಸ.

ಇರಾನಿನಲ್ಲಿ ಜನಸಾಮಾನ್ಯ ತನ್ನ ಸರಕಾರದ ವಿರುದ್ಧ ತಿರುಗಿಬಿದ್ದಿದ್ದಾನೆ. ಹೆಚ್ಚಿನ ಸವಲತ್ತು ಬೇಡಿಕೊಂಡು ತಿರುಗಿಬಿದ್ದಿಲ್ಲ, ಹಸಿವಿನ ವಿರುದ್ಧ, ಕಷ್ಟಪಟ್ಟು ಕೆಲಸ ಮಾಡಿ ಗಳಿಸಿದ ಹಣದಿಂದ ಬೇಸಿಕ್ ಬದುಕನ್ನೂ ಕಟ್ಟಿಕೊಳ್ಳಲಾಗದ ವ್ಯವಸ್ಥೆಯ ವಿರುದ್ಧ ಸಿಡಿದೆದ್ದಿದ್ದಾನೆ. ತನ್ನದಲ್ಲದ ತಪ್ಪಿಗೆ ಬೀಳುತ್ತಿರುವ ಪೆಟ್ಟಿನ ವಿರುದ್ಧ ನಿಂತಿದ್ದಾನೆ. ಇವಕ್ಕೆಲ್ಲಾ ಉತ್ತರ ಸಿಕ್ಕುವ ವೇಳೆಗೆ ಸಾವಿರಾರು ಜನ ತಮ್ಮದಲ್ಲದ ತಪ್ಪಿಗೆ ಜೀವ ತೆತ್ತಿರುತ್ತಾರೆ ಎನ್ನುವುದು ಮಾತ್ರ ಅರಗಿಸಿಕೊಳ್ಳಲಾಗದ ಸತ್ಯ. ನಾವೇ ಕಟ್ಟಿಕೊಂಡಿರುವ ಹಣಕಾಸು ವ್ಯವಸ್ಥೆ ನಿಧಾನಕ್ಕೆ ಬಹಳಷ್ಟು ದೇಶಗಳ ಕೊರಳಿಗೆ ನೇಣುದಾರವಾಗಲಿದೆ.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಟುಕಡೆಗಳ ಸುತ್ತಮುತ್ತ

ಮೋಹನ್ ವಿಶ್ವ ಅವರು ತಮ್ಮ 'ವೀಕೆಂಡ್ ವಿತ್ ಮೋಹನ್' ಅಂಕಣದಲ್ಲಿ (ಜ.10) ಟುಕಡೆ ಗ್ಯಾಂಗ್‌ಗೆ ಜಾಮೀನು ಸಿಗಲಿಲ್ಲ ಎನ್ನುವುದರ ಬಗ್ಗೆ ಹೇಳಿದ್ದಾರೆ. ದೇಶದ ರಾಜಧಾನಿ ದೆಹಲಿಯಲ್ಲಿರುವ ಹಳೆಯ ಮತ್ತು ಪ್ರತಿಷ್ಠಿತ ಜೆಎನ್‌ಯು ವಿಶ್ವವಿದ್ಯಾಲಯವು ತಾನು ಮಾಡುವ ವಿದ್ಯಾದಾನಕ್ಕಿಂತ ಅನಿಷ್ಟ ಸಂಗತಿಗಳ ಕೇಂದ್ರ ಬಿಂದುವಾಗಿದೆ ಹಾಗೂ ದೇಶದ್ರೋಹಿಗಳ, ಅಪರಾಧಿಗಳ ಹುಟ್ಟಿಗೆ ಮೂಲವಾಗಿದೆ. ಅಲ್ಲಿ ಶಿಕ್ಷಣ ಪಡೆದ ಬಹುತೇಕರು ದೇಶದ ಹಿತವನ್ನು ಕಾಪಾಡುವ ಬದಲು, ದೇಶವನ್ನು ಒಡೆಯುವ ದುರ್ಮಾರ್ಗ ಹಿಡಿದ್ದಾರೆ ಅಂತ ಕೂಡ ಸಿದ್ಧವಾಗಿದೆ. ಹೀಗಾಗಿ, ಅಲ್ಲಿ ಓದಿಕೊಂಡು ಬಂದ ಯಾವುದೇ ವ್ಯಕ್ತಿಯನ್ನು ಸಂಶಯದ ದೃಷ್ಟಿಯಿಂದ ನೋಡುವಂತಾಗಿದೆ. ಅಲ್ಲಿನ ಮುಕ್ತ/ಸ್ವಚ್ಛಂದ ವಾತಾವರಣ, ಮಿತಿಯೇ ಇರದ ನಡವಳಿಕೆ, ವಾಕ್ ಸ್ವಾತಂತ್ರ್ಯ ಮುಂತಾದವು ಇದಕ್ಕೆ ಮೂಲಕಾರಣವಾಗಿದ್ದಿರಬಹುದೇ? ನಮಗೆ ತಿಳಿದಂತೆ, ಓದಲು ಬಯಸಿ ಅಲ್ಲಿಗೆ ಹೋದವರಿಗೆ ಅತ್ಯಂತ ಕಡಿಮೆ ದರದಲ್ಲಿ ಊಟ-ವಸತಿ-ಶಿಕ್ಷಣ ದೊರೆಯುತ್ತವೆ. ನಿಗದಿತ ಅವಧಿಯಲ್ಲಿ ಶಿಕ್ಷಣ ಮುಗಿಸಿಕೊಂಡು ತೆರಳಬೇಕು ಎಂಬ ಕಟ್ಟುಪಾಡು ಇಲ್ಲದಿರುವುದು ಕೂಡ ಇಂಥ ಮತ್ತೊಂದು ಅಂಶ. ಎಷ್ಟೋ ಜನರು ವಿದ್ಯಾರ್ಥಿಗಳ ಸೋಗಿನಲ್ಲಿ ಅಲ್ಲಿ ವರ್ಷಗಟ್ಟಲೆ ತಳವೂರಿದ್ದಾರೆ ಅಂತಲೂ ಎಲ್ಲೋ ಓದಿದ ನೆನಪು... ಇಂಥ ಪುಕ್ಕಟೆ ಹುಲ್ಲುಗಾವಲು ಪ್ರದೇಶದಲ್ಲಿ ಬೀಡುಬಿಟ್ಟು, ಮನಸೋ ಇಚ್ಛೆ ದೇಶವಿರೋಧಿ ಕೃತ್ಯಕ್ಕೆ ಸಂಚುಮಾಡಿ, ಕೆಲ ಪತ್ರಕರ್ತರ, ಶತ್ರು ಮನಸ್ಸಿನ ರಾಜಕಾರಣಿಗಳ/ಪಕ್ಷದ ಬೆಂಬಲ ಪಡೆದು, ಯಾರ ಹೆದರಿಕೆಯೂ ಇಲ್ಲದೆ ಬದುಕುವ ಇವರನ್ನು ಏನೆಂದು ಕರೆಯಬೇಕು? ಸರಕಾರವು ಕಠಿಣ ನಿಯಮಗಳನ್ನು ಜಾರಿಮಾಡಿ, ಇಂಥ ಪಾಪದ ಕೆಲಸ ಮಾಡುವ ಜನರಿಗೆ ಮತ್ತು ಸಂಘಟನೆಗಳಿಗೆ ಒಂದು ಗತಿ ಕಾಣಿಸದಿದ್ದಲ್ಲಿ, ಸದ್ಯೋಭವಿಷ್ಯದಲ್ಲಿ ದೇಶಕ್ಕೆ ಗಂಡಾಂತರ ಒದಗಿದರೂ ಅಚ್ಚರಿಯಿಲ್ಲ.

ಸಾಂದರ್ಭಿಕ ವಿಷಯವನ್ನು ಉತ್ತಮವಾಗಿ ವಿಶ್ಲೇಷಿಸಿದ ಅಂಕಣಕಾರರಿಗೂ, ಬರಹವನ್ನು ಪ್ರಕಟಿಸಿದ ಪತ್ರಿಕೆಗೂ ಧನ್ಯವಾದಗಳು.

- ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಚರಿತ್ರೆಯ ಮರುಕಳಿಕೆ

ಐಲುದೊರೆಯ ಅಧಿಕಪ್ರಸಂಗ' ಶೀರ್ಷಿಕೆಯ ಸಂಪಾದಕೀಯ (ಜ.10) ಗಮನ ಸೆಳೆಯಿತು. ಹಿಂದೆ ನಾವು ಚರಿತ್ರೆಯಲ್ಲಿ ಮುಹಮ್ಮದ್ ಬಿನ್ ತುಘಲಕ್ ಎಂಬ ಐಲುದೊರೆಯ ಬಗ್ಗೆ ಓದಿದ್ದೆವು; ಆದರೀಗ ಅಂಥದೇ ಐಲುದೊರೆಯು ಅಮೆರಿಕ ದೇಶವನ್ನು ಆಳುತ್ತಿರುವುದಕ್ಕೆ ಏನನ್ನುವುದು?!

ಈ ಐಲುದೊರೆಯ ಒಂದಿಷ್ಟು ನಡೆಗಳು ಅನ್ಯದೇಶಗಳಿಗಿರಲಿ, ಸ್ವತಃ ಅಮೆರಿಕನ್ನರಿಗೇ ಮುಜುಗರ ಉಂಟುಮಾಡುತ್ತಿರುವುದು ಸುಳ್ಳಲ್ಲ. ಪಾಕಿಸ್ತಾನ, ಬಾಂಗ್ಲಾ ಮುಂತಾದ ದೇಶಗಳಿಗೆ ಹಿಂಬದಿಯಿಂದ ಯುದ್ಧೋಪಕರಣಗಳನ್ನು ಕೊಟ್ಟು ಭಾರತದ ವಿರುದ್ಧ ಅವನ್ನು ಸಮರಕ್ಕೆ ಪ್ರಚೋದಿಸುತ್ತಿರುವ ಆಸಾಮಿ ಈ ಟ್ರಂಪ್. ಇಂಥ ಮಹಾಶಯನಿಗೆ, 'ಪ್ರಪಂಚ ವನ್ನು ಅಶಾಂತಿಯ ಕೂಪಕ್ಕೆ ತಳ್ಳಿದವರಿಗೆ' ಕೊಡಲಾಗುವ ಯಾವುದಾದರೂ ಅತ್ಯುನ್ನತ ಪುರಸ್ಕಾರವಿದ್ದರೆ ಸಂಬಂಧಪಟ್ಟವರು ಆದಷ್ಟು ಬೇಗ ಕೊಟ್ಟು ಕೃತಾರ್ಥರಾಗಬೇಕು! ಈ ವ್ಯಕ್ತಿಯ ಐಲುತನವನ್ನು ತಡೆಯಲು ಅಮೆರಿಕದ ಜನರೇ ಸಮರ್ಥರು. ಆದಷ್ಟು ಬೇಗ ಅವರು ತಮ್ಮ ಈ ಶಕ್ತಿಯನ್ನು ತೋರಿಸಲು ಕಾರ್ಯಪ್ರವೃತ್ತರಾಗಬೇಕಿದೆ. ಅದು ಸದ್ಯದಲ್ಲೇ ಜರುಗಲಿ ಎಂದು ಆಶಿಸೋಣ.

- ದಾವಣಗೆರೆ ಮುಕುಂದ, ಬೆಂಗಳೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್
naadigru@gmail.com

- ಕೃತಕ ಬುದ್ಧಿಮತ್ತೆ (ಎಐ) ಬೆಡಗಿಗಾಗಿ ಬೆತ್ತಲಾದವನಿಗೆ ಬ್ಲ್ಯಾಕ್‌ಮೇಲ್. ಯುವಕನ ವಿವಸ್ತ್ರ ಭಂಗಿಯ ವಿಡಿಯೋ ಇಟ್ಟುಕೊಂಡು 1.5 ಲಕ್ಷ ರುಪಾಯಿ ಸುಲಿಗೆ: ಸುದ್ದಿ
– **'ಬೆತ್ತಲಾಗದೆ ಬಯಲು ಸಿಕ್ಕದಿಲ್ಲ' ಎಂಬ ಕವಿ ಗೋಪಾಲಕೃಷ್ಣ ಅಡಿಗರ ಮಾತನ್ನು 'ಅಪಾರ್ಥ' ಮಾಡ್ಕೊಂಡ್ರೆ ಹೀಗೇ ಆಗೋದು ಕಣ್ರೀ!!**

- ದೆಸೆ ಬದಲಿಸಿಕೊಳ್ಳಲು ಮುಂದಾದ ಜೆಡಿಎಸ್ ಪಕ್ಷದಿಂದ ಚುನಾವಣಾ ಆಯೋಗಕ್ಕೆ ಪತ್ರ. ತೆನೆ ಹೊತ್ತ ಮಹಿಳೆಗೆ 'ಚಕ್ರ' ಸೇರ್ಪಡೆ ಸಾಧ್ಯತೆ: ಸುದ್ದಿ
– **ತಗಳ್ಳಿ, ಅದೂ ಆಗಿಹೋಗಲಿ! 'ಶುಕ್ರದೆಸೆ'ಗಾಗಿ ತವಕಿಸುತ್ತಿರೋ ಜೆಡಿಎಸ್‌ನ 'ದೆಸೆ' ಇದರಿಂದಾಗಿ ಒಂದೊಮ್ಮೆ ಕುದುರಿಬಿಟ್ಟರೆ, ಅದನ್ನು 'ಚಕ್ರದೆಸೆ' ಅಂತಲೇ ಕರೆದ್ರಾಯ್ತು!!**

- ನಾನು ಕಾಂಗ್ರೆಸ್‌ಗೆ ಕದ್ದು-ಮುಚ್ಚಿ ಹೋಗಿಲ್ಲ; ಹಾಸನ ಜಿಲ್ಲೆಯಲ್ಲಿ ಬೇರೆ ಯಾರೂ ಬೆಳೆಯೋದು ಬೇಡವೇ? ನಾನು ಅರಸೀಕೆರೆ ಶಾಸಕನಾದಾಗ ಜೆಡಿಎಸ್ ಪಕ್ಷಕ್ಕೆ 85 ಸಾವಿರ ಮತಗಳನ್ನು ಹಾಕಿಸಿದ್ದೇನೆ. ಅರಸೀಕೆರೆಗೆ ನೀವೇನು ಮಾಡಿದ್ದೀರಿ ಎಂಬುದು ಜನರಿಗೆ ಗೊತ್ತಿದೆ: ಟಾಂಗ್ ನೀಡಿದ ಶಾಸಕ ಶಿವಲಿಂಗೇಗೌಡರು
– **'ಕುಳ್ಳ ಏಜೆಂಟ್ 000' ಚಲನಚಿತ್ರದ ''ಎಲ್ಲಾ ಮಾಯವೋ ಪ್ರಭುವೇ, ಎಲ್ಲಾ ಮಾಯವೋ! ನಾನು ಮಾಯವೋ, ನೀನು ಮಾಯವೋ, ಕಣ್ಣು ಮುಚ್ಚಲು ಎಲ್ಲಾ ಮಾಯವೋ'' ಎಂಬ ಹಾಡು ಅದ್ಯಾಕೋ ನೆನಪಾಗ್ತಾ ಇದೆ ಕಣ್ರೀ...!!**

- ಸಂಕ್ರಾಂತಿ ನಂತರ ಸಂಪುಟ ಸರ್ಜರಿಗೆ ಸಿಎಂ ಸಿದ್ಧತೆ. ಅವಕಾಶ ಕೈತಪ್ಪುವ ಆತಂಕದಲ್ಲಿ ಆಕಾಂಕ್ಷಿಗಳು: ಸುದ್ದಿ
– **ಅಲ್ಲಿಗೆ, ಈ ಬಾರಿಯ 'ಸಂಕ್ರಾಂತಿ' ನಂತರ 'Some ಕ್ರಾಂತಿ' ಕಟ್ಟಿಟ್ಟಬುತ್ತಿ ಅನ್ನಿ!!**

- ಕಲ್ಲಿದ್ದಲು ಪ್ರಕರಣ ಸಂಬಂಧ 'ಐ-ಪ್ಯಾಕ್' ಸಂಸ್ಥೆಯ ಕಚೇರಿಯಲ್ಲಿ ನಡೆಸಿದ್ದ ತನಿಖೆಗೆ ಪಶ್ಚಿಮ ಬಂಗಾಳ ಸರಕಾರ ಮತ್ತು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅಡ್ಡಿಪಡಿಸಿದ್ದಾರೆ ಎಂದು ಆರೋಪಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ ಜಾರಿ ನಿರ್ದೇಶನಾಲಯ: ಸುದ್ದಿ
– **ಹಂಗಾದ್ರೆ ತನಿಖಾಧಿಕಾರಿಗಳು 'ಐ-ಪ್ಯಾಕ್' ಕಚೇರಿಯಿಂದ 'ಪ್ಯಾಕ್-ಅಪ್' ಮಾಡಬೇಕಾಗಿ ಬಂತು ಅನ್ನಿ!**

- ಬಿಜೆಪಿ-ಜೆಡಿಎಸ್‌ಗೆ ಸ್ವಂತಬಲವಿಲ್ಲ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಯಾವ ಪಾರ್ಟಿಯಿಂದ ರಾಜ್ಯ ರಾಜಕಾರಣಕ್ಕೆ ಮರಳುತ್ತಾರೆ ಅಂತ ಗೊತ್ತಾಗ್ತಾ ಇಲ್ಲ: ಸಚಿವ ಪ್ರಿಯಾಂಕ್ ಖರ್ಗೆ ಲೇವಡಿ
– **'ತಾಳಮದ್ದಳೆ' ಇಷ್ಯೂ ಒಂದ್ ಹಂತಕ್ಕೆ ಮುಗೀತು ಅಂತ ಶಾನೆ ಬೇಜಾರು ಮಾಡ್ಕೊಂಡಿದ್ದ ಓದುಗರಿಗೆ ಮೆಲುಕು ಹಾಕೋದಕ್ಕೆ ಹೊಸತೊಂದು ಚರ್ಚಾವಿಷಯ ಸಿಕ್ಕಿಬಿಟ್ಟಿತಲ್ರೀ...?!!**

ಭಾಷಾನೀತಿ: ಪ್ರತ್ಯೇಕಿಸುವ ಗೋಡೆಯಲ್ಲ, ಸಂಪರ್ಕ ಸೇತುವಾಗಲಿ

ಸಂವಿಧಾನವು 22 ಭಾಷೆಗಳನ್ನು ಅಧಿಕೃತ ಭಾಷೆಗಳೆಂದು ಗುರುತಿಸಿದೆ. ನಮ್ಮ ಶಿಕ್ಷಣ ವ್ಯವಸ್ಥೆಗಳು ಸಹಜವಾಗಿಯೇ ಈ ಅಧಿಕೃತ ಭಾಷಾ ಮಾಧ್ಯಮಗಳಲ್ಲಿ ಶಿಕ್ಷಣ ನೀಡುತ್ತವೆಯೇ ವಿನಾ ಸಾವಿರಾರು ಮಾತೃಭಾಷೆಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗುತ್ತಿಲ್ಲ.

ಭಾಷೆ-ಭಾವ
ಡಾ. ಟಿ.ಎನ್. ವಾಸುದೇವಮೂರ್ತಿ
vveditoped@gmail.com

ತಾರತಮ್ಯ, ಭೇದಬುದ್ಧಿ, ಪ್ರತ್ಯೇಕತಾ ಭಾವ ಇವೇ ಮುಂತಾದ ಮಾನಸಿಕ ರೋಗಗಳು ನಮ್ಮ ಸಾಮಾಜಿಕ ವ್ಯವಸ್ಥೆಯನ್ನಷ್ಟೇ ಅಲ್ಲ ಮನುಷ್ಯ ಬದುಕಿನ ಸಮಸ್ತ ಆಯಾಮಗಳನ್ನೂ ನರಳಿಸುತ್ತಿವೆ. ಉದಾಹರಣೆಗೆ, ಸಂವಹನಕ್ಕಾಗಿ ನುಡಿಯುವ ಭಾಷೆಯಲ್ಲೂ ಪ್ರಧಾನಭಾಷೆ, ಅಧೀನಭಾಷೆ, ಜನಭಾಷೆ, ಪ್ರಭುತ್ವ ಭಾಷೆ ಎಂಬಿತ್ಯಾದಿ ವರ್ಗೀಕರಣ ಉಂಟಾಗಿದೆ. ನಮ್ಮ ರಾಜಕಾರಣಿಗಳು ಆಡಳಿತದ ಅನುಕೂಲಕ್ಕಾಗಿಯೋ ಅಥವಾ ರಾಜಕೀಯ ಸ್ವಾರ್ಥಕ್ಕಾಗಿಯೋ ಭಾಷೆ ಭಾಷೆಗಳ ನಡುವೆ ಬಿರುಕು ಮೂಡಿಸಿ ವೈಷಮ್ಯವನ್ನು ಬಿತ್ತಬಹುದು. ಆದರೆ 'ಸರ್ವಭಾಷಾಮಯೀ ಸರಸ್ವತೀ' (ಸರಸ್ವತಿಯು ಎಲ್ಲ ಭಾಷೆಗಳನ್ನೂ ಒಳಗೊಂಡವಳು) ಎಂಬುದು ಪ್ರಾಚೀನ ಕಾಲದಿಂದಲೂ ಭಾರತೀಯರು ಅನುಸರಿಸುತ್ತ ಬಂದಿರುವ ವಿವೇಕವಾಗಿದೆ. ನಮ್ಮ ನಡುವಿನ ಒಂದು ಭಾಷೆಗೆ ಹಾನಿಯಾದರೂ ಸರಸ್ವತಿಯ ಒಂದು ಅಂಶಕ್ಕೆ ಹಾನಿಯಾದಂತೆ. ಇದನ್ನು ಮನಗಂಡೇ ನಮ್ಮ ಪ್ರಾಚೀನ ಕವಿಗಳು ಭಾಷಾ ದ್ವೇಷವನ್ನು ಬೆಳೆಸಿಕೊಳ್ಳಲಿಲ್ಲ, ಭಾಷೆಗಳ ನಡುವೆ ಸಮನ್ವಯತೆಯನ್ನು ಬೆಸೆಯುವ ನಿಟ್ಟಿನಲ್ಲಿ ಪ್ರಯತ್ನಿಸಿದರು. ತನ್ನ ದೇಸೀ ಭಾಷೆಯ ಮೂಲಕವೇ ಮಾರ್ಗಭಾಷೆಯಾದ ಸಂಸ್ಕೃತದೊಂದಿಗೆ ಬೆಸುಗೆ ಹೊಂದುವ ಪ್ರಯತ್ನವನ್ನು ಪಂಪ ಮಾಡಿದ್ದ (ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳ್ ತಳ್ವುದು- ಪಂಪಭಾರತ 1.8). 2ನೇ ನಾಗವರ್ಮ 'ಕರ್ಣಾಟಕ ಭಾಷಾ ಭೂಷಣ'ದ ಮೂಲಕ ಕನ್ನಡ ವ್ಯಾಕರಣವನ್ನು ಸಂಸ್ಕೃತ ಲೋಕಕ್ಕೆ ಪರಿಚಯಿಸಿದ. ''ಕಸವರಮೆಂಬುದು ನೆರೆಸೈರಿಸಲಾರ್ಪೊಡೆ ಪರ ವಿಚಾರಮಂ ಪರಧರ್ಮಮುಮಂ'' ಎಂದು ಕವಿರಾಜಮಾರ್ಗಕಾರ ನುಡಿದ. ಬೇಂದ್ರೆ, ಮಾಸ್ತಿ, ನಾ. ಕಸ್ತೂರಿ, ತರಾಸು ಮುಂತಾದ ಕನ್ನಡೇತರ ಮಾತೃಭಾಷಾ ಹಿನ್ನೆಲೆಯುಳ್ಳ ಯಾವ ಸಾಹಿತಿಗೂ ಮತ್ತೊಂದು ಭಾಷೆ ಸಮಸ್ಯೆಯಾಗಲಿಲ್ಲ. ಇಂದು ಭಾಷೆಗಳ ನಡುವಿನ ಈ ಸೌಹಾರ್ದಭಾವ ಕ್ಷೀಣಿಸುತ್ತಿದೆ. ತತ್ಪರಿಣಾಮವಾಗಿ ಭಾಷೆಗಳೂ ಪರಸ್ಪರ ಗೋಡೆಗಳನ್ನು ನಿರ್ಮಿಸಿಕೊಂಡು ನಶಿಸುತ್ತಿವೆ.

2010ರಲ್ಲಿ ತೈವಾನ್‌ನ 'ಪಜೇ' ಭಾಷೆಯನ್ನು ಮಾತನಾಡುವವರ ಪೈಕಿ 12 ಜನ ಮಾತ್ರ ಉಳಿದಿದ್ದರು. ಇದರ ಮರುವರ್ಷ ಅಂದರೆ 2011ರಲ್ಲಿ ಆ ಭಾಷೆಯನ್ನು ನುಡಿಯುತ್ತಿದ್ದ ಏಕಮಾತ್ರ ವ್ಯಕ್ತಿ ತೀರಿಕೊಂಡ, ಅವನೊಂದಿಗೆ ಆ ಭಾಷೆಯೂ ಸತ್ತಿತು. ಇದು ಒಂದು ಭಾಷೆಯ ಕತೆಯಲ್ಲ, ಜಗತ್ತಿನಾದ್ಯಂತ ಸಾವಿರಾರು ಭಾಷೆಗಳು ಹೀಗೆ ಸತ್ತಿವೆ, ನೂರಾರು ಭಾಷೆಗಳು ಅವಸಾನದ ಅಂಚಿನಲ್ಲಿವೆ. ಅದರಲ್ಲೂ ಭಾರತದಲ್ಲಿ ಇರುವಷ್ಟು ಭಾಷೆಗಳು ಜಗತ್ತಿನ ಇನ್ನಾವ ದೇಶದಲ್ಲೂ ಇಲ್ಲ. ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ಯುನೆಸ್ಕೋದ ಸರ್ವೇಕ್ಷಣೆಯ ಪ್ರಕಾರ ಭಾರತದ 197 ಭಾಷೆಗಳು ಅಪಾಯದಂಚಿನಲ್ಲಿವೆ. ಜಗತ್ತಿನ ಮತ್ತಾವ ಪ್ರಾದೇಶಿಕ ಸಮುದಾಯದಲ್ಲೂ ಇಷ್ಟೊಂದು ಸಂಖ್ಯೆಯ ಭಾಷೆಗಳು ಅವನತಿಯ ದಿಕ್ಕಿನಲ್ಲಿ ಸಾಗುತ್ತಿಲ್ಲ.

2011ರ ಜನಗಣತಿಯ ಪ್ರಕಾರ ಭಾರತದಲ್ಲಿ 1652 ಮಾತೃಭಾಷೆಗಳಿವೆ. ಇವುಗಳ ಪೈಕಿ ಎಷ್ಟೋ ಭಾಷೆಗಳನ್ನು 10,000ಕ್ಕಿಂತಲೂ ಕಡಿಮೆ ಜನ ಮಾತನಾಡುತ್ತಿದ್ದಾರೆ. ಅಂಡಮಾನಿನ ಆಡುಭಾಷೆಯಾದ 'ಅಕಾಬೋ' ಈಗಾಗಲೇ ನಷ್ಟವಾಗಿದೆ, ಆ ಭಾಷೆಯನ್ನು ಬಳಸುತ್ತಿದ್ದ ಜನಗಳಾರೂ ಇಂದು ಬದುಕಿಲ್ಲ. ಭಾರತದ ಒಳಗೂ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿ ಏನೂ ಇಲ್ಲ. ದಕ್ಷಿಣ ಕರ್ನಾಟಕ ಮತ್ತು ತಮಿಳುನಾಡಿನ ಗಡಿಭಾಗದ ಕೆಲವು ಪ್ರಾಂತ್ಯಗಳಲ್ಲಿ ಹರಡಿರುವ 'ಬೃಹಚ್ಚರಣ' ಭಾಷೆಯನ್ನು (ಡಿವಿಜಿ ಅವರ ಮಾತೃಭಾಷೆ) ಮಾತನಾಡುವವರ ಸಂಖ್ಯೆ ಕೇವಲ 2000ಕ್ಕೆ ಇಳಿದಿದೆ.

ಭಾಷೆಯ ಅಳಿವಿಗೆ ಹಲವು ಕಾರಣಗಳಿರಬಹುದು. ಉದಾಹರಣೆಗೆ ಭಾಷಿಕ ಅಲ್ಪಸಂಖ್ಯಾತರು ಜೀವನೋಪಾಯಕ್ಕಾಗಿ ಪ್ರಧಾನ ಭಾಷೆಯ ಪ್ರದೇಶಗಳಿಗೆ ವಲಸೆ ಹೋಗಬಹುದು, ಅಲ್ಲಿಯ ಭಾಷೆಯನ್ನೇ ತಮ್ಮ ಭಾಷೆಯನ್ನಾಗಿಸಿಕೊಳ್ಳಬಹುದು. ಆಧುನಿಕತೆಯ ಹಿಂದೆ ಬಿದ್ದು ತಮ್ಮ ಸ್ಥಳೀಯ ಭಾಷೆ, ಸಂಸ್ಕೃತಿಗಳನ್ನು ಕಾಪಾಡಿಕೊಳ್ಳುವ ಆಸಕ್ತಿ, ಇಚ್ಛಾಶಕ್ತಿಗಳನ್ನು ಕಳೆದುಕೊಳ್ಳಬಹುದು. ಎಷ್ಟೋ ಭಾಷೆಗಳಿಗೆ ಸಮೂಹ ಮಾಧ್ಯಮ, ಡಿಜಿಟಲ್ ಉಪಕರಣಗಳು, ಸಾಂಸ್ಥಿಕ ಬೆಂಬಲ ಇವುಗಳ ಕೊರತೆ ಇದೆ. ಈ ಕೊರತೆಯೂ ಭಾಷೆಯ ಅಳಿವಿಗೆ ಕಾರಣವಾಗಿದೆ.

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಇಂಗ್ಲಿಷ್ ಅಧಿಕೃತ ಭಾಷೆಯಾಗಿತ್ತು. ಇಂಗ್ಲಿಷ್ ಮಾತನಾಡುವುದು ಪ್ರತಿಷ್ಠೆಯ ವಿಷಯವಾಗಿತ್ತು. ಆಗ ಕನ್ನಡ ಮಾತನಾಡಲು ನಮ್ಮ ಜನ ಕೀಳರಿಮೆ ಅನುಭವಿಸುತ್ತಿದ್ದರು. ಮುಂದೆ, ಬಿಎಂಶ್ರೀ, ಕುವೆಂಪು, ಅನಕೃ, ಆಲೂರು ವೆಂಕಟರಾಯ ಮುಂತಾದ ಸಾಹಿತಿ, ಚಳವಳಿಗಾರರ ಪ್ರಯತ್ನದಿಂದಾಗಿ ಕನ್ನಡ ಮಾತು ತಲೆಯೆತ್ತುವಂತಾಯಿತು. ಇಂದು ಭಾಷಿಕ ಅಲ್ಪಸಂಖ್ಯಾತರು ತಮ್ಮ ಮಾತೃಭಾಷೆಯ ವಿಷಯದಲ್ಲಿ ಇದೇ ಕೀಳರಿಮೆ ಬೆಳೆಸಿಕೊಂಡಿದ್ದಾರೆ. ತಮ್ಮ ಮಾತೃಭಾಷೆಯನ್ನು ತಮ್ಮ ಬಳಗದ ಒಳಗೆ ಬಳಸಲೂ ಹಿಂಜರಿಯುತ್ತಿದ್ದಾರೆ. ಈ ಕೀಳರಿಮೆಯೂ ಭಾಷಾ ಅವನತಿಗೆ ಕಾರಣವಾಗಿದೆ. ಇಂಥ ಕೀಳರಿಮೆಯಿಂದ ಹೊರಬರಬೇಕಾದ ಅಗತ್ಯವಿದೆ. ಇಂದು ಅಂಥ ಪ್ರಯತ್ನಗಳೂ ಅಲ್ಲಲ್ಲಿ ಕಾಣಿಸುತ್ತಿವೆ.

'ಸಂತಾಲಿ' ಭಾಷೆಯು ಸಂವಿಧಾನದ 8ನೇ ಪರಿಚ್ಛೇದದ ಅಡಿಯಲ್ಲಿ 2003ರಲ್ಲಿ ಅಧಿಕೃತ ಸ್ಥಾನಮಾನವನ್ನು ಪಡೆಯುವಂತೆ ಮಾಡುವಲ್ಲಿ ಈಶಾನ್ಯ ಭಾಗದ ಜನರು ಯಶಸ್ವಿಯಾದರು. ಅಸ್ಸಾಮಿನ 'ಬೋಡೋ' ಭಾಷೆಯೂ 2002ರಲ್ಲಿ ಅಧಿಕೃತ ಭಾಷೆಯಾಯಿತು. ಅಷ್ಟು ದೂರವೇಕೆ ಪಕ್ಕದ ಗೋವಾ ರಾಜ್ಯವೂ ತೊಂಬತ್ತರ ದಶಕದಲ್ಲಿ ಈ ನಿಟ್ಟಿನಲ್ಲಿ ಯಶಸ್ವಿಯಾಯಿತು. ಶಾಲಾ ಕಾಲೇಜುಗಳಲ್ಲಿ ಕೊಂಕಣಿ ಪಠ್ಯವನ್ನು ಅಳವಡಿಸಿತು (ಈ ನಿಟ್ಟಿನಲ್ಲಿ ತುಳು ಭಾಷಿಕರೂ ಹಲವು ದಶಕಗಳಿಂದ ಹೋರಾಡುತ್ತಿದ್ದರೂ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಅದನ್ನು ಸಾಧಿಸಲು ಸಾಧ್ಯವಾಗದಿರುವುದು ವಿಷಾದಕರ).

ಸಂವಿಧಾನವು 22 ಭಾಷೆಗಳನ್ನು ಅಧಿಕೃತ ಭಾಷೆಗಳೆಂದು ಗುರುತಿಸಿದೆ. ನಮ್ಮ ಶಿಕ್ಷಣ ವ್ಯವಸ್ಥೆಗಳು ಸಹಜವಾಗಿಯೇ ಈ ಅಧಿಕೃತ ಭಾಷಾ ಮಾಧ್ಯಮಗಳಲ್ಲಿ ಶಿಕ್ಷಣ ನೀಡುತ್ತವೆಯೇ ವಿನಾ ಸಾವಿರಾರು ಮಾತೃಭಾಷೆಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗುತ್ತಿಲ್ಲ. ಆ ಕೆಲಸ ಹಾಲಿ ಶಿಕ್ಷಣ ವ್ಯವಸ್ಥೆಯಿಂದ ಸಾಧ್ಯವೂ ಇಲ್ಲ, ಆಯಾ ಭಾಷೆಗಳನ್ನು ಬಳಸುವ ಸಮುದಾಯಗಳೇ ತಮ್ಮ ತಮ್ಮ ಭಾಷೆಗಳನ್ನು ಸಂರಕ್ಷಿಸಿಕೊಳ್ಳುವ ಪ್ರಯತ್ನ ಮಾಡಬೇಕಿದೆ.

ಸರಕಾರಗಳ ಇಚ್ಛಾಶಕ್ತಿಯಿಂದ ಇಂಥ ಭಾಷೆಗಳ ಪ್ರವರ್ಧನೆ ಸಾಧ್ಯವಿದೆ. ಇದಕ್ಕೆ ಸಂವಿಧಾನದ ಬೆಂಬಲವೂ ಇದೆ. ಭಾಷಿಕ ಅಲ್ಪಸಂಖ್ಯಾತರು ತಮ್ಮ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುವುದನ್ನು ಸಂವಿಧಾನದ ಪರಿಚ್ಛೇದ 350 ಮತ್ತು 350-ಎ ಬೆಂಬಲಿಸುತ್ತವೆ. ಇದಕ್ಕಾಗಿ ವಿಶೇಷ ಅಧಿಕಾರಿಯನ್ನು ನೇಮಿಸಲು ಸಹ ಸಂವಿಧಾನ ಸೂಚಿಸುತ್ತದೆ. ಆದ್ದರಿಂದ ಭಾಷೆಯ ಬೆಳವಣಿಗೆಗೆ ಹಾಗೂ ಭಾಷೆ ಭಾಷೆಗಳ ನಡುವಣ ಸೌಹಾರ್ದತೆಯ ಸಾಧನೆಗೆ ಸರಕಾರದ ನೀತಿ ನಿಯಮಾವಳಿಗಳು ಪರಿಣಾಮಕಾರಿಯಾಗಿ ನೆರವಾಗಬಲ್ಲವು. ಇಂದು ಭಾರತದ ಉದ್ದಗಲಕ್ಕೂ ರಾಜ್ಯ ರಾಜ್ಯಗಳ ನಡುವಿನ ಗಡಿಗಳ ದ್ವಿಭಾಷಿಕ ಪ್ರದೇಶಗಳು ಪ್ರಧಾನವಾಗಿ ರಾಜಕೀಯ ಹಸ್ತಕ್ಷೇಪದಿಂದಷ್ಟೇ ಉದ್ಭವವಾಗುವ ಸಮಸ್ಯೆಗಳನ್ನು ಎದುರಿಸುತ್ತಿವೆ. ಅದು ಈಶಾನ್ಯ ರಾಜ್ಯಗಳಿರಬಹುದು, ಜಮ್ಮು-ಕಾಶ್ಮೀರವಿರಬಹುದು ಅಥವಾ ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಕೇರಳ ರಾಜ್ಯಗಳ ಗಡಿಪ್ರದೇಶವಿರಬಹುದು. ದ್ವಿಭಾಷಿಕ ಪ್ರದೇಶಗಳಲ್ಲಿ ಎರಡಲ್ಲ, ಹಲವು ಭಾಷೆಗಳನ್ನಾಡುವ ಜನಗಳು ಸಮಸ್ಯೆಯೇ ಇಲ್ಲದಂತೆ ಜೀವಿಸುತ್ತಾರೆ. ಆದರೆ ರಾಜಕಾರಣಿಗಳು ಭಾಷೆಯನ್ನು ಒಂದು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮುನ್ನೆಲೆಗೆ ತಂದು ಇಲ್ಲದ ಸಮಸ್ಯೆಯನ್ನು ಹುಟ್ಟುಹಾಕುತ್ತಾರೆ. ಇಂದು ಕೇರಳ ಸರಕಾರ ಮಂಡಿಸಲಿರುವ ಮಾತೃಭಾಷೆಯ ಮಸೂದೆಯನ್ನು ಈ ಹಿನ್ನೆಲೆಯಲ್ಲಿ ಅವಲೋಕಿಸಬೇಕಾಗುತ್ತದೆ. ರಾಜಕಾರಣಿಗಳೇ ಹುಟ್ಟುಹಾಕಿರುವ ಇಂಥ ಸಮಸ್ಯೆಗಳ ಪರಿಹಾರಕ್ಕೆ ಪುನಃ ರಾಜಕಾರಣಿಗಳಿಗೇ ಮೊರೆಹೋಗುವುದು ಜಾಣತನವಲ್ಲ. ಭಾಷಾತಜ್ಞರು ಹಾಗೂ ಕಾನೂನುತಜ್ಞರು ಈ ಕುರಿತು ಚರ್ಚಿಸಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕಾಗಿದೆ.

ಇದಕ್ಕೆ ಮೊದಲ ಪರಿಹಾರೋಪಾಯವೆಂದರೆ ದ್ವಿಭಾಷಿಕ ಆಡಳಿತ ನೀತಿ. ಗಡಿಪ್ರದೇಶದ ಸ್ಥಳೀಯ ಆಡಳಿತದಲ್ಲಿ ದ್ವಿಭಾಷಿಕ ನೀತಿಯನ್ನು ಜಾರಿಗೆ ತರಬಹುದು. ಶಿಕ್ಷಣ, ಆಡಳಿತ, ಸಾರ್ವಜನಿಕ ಫಲಕಗಳು ಹಾಗೂ ವ್ಯವಹಾರಗಳಲ್ಲಿ ಎರಡೂ ಭಾಷೆಗಳ ಬಳಕೆಯನ್ನು ಜಾರಿಗೆ ತರುವುದು. ಈ ಬಗೆಯ ಆಡಳಿತ ಕ್ರಮವನ್ನು ಸಂವಿಧಾನದ 29 ಹಾಗೂ 30ನೇ ಪರಿಚ್ಛೇದಗಳೂ ಅನುಮೋದಿಸುತ್ತದೆ.

ಎರಡನೆಯದಾಗಿ, ಸ್ವಾತಂತ್ರ್ಯಾನಂತರ ಭಾಷೆಯ ಆಧಾರದ ಮೇಲೆ ರಾಜ್ಯಗಳ ಏಕೀಕರಣವಾದರೂ ಗಡಿರೇಖೆಗಳ ರೂಪುರೇಷೆ ಒಂದೇ ಸಲಕ್ಕೆ ನಿರ್ಣಯವಾಗುವ ಸಂಗತಿಯಲ್ಲ. ಆದ್ದರಿಂದಲೇ ಕೇಂದ್ರ ಸರಕಾರವು ಏಕೀಕರಣವಾದ ಮೇಲೆ ಫಸಲ್ ಅಲಿ ಆಯೋಗವನ್ನು ರೂಪಿಸಿತ್ತು. ಇಂಥ ರಾಜ್ಯಗಳ ಪುನರ್ವಿಂಗಡಣಾ ಆಯೋಗಗಳು ಕಾಲಕಾಲಕ್ಕೆ ರೂಪುಗೊಂಡು ಭಾಷಿಕ ಸರ್ವೇಕ್ಷಣೆಯ ಮೂಲಕ ಗಡಿವಿವಾದವನ್ನು ಬಗೆಹರಿಸಬೇಕಾಗಿದೆ. ಸ್ಥಳೀಯ ಆಡಳಿತದೊಂದಿಗೆ ಗಡಿ ಪ್ರದೇಶಗಳ ವ್ಯಾಪ್ತಿಯನ್ನು ಪುನರ್ವಿಂಗಡಣೆ ಮಾಡಬೇಕಾಗಿದೆ.

ಮೂರನೆಯದಾಗಿ ಕೇಂದ್ರ ಸರಕಾರದ 'ಏಕ್ ಭಾರತ್ ಶ್ರೇಷ್ಠ್ ಭಾರತ್' ಅಭಿಯಾನದ ಅಡಿಯಲ್ಲಿ ರಾಜ್ಯ ರಾಜ್ಯಗಳು ತಮ್ಮ ಭಾಷಿಕ, ಆರ್ಥಿಕ, ನೈಸರ್ಗಿಕ, ಸಾಂಸ್ಕೃತಿಕ ಸಂಪತ್ತನ್ನು ಪರಸ್ಪರ ಪರಿಚಯಿಸುವ, ವಿನಿಮಯ ಮಾಡಿಕೊಳ್ಳುವ ಸಾಧ್ಯತೆಯನ್ನು ಶೋಧಿಸಿಕೊಳ್ಳಬಹುದು. ಜಾಗತೀಕರಣದ ಪ್ರಭಾವದಿಂದಾಗಿ ಇಂಗ್ಲಿಷ್ ಭಾಷೆ ಬೆಳೆಯುತ್ತಿದೆಯಾದರೂ ಈ ಬೆಳವಣಿಗೆ ಕೇವಲ ಭಾರತೀಯ ಭಾಷೆಗಳ ಮೇಲಷ್ಟೇ ಅಲ್ಲ, ಸ್ವತಃ ಯುರೋಪಿನ ಹಲವು ಸ್ಥಳೀಯ ಭಾಷೆ, ಉಪಭಾಷೆಗಳಿಗೂ ಮಾರಕವಾಗಿ ಪರಿಣಮಿಸಿದೆ. ಇಂಥ ಸನ್ನಿವೇಶದಲ್ಲಿ ನಮ್ಮ ರಾಜ್ಯಗಳು ಕ್ಷುಲ್ಲಕ ರಾಜಕೀಯ ಉದ್ದೇಶಕ್ಕಾಗಿ ಗಡಿಭಾಗದ ಹೊರನಾಡಿನ ಭಾಷೆಗಳನ್ನು- ಅದು ಬೆಳಗಾವಿ ಇರಬಹುದು, ಬಳ್ಳಾರಿ ಇರಬಹುದು, ಅಥವಾ ಕಾಸರಗೋಡು ಇರಬಹುದು- ನಿರ್ಲಕ್ಷಿಸದೇ ಪಂಪ-ನಾಗವರ್ಮರಂತೆ ಭಾಷೆಗಳ ನಡುವೆ ಸೇತುವೆ ಕಟ್ಟುವ ಪ್ರಯತ್ನ ಮಾಡಬೇಕಾಗಿದೆ. ಯಾವುದೇ ನೀತಿಯನ್ನು ಜಾರಿಗೆ ತರುವಾಗಲೂ ಗಡಿಭಾಗದ ಜನಸಾಮಾನ್ಯರ ಮತ್ತು ಭಾಷೆ ಹಾಗೂ ಕಾನೂನುತಜ್ಞರ ಅಭಿಮತವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿದೆ.

(ಲೇಖಕರು ಸಹ-ಪ್ರಾಧ್ಯಾಪಕರು, ಆದಿಚುಂಚನಗಿರಿ ವಿಶ್ವವಿದ್ಯಾಲಯ)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 252

ಸಮಾಚಾರ ಸಣ್ಣದಲ್ಲ

ವಾರಾಣಸಿ ಕಾಲೇಜಲ್ಲಿ ಸಂಜೆ ತಮಿಳು ತರಗತಿ

ಲಖನೌ: ಉತ್ತರ ಪ್ರದೇಶ ರಾಜ್ಯದ ವಾರಣಾಸಿ ನಗರದ ಶಾಲೆ-ಕಾಲೇಜುಗಳಲ್ಲಿ ಸಂಸ್ಕೃತಿ ಮತ್ತು ಭಾಷೆಯ ವಿನಿಮಯ ದೃಷ್ಟಿಯಿಂದ ನಿಯಮಿತವಾಗಿ 'ತಮಿಳು ಭಾಷೆ ತರಗತಿ'ಗಳನ್ನು ಪರಿಚಯಿಸಲಾಗುವುದು. ಪ್ರಧಾನಿ ನರೇಂದ್ರ ಮೋದಿ ಅವರ 'ಕಾಶಿ ತಮಿಳು ಸಂಗಮಮ್' ಪರಿಕಲ್ಪನೆಗೆ ಅನುಗುಣವಾಗಿ ಈ ಉಪಕ್ರಮ ಕೈಗೊಳ್ಳಲಾಗಿದೆ. ಡಿ.28ರಂದು ಪ್ರಸಾರವಾದ 'ಮನ್ ಕಿ ಬಾತ್' ರೇಡಿಯೊ ಕಾರ್ಯಕ್ರಮದಲ್ಲಿ ವಾರಾಣಸಿಯ ಸರಕಾರಿ ಕ್ವೀನ್ಸ್ ಕಾಲೇಜಿನ ವಿದ್ಯಾರ್ಥಿನಿ ಪಾಯಲ್ ಪಟೇಲ್ ಅಲ್ಪಾವಧಿಯಲ್ಲೇ ತಮಿಳು ಭಾಷೆ ಕಲಿತಿರುವುದನ್ನು ಪ್ರಸ್ತಾಪಿಸಿದ ಪ್ರಧಾನಿ ಮೋದಿ ಬಹಳವಾಗಿ ಪ್ರಶಂಸಿಸಿದ್ದರು. ಇದರಿಂದ ಪ್ರೇರಿತರಾಗಿಯೇ ಕಾಲೇಜು ನಿತ್ಯ ಸಂಜೆ ವೇಳೆ ತಮಿಳು ತರಗತಿ ನಡೆಸಲು ಯೋಜಿಸಿದೆ. ಶಾಲಾ ಜಿಲ್ಲಾ ನಿರೀಕ್ಷಕರು ತರಗತಿ ನಡೆಸಲು ಸಂಸ್ಥೆಗೆ ನಿರ್ದೇಶನ ನೀಡಿದ್ದಾರೆ. ಇದರ ಭಾಗವಾಗಿ ಮೊದಲಿಗೆ ವಾರಣಾಸಿಯ 50 ಶಿಕ್ಷಕರನ್ನು ತಮಿಳುನಾಡಿಗೆ ಹಿಂದಿ ಕಲಿಯಲು ನಿಯೋಜಿಸುವ ಸಾಧ್ಯತೆಯಿದೆ ಎಂದು ಸರಕಾರಿ ಕ್ವೀನ್ಸ್ ಕಾಲೇಜು ಪ್ರಾಂಶುಪಾಲ ಸುಮಿತ್ ಕುಮಾರ್ ಸುದ್ದಿಸಂಸ್ಥೆಗೆ ಸೋಮವಾರ ತಿಳಿಸಿದ್ದಾರೆ.

ಪಾಕ್ ಹಿಂದೂ ಹತ್ಯೆ: ಆರೋಪಿಗಳ ಬಂಧನ

ಕರಾಚಿ: ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಬಾದಿನ್ ಜಿಲ್ಲೆಯ ತಲ್ಹಾರ್ ಗ್ರಾಮದಲ್ಲಿ ಜಮೀನಿನಲ್ಲಿ ಮನೆ ನಿರ್ಮಿಸಿದ್ದಕ್ಕಾಗಿ ಹಿಂದೂ ರೈತ ಯುವಕ ಕಲ್ಲೇಶ್ ಕೊಹ್ಲಿ(23)ಯನ್ನು ಜ.4ರಂದು ಗುಂಡಿಕ್ಕಿ ಕೊಲೆ ಮಾಡಿದ್ದ ಆರೋಪಿಗಳಾದ ಜಮೀನ್ದಾರ ಸರ್ಫರಾಜ್ ನಿಜಾಮನಿ ಮತ್ತು ಸಹಾಯಕ ಜಫರುಲ್ಲಾ ಖಾನ್‌ನನ್ನು ವಿಶೇಷ ಪೊಲೀಸ್ ತಂಡ ಹೈದರಾಬಾದ್‌ನಲ್ಲಿ ಬಂಧಿಸಿದೆ ಎಂದು ಸಿಂಧ್ ಪ್ರಾಂತ್ಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕೊಹ್ಲಿ ಸೋದರ ಪೂನ್ ಕುಮಾರ್ ಕೊಹ್ಲಿ ಎಫ್‌ಐಆರ್ ದಾಖಲಿಸಿದ ನಂತರ ಪೊಲೀಸ್ ತಂಡವನ್ನು ರಚಿಸಲಾಗಿತ್ತು. ಕೃತ್ಯ ನಡೆಸಿದ ಬಳಿಕ ಆರೋಪಿಗಳು ಪರಾರಿಯಾಗಿದ್ದರು. ಅವರ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿತ್ತು. ಹೈದರಾಬಾದ್ ಫತೇ ಚೌಕ್ ಪ್ರದೇಶದಿಂದ ಬಂಧಿಸಿದ್ದೇವೆ ಎಂದು ಎಸ್‌ಎಸ್‌ಪಿ ಬದಿನ್ ಕಮರ್ ರೆಜಾ ಜಸ್ಕಾನಿ ಹೇಳಿದ್ದಾರೆ.

ದೆಹಲಿ ದಟ್ಟ ಮಂಜು: ಕನಿಷ್ಠ ಉಷ್ಣಾಂಶ 3.2

ಸೋಮವಾರ ಬೆಳಗ್ಗೆ ದೆಹಲಿ ಚಿತ್ರಣ.

ದೆಹಲಿ: ರಾಷ್ಟ್ರದ ರಾಜಧಾನಿ ನಗರ ದೆಹಲಿಯ ಸಫ್ದರ್‌ಜಂಗ್ ಪ್ರದೇಶದಲ್ಲಿ ಸೋಮವಾರ ಮುಂಜಾನೆ ಕನಿಷ್ಠ ತಾಪಮಾನ 3.2 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದಿತ್ತು. ದಟ್ಟವಾಗಿ ಮಂಜು ಸುರಿಯುತ್ತಿತ್ತು. ರಸ್ತೆಗಳಲ್ಲಿನ ಗೋಚರತೆ ಪ್ರಮಾಣ ಬಹಳ ಕನಿಷ್ಠ ಮಟ್ಟಕ್ಕಿಳಿದಿತ್ತು. ವಾಹನ ಸಂಚಾರ ಕಡಿಮೆ ಇದ್ದರೂ ಮಂಜು ಮುಸುಕಿದ್ದ ಕಾರಣ ಎಲ್ಲಾ ವಾಹನಗಳೂ ಪ್ರಖರ ಮುಂಬದಿ ದೀಪಗಳನ್ನು ಬೆಳಗಿಸಿಕೊಂಡೇ ಸಂಚರಿಸುತ್ತಿದ್ದವು. ಜ.17ರವರೆಗೂ ಇದೇ ಬಗೆಯ ಹವಾಮಾನ ಇರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಸೋಮವಾರ ಮುನ್ಸೂಚನೆ ನೀಡಿದೆ. ದೆಹಲಿ ಮಹಾ ನಗರ ಮಾತ್ರವಲ್ಲದೇ, ನೆರೆ ಉತ್ತರ ಪ್ರದೇಶ, ಹರಿಯಾಣ, ಪಂಜಾಬ್, ಉತ್ತರಾಖಂಡ್ ರಾಜ್ಯಗಳ ಸಮೀಪದ ನಗರ-ಪಟ್ಟಣಗಳಲ್ಲಿಯೂ ಕನಿಷ್ಠ ತಾಪಮಾನವಿತ್ತು. ದಟ್ಟ ಮಂಜು ಕವಿದಿತ್ತು. ರಾಜಸ್ಥಾನ, ಬಿಹಾರದಲ್ಲಿಯೂ ತಾಪಮಾನ ಕನಿಷ್ಠ ಮಟ್ಟಕ್ಕಿಳಿದಿತ್ತು. ಮಂಜು ಸುರಿಯುತ್ತಿತ್ತು ಎಂದು ವರದಿಯಾಗಿದೆ.

ಪಿಯು ವಿದ್ಯಾರ್ಥಿನಿ ಅಪಹರಿಸಿ ಅತ್ಯಾಚಾರ

ಬಿಕಾನೇರ್: ರಾಜಸ್ಥಾನದ ಬಿಕಾನೇರ್ ಜಿಲ್ಲೆಯಲ್ಲಿ 12ನೇ ತರಗತಿ ವಿದ್ಯಾರ್ಥಿನಿಯನ್ನು ಅಪಹರಿಸಿದ ದುಷ್ಕರು, ಚಲಿಸುವ ಕಾರಿನಲ್ಲೇ ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ. ಜ.6ರಂದು ನಪಸರ್ ಪ್ರದೇಶದಲ್ಲಿ ಘಟನೆ ನಡೆದಿದ್ದು, ವಿದ್ಯಾರ್ಥಿನಿ ಕುಟುಂಬದವರು ನೀಡಿದ್ದ ದೂರನ್ನು ಆಧರಿಸಿ ನಪಸರ್ ಠಾಣೆ ಪೊಲೀಸರು ಜ.11ರಂದು ಪ್ರಕರಣ ದಾಖಲಿಸಿದ್ದಾರೆ. ಜ.6ರ ಬೆಳಗ್ಗೆ ವಿದ್ಯಾರ್ಥಿನಿ ಮನೆಯಿಂದ ಕಾಲೇಜಿಗೆ ಹೋಗುವಾಗ ಮಾರ್ಗ ಮಧ್ಯೆ ಇಬ್ಬರು ಯುವಕರು ಅಡ್ಡಗಟ್ಟಿ ಕಾರಿನಲ್ಲಿ ಅಪಹರಿಸಿದ್ದಾರೆ. ಆರೋಪಿಗಳು ಹಲವು ಗಂಟೆ ಕಾರು ಚಲಾಯಿಸುತ್ತಲೇ ಅತ್ಯಾಚಾರ ನಡೆಸಿದ್ದಾರೆ. ಕಾರು ಪಕ್ಕದ ಹಳ್ಳಿಗೆ ಪ್ರವೇಶಿಸಿದಾಗ, ಗ್ರಾಮಸ್ಥರು ಅನುಮಾನಗೊಂಡು ಕಾರನ್ನು ತಡೆದಿದ್ದಾರೆ. ಆರೋಪಿಗಳು ಪರಾರಿಯಾಗಿದ್ದಾನೆ. ಗ್ರಾಮಸ್ಥರ ಮಾಹಿತಿ ಮೇರೆಗೆ ವಿದ್ಯಾರ್ಥಿನಿ ಕುಟುಂಬದವರು ಬಂದು ಮನೆಗೆ ಕರೆದೊಯ್ದಿದ್ದಾರೆ ಎಂದು ಪೊಲೀಸರು ಸುದ್ದಿಸಂಸ್ಥೆಗೆ ವಿವರಿಸಿದ್ದಾರೆ.

ಪ್ರಯಾಣಿಕ ಅಸ್ವಸ್ಥ ವಿಮಾನ ಭೂಸ್ಪರ್ಶ

ದೆಹಲಿ: ದೆಹಲಿಯಿಂದ ವಿಜಯವಾಡಕ್ಕೆ ಸೋಮವಾರ ಬೆಳಗ್ಗೆ ತೆರಳುತ್ತಿದ್ದ ಏರ್ ಇಂಡಿಯ ಸಂಸ್ಥೆಯ 'ಎಐ-2517' ವಿಮಾನದಲ್ಲಿ ವೃದ್ಧ ಪ್ರಯಾಣಿಕರೊಬ್ಬರು ದಿಢೀರ್ ಅಸ್ವಸ್ಥರಾದರು. ಅವರಿಗೆ ತುರ್ತು ಚಿಕಿತ್ಸೆ ಕೊಡಿಸುವ ಸಲುವಾಗಿ ವಿಮಾನವನ್ನು ಜೈಪುರದಲ್ಲಿ ತುರ್ತಾಗಿ ಇಳಿಸಲಾಯಿತು. ಅಲ್ಲಿ ವೃದ್ಧ ಪ್ರಯಾಣಿಕರನ್ನು ಕೆಳಗಿಳಿಸಿ ಆಸ್ಪತ್ರೆಗೆ ಕರೆದೊಯ್ಯಲು ಅವಕಾಶ ಮಾಡಿಕೊಟ್ಟು ಬಳಿಕ ವಿಜಯವಾಡಕ್ಕೆ ಸಂಚಾರ ಮುಂದುವರಿಸಲಾಯಿತು.

ನರೇಂದ್ರ ಮೋದಿ-ಡೊನಾಲ್ಡ್ ಟ್ರಂಪ್ ನೈಜ ಮಿತ್ರರು: ಗೋರ್

ಅಮೆರಿಕಕ್ಕೆ ಭಾರತ ಬಹಳ ಅಗತ್ಯವಾದ ಮಿತ್ರರಾಷ್ಟ್ರವಾಗಿದೆ | ಹಲವು ಬೆದರಿಕೆಗಳ ಬಳಿಕ ಕಡೆಗೂ ಒಲ್ಲೈಕೆಗಿಳಿದ ಅಮೆರಿಕ | 2027ಕ್ಕೆ ಮುನ್ನ ಭಾರತಕ್ಕೆ ಟ್ರಂಪ್: ರಾಯಭಾರಿ ಸೆರ್ಗಿಯೊ

ದೆಹಲಿ: ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಿಜವಾದ ಮಿತ್ರರಾಗಿದ್ದಾರೆ. ಅಮೆರಿಕಕ್ಕೆ ಭಾರತ ಬಹಳ ಅತ್ಯಗತ್ಯವಾದ ರಾಷ್ಟ್ರವಾಗಿದೆ, ಈ ಸ್ಥಾನದಲ್ಲಿ ಬೇರೆ ಯಾವುದೇ ರಾಷ್ಟ್ರವನ್ನೂ ಊಹಿಸಿಕೊಳ್ಳಲೂ ಸಾಧ್ಯವಿಲ್ಲ ಎಂದು ಅಮೆರಿಕದಿಂದ ಭಾರತಕ್ಕೆ ಹೊಸದಾಗಿ ನಿಯೋಜಿತರಾದ ರಾಯಭಾರಿ ಸೆರ್ಗಿಯೊ ಗೋರ್ ಸೋಮವಾರ ಹೇಳಿದ್ದಾರೆ.

ದೆಹಲಿಯಲ್ಲಿರುವ ಅಮೆರಿಕ ರಾಯಭಾರ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಸಾರ್ವಜನಿಕ ಸಭೆಯಲ್ಲಿ ಬಹಳ ಉತ್ಸಾಹದಿಂದ ಮಾತನಾಡಿದ ಗೋರ್, ನರೇಂದ್ರ ಮೋದಿ ಮತ್ತು ಡೊನಾಲ್ಡ್ ಟ್ರಂಪ್ ಅತ್ಯುತ್ತಮ ಸ್ನೇಹಿತರು. ಹಾಗಾಗಿ ಏನೇ ಭಿನ್ನಾಭಿಪ್ರಾಯಗಳಿದ್ದರೂ ಅವನ್ನು ಪರಿಹರಿಸಬಹುದಾಗಿದೆ. ಅದೇ ಕಾರಣವಾಗಿ ಮುಂದಿನ ವರ್ಷದೊಳಗೆ ಅಧ್ಯಕ್ಷ ಟ್ರಂಪ್ ಭಾರತಕ್ಕೆ ಆಗಮಿಸಲಿದ್ದಾರೆ ಎಂದು ಹೇಳಿದರು.

'ನಾನು ಅಧ್ಯಕ್ಷ ಟ್ರಂಪ್ ಅವರೊಂದಿಗೆ ಪ್ರಪಂಚದಾದ್ಯಂತ ಪ್ರಯಾಣಿಸಿದ್ದೇನೆ ಮತ್ತು ಪ್ರಧಾನಿ ಮೋದಿ ಅವರೊಂದಿಗಿನ ಅವರ ಸ್ನೇಹ ಬಹಳ ನೈಜವಾದುದಾಗಿದೆ ಎಂದು ದೃಢವಾಗಿ ಹೇಳಬಲ್ಲೆ' ಎಂದೂ ಗೋರ್ ಒತ್ತಿ ಹೇಳಿದರು.

ಅಮೆರಿಕದಂತಹ ದೊಡ್ಡ ದೇಶದ ಪ್ರತಿನಿಧಿಯಾಗಿ ಭಾರತದಂತಹ ಅದ್ಭುತವಾದ ದೇಶದಲ್ಲಿ ರಾಯಭಾರಿಯಾಗಿ ಸೇವೆ ಸಲ್ಲಿಸುವುದು ನನ್ನ ಅದೃಷ್ಟ ಎಂದುಕೊಂಡಿರುವೆ. ಅದಕ್ಕಾಗಿ ನನಗೆ ಬಹಳ ಹೆಮ್ಮೆಯಾಗುತ್ತಿದೆ, ಸಂತೋಷವಾಗುತ್ತಿದೆ ಎಂದೂ ಗೋರ್ ಹೇಳಿದ್ದಾರೆ.

ಕಡೆಗೀಗ ಒಲ್ಲೈಕೆ ತಂತ್ರ: ಮೊದಲಿಗೆ ರಷ್ಯಾದಿಂದ ಕಚ್ಚಾತೈಲ ಖರೀದಿಸದಿರಿ ಎಂಬ ಒತ್ತಡ, ಬಳಿಕ ಭಾರತದ ಮೇಲೆ ಶೇ.50 ಪ್ರತಿಸುಂಕ ಹೇರಿಕೆ. ಮಧ್ಯೆ ಮಧ್ಯೆ, ಪ್ರಧಾನಿ ಮೋದಿ ಕುರಿತು ವಿಪರೀತ ಪ್ರಶಂಸೆ, ಇತ್ತೀಚೆಗೆ ಪ್ರತಿಸುಂಕ ಪ್ರಮಾಣ ಶೇ.500ಕ್ಕೇರಿಸುವ ಬೆದರಿಕೆ. ಇವೆಲ್ಲಾ ತಂತ್ರಗಳು ಯಾವುದೇ ಫಲ ನೀಡದೇ ಇದ್ದಾಗ ಕಡೆಗೆ ಒಲ್ಲೈಕೆ ಹಾದಿ. ಇದು ಭಾರತ ಸರಕಾರದ ಜತೆಗಿನ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದ ಸಂಬಂಧ ವೃದ್ಧಿ ವೈಖರಿ.

ಭಾರತಾವಲಂಬನೆ: ಟ್ರಂಪ್ ಅವರದ್ದೇ ಆಯ್ಕೆಯಾಗಿ ಭಾರತಕ್ಕೆ ನೂತನ ರಾಯಭಾರಿಯಾಗಿ ಆಗಮಿಸಿರುವ ರಷ್ಯಾ ಮೂಲದ ರಾಜತಾಂತ್ರಿಕ ಅಧಿಕಾರಿ ಸೆರ್ಗಿಯೊ ಗೋರ್, ಮೊದಲಿಗೇ ನಯವಿನಯ, ಒಲ್ಲೈಕೆಯ ಮಾರ್ಗ ಹಿಡಿದಿದ್ದಾರೆ ಎಂಬುದು ಅವರ ಮೊದಲ ದಿನದ ಮಾತುಗಳಿಂದ ತಿಳಿದುಬರುತ್ತದೆ. ಇದು 145 ಕೋಟಿ ಜನಸಂಖ್ಯೆಯ ಬೃಹತ್ ಮಾರುಕಟ್ಟೆಯಾಗಿರುವ, ವಿಶ್ವದ 4ನೇ ದೊಡ್ಡ ಆರ್ಥಿಕ ಶಕ್ತಿಯಾಗಿರುವ ಭಾರತ ದೂರದ ಅಮೆರಿಕ ದೇಶಕ್ಕೆ, ಅದರ ಸರಕಾರಕ್ಕೆ ಅದೆಷ್ಟರ ಮಟ್ಟಿಗೆ ಅಗತ್ಯವಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಅಮೆರಿಕದ ರಾಯಭಾರಿಯಾಗಿ ಸೋಮವಾರ ದೆಹಲಿಯಲ್ಲಿ ಅಧಿಕಾರ ಸ್ವೀಕರಿಸಿದ ಸೆರ್ಗಿಯೊ ಗೋರ್, ಪ್ರಥಮ ಬಹಿರಂಗ ಭಾಷಣ ಮಾಡಿದರು.

ಇಂದಿನಿಂದ ಮತ್ತೆ ವ್ಯಾಪಾರದ ಮಾತು

ಎರಡೂ ದೇಶಗಳು ನಡುವಿನ ಮುಂದಿನ ಸುತ್ತಿನ ವ್ಯಾಪಾರ ಒಪ್ಪಂದದ ಮಾತುಕತೆ ಮಂಗಳವಾರ ಪುನಾರಂಭಗೊಳ್ಳಲಿವೆ ಎಂದೂ ಭಾರತಕ್ಕೆ ಅಮೆರಿಕದ ನೂತನ ರಾಯಭಾರಿಯಾಗಿರುವ ಸೆರ್ಗಿಯೊ ಗೋರ್ ಹೇಳಿದರು. ಭಾರತ ವಿಶ್ವದ ಅತಿದೊಡ್ಡ ರಾಷ್ಟ್ರ. ಭಾರತ-ಅಮೆರಿಕ ನಡುವಿನ ಸಂಬಂಧ ನಿರಂತರ ವೃದ್ಧಿಗೆ ವ್ಯಾಪಾರ ಒಪ್ಪಂದ ಬಹಳ ಮುಖ್ಯ. ಅದರ ಜತೆಗೇ ಭದ್ರತೆ, ಭಯೋತ್ಪಾದನೆ ನಿಗ್ರಹ, ಇಂಧನ, ತಂತ್ರಜ್ಞಾನ, ಶಿಕ್ಷಣ ಮತ್ತು ಆರೋಗ್ಯದಂತಹ ಇತರ ಪ್ರಮುಖ ಕ್ಷೇತ್ರಗಳಲ್ಲಿಯೂ ಎರಡೂ ರಾಷ್ಟ್ರಗಳು ನಿಕಟವಾಗಿ ಕೆಲಸ ಮಾಡುತ್ತಿವೆ ಎಂದು ಗೋರ್ ಹೇಳಿದ್ದಾರೆ. ಈಗಷ್ಟೇ ಅಧಿಕಾರ ಸ್ವೀಕರಿಸಿರುವ ಸೆರ್ಗಿಯೊ ಮುಂದಿನ ವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ ಗೌರವ ಸಲ್ಲಿಸಲಿದ್ದಾರೆ ಎಂದು ತಿಳಿದುಬಂದಿದೆ.

ಮೋದಿ ಮೆಚ್ಚಿಸಲು ಪ್ಯಾಕ್ಸ್ ಸಿಲಿಕಾ ಸದಸ್ಯತ್ವದ ಆಮಿಷ

ಭಾರತ 'ಪ್ಯಾಕ್ಸ್ ಸಿಲಿಕಾ' ಒಕ್ಕೂಟದ ಸದಸ್ಯ ದೇಶವಾಗಲಿದೆ ಎಂದು ಭಾರತದಲ್ಲಿನ ಅಮೆರಿಕ ರಾಯಭಾರಿ ಸೆರ್ಗಿಯೊ ಗೋರ್ ಘೋಷಿಸಿದರು. ಮುಂದಿನ ತಿಂಗಳು ಪಾಕ್ಸ್ ಸಿಲಿಕಾ ರಾಷ್ಟ್ರಗಳ ಗುಂಪಿಗೆ ಪೂರ್ಣ ಸದಸ್ಯನಾಗಿ ಸೇರಿಕೊಳ್ಳಲು ಭಾರತವನ್ನು ಆಹ್ವಾನಿಸಲಾಗುವುದು. ಈ ವಿಚಾರವನ್ನು ಪ್ರಕಟಿಸಲು ನನಗೆ ಬಹಳ ಸಂತೋಷವಾಗುತ್ತಿದೆ ಎಂದೂ ಗೋರ್ ಹೇಳಿದ್ದಾರೆ.

'ಪಿಎಎಕ್ಸ್'(ಪ್ಯಾಕ್ಸ್) ಸಿಲಿಕಾ' ಎಂಬ ಒಕ್ಕೂಟ 2025ರ ವರ್ಷಾಂತ್ಯದಲ್ಲಿ ಸಿಲಿಕಾನ್, ಸೆಮಿಕಂಡಕ್ಟರ್ ಮತ್ತು ಕೃತಕ ಬುದ್ಧಿಮತ್ತೆ(ಎ.ಐ) ಕ್ಷೇತ್ರದಲ್ಲಿನ ಸುರಕ್ಷಿತ, ಸ್ಥಿತಿಸ್ಥಾಪಕ ಮತ್ತು ನಾವೀನ್ಯ ಸೂತ್ರ ಚಾಲಿತವಾದ ವಿಶ್ವ ಮಟ್ಟದ ಪೂರೈಕೆ ಸರಪಳಿ ರೂಪಿಸಲು ಅಮೆರಿಕದ ನೇತೃತ್ವದಲ್ಲಿ ಆರಂಭಿಸಲಾದ ಒಕ್ಕೂಟವಾಗಿದೆ. ಈ ಒಕ್ಕೂಟವು ಟ್ರಂಪ್ ಆಡಳಿತದ ಆರ್ಥಿಕ ಭದ್ರತಾ ಕಾರ್ಯತಂತ್ರದ ಪ್ರಮುಖ ಅಂಶವಾಗಿದೆ ಎಂದೂ ಗೋರ್ ವಿವರಿಸಿದ್ದಾರೆ.

ಇದು, ಸೆಮಿಕಂಡಕ್ಟರ್, ಎವಿ ಬ್ಯಾಟರಿಗೆ ಅಗತ್ಯವಾದ ಕಚ್ಚಾಪದಾರ್ಥಗಳ ವಿಚಾರದಲ್ಲಿ ಚೀನಾ ದೇಶದ ಮೇಲಿನ ಅವಲಂಬನೆ ಕಡಿಮೆ ಮಾಡುವ ಮತ್ತು ಜಾಗತಿಕ ಚಿಪ್ ಉದ್ಯಮದಲ್ಲಿ ಚೀನಾದ ಪ್ರಭಾವವನ್ನು ಎದುರಿಸುವ ಗುರಿ ಇಟ್ಟುಕೊಂಡಿದೆ. ಅಮೆರಿಕ, ಜಪಾನ್, ದಕ್ಷಿಣ ಕೊರಿಯ, ಸಿಂಗಾಪುರ, ನೆದರ್‌ಲೆಂಡ್, ಯುನೈಟೆಡ್ ಕಿಂಗ್ಡಮ್ (ಬ್ರಿಟನ್), ಇಸ್ರೇಲ್ ಮತ್ತು ಆಸ್ಟ್ರೇಲಿಯ ದೇಶಗಳು 'ಪ್ಯಾಕ್ಸ್ ಸಿಲಿಕಾ' ಒಕ್ಕೂಟದ ಸ್ಥಾಪಕ ಸದಸ್ಯ ರಾಷ್ಟ್ರಗಳಾಗಿವೆ.

ಅಜರ್ ಮಸೂದ್ ಆಡಿಯೊ ಬೆನ್ನಲ್ಲೆ ಡ್ರೋನ್ ಹಾರಾಟ | ಗಣರಾಜ್ಯೋತ್ಸವ ಸಮೀಪಿಸಿರುವಾಗಲೇ ಪಾಕ್ ಕಿತಾಪತಿ

ಗಡಿಯಲ್ಲಿ ಹತ್ತಾರು ಪಾಕ್ ಡ್ರೋನ್‌ಗಳು

ಶ್ರೀನಗರ: ಸಾವಿರಕ್ಕೂ ಹೆಚ್ಚು ಆತ್ಮಹತ್ಯಾ ಬಾಂಬರ್ ಅದಾಗಲೇ ಪಾಕಿಸ್ತಾನದಲ್ಲಿ ಸಿದ್ಧರಾಗಿದ್ದಾರೆ. ಭಾರತದೊಳಕ್ಕೆ ನುಸುಳಿ ಭಯೋತ್ಪಾದಕ ಕೃತ್ಯ ನಡೆಸಲು ಅವಕಾಶ ಮಾಡಿಕೊಡುವಂತೆ ಒತ್ತಡ ಹಾಕುತ್ತಿದ್ದಾರೆ ಎಂಬ ಹೇಳಿಕೆಗಳಿರುವ ಪಾಕ್ ಮೂಲದ ಉಗ್ರ ಸಂಘಟನೆ 'ಜೈಶ್-ಎ-ಮೊಹಮ್ಮದ್' (ಜೆಇಎಂ) ಮುಖ್ಯಸ್ಥ ಮಸೂದ್ ಅಜರ್‌ನ ಆಡಿಯೊ ಜಾಲತಾಣದಲ್ಲಿ ಹರಡಿದೆ. ಇದರ ಬೆನ್ನಲ್ಲೇ ಜಮ್ಮು-ಕಾಶ್ಮೀರದ ನೌಶೇರಾ ಸೆಕ್ಟರ್‌ನಲ್ಲಿ ಗಡಿ ನಿಯಂತ್ರಣ ರೇಖೆ(ಎಲ್‌ಒಸಿ) ಬಳಿ ಪಾಕಿಸ್ತಾನದ ಹತ್ತಾರು ಡ್ರೋನ್‌ಗಳ ಭಾನುವಾರ ರಾತ್ರಿ ಹಾರಾಟ ನಡೆಸಿರುವುದು ಕಂಡುಬಂದಿದೆ.

ಭಾರತೀಯ ಸೇನೆಯ ಯೋಧರು ಪಾಕ್ ಡ್ರೋನ್‌ಗಳಿಗೆ ಗುಂಡಿಕ್ಕಿ ನೆಲಕ್ಕೆ ಕೆಡವಿದ್ದಾರೆ. ಹಲವು ಡ್ರೋನ್‌ಗಳು ಗಡಿ ದಾಟಿ ದೇಶದೊಳಕ್ಕೆ ಬಂದಿವೆ. ಡ್ರೋನ್‌ಗಳಲ್ಲಿ ಸಾಗಣೆ ಆಗಿರುವ ಶಸ್ತ್ರಾಸ್ತ್ರ/ಮಾದಕದ್ರವ್ಯಗಳಿಗಾಗಿ ಶೋಧ ನಡೆಸಲಾಗುತ್ತಿದೆ. ಇನ್ನೊಂದೆಡೆ, ಪಾಕ್ ಆಕ್ರಮಿತ ಕಾಶ್ಮೀರ(ಪಿಒಕೆ) ಕಡೆಯಿಂದ ಹಾರಿ ಬಂದ ಡ್ರೋನ್ ಸಾಂಬಾ ಸೆಕ್ಟರ್‌ನಲ್ಲಿ ಶಸ್ತ್ರಾಸ್ತ್ರಗಳ ಕಂತೆಯನ್ನು ಬೀಳಿಸಿದೆ. ಅದರಲ್ಲಿ ಮೆಷಿನ್ ಗನ್‌ಗಳು ಇದ್ದವು ಎಂದು ಗಡಿ ಕಾವಲಿಗಿದ್ದ ಸೇನಾಪಡೆ ಅಧಿಕಾರಿಗಳು ಹೇಳಿದ್ದಾರೆ.

ರಾಜೌರಿ ಜಿಲ್ಲೆಯಲ್ಲಿ ಮತ್ತೊಂದು ಡ್ರೋನ್ ಭಾನುವಾರ ಸಂಜೆ 6.35ಕ್ಕೆ ಕಾಣಿಸಿಕೊಂಡಿದ್ದು, ಕಲಕೋಟ್‌ನ ಧರ್ಮಸಾಲ್ ಗ್ರಾಮ ಕಡೆಯಿಂದ ಭರಾಖ್ ಕಡೆಗೆ ಚಲಿಸಿದೆ. ಮತ್ತೊಂದು ಡ್ರೋನ್ ಸಂಜೆ 7.15ರಲ್ಲಿ ಸಾಂಬಾದ ರಾಮಗಢ ಸೆಕ್ಟರ್‌ನಲ್ಲಿ ಚಕ್ ಬಾಬ್ರಾಲ್ ಗ್ರಾಮದ ಮೇಲೆ ಕೆಲ ನಿಮಿಷ ಕಾಲ ಹಾರಾಡಿದೆ ಎಂದು ಸೇನಾಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇನ್ನೊಂದೆಡೆ ಪೂಂಚ್ ಜಿಲ್ಲೆಯ ಮಂಕೋಟೆ ಸೆಕ್ಟರ್‌ನ ಟೋಪಾ ಕಡೆಗೆ ಮತ್ತೊಂದು ಡ್ರೋನ್ ಸಂಜೆ 6.25ರಲ್ಲಿ ಹಾರಿಬಂದಿದೆ. ಈ ಎಲ್ಲಾ ಡ್ರೋನ್‌ಗಳನ್ನು ಭಾರತೀಯ ಸೈನಿಕರು ಗುಂಡಿಕ್ಕಿ ಉರುಳಿಸಿದ್ದು, ಅವು ಹೊತ್ತು ತಂದಿದ್ದ ಶಸ್ತ್ರಾಸ್ತ್ರ ಅಥವಾ ಡ್ರಗ್ಸ್‌ಗಾಗಿ ಶೋಧ ನಡೆಸಲಾಗುತ್ತಿದೆ ಎಂದು ಸೇನಾ ಮೂಲಗಳು ತಿಳಿಸಿವೆ.

ಐದು ಡ್ರೋನ್‌ಗಳು ಪತ್ತೆ

ಗಣರಾಜ್ಯೋತ್ಸವ ಸಮೀಪಿಸಿರುವಾಗಲೇ ಪಾಕ್ ಗಡಿಯಲ್ಲಿ ಡ್ರೋನ್ ಚಟುವಟಿಕೆ ಹೆಚ್ಚಿಸಿರುವುದು ಭದ್ರತಾ ಪಡೆಗಳು ಕಟ್ಟೆಚ್ಚರ ವಹಿಸುವಂತೆ ಮಾಡಿದೆ. ಅಂತಾರಾಷ್ಟ್ರೀಯ ಗಡಿ ಮತ್ತು ಎಲ್‌ಒಸಿ ವ್ಯಾಪ್ತಿಯ ಪೂಂಚ್, ನೌಶೇರಾ, ಧರ್ಮಶಾಲಾ, ರಾಮಗಢ ಮತ್ತು ಪರಾಖ್ ಪ್ರದೇಶಗಳಲ್ಲಿ 5 ಡ್ರೋನ್‌ಗಳು ಕಾಣಿಸಿಕೊಂಡಿವೆ. ಎಲ್ಲಾ ಡ್ರೋನ್‌ಗಳು ಕೆಲ ನಿಮಿಷ ಭಾರತದ ಆಕಾಶದಲ್ಲಿ ಹಾರಾಡಿ ಹಿಂತಿರುಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಣ್ಣಾಮಲೈಗೆ ರಸಮಲೈ ಎಂದ ರಾಜ್ ಠಾಕ್ರೆ

ಮುಂಬೈ ಚುನಾವಣೆ ಪ್ರಚಾರಕ್ಕೆ ಚೆನ್ನೈನಿಂದ ಅಣ್ಣಾಮಲೈ

ಮುಂಬೈ: ಭಾರತದ ವಾಣಿಜ್ಯ ರಾಜಧಾನಿ ಮುಂಬೈ ಮಹಾನಗರ 'ಬೃಹನ್ಮುಂಬೈ ಮಹಾನಗರ ಪಾಲಿಕೆ'(ಬಿಎಂಸಿ) ಚುನಾವಣೆ, ಬಿಜೆಪಿ, ಶಿವಸೇನೆ, ಎನ್‌ಸಿಪಿ, ಶಿವಸೇನೆ(ಉದ್ಧವ್ ಬಣ)ದ ರಾಜಕೀಯ ಮೇಲಾಟದ ಕಾರಣ ಸುದ್ದಿಯ ಕೇಂದ್ರವಾಗಿದೆ.

ತಮಿಳುನಾಡು ಜನರೂ ಉದ್ಯಮ-ಉದ್ಯೋಗ ಕಾರಣ ಮುಂಬೈನಲ್ಲಿ ಹೆಚ್ಚು ಸಂಖ್ಯೆಯಲ್ಲಿರುವ ಕಾರಣ ಬಿಜೆಪಿ ನಾಯಕ ಅಣ್ಣಾಮಲೈ ಮುಂಬೈ ಚುನಾವಣೆ ಪ್ರಚಾರಕ್ಕಿಳಿದಿದ್ದಾರೆ. ಮುಂಬೈನ ಕೆಲ ಪ್ರದೇಶಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿರುವ ತಮಿಳು ಜನರ ಮತಗಳನ್ನು ಬಿಜೆಪಿಯತ್ತ ಸೆಳೆಯುವುದಕ್ಕಾಗಿ ಪಕ್ಷ ಅವರನ್ನು ಮುಂಬೈಗೆ ಕಳುಹಿಸಿಕೊಟ್ಟಿದೆ. ಅಣ್ಣಾಮಲೈ ಮುಂಬೈಗೆ ಕಾಲಿಡುತ್ತಲೇ, 'ಮುಂಬೈ ಮಹಾನಗರ ಮಹಾರಾಷ್ಟ್ರಕ್ಕಷ್ಟೇ ಸೇರಿದ್ದಲ್ಲ, ಇದು ಅಂತಾರಾಷ್ಟ್ರೀಯ ನಗರ. ಇಂಥ ನಗರ ಆಳಲು ಸಮರ್ಥರಿಗೆ ಅಧಿಕಾರ ಕೊಡಬೇಕು. ಟ್ರಿಪಲ್ ಎಂಜಿನ್ ಸರಕಾರಕ್ಕಾಗಿ ಬಿಜೆಪಿಗೆ ಮತಹಾಕಿ' ಎಂದು ಪ್ರಚಾರ ನಡೆಸಿದ್ದಾರೆ.

ಅಣ್ಣಾಮಲೈ ಚೆನ್ನೈನಿಂದ ಬಂದು ಬಿಜೆಪಿಗೆ ಮತ ಕೇಳುತ್ತಿರುವುದು ಶಿವಸೇನೆ(ಉದ್ಧವ್ ಬಣ) ಮತ್ತು ಮಹಾರಾಷ್ಟ್ರ ನವ ನಿರ್ಮಾಣ ಸೇನೆ(ಎಂಎನ್‌ಎಸ್) ನಾಯಕರಾದ ಉದ್ಧವ್ ಠಾಕ್ರೆ, ಸೋದರ ಸಂಬಂಧಿ ರಾಜ್ ಠಾಕ್ರೆ ನಿದ್ರೆಗೆಡಿಸಿದೆ.

ಅಣ್ಣಾಮಲೈ ತಿರುಗೇಟು

ನಾನು ರೈತನ ಮಗ. ಅದಕ್ಕೆ ಹೆಮ್ಮೆಯಿದೆ. ನನ್ನನ್ನು ಬೆದರಿಸಲು ಆದಿತ್ಯ ಠಾಕ್ರೆ ಮತ್ತು ರಾಜ್ ಠಾಕ್ರೆ ಯಾರು? ನಿಮ್ಮ ರಾಜಕೀಯ ಬೆದರಿಕೆಗಳಿಗೆ ಹೆದರುವುದಿಲ್ಲ. ಮುಂಬೈಗೆ ಬರುತ್ತೇನೆ. ಧೈರ್ಯ ವಿದ್ದರೆ ನನ್ನ ಕಾಲು ಕತ್ತರಿಸಿ ನೋಡೋಣ. ಇಂಥ ಬೆದರಿಕೆಗಳಿಗೆಲ್ಲಾ ಭಯಪಟ್ಟಿದ್ದರೆ ಹಳ್ಳಿಯಲ್ಲೇ ಉಳಿದಿರುತ್ತಿದ್ದೆ. ಮುಂಬೈ ವಿಶ್ವದರ್ಜೆ ನಗರ ಎಂದು ಹೇಳಿದರೆ ತಪ್ಪೇನು? ಈ ನಗರವನ್ನು ಮರಾಠಿಗಳು ನಿರ್ಮಿಸಲಿಲ್ಲವೇ? ಎಂದು ಬಿಜೆಪಿ ನಾಯಕ ಕೆ.ಅಣ್ಣಾಮಲೈ ಸೋಮವಾರ ತಿರುಗೇಟು ನೀಡಿದ್ದಾರೆ.

ಅಣ್ಣಾಮಲೈ ಅವರನ್ನು 'ಒಂದು ರಸಮಲೈ ತಮಿಳುನಾಡಿನಿಂದ ಇಲ್ಲಿಗೆ ಬಂದಿದೆ' ಎಂದು ರಾಜ್ ಠಾಕ್ರೆ ಅಣಕಿಸಿದ್ದಾರೆ. 'ಚೆನ್ನೈಗೂ-ಮುಂಬೈಗೂ ಏನು ಸಂಬಂಧ. ಹಟಾವೊ ಲುಂಗಿ, ಬಜಾವೊ ಪುಂಗಿ' ಎಂದು ಲೇವಡಿಯಾದ್ದಾರೆ. 'ಇದು ಬಹಳ ಕೀಳಮಟ್ಟದ ರಾಜಕಾರಣ, ಇದನ್ನು ಮುಂಬೈ ಜನತೆ ತೀವ್ರವಾಗಿ ಖಂಡಿಸಬೇಕು' ಎಂದು ಶಿವಸೇನೆ(ಶಿಂಧೆ) ಪಕ್ಷದ ರಾಷ್ಟ್ರೀಯ ವಕ್ತಾರೆ ಶೈನಾ ಎನ್.ಸಿ. ಕಿಡಿಕಾರಿದ್ದಾರೆ.

ಹಿ.ಪ್ರ. ಅರ್ಕಿಯಲ್ಲಿ ಬೆಂಕಿ: 7ರ ಬಾಲಕ ಸಜೀವ ದಹನ

ಬ್ಯಾಂಕ್ ಶಾಖೆ ಕಟ್ಟಡದಲ್ಲಿದ್ದ ಬಾಲಕ ಸಾವು | ನಸುಕಿನ 2.45ಕ್ಕೆ ಕಾಣಿಸಿದ ಬೆಂಕಿ, ಇತರೆ 9 ಜನ ಕಣ್ಮರೆ

ಹಿಮಾಚಲ ಪ್ರದೇಶ: ರಾಜ್ಯದ ಸೋಲನ್ ಜಿಲ್ಲೆಯ ಅರ್ಕಿ ತಾಲೂಕಿನಲ್ಲಿ ಕೆಳ ಹಂತದ ಮಾರುಕಟ್ಟೆ ಪ್ರದೇಶದಲ್ಲಿ ಸೋಮವಾರ ಭಾರಿ ಬೆಂಕಿ ಅವಘಡವಾಗಿದ್ದು, 7 ವರ್ಷದ ಮಗು ಸಜೀವ ದಹನವಾಗಿದೆ. 9 ಜನರು ಕಣ್ಮರೆಯಾಗಿದ್ದು, ಕೆಲವರು ಕಟ್ಟಡದ ಅವಶೇಷಗಳಡಿ ಸಿಲುಕಿರುವ ಶಂಕೆ ಇದೆ. ಇಬ್ಬರು ಗಾಯಾಳುಗಳನ್ನು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

ಬಳಿಕ ಹಲವು ಅಡುಗೆ ಅನಿಲ ಸಿಲಿಂಡರ್‌ಗಳು ಸ್ಫೋಟಗೊಂಡಿದ್ದರಿಂದ ಶರವೇಗದಲ್ಲಿ ಬೆಂಕಿ ವ್ಯಾಪಿಸಿದೆ. ಯುಕೊ ಬ್ಯಾಂಕ್ ಶಾಖೆ ಕಚೇರಿಯಿದ್ದ ಕಟ್ಟಡವೂ ಭಸ್ಮವಾಗಿದೆ. ಇದೇ ಕಟ್ಟಡದಲ್ಲಿದ್ದ ಬಿಹಾರದ ಕಾರ್ಮಿಕ ಕುಟುಂಬಕ್ಕೆ ಸೇರಿದ 7 ವರ್ಷದ ಮಗು ಪ್ರಿಯಾಂಶ್ ಸಜೀವ ದಹನವಾಗಿದ್ದಾನೆ.

ನಸುಕಿನ 2.45ರಲ್ಲಿ ಬೆಂಕಿ ಕಾಣಿಸಿಕೊಂಡ ಬೆಂಕಿ ವೇಗವಾಗಿ ಹರಿಡಿದ್ದರಿಂದ ಒಂದಾದ ಮೇಲೊಂದರಂತೆ ಹಲವು ಅಂಗಡಿಗಳು ಸುಟ್ಟುಹೋಗಿವೆ.

ಕಟ್ಟಡದಲ್ಲಿದ್ದ ರೆಸ್ಟೋರೆಂಟ್‌ನಲ್ಲಿದ್ದ ಹಲವಾರು ಅಡುಗೆ ಅನಿಲ ಸಿಲಿಂಡರ್‌ಗಳು ಸ್ಫೋಟಗೊಂಡಿವೆ. ಬಳಿಕ ಪಕ್ಕದಲ್ಲೇ ಇದ್ದ ಎರಡು ಮನೆಗಳಿಗೂ ಬೆಂಕಿ ತಗುಲಿದ್ದು, ಪೂರ್ಣ ಸುಟ್ಟುಹೋಗಿವೆ.

ಸ್ಥಳೀಯರು ತಕ್ಷಣವೇ ಪೊಲೀಸ್ ಮತ್ತು ಅಗ್ನಿಶಾಮಕ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಅಗ್ನಿಶಾಮಕ ದಳದ ವಾಹನಗಳು ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಲು ಶ್ರಮಿಸಿವೆ. ಆದರೆ ಸಿಲಿಂಡರ್‌ಗಳ ಸರಣಿ ಸ್ಫೋಟ ಕಾರಣ ಅಗ್ನಿಶಾಮಕ ದಳಕ್ಕೆ ಅಡಚಣೆಯಾಗಿದೆ. ಬೆಂಕಿಯಲ್ಲಿ ಕೋಟ್ಯಂತರ ರು. ಮೌಲ್ಯದ ಆಸ್ತಿ ಹಾನಿಯಾಗಿದೆ.

ತನಿಖೆಗೆ ಸಿಎಂ ಆದೇಶ

ಕೊಠಡಿಯಲ್ಲಿ ಸ್ಟೌ ಉರಿಯುತ್ತಿದ್ದರೂ ನೇಪಾಳಿ ಕುಟುಂಬ ನಿದ್ರೆಗೆ ಜಾರಿತ್ತು. ಅಲ್ಲಿಂದಲೇ ಬೆಂಕಿ ಕಿಡಿ ಹೊತ್ತಿರಬಹುದು ಎನ್ನಲಾಗಿದೆ. ಜತೆಗೆ ಅರ್ಕಿ ಬಜಾರ್‌ನ ಹಳೆ ಕಟ್ಟಡದ ಹೆಚ್ಚಿನಂಶ ಮರದಿಂದ ಮಾಡಿದ್ದರಿಂದ ಬೆಂಕಿ ವೇಗವಾಗಿ ವ್ಯಾಪಿಸಿದೆ. ಬೆಂಕಿ ತೀವ್ರತೆಗೆ 15ಕ್ಕೂ ಹೆಚ್ಚು ಮನೆಗಳು ಮತ್ತು ಅಂಗಡಿಗಳು ಪೂರ್ಣ ಭಸ್ಮವಾಗಿವೆ. ಮುಖ್ಯಮಂತ್ರಿ ಸುಖವಿಂದ್ ಸಿಂಗ್ ಸುಖು ತನಿಖೆಗೆ ಆದೇಶಿಸಿದ್ದಾರೆ.

'ನಾನೇ ವೆನೆಜುವೆಲಾ ಹಂಗಾಮಿ ಅಧ್ಯಕ್ಷ'

ಮುಂದುವರಿದ ಡೊನಾಲ್ಡ್ ಟ್ರಂಪ್ ಹಸ್ತಕ್ಷೇಪ | 'ಟ್ರೂಥ್' ಸಂದೇಶ ವಾಹಕದಲ್ಲಿ ಪೋಸ್ಟ್

ವಾಷಿಂಗ್ಟನ್: ಲ್ಯಾಟಿನ್ ಅಮೆರಿಕಾ ಭಾಗದಲ್ಲಿನ 7ನೇ ದೊಡ್ಡ ದೇಶವಾಗಿದ್ದ ವೆನೆಜುವೆಲಾ ಮೇಲೆ ವಾರದ ಹಿಂದೆ ಸೇನಾ ಕಾರ್ಯಾಚರಣೆ ನಡೆಸಿ ಆ ದೇಶದ ಅಧ್ಯಕ್ಷ ನಿಕಲೋಸ್ ಮಡುರೋ ಅವರನ್ನು ಬಂಧಿಸಿ ನ್ಯೂಯಾರ್ಕ್ ಸೆರೆಮನೆಗಟ್ಟಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಈಗ ವೆನೆಜುವೆಲಾ ದೇಶಕ್ಕೂ ನಾನೇ 'ಹಂಗಾಮಿ' ಅಧ್ಯಕ್ಷ ಎಂದು ಘೋಷಿಸಿಕೊಂಡಿದ್ದಾರೆ.

ಟ್ರಂಪ್ ತಮ್ಮದೇ ಒಡೆತನದ 'ಟ್ರೂಥ್' ಸಂದೇಶ ವಾಹಕದಲ್ಲಿ ಭಾನುವಾರ ಮಾಡಿರುವ ಪೋಸ್ಟ್‌ನಲ್ಲಿ '2026ರ ಜನವರಿಯಿಂದ ವೆನೆಜುವೆಲಾ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್' ಎಂಬ ಮಾಹಿತಿಯ ವಿಕಿಪೀಡಿಯಾ ಪುಟದ ಸ್ಕ್ರೀನ್ ಶಾಟ್ ಚಿತ್ರವನ್ನು ಹಂಚಿಕೊಂಡಿದ್ದಾರೆ. ಟ್ರಂಪ್ ಅವರ ಈ ಪೋಸ್ಟ್ ಜಾಲತಾಣದಲ್ಲಿ ಭಾರೀ ಚರ್ಚೆಗೊಳಗಾಗಿದೆ.

ಆದರೆ, ವೆನೆಜುವೆಲಾದ ಸುಪ್ರೀಂ ಕೋರ್ಟ್, ಉಪಾಧ್ಯಕ್ಷೆ ಡೆಲ್ಸಿ ರೊಡ್ರಿಗಸ್ ಅವರನ್ನೇ ಮಧ್ಯಂತರ ಅಧ್ಯಕ್ಷೆಯಾಗಿ ನೇಮಿಸಿದ್ದು, ಅವರು ವಾರದ ಹಿಂದೆಯೇ ಪ್ರಮಾಣವಚನ ಸ್ವೀಕರಿಸಿದ್ದಾರೆ. ಅದಕ್ಕೆ ವೆನೆಜುವೆಲಾ ಸೇನೆ ಕೂಡ ಅನುಮೋದನೆ ನೀಡಿದೆ.

ಈ ಮಧ್ಯೆ, ವೆನೆಜುವೆಲಾಗೆ ಸಂಬಂಧಿಸಿ ಅಮೆರಿಕದ 3 ಹಂತಗಳ ಯೋಜನೆಗಳಿವೆ ಎಂದು ಅಮೆರಿಕ ವಿದೇಶಾಂಗ ಸಚಿವ ಮಾರ್ಕ್ ರುಬಿಯೊ ಹೇಳಿದ್ದಾರೆ. ಮೊದಲು ಮಡುರೊ ಬಂಧನ, ನಂತರ ದೇಶದ ಆಡಳಿತ ಮತ್ತು ಆರ್ಥಿಕತೆಯಲ್ಲಿ ಸ್ಥಿರತೆ, ಬಳಿಕ ಆರ್ಥಿಕ ಚೇತರಿಕೆ ಹಂತದಲ್ಲಿ ಅಮೆರಿಕದ ತೈಲ ಕಂಪನಿಗಳಿಗೆ ವೆನೆಜುವೆಲಾಗೆ ಪ್ರವೇಶಕ್ಕೆ ಅನುಮತಿ, ಆನಂತರ ಅಧಿಕಾರ ಬದಲಾವಣೆ, ಅಮೆರಿಕದ ಮೇಲ್ವಿಚಾರಣೆ. ಈಗ ಅಮೆರಿಕ ವೆನೆಜುವೆಲಾದಲ್ಲಿನ ಮಧ್ಯಂತರ ಸರಕಾರದ ಮೇಲೆ ಪೂರ್ಣ ನಿಯಂತ್ರಣ ಕಾಯ್ದುಕೊಳ್ಳಲು ಅನುವು ಮಾಡಿಕೊಡುತ್ತದೆ ಎಂದು ರುಬಿಯೊ ಹೇಳಿದ್ದಾರೆ.

ಸತತ 5 ವಹಿವಾಟು ಕುಸಿತ ಕಂಡ ಷೇರುಪೇಟೆ: ಸೋಮವಾರ ಜಿಗಿತ

ಅಮೆರಿಕ-ಭಾರತ ವ್ಯಾಪಾರ ಒಪ್ಪಂದ ಚರ್ಚೆ ಮತ್ತೆ ಶುರು ಕಾರಣಕ್ಕೆ ಷೇರುಪೇಟೆ ಹರ್ಷ | ಈ ಮುನ್ನ 5 ವಹಿವಾಟಿನಲ್ಲಿ ಷೇರುಪೇಟೆ ಸತತ ಕುಸಿತ, 19 ಲಕ್ಷ ಕೋಟಿ ರು. ನಷ್ಟ | 5 ದಿನಗಳಲ್ಲಿ ಬಿಎಸ್‌ಇ ಸೆನ್ಸೆಕ್ಸ್ 2700 ಅಂಕ ಕುಸಿದರೆ, ಎನ್‌ಎಸ್‌ಇ ನಿಫ್ಟಿ ಶೇ.3ರಷ್ಟು ಇಳಿಕೆ

ಮುಂಬೈ: ಕಳೆದ 5 ವಹಿವಾಟುಗಳಲ್ಲಿ ನಿರಂತರ ಕುಸಿತ ಕಂಡು ತತ್ತರಿಸಿಹೋಗಿದ್ದ ಭಾರತೀಯ ಷೇರುಪೇಟೆ, ಸೋಮವಾರ ಮಧ್ಯಾಹ್ನದ ಬಳಿಕ ಉತ್ತಮ ಜಿಗಿತ ಕಂಡಿದೆ. ಅಮೆರಿಕದ ನೂತನ ರಾಯಭಾರಿ ಸೆರ್ಗಿಯೊ ಗೋರ್, ಮಂಗಳವಾರದಿಂದಲೇ ಅಮೆರಿಕ-ಭಾರತದ ನಡುವಿನ ವ್ಯಾಪಾರ ಒಪ್ಪಂದದ ಮಾತುಕತೆ ಮತ್ತೆ ಶುರುವಾಗಲಿದೆ ಎಂದು ಹೇಳಿದ್ದೇ ತಡ, ಷೇರುಪೇಟೆಯಲ್ಲಿ ಸಂಭ್ರಮ ಮೂಡಿತು. ಸೋಮವಾರ ದಿನದ ವಹಿವಾಟು ಅಂತ್ಯದ ವೇಳೆಗೆ ಮುಂಬೈ ಷೇರುಪೇಟೆ ಬಿಎಸ್‌ಇ ಸಂವೇದಿ ಸೂಚ್ಯಂಕ ಮೇಲಕ್ಕೇರಿ 302 ಅಂಕಗಳ ಗಳಿಕೆ ಕಂಡಿತು. ಎನ್‌ಎಸ್‌ಇ 'ನಿಫ್ಟಿ'ಯೂ ಚೇತರಿಸಿಕೊಂಡಿತು.

ಇದಕ್ಕೂ ಮುನ್ನ ಸತತ 5 ದಿನಗಳ ವಹಿವಾಟುಗಳಲ್ಲಿ ಮುಂಬೈ ಷೇರು ವಿನಿಮಯ ಕೇಂದ್ರದ(ಬಿಎಸ್‌ಇ) 'ಸಂವೇದಿ ಸೂಚ್ಯಂಕ'(ಸೆನ್ಸೆಕ್ಸ್) ಮತ್ತು ರಾಷ್ಟ್ರೀಯ ಷೇರು ವಿನಿಮಯ ಕೇಂದ್ರದ(ಎನ್‌ಎಸ್‌ಇ) ಸೂಚ್ಯಂಕ 'ನಿಫ್ಟಿ' ತಲಾ ಶೇ.3ರಷ್ಟು ಅಂಕಗಳ ನಷ್ಟ ಅನುಭವಿಸಿತ್ತು. ಪರಿಣಾಮ ಎರಡೂ ಷೇರು ವಿನಿಮಯ ಕೇಂದ್ರಗಳಲ್ಲಿನ ಲಕ್ಷಾಂತರ ಹೂಡಿಕೆದಾರರು ಒಂದೇ ವಾರದಲ್ಲಿ 18.55 ಲಕ್ಷ ಕೋಟಿ ರು. ಬಂಡವಾಳ ನಷ್ಟ ಅನುಭವಿಸಿದ್ದರು. ಷೇರು ಮಾರುಕಟ್ಟೆ ಸತತ ಹಿನ್ನಡೆ ಕಾಣಲಾರಂಭಿಸಿದ್ದು ಹೂಡಿಕೆದಾರರು, ಷೇರು ದಲ್ಲಾಳಿಗಳು, ಷೇರು ವಿನಿಮಯ ಕೇಂದ್ರಗಳನ್ನು ಕಳವಳಕ್ಕೀಡು ಮಾಡಿತ್ತು. ಎಲ್ಲರಿಗೂ ಸೋಮವಾರದ ಸಂಜೆಯ ವಹಿವಾಟು ತುಸು ಸಮಾಧಾನ ತಂದಿತು.

ಮುಂಬೈ ಷೇರು ವಿನಿಮಯ ಕೇಂದ್ರವಂತೂ ಸತತ ಆರು ದಿನಗಳ ವಹಿವಾಟಿನಲ್ಲಿ ಒಟ್ಟಾರೆ 2,700 ಅಂಕಗಳನ್ನು ಕಳೆದುಕೊಂಡಿದ್ದರೆ, ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್(ಎನ್‌ಎಸ್‌ಇ) ಸೂಚ್ಯಂಕವಾದ ನಿಫ್ಟಿ ಕೂಡಾ 5 ವಹಿವಾಟು ದಿನಗಳಲ್ಲಿ ಶೇ.3ರಷ್ಟು ಬಂಡವಾಳ ನಷ್ಟ ಅನುಭವಿಸಿದೆ.

ಷೇರುಪೇಟೆ ಕುಸಿತಕ್ಕೆ ಟ್ರಂಪ್ ಕಾರಣ!

ಅಮೆರಿಕ ಜತೆಗಿನ ವ್ಯಾಪಾರ ಒಪ್ಪಂದದ ಮಾತುಕತೆ ಈವರೆಗೂ ಅಂತಿಮಗೊಳ್ಳದೇ ಇರುವುದೂ, ಅಮೆರಿಕದಿಂದ ಪ್ರತಿಸುಂಕ ಶೇ.500ಕ್ಕೆ ಹೆಚ್ಚಿಸುವ ಬೆದರಿಕೆ, ಇವು ಭಾರತದ ಷೇರು ಮಾರುಕಟ್ಟೆಯಲ್ಲಿನ ವಹಿವಾಟು ಉತ್ಸಾಹ ಕುಂದಿಸಲು ಪ್ರಮುಖ ಕಾರಣವಾಗಿವೆ. ಅಮೆರಿಕಕ್ಕೆ ತನ್ನ ದೇಶದಲ್ಲಿನ ಕೃಷಿ ಉತ್ಪನ್ನಗಳನ್ನು (ಮುಖ್ಯವಾಗಿ ತಳಿ ಪರಿಷ್ಕರಿಸಿದ ಮುಸುಕಿನ ಜೋಳ) ಭಾರತದ ಮಾರುಕಟ್ಟೆಗೆ ತರಬೇಕಿದೆ. ಅಲ್ಲದೇ, ರಷ್ಯಾಕ್ಕೆ ಬದಲಾಗಿ ಭಾರತ ಅಮೆರಿಕದಿಂದಲೇ ಕಚ್ಚಾತೈಲ ಖರೀದಿಸುವಂತಾಗಬೇಕಿದೆ. ರಕ್ಷಣಾ ಪರಿಕರಗಳ ಮೇಲಿನ ಖರೀದಿ ಪ್ರಮಾಣ ಹೆಚ್ಚಿಸಬೇಕಿದೆ. ಇವೂ ಸೇರಿ ಹಲವಾರು ಷರತ್ತು ಮುಂದಿಟ್ಟುಕೊಂಡೇ ಅಮೆರಿಕ ಭಾರತದ ಜತೆ ವ್ಯಾಪಾರ ಒಪ್ಪಂದವನ್ನು ಬಯಸುತ್ತಿದೆ. ಇವೆಲ್ಲಾ ಒತ್ತಾಯಗಳಿಗೂ ಭಾರತ ಸರಕಾರದ ಮಣಿಯದ ಕಾರಣ, ಉಭಯ ದೇಶಗಳ ನಡುವಿನ ವ್ಯಾಪಾರ ಒಪ್ಪಂದ ಮಾತುಕತೆ ಹಲವು ಸುತ್ತುಗಳೇ ಕಳೆದರೂ ಅಂತಿಮಗೊಳ್ಳುವುದು ಸಾಧ್ಯವಾಗಿಲ್ಲ.

ವಿದೇಶಿ ಹೂಡಿಕೆ ಸತತ ಹೊರಹರಿವು

'ವಿದೇಶೀ ಸಾಂಸ್ಥಿಕ ಹೂಡಿಕೆದಾರರು'(ಫಾರಿನ್ ಇನ್‌ಸ್ಟಿಟ್ಯೂಷನಲ್ ಇನ್ವೆಸ್ಟರ್ಸ್-ಎಫ್‌ಐಐ) ಭಾರತದ ಎರಡೂ ಪ್ರಮುಖ ಷೇರುಪೇಟೆಗಳಲ್ಲಿ ತೊಡಗಿಸಿರುವ ಬಂಡವಾಳನ್ನು ಕಳೆದ ಆರೇಳು ತಿಂಗಳಿಂದ ನಿರಂತರ ವಾಪಸ್ ತೆಗೆದುಕೊಳ್ಳುತ್ತಿದ್ದಾರೆ. 2025ರ ಜುಲೈನಿಂದ ಡಿಸೆಂಬರ್‌ವರೆಗೆ 'ಎಫ್‌ಐಐ' ಬಂಡವಾಳ ಹೊರಹರಿವು 1.85 ಲಕ್ಷ ಕೋಟಿ ರು.ಗಳಿಗೇರಿದೆ. ಹೊಸ ವರ್ಷಾರಂಭದಲ್ಲಿಯೂ (ಜ.12ವರೆಗೆ) 12 ಸಾವಿರ ಕೋಟಿ ರು.ಗಳಷ್ಟು ವಿದೇಶಿ ಸಾಂಸ್ಥಿಕ ಹೂಡಿಕೆ ಭಾರತದ ಷೇರುಪೇಟೆಗಳಿಂದ ನಿರ್ಗಮಿಸಿದೆ. ಅಂದರೆ, ಕನಿಷ್ಠ 2 ಲಕ್ಷ ಕೋಟಿ ರು.ಗಳಷ್ಟು ಷೇರು ಹೂಡಿಕೆಯನ್ನು ಎಫ್‌ಐಐಗಳು ವಾಪಸ್ ತೆಗೆದುಕೊಂಡಿರುವುದು ಭಾರತದ ಷೇರು ಮಾರುಕಟ್ಟೆಗೆ ದೊಡ್ಡ ಪೆಟ್ಟು ಕೊಟ್ಟಿದೆ.

ಕರಡಿ-ಗೂಳಿ ಬದಲು ಬಂಗಾರದತ್ತ ಚಿತ್ತ

ಪ್ರಸಕ್ತ ಜಾಗತಿಕ ರಾಜಕೀಯ ಅಭದ್ರ ಪರಿಸ್ಥಿತಿಯಲ್ಲಿ ಹೂಡಿಕೆದಾರರ ಗಮನವೆಲ್ಲಾ ಈಗ ನಿರಂತರ ಬೆಲೆ ಹೆಚ್ಚಿಸಿಕೊಳ್ಳುತ್ತಿರುವ ಚಿನ್ನ ಮತ್ತು ಬೆಳ್ಳಿ ಲೋಹಗಳತ್ತ ತಿರುಗಿದೆ. ಭಾರತ, ಅರಬ್ ರಾಷ್ಟ್ರಗಳ ಸರಕಾರಗಳೂ ಸೇರಿದಂತೆ ಹಣ ಹೂಡಿಕೆದಾರ ಸಂಸ್ಥೆಗಳ ಗಮನವೆಲ್ಲಾ ನಿರಂತರ ಮೌಲ್ಯ ವೃದ್ಧಿಸಿಕೊಳ್ಳುತ್ತಿರುವ ಬಂಗಾರ-ಕನಕದ ಮೇಲೆಯೇ ನೆಟ್ಟಿದೆ. ಹಾಗಾಗಿ 'ಗೂಳಿ ಮತ್ತು ಕರಡಿ'ಯತ್ತ ಹೂಡಿಕೆದಾರರ ಗಮನ ಕಡಿಮೆ ಆಗಿದೆ. ಪರಿಣಾಮವಾಗಿಯೇ ಭಾರತದ ಪ್ರಮುಖ ಷೇರುಪೇಟೆಗಳಾದ ಬಿಎಸ್‌ಇ ಮತ್ತು ಎನ್‌ಎಸ್‌ಇ ಸೂಚ್ಯಂಕಗಳು ಸತತ ಇಳಿಮುಖವಾಗಿವೆ.

ಸಮಾಚಾರ ಸಣ್ಣದಲ್ಲ

ಆಯೋಗದ ಅಧ್ಯಕ್ಷರ ಜಿಲ್ಲಾ ಪ್ರವಾಸ ಇಂದು

ಬಳ್ಳಾರಿ: ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್‌ಕೋಸಂಬೆ ಅವರು ಜ.13 ರಂದು ಸಂಜೆ 5 ಗಂಟೆಗೆ ಕೂಡ್ಲಿಗಿಯಿಂದ ಸಂಡೂರಿಗೆ ಆಗಮಿಸಲಿದ್ದಾರೆ. ಜ.14 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 12.30 ರವರೆಗೆ ಸಂಡೂರು ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಸಂಡೂರು ತಾಲ್ಲೂಕಿನ ಶಾಲಾ ಮಕ್ಕಳು, ಪೋಷಕರು ಮತ್ತು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರುಗಳ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಅದೇ ದಿನ ಮಧ್ಯಾಹ್ನ 2 ರಿಂದ ಸಂಜೆ 4 ಗಂಟೆಯವರೆಗೆ ನಗರದ ಜಿಲ್ಲಾ ಪಂಚಾಯತ್ ನ ಹಳೆಯ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ಸರ್ಕಾರಿ, ಅನುದಾನಿತ, ಅನುದಾನ ರಹಿತ ಮತ್ತು ವಿವಿಧ ವಸತಿ ಶಾಲೆಗಳ ಮಕ್ಕಳೊಂದಿಗೆ ಸಂವಾದ ಕಾರ್ಯಕ್ರಮ ನಡೆಸುವರು. ಬಳಿಕ ಸಂಜೆ 5 ಗಂಟೆಗೆ ಕೋನ-ಮೇಳಕುಂದಾಕ್ಕೆ ಪ್ರಯಾಣಿಸುವರು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಕಾರ್ಯದರ್ಶಿ ತಿಳಿಸಿದ್ದಾರೆ.

ಇಂದು ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ

ಬಳ್ಳಾರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಶಿವಯೋಗಿ ಸಿದ್ಧರಾಮೇಶ್ವರ 854ನೇ ಜಯಂತಿ ಕಾರ್ಯಕ್ರಮವನ್ನು ಜ.14 ರಂದು ಮಧ್ಯಾಹ್ನ 12 ಗಂಟೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಕಾರ್ಯಕ್ರಮ ಉದ್ಘಾಟಿಸುವರು. ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅಧ್ಯಕ್ಷತೆ ವಹಿಸುವರು. ಸಂಸದರಾದ ಈ.ತುಕಾರಾಮ್, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಬಿ.ನಾಗೇಂದ್ರ, ಜೆ.ಎನ್. ಗಣೇಶ್, ಬಿ.ಎಂ.ನಾಗರಾಜ, ಈ.ಅನ್ನಪೂರ್ಣ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ, ಶಶೀಲ್ ನಮೋಶಿ, ವೈ.ಎಂ.ಸತೀಶ್, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಪಿ.ಗಾದೆಪ್ಪ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಧರ್ಮದ ರಕ್ಷಣೆ ಅವಶ್ಯ: ವಾಗ್ಮಿ ಹಾರಿಕಾ

ಮುದಗಲ್: ಹಿಂದೂ ಪರ ಸಂಘಟನೆಗಳು ಧರ್ಮದ ರಕ್ಷಣೆ ಅವಶ್ಯಕತೆ ಇದೆ ಎಂದು ವಾಗ್ಮಿ ಹಾರಿಕಾ ಮಂಜುನಾಥ ಹೇಳಿದರು. ಪಟ್ಟಣ ಸಮೀಪದ ಮಟ್ಟೂರ ಗ್ರಾಮದ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಹಿಂದೂ ಸಮಾಜೋತ್ಸವ ಆಯೋಜನಾ ಸಮಿತಿಯಿಂದ ಹಮ್ಮಿಕೊಂಡಿದ್ದ ಹಿಂದೂ ಸಮಾಜೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮನೆಯ ಮಕ್ಕಳಿಗೆ ಧರ್ಮದ ಶಿಕ್ಷಣ ನೀಡಬೇಕು. ನಮ್ಮ ಸನಾತನ ಧರ್ಮದ ಹಣೆಯ ಸಂಕೇತ ತಿಲಕವಾಗಿದೆ. 1072 ವರ್ಷಗಳಿಂದ ಹಿಂದೂಗಳಿಗೆ ದಾಳಿ ಮಾಡುತ್ತಾ ಬಂದಿರುವ ಸನ್ನಿವೇಶಗಳಿವೆ. ಹಿಂದೂ ಧರ್ಮದಲ್ಲಿ ಹುಟ್ಟಿ ಹಿಂದೂ ರಕ್ಷಣೆಗೆ ಮುಂದಾಗಬೇಕು ಎಂದರು.

ಈ ಸಂದರ್ಭದಲ್ಲಿ ನಂದವಾಡಗಿ ಅಭಿನವ ಚೆನ್ನಬಸವ ಶಿವಾಚಾರ್ಯ ಶ್ರೀಗಳು, ಚನ್ನಯ್ಯ ಸ್ವಾಮಿ ಎಸ್, ಬಸ್ಸಯ್ಯ ಹಿರೇಮಠ ಗುಡಿಹಾಳ, ಬಸವನಗೌಡ ಹುಡೇದ್ ಇದ್ದರು ಇದೆ ವೇಳೆ ಮುದಗಲ್ ಪಿಎಸ್‌ಐ ವೆಂಕಟೇಶ ಮಾಡಗೇರಿ, ಮಸ್ಕಿ ಸಿಪಿಐ ರಂಗಯ್ಯ ನೇತೃತ್ವದಲ್ಲಿ ಸೂಕ್ತ ಬಂದೋಬಸ್ತ್ ಒದಗಿಸಿದ್ದರು.

ವಕ್ಫ್ ಸಂಸ್ಥೆಯ ಸಾಮಾನ್ಯ ಸದಸ್ಯರ ನೋಂದಣಿ

ಬಳ್ಳಾರಿ: ನಗರದ ಮಿಲ್ಲರ್‌ಪೇಟೆ ವ್ಯಾಪ್ತಿಯಲ್ಲಿರುವ ಕೋರ್ಟ್ ಮೊಹಲ್ಲಾ ಮಸೀದಿ ವಕ್ಫ್ ಸಂಸ್ಥೆಯ ಸಾಮಾನ್ಯ ಸದಸ್ಯರ ನೋಂದಣಿ ಕಾರ್ಯ ಫೆಬ್ರವರಿ 9 ರವರೆಗೆ ನಡೆಯಲಿದೆ ಎಂದು ನೋಂದಣಿ ಅಧಿಕಾರಿ ಆಗಿರುವ ಜಿಲ್ಲಾ ವಕ್ಫ್ ಅಧಿಕಾರಿ ತಿಳಿಸಿದ್ದಾರೆ. ಜನವರಿ 12 ರಿಂದ ಜನವರಿ 31 ರವರೆಗೆ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ಹಾಗೂ ಮಧ್ಯಾಹ್ನ 2.30 ರಿಂದ ಸಂಜೆ 4.30ರ ಅವಧಿಯಲ್ಲಿ ಸದಸ್ಯರ ದಾಖಲಾತಿಗಾಗಿ ಅರ್ಜಿ ನಮೂನೆಗಳನ್ನು ವಿತರಣೆ ಮಾಡಲಾಗುತ್ತದೆ. ಭರ್ತಿ ಮಾಡಿದ ಅರ್ಜಿ ನಮೂನೆಗಳೊಂದಿಗೆ 3 ಇತ್ತೀಚಿನ ಭಾವಚಿತ್ರಗಳು ಹಾಗೂ 600 ರು. ಶುಲ್ಕ ಹಾಗೂ ಅಧಿಕೃತ ವಿಳಾಸದ 2 ಗುರುತಿನ ಚೀಟಿಗಳೊಂದಿಗೆ ಜನವರಿ 31 ರ ಮಧ್ಯಾಹ್ನ 4.30 ಗಂಟೆ ರೊಳಗೆ ಜಿಲ್ಲಾ ವಕ್ಫ್ ಕಚೇರಿಯಲ್ಲಿ ಸ್ಥಾಪಿಸಲಾಗಿರುವ ನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ ಸಲ್ಲಿಸಬಹುದಾಗಿದೆ. ದಾಖಲಾದ ಸದಸ್ಯರ ಕರಡು ಪಟ್ಟಿಯನ್ನು ಫೆಬ್ರವರಿ 5 ರಂದು ಪ್ರಕಟಿಸಲಾಗುತ್ತದೆ. ಕರಡು ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಹಾಗೂ ಸಲಹೆ-ಸೂಚನೆಗಳಿದ್ದಲ್ಲಿ ಫೆಬ್ರವರಿ 6 ರ ಬೆಳಗ್ಗೆ 10.30 ರಿಂದ ಸಂಜೆ 5.30 ಗಂಟೆಯೊಳಗೆ ಸಲ್ಲಿಸಬಹುದು. ಆಕ್ಷೇಪಣೆಗಳ ವಿಚಾರಣೆ ಫೆಬ್ರವರಿ 7 ರಂದು ಬೆಳಗ್ಗೆ 11 ಗಂಟೆಯಿಂದ ನಡೆಸಲಾಗುತ್ತದೆ. ದಾಖಲಾದ ಸಾಮಾನ್ಯ ಸದಸ್ಯರ ಅಂತಿಮ ಪಟ್ಟಿಯನ್ನು ಫೆಬ್ರವರಿ 9 ರಂದು ಬಳ್ಳಾರಿ ನಗರದ ಮಿಲ್ಲರ್‌ಪೇಟೆ ವ್ಯಾಪ್ತಿಯಲ್ಲಿರುವ ಕೋರ್ಟ್ ಮೊಹಲ್ಲಾ ಮಸೀದಿ ಮತ್ತು ಜಿಲ್ಲಾ ವಕ್ಫ್ ಕಚೇರಿಯಲ್ಲಿ ಪ್ರಕಟಿಸಲಾಗುವುದು.

{ಬಸನಗೌಡ ಪಾಟೀಲ್ ಯತ್ನಾಳ್} ಶಾಸಕ

ಡಿಕೆಶಿ ಎದುರೇ ಜನ ನನ್ನ ಪರವಾಗಿ ಕೂಗೂ ಹಾಕಿದರೆ ಜಿಲ್ಲೆಯ ನಾಯಕರು ಏನ್ ಮಾಡಬೇಕು. ಸಿಎಂ ಎದುರು ಜನ ನನ್ನ ಪರ ಕೂಗಿದ್ದು ಕಾಂಗ್ರೆಸ್, ಬಿಜೆಪಿಗೆ ಎಚ್ಚರಿಕೆ ಗಂಟೆಯಾಗಿದೆ. ಜನರು ನನ್ನನ್ನು ಬೆಂಬಲಿಸಿದ್ದಾರೆ. ಅದು ನನ್ನ ಮೇಲಿರುವ ಅಭಿಮಾನ. ನಮ್ಮಣ್ಣ, ಪ್ರತಾಪ್ ಸಿಂಹ ಅವರನ್ನು ಬಿಟ್ಟರೆ ಹುಷಾರ್.

ಪೂರ್ವ ಭಾವಿ ಸಭೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಗೆ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಸೂಚನೆ

ನರೇಗಾ ಉಳಿವಿಯಲು ಹೋರಾಟಕ್ಕೆ ಸಿದ್ಧರಾಗಿ

ಹರಪನಹಳ್ಳಿ: ವಿಬಿ ರಾಮ್ ಜೀ ದುಷ್ಪರಿಣಾಮಗಳನ್ನು ಹೋಗಲಾಡಿಸಲು, ಉಪವಾಸ ಸತ್ಯಾಗ್ರಹ, 5 ಕಿ.ಮೀ. ಪಾದಯಾತ್ರೆ ಮಾಡಬೇಕಾಗಿದೆ ಇಂತಹ ಕಾನೂನು ಬಾಹಿರವಾಗಿ ವಿಬಿ ಗ್ರಾಮ್ ಜಿ ಯೋಜನೆಯನ್ನು ಹೋಗಲಾಡಿಸಲು ತಾಲೂಕಿನ 30 ಪಂಚಾಯತಿಗಳಲ್ಲಿ ಹೋರಾಟ ಮಾಡುವುದು ಅನಿವಾರ್ಯ ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಪ್ರತಿಪಾದಿಸಿದರು.

ನಗರದ ಕಾಶಿ ಸಂಗಮೇಶ್ವರ ಬಡವಾಣೆಯಲ್ಲಿರುವ ತಾಲೂಕು ಕಾಂಗ್ರೆಸ್ ಕಚೇರಿಯಲ್ಲಿ ನರೇಗಾ ವಿ/ಎಸ್ ವಿ ರಾಮ್ ಜೀ ಯೋಜನೆ ಪೂರ್ವ ಭಾವಿ ಸಭೆಯಲ್ಲಿ ತಾಲೂಕಿನ ಗ್ರಾಮಪಂಚಾಯತಿ ಸದಸ್ಯರನ್ನು ಮತ್ತು ಕಾಂಗ್ರೆಸ್ ಪಕ್ಷದ ಮುಖಂಡರನ್ನು ಉದ್ದೇಶಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ 30 ಗ್ರಾಮ ಪಂಚಾಯತಿಯಲ್ಲಿ 16. ಗ್ರಾಮ ಪಂಚಾಯತಿಗಳು ಕಾಂಗ್ರೆಸ್ ಪಕ್ಷದ ಅಧಿಕಾರದ ಚುಕ್ಕಾಣಿಯಲ್ಲಿವೆ ಆ ಗ್ರಾಮ ಪಂಚಾಯತಿಗಳಲ್ಲಿ ಕೇಂದ್ರ ಸರಕಾರದ ಜನ ವಿರೋಧಿ ವಿಬಿ ಗ್ರಾಮ್ ಜಿ ಯೋಜನೆಯ ವಿರುದ್ಧ ಹೋರಾಟ ಮಾಡಲು ಸಿದ್ಧರಾಗಬೇಕಾಗಿದೆ ಎಂದರು.

ವಿಬಿ ರಾಮ್ ಜಿ ಯೋಜನೆಯಿಂದ ಎಸ್ಸಿ ,ಎಸ್ಟಿ ಸಮುದಾಯಗಳಿಗೆ ಸೇರಿದಂತೆ ಆರ್ಥಿಕವಾಗಿ

ನಗರದ ಕಾಶಿ ಸಂಗಮೇಶ್ವರ ಬಡವಾಣೆಯಲ್ಲಿರುವ ತಾಲೂಕು ಕಾಂಗ್ರೆಸ್ ಕಚೇರಿಯಲ್ಲಿ ನರೇಗಾ ವಿ/ಎಸ್ ವಿಬಿ ರಾಮ್ ಜೀ ಯೋಜನೆ ಪೂರ್ವ ಭಾವಿ ಸಭೆಯಲ್ಲಿ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಮಾತನಾಡಿದರು.

ಹಿಂದೂಳಿದಿರುವ ಎಲ್ಲಾ ಸಮುದಾಯಗಳಿಗೆ ಆರ್ಥಿಕವಾಗಿ ಹಿನ್ನಡೆ ಆಗಲಿದೆ ಎಂದರು.

ರಾಜ್ಯದಲ್ಲಿ ಮುಂಬರುವ ಏಪ್ರಿಲ್ ತಿಂಗಳಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆ ನಡೆಯಲಿದೆ ಈ ಸ್ಥಳೀಯ ಸಂಸ್ಥೆ ಚುನಾವಣೆಗೆ ರಾಷ್ಟ್ರ ಮತ್ತು ರಾಜ್ಯ ನಾಯಕರು ಆಗಮಿಸಲಿದ್ದಾರೆ ಅದ್ದರಿಂದ ಗ್ರಾಮೀಣ ಪ್ರದೇಶದ ಎಲ್ಲಾ ಕಾಂಗ್ರೆಸ್ ಪಕ್ಷದ ಮುಖಂಡರು ಕಾರ್ಯಕರ್ತರು ಚುನಾವಣೆಗೆ ಸಿ ಸಿದ್ಧರಾಗಬೇಕೆಂದು ಒತ್ತಾಯಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ. ಎಂ.ವಿ.ಅಂಜಿನಪ್ಪ ಮಾತನಾಡಿ, ಮುಂದಿನ ದಿನಗಳಲ್ಲಿ ಗ್ರಾಮ ಪಂಚಾಯತಿ ಮತ್ತು ತಾಲೂಕು ಜಿಲ್ಲಾ ಪಂಚಾಯತ ಚುನಾವಣೆಗೆ ಸಿದ್ಧರಾಗೋಣ ಶಾಸಕರ ನಿರ್ದೇಶನದಂತೆ ತಾಲೂಕಿನ ಅಭಿವೃದ್ಧಿಗಾಗಿ ಚಾಚು ತಪ್ಪದೆ ಶಾಸಕರ ಜತೆ ಕೈಜೋಡಿಸೋಣ ಎಂದು ತಾಲೂಕಿನ ಕಾಂಗ್ರೆಸ್ ಪಕ್ಷದ ಮುಖಂಡರಿಗೆ ಮತ್ತು ಕಾರ್ಯಕರ್ತರಿಗೆ ಮನವಿ ಮಾಡಿದರು.

ಜನ ವಿರೋಧಿ ಕೇಂದ್ರ ಸರಕಾರ

ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಬರೆ ಜೈ ಕಾರ ಹಾಕಿದರೆ ಸಾಲದು ಕೇಂದ್ರ ಸರಕಾರದ ವಿರುದ್ಧ ಯುವಕರು ಸಾಮಾಜಿಕ ಜಾಲತಾಣದಲ್ಲಿಯು ಸಹಾ ಕೇಂದ್ರ ಸರಕಾರದ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ ಬಿಜೆಪಿಯವರು ಕಾಂಗ್ರೆಸ್ ಸರಕಾರದ ಜನಪರ ಯೋಜನೆಗಳನ್ನು ರದ್ದು ಪಡಿಸುವ ಹುನ್ನಾರ ನಡೆಸುತ್ತಿದ್ದಾರೆ ಇಂತಹ ಜನ ವಿರೋಧಿ ಕೇಂದ್ರ ಸರಕಾರದ ವಿರುದ್ಧ ಹೋರಾಟ ಮಾಡುವುದು ಎಲ್ಲಾರ ಆದ್ಯ ಕರ್ತವ್ಯವಾಗಿದೆ ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಚಿಗಟೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುಬೇರಗೌಡ್ರು, ಪುರಸಭೆ ಸದಸ್ಯ, ಅಬ್ಬುಲ್ ರಹಮಾನ್, ಹುಲಿಕಟ್ಟಿ ಚಂದ್ರಪ್ಪ ,ಮಾತನಾಡಿದರು ವಕೀಲ ವೆಂಕಟೇಶ್, ಲಾಟಿ ದಾದಾಪೀರ್,ಜಾಕೀರ್‌ಹುಸೇನ್, ಗ್ಯಾರೆಂಟಿ ಸಮಿತಿಯ ಅಧ್ಯಕ್ಷ ಉದಯ ಶಂಕರ್,ಪ್ರಚಾರ ಸಮಿತಿ ಮುಖಂಡರುಗಳಾದ, ಕುಭೇರನಾಯ್ಕ, ಮೈದೂರು ರಾಮಣ್ಣ, ವನಜಾಕ್ಷಿ, ಕಂಚಿಕೇರಿ ಜಯಲಕ್ಷೀ, ಆರ್.ಶಶಿಕುಮಾರ್‌ನಾಯ್ಕ, ಸೇರಿದಂತೆ ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಗೂ ಸದಸ್ಯರು, ಕಾರ್ಯಕರ್ತರು ಸಭೆಯಲ್ಲಿ ಹಾಜರಿದ್ದರು.

ವಿಬಿ ರಾಮ್ ಜೀ ಯೋಜನೆಯನ್ನು ಬಿಜೆಪಿ ಕೇಂದ್ರ ಸರಕಾರ ಮುಂದಿನ ದಿನಗಳಲ್ಲಿ ಮೋದಿ ಜೀ ಎಂದು ನಾಮಕರಣ ಮಾಡುವುದರಲ್ಲಿ ಅನುಮಾನವಿಲ್ಲ. ಕೇಂದ್ರ ಸರಕಾರವು ಮಹಾತ್ಮಗಾಂಧಿ ಜೀ ರವರ ಹೆಸರನ್ನು ಅಳಿಸಿ ಹಾಕಲು ಜನ ವಿರೋಧಿ ಯೋಜನೆಯನ್ನು ಜಾರಿಗೊಳಿಸಲು ಹುನ್ನಾರ ನಡೆಸುತ್ತಿದ್ದಾರೆ. ಈ ಹಿಂದೆ ನರೇಗಾ ಯೋಜನೆ ಅಡಿಯಲ್ಲಿ ತಾಲೂಕಿನ 30 ಗ್ರಾಮ ಪಂಚಾಯತಿಗಳಲ್ಲಿ ಅನೇಕ ಗ್ರಾಮೀಣ ಪ್ರದೇಶದಲ್ಲಿ ಸಿವಿಲ್ ಕೆಲಸದ 40% ಹಣ ಬಿಡುಗಡೆ ಮಾಡದೇ ಕೇಂದ್ರ ಬಿಜೆಪಿ ಸರಕಾರ ಬಡವರ ಹೊಟ್ಟೆಯ ಮೇಲೆ ಬರೆಯೆಳೆಯುತ್ತಿದ್ದಾರೆ.

ಎಂ.ಪಿ.ಲತಾ ಮಲ್ಲಿಕಾರ್ಜುನ, ಶಾಸಕಿ

ನಗರ ಸ್ವಚ್ಛತೆ, ಸುಂದರಗೊಳಿಸುವ ಸಂಕಲ್ಪ ಬಲಪಡಿಸಿದ ಮಹಾ ಯೋಜನೆ

ಇತಿಹಾಸ ಬರೆದ ರಾಯಚೂರು ಪಾಲಿಕೆಯ ಸ್ವಚ್ಛತಾ ಓಟ

ರಾಯಚೂರು: ಸ್ವಚ್ಛ ಭಾರತ ಮಿಷನ್ ಹಾಗೂ ರಾಯಚೂರು ಉತ್ಸವ 2026 ರ ಅಂಗವಾಗಿ ರಾಯಚೂರು ಮಹಾನಗರ ಪಾಲಿಕೆ ಹಾಗೂ ಜಿಲ್ಲಾಡಳಿತದ ಸಂಯುಕ್ತ ಆಶ್ರಯದಲ್ಲಿ ಸ್ವಚ್ಛತಾ ಓಟ ಆಯೋಜಿಸಲಾಗಿತ್ತು.

ಸಚಿವರು, ಸಂಸದರು, ಶಾಸಕರ ಮಾರ್ಗದರ್ಶದಡಿಯಲ್ಲಿ ಜಿಲ್ಲಾಧಿಕಾರಿ ನಿತೀಶ್ ಕೆ ಹಾಗೂ ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮೋಹಪಾತ್ರ ಅವರು ವಿಶೇಷವಾಗಿ ರೂಪಿಸಿದ ಈ ಸ್ವಚ್ಛತಾ ಓಟವು ಯುವಜನತೆಗೆ ಹೊಸ ಶಕ್ತಿ, ಪ್ರೇರಣೆ ಹಾಗೂ ಜಾಗೃತಿ ನೀಡಿತು. ರಾಯಚೂರು ಜನತೆಯಲ್ಲಿ ತಮ್ಮ ನಗರವನ್ನು ಸ್ವಚ್ಛ, ಸುಂದರ ಹಾಗೂ ಆರೋಗ್ಯಕರವಾಗಿಸುವ ಸಂಕಲ್ಪವನ್ನು ಮತ್ತಷ್ಟು ಬಲಪಡಿಸಿತು.

ಕಾರ್ಯಕ್ರಮಕ್ಕೆ ಸಂಸದ ಜಿ. ಕುಮಾರ್‌ನಾಯಕ್ ಅವರು ನೇತೃತ್ವ ವಹಿಸಿ ಸ್ವಚ್ಛತಾ ಓಟಕ್ಕೆ ಚಾಲನೆ ನೀಡಿ, ಮಾತನಾಡಿದ ಅವರು, ಸ್ವಾಮಿ ವಿವೇಕಾನಂದರ ಮೌಲ್ಯಗಳು, ಸದೃಢ ಶರೀರ ಮತ್ತು ಮನಸ್ಸಿನ ಮಹತ್ವ ಮತ್ತು ಸ್ವಚ್ಛ, ಆರೋಗ್ಯಕರ ವಾತಾವರಣ ನೆನಪಿಸಿದರು.

ರಾಯಚೂರು ಇತಿಹಾಸದಲ್ಲೇ ಮೊದಲ ಬಾರಿಗೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜನರು ಮ್ಯಾರಥಾನ್ ಓಟಕ್ಕೆ ಸ್ವಯಂ ಪ್ರೇರಿತವಾಗಿ ಆಗಮಿಸಿದ್ದರು. ಈ ಸ್ವಚ್ಛತಾ ಓಟವು ಸಾರ್ವಜನಿಕರಲ್ಲಿ ಸ್ವಚ್ಛತೆಯ ಅರಿವು, ಪರಿಸರ ಸಂರಕ್ಷಣೆ, ಆರೋಗ್ಯಕರ ಜೀವನ ಶೈಲಿ ಹಾಗೂ ಪಾಲಿಕೆಯೊಂದಿಗೆ ನಾಗರಿಕರ ಸಹಭಾಗಿತ್ವವನ್ನು ಮತ್ತಷ್ಟು ಬಲಪಡಿಸಿದೆ. ಕಾರ್ಯಕ್ರಮಕ್ಕೆ ದೊರೆತ ವ್ಯಾಪಕ ಜನ ಬೆಂಬಲಕ್ಕೆ ಸಾರ್ವಜನಿಕರು ಸರಕಾರ ಹಾಗೂ ಮಹಾನಗರ ಪಾಲಿಕೆಯ ಈ ಮಹತ್ವದ ಮುಂದಾಳತ್ವಕ್ಕೆ ಕೃತಜ್ಞತೆ ವ್ಯಕ್ತಪಡಿಸಿದರು.

ಮ್ಯಾರಾಥಾನ್‌ನಲ್ಲಿ ಮುಖಂಡರಾದ ಜಯಣ್ಣ, ರವಿ ಬೋಸರಾಜು, ಜಿಲ್ಲಾಧಿಕಾರಿ ನಿತೀಶ್ ಕೆ., ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೊಹಪಾತ್ರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶ ಗಿರಿ, ಅಪರ ಜಿಲ್ಲಾಧಿಕಾರಿ ಶಿವಾನಂದ, ಮಹಾನಗರ ಪಾಲಿಕೆಯ ಸಮಿತಿ ಕಾರ್ಯದರ್ಶಿ ಹಾಗೂ ಸರಕಾರಿ ನೌಕರರ ಸಂಘದ ಅಧ್ಯಕ್ಷ ಕೃಷ್ಣ, ಪಾಲಿಕೆಯ ಜೊನಲ್ 1ರ ಆಯುಕ್ತ ಪುಲಮ್ ಸಿಂಗ್, ಉಪ ಆಯುಕ್ತ ಸಂತೋಷ ರಾಣಿ, ರಾಯಚೂರು ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್, ರಾಯಚೂರು ತಹಸೀಲ್ದಾರ್‌ಸುರೇಶ್ ವರ್ಮ,ಅರಕೇರಾ ತಹಸೀಲ್ದಾರ್‌ಅಮರೇಶ ಬಿರಾದಾರ, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವೀರೇಶ ನಾಯಕ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಓಟದಲ್ಲಿ ಭಾಗಿಯಾದರು.

ಸ್ವಚ್ಛ ಭಾರತ ಮಿಷನ್ ಹಾಗೂ ರಾಯಚೂರು ಉತ್ಸವ2026 ರ ಅಂಗವಾಗಿ ರಾಯಚೂರು ಮಹಾನಗರ ಪಾಲಿಕೆ ಹಾಗೂ ಜಿಲ್ಲಾಡಳಿತದ ಸಂಯುಕ್ತ ಆಶ್ರಯದಲ್ಲಿ ಸ್ವಚ್ಛತಾ ಓಟಕ್ಕೆ ಸಂಸದ ಜಿ. ಕುಮಾರ್‌ನಾಯಕ್ ಚಾಲನೆ ನೀಡಿದರು.

3000 ಕ್ಕೂ ಹೆಚ್ಚು ಜನರು ಭಾಗಿ

ಸ್ವಚ್ಛತಾ ಓಟದಲ್ಲಿ 3000 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಶಾಲಾ ವಿದ್ಯಾರ್ಥಿಗಳಿಂದ- 65 ರ ವಯೋಮಾನದವರು ಓಟದಲ್ಲಿ ಪಾಲ್ಗೊಂಡಿದ್ದರು. ವಿದ್ಯಾರ್ಥಿಗಳು, ಸರಕಾರಿ ಹಾಗೂ ಖಾಸಗಿ ಸಂಸ್ಥೆಗಳ ಅಧಿಕಾರಿಗಳು, ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಉತ್ಸಾಹದಿಂದ ಭಾಗಿಯಾಗಿದ್ದರು.

ರಾಷ್ಟ್ರೀಯ ಯುವ ದಿನಾಚರಣೆ

ಸಂಡೂರು: ಏಳಿ, ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ' ಎಂಬ ಸ್ವಾಮಿ ವಿವೇಕಾನಂದರ ವೀರವಾಣಿ ಸ್ಥಳೀಯ ಶ್ರೀಶೈಲೇಶ್ವರ ವಿದ್ಯಾಕೇಂದ್ರದ ಕನ್ನಡ ಮಾಧ್ಯಮ ಶಾಲಾ ಆವರಣದಲ್ಲಿ ಪ್ರತಿಧ್ವನಿಸಿತು.

ಶ್ರೀಶೈಲೇಶ್ವರ ವಿದ್ಯಾಕೇಂದ್ರದ ಕನ್ನಡ ಮಾಧ್ಯಮ ಶಾಲೆ ಹಾಗೂ ಭಾರತೀಯ ಸುರಾಜ್ಯ ಸಂಸ್ಥೆ ಸಂಡೂರು ಘಟಕದ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಯುವ ದಿನಾಚರಣೆಯನ್ನು ಅತ್ಯಂತ ಅರ್ಥಗರ್ಭಿತವಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಆರಂಭದಲ್ಲಿ ವಿವೇಕಾನಂದರ ವೇಷಧಾರಿಗಳಾಗಿ ಕಂಗೊಳಿಸುತ್ತಿದ್ದ ವಿದ್ಯಾರ್ಥಿಗಳನ್ನು ಶಾಲೆಯ ಮುಖ್ಯದ್ವಾರದಲ್ಲಿ ಪುಷ್ಪವೃಷ್ಟಿಯ ಮೂಲಕ ಅದ್ದೂರಿಯಾಗಿ ಬರಮಾಡಿಕೊಳ್ಳಲಾಯಿತು. ಇದು ನೆರೆದಿದ್ದವರಲ್ಲಿ ಭಕ್ತಿ ಹಾಗೂ ದೇಶಪ್ರೇಮದ ಭಾವವನ್ನು ಜಾಗೃತಗೊಳಿಸಿತು. ಆರನೇ ತರಗತಿಯ ವಿದ್ಯಾರ್ಥಿ ಸರ್ವೇಶ್ ಮಹೇಶ್ ದೇವರಮನಿ, ಚಿಕಾಗೋ ಸಮ್ಮೇಳನದ ಐತಿಹಾಸಿಕ ಭಾಷಣವನ್ನು ಮನೋಜ್ಞವಾಗಿ ಪ್ರಸ್ತುತಪಡಿಸಿ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಮೆಚ್ಚುಗೆಗೆ ಪಾತ್ರನಾದನು.

ಪ್ರಾಥಮಿಕ ಶಾಲೆಯ ಮುಖ್ಯಗುರು ಬಸವನಗೌಡಟಿ.ಆರ್ ಅವರು ಸ್ವತಃ ವಿವೇಕಾನಂದರ ವೇಷ ಧರಿಸಿ ವೇದಿಕೆಯ ಮೇಲೆ ಕಾಣಿಸಿಕೊಂಡಿದ್ದು ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿತ್ತು.

ವಿವೇಕಾನಂದರ ಜೀವನದ ವಿವಿಧ ಘಟನೆಗಳನ್ನು ಉಲ್ಲೇಖಿಸಿದರು. 'ಯುವ ಶಕ್ತಿಯೇ ದೇಶದ ನಿಜವಾದ ಸಂಪತ್ತು' ಎಂದು ಸ್ಫೂರ್ತಿದಾಯಕ ಕರೆ ನೀಡಿದರು. ವಿದ್ಯಾರ್ಥಿಗಳಲ್ಲಿ ಏಕಾಗ್ರತೆ, ಆತ್ಮಸ್ಥೈರ್ಯ ಮತ್ತು ನೈತಿಕತೆಯ ಮಹತ್ವವನ್ನು ದೃಷ್ಟಾಂತಗಳ ಮೂಲಕ ವಿವರಿಸುತ್ತಾ, ಪ್ರತಿಯೊಬ್ಬ ವಿದ್ಯಾರ್ಥಿಯೂ ದೇಶದ ಜವಾಬ್ದಾರಿಯುತ ಪ್ರಜೆಯಾಗಬೇಕು ಎಂದು ಆಶಿಸಿದರು.

ಭಾರತೀಯ ಸುರಾಜ್ಯ ಸಂಸ್ಥೆ ಸಂಡೂರು ಘಟಕದ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಯುವ ದಿನಾಚರಣೆಯಲ್ಲಿ ವಿವೇಕಾನಂದರ ವೇಷಧಾರಿಗಳಾಗಿ ಕಂಗೊಳಿಸಿದ ವಿದ್ಯಾರ್ಥಿಗಳು.

ಜನಪ್ರತಿನಿಧಿಗಳು ಜನರ ಸೇವಕರು

ಲಿಂಗಸುಗೂರು: ಚುನಾಯಿತ ಜನಪ್ರತಿನಿಧಿಗಳು ಜನರ ಸೇವಕರು ಹೊರತು ಮಾಲೀಕರ ಅಲ್ಲ, ಕ್ಷೇತ್ರದ ಅಭಿವೃದಿ ನಮ್ಮ ಗುರಿಯಾಗಿರಬೇಕು ಜನರಿಗೆ ಕನಿಷ್ಠ ಮೂಲ ಸೌಕರ್ಯ ಒದಗಿಸುವ ಪ್ರಯತ್ನ ಮಾಡಬೇಕು ಎಂದು ಕೆಪಿಸಿಸಿ ಉಪಾಧ್ಯಕ್ಷ ಹಾಗೂ ಮಾಜಿ ಶಾಸಕ ಡಿ.ಎಸ ಹುಲಗೇರಿ ಹೇಳಿದರು.

ಪಟ್ಟಣದ ವಾರ್ಡ ನಂ 14 ರಲ್ಲಿ ಆಯೋಜಿಸಿದ ಬಿಜೆಪಿ ಪಕ್ಷದ ಮುಖಂಡರು ಕಾಂಗ್ರೆಸ್ ಪಕ್ಷಗೆ ಸೇರ್ಪಡೆ ಹಾಗೂ ಕಾರ್ಯಕರ್ತರ ಸಭೆಯನ್ನು ಉದ್ಘಾಟಿಸಿ ಮಾತನಾದಿದ ಅವರು 14ನೇ ವಾರ್ಡ ಪಿಂಚನಿಪೂರ ನಲ್ಲಿ ಅನೇಕ ಸಮಸ್ಯೆಗಳಿದ್ದು ಪರಿಹರಿ ಸುವಲ್ಲಿ ಜನಪ್ರತಿನಿಧಿಗಳು ವಿಫಲವಾಗಿದ್ದಾರೆ. ನಾನ್ನು ಅಲ್ಪ ಮತದಿಂದ ಸೋತರು ನಿರಂತರವಾಗಿ ಜನರ ಸಮಸ್ಯೆ, ಕ್ಷೇತ್ರದ ಅಭಿವೃದ್ಧಿ ಕಡೆ ಗಮನ ಹರಿಸಿದ್ದೇನೆ. ಆದರೆ ಕ್ಷೇತ್ರದ ಶಾಸಕ ಅಭಿವೃದ್ಧಿ ಕಡೆ ಗಮನ ಹರಿಸುತ್ತಿಲ್ಲ. ಮುಂಬರುವ ಚುನಾವಣೆಯಲ್ಲಿ ಪಕ್ಷ ಯಾರಿಗೆ ಟಿಕೆಟ ನೀಡಿದರು. ಕಾರ್ಯಕರ್ತರು ಒಗ್ಗಾಟಾಗಿ ಅಭ್ಯರ್ಥಿ ಗೆಲುವಿಗೆ ಶ್ರಮಿಸಬೇಕು, ಪಕ್ಷದಲ್ಲಿದ್ದು ಬೆನ್ನಿಗೆ ಚೂರಿ ಹಾಕುವರ ವಿರುದ್ಧ ಜಾಗ್ರತರಾಗಿರಬೇಕು ಎಂದು ಹೇಳಿದರು.

ಬಿಜೆಪಿ ಮುಖಂಡ ಮಹಮ್ಮದ್ ನಜೀರ ಹಾಗೂ ಇತರ ಸಂಗಡಿಗರನ್ನು ಕಾಂಗ್ರೆಸ್ ಪಕ್ಷದ ಬಾವುಟ ನೀಡಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ನಾಯಕ, ಯುವ ಕಾಂಗ್ರೆಸ್ ಅಧ್ಯಕ್ಷ ಸಂತೋಷ ಸೋಪ್ಪಿಮಠ, ಮಜಿ ಪುರಸಭೆ ಉಪಾಧ್ಯಕ್ಷ ಮಹ್ಮದ ರಫಿ, ಖಾದರ ಪಾಷಾ, ಎಚ ಮುದಕಪ್ಪ ವಕೀಲ, ಅಪ್ಪಯ್ಯ ದಣಿ, ಎಪಿಎಂಸಿ ಅಧ್ಯಕ್ಷ ಅಮರೇಶ ಹೆಸರೂರ, ತಾಲೂಕ ಗ್ಯಾರಂಟಿ ಅನು ಷ್ಠಾನ ಸಮಿತಿ ಅಧ್ಯಕ್ಷ ವೆಂಕಟೇಶಗುತ್ತೇದಾರ, ಸಂಜೀವ ಕಂದಗಲ್, ಆರೂನ ಸಾಬ, ಎಕ್ಬಾ ಲ್ ಸಾಬ, ಅಲ್ಲು ಪಟೇಲ್, ವಿಜಯಲಕ್ಷ್ಮಿ, ಶ್ವೇತಾ ಲಾಲಗುಂದಿ, ಅಮರೇಶ ಮಡ್ಡಿ, ಗದ್ದೇನಗೌಡ ಪಾಟೀಲ, ಪಾಷಾ ಟೇಲರ್,ನರಸಿಂಹ ರೆಡ್ಡಿ ಹಾಗೂ ಇತರರು ಭಾಗವಹಿಸಿದ್ದರು.

ಪಟ್ಟಣದ ವಾರ್ಡ ನಂ 14 ರಲ್ಲಿ ಆಯೋಜಿಸಿದ್ದ ಬಿಜೆಪಿ ಪಕ್ಷದ ಮುಖಂಡರು ಕಾಂಗ್ರೆಸ್ ಪಕ್ಷಗೆ ಸೇರ್ಪಡೆ ಹಾಗೂ ಕಾರ್ಯಕರ್ತರ ಸಭೆಯನ್ನು ಮಾಜಿ ಶಾಸಕ ಡಿ.ಎಸ ಹುಲಗೇರಿ ಉದ್ಘಾಟಿಸಿದರು.

ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೂಮಿ ಪೂಜೆ

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಯೋಜನೆ ಅಡಿಯಲ್ಲಿ ತಾಲೂಕಿನ ಹಿರೇಬನ್ನಿಗೋಳ ಮತ್ತು ಲಿಂಗದಹಳ್ಳಿ ಗ್ರಾಮದಲ್ಲಿ ನೂತನ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡಗಳ ಭೂಮಿ ಪೂಜೆಗೆ ಶಾಸಕ ದೊಡ್ಡನಗೌಡ ಪಾಟೀಲ ಹಾಗೂ ಗ್ರಾಮ ಪಂಚಾಯತ ಅಧ್ಯಕ್ಷರು ಸೇರಿದಂತೆ ಇತರರು ಚಾಲನೆ ನೀಡಿದರು.

ಕುಷ್ಟಗಿ: ತಾಲೂಕಿನ ಹಿರೇಬನ್ನಿಗೋಳ ಮತ್ತು ಲಿಂಗದಹಳ್ಳಿ ಗ್ರಾಮದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಯೋಜನೆ ಅಡಿಯಲ್ಲಿ ಎರಡು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡಗಳ ಭೂಮಿ ಪೂಜೆ ಮಾಡುವ ಮೂಲಕ ಅಡಿಗಲ್ಲು ಸಮಾರಂಭಕ್ಕೆ ಶಾಸಕ ಹಾಗೂ ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಚಾಲನೆ ನೀಡಿದರು.

ಇಲ್ಲಿನ ತಾಲೂಕಿನ ಹಿರೇಬನ್ನಿಗೋಳ ಗ್ರಾಮದಲ್ಲಿ ನೆಡೆದ ಜಿಲ್ಲಾಡಳಿತ, ಜಿಪಂ ಕೊಪ್ಪಳ, ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ನೆಡೆದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ಜನರ ಆರೋಗ್ಯದ ಹಿತ ದೃಷ್ಟಿಯನ್ನು ಇಟ್ಟುಕೊಂಡು ತಾಲೂಕಿನ ಹಿರೇಬನ್ನಿಗೋಳ ಮತ್ತು ಲಿಂಗದಹಳ್ಳಿ ಗ್ರಾಮದಲ್ಲಿ ಸುಮಾರು ನಾಲ್ಕು ಕೋಟಿ ರೂಪಾಯಿ ವೆಚ್ಚದಂತೆ ಒಟ್ಟು 8 ಕೋಟಿ ರು. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಯೋಜನೆಯಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಆದರೆ ಈಗಾಗಲೇ ಹಿರೇಬನ್ನಿಗೋಳ ಮತ್ತು ಲಿಂಗದಹಳ್ಳಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಸುಮಾರು 30ಕ್ಕೂ ಹೆಚ್ಚು ಹಳ್ಳಿಗಳು ಬರುತ್ತಿದ್ದು ಈ ಭಾಗದ ಜನತೆಯ ಬೇಡಿಕೆಯಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಲು ಮುಂದಾಗಿದೆ. ಆದರೆ ಈ ಗ್ರಾಮಗಳ ವ್ಯಾಪ್ತಿಯ ಹಳ್ಳಿಗಳ ಜನತೆಗೆ ಸರಕಾರಿ ಆಸ್ಪತ್ರೆ ಯಾವುದು ಇಲ್ಲ ಮತ್ತು ಸಮೀಪದಲ್ಲಿ ಯಾವುದೇ ಸರಕಾರಿ ಆಸ್ಪತ್ರೆಗಳು ಇಲ್ಲದ ಕಾರಣ ಈಗ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ನೀಡಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಟಿ.ಎಚ್.ಓ ಆನಂದ ಗೋಟೂರು, ಗ್ರಾಮ ಪಂಚಾಯತ ಅಧ್ಯಕ್ಷ ಧರ್ಮಣ್ಣ ಚೋಪಡೆ, ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಅಂಬುಜಾ ಸೋಮನಗೌಡ ಪಾಟೀಲ, ಸೇರಿದಂತೆ ಆರೋಗ್ಯ ಸಿಬ್ಬಂದಿ ಉಪಸ್ಥಿತರಿದ್ದರು.

ಈ ಭಾಗದ ಜನತೆ ಕುಷ್ಟಗಿ ಪಟ್ಟಣದ ಸರಕಾರಿ ಆಸ್ಪತ್ರೆಗೆ ಬರಬೇಕು ಎಂದರೆ ಆಗುವುದಿಲ್ಲ ಮತ್ತು ಲಿಂಗದಹಳ್ಳಿಯಿಂದ ಕುಷ್ಟಗಿ ಸರಕಾರಿ ಆಸ್ಪತ್ರೆ ಸುಮಾರು 21 ಕಿ.ಮಿ. ದೂರವಾಗುತ್ತದೆ ಅದೇ ರೀತಿಯಾಗಿ ಹಿರೇಬನ್ನಿಗೋಳ ಕೂಡ 15 ಕಿ.ಮೀ ದೂರ ಇರುವ ಕಾರಣ ಈ ಎರಡು ಗ್ರಾಮಕ್ಕೆ ಸಮೀಪದಲ್ಲಿ ಯಾವುದೇ ಆಸ್ಪತ್ರೆಗಳು ಇಲ್ಲದೇ ಇರುವುದರಿಂದ ಸರಕಾರದ ಅನುದಾನದಲ್ಲಿ ಈಗ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸರಕಾರದಿಂದ ಮಂಜೂರು ಆಗಿದೆ .ಈ ಒಂದು ಅಡಿಗಲ್ಲು ಸಮಾರಂಭವನ್ನು ಮಾಡಿ ಸುಸಜ್ಜಿತ ಸರಕಾರಿ ಆಸ್ಪತ್ರೆಯನ್ನು ನಿರ್ಮಾಣ ಮಾಡಲಾಗುತ್ತದೆ.

ದೊಡ್ಡನಗೌಡ ಪಾಟೀಲ, ಶಾಸಕ

ಕೇಂದ್ರ ಸರಕಾರದ ವಿರುದ್ಧ ಸಂಸದ ಜಿ.ಕುಮಾರ ನಾಯಕ ಆರೋಪ

ಉದ್ಯೋಗ ಖಾತ್ರಿ ಬದಲಾವಣೆಯಿಂದ ಕಾರ್ಮಿಕರಿಗೆ ಕುತ್ತು

ರಾಯಚೂರು: ಸಂವಿಧಾನದ ಆಶಯಕ್ಕೆ ವಿರುದ್ದವಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯನ್ನು ವಿರೂಪಗೊಳಿಸಿರುವ ಕೇಂದ್ರ ಸರಕಾರಕ್ಕೆ ಕೂಲಿ ಕಾರ್ಮಿಕರ ದುಡಿಯುವ ಹಕ್ಕನ್ನು ಕಸಿದುಕೊಂಡಿದೆ. ವಿಕಸಿತ ಭಾರತ, ಉದ್ಯೋಗ ಖಾತ್ರಿ ಜೀವನೋಪಯೋಗಿ ಯೋಜನೆಯಿಂದ ಅಭಿವೃದ್ಧಿಯನ್ನು ಕಸಿದುಕೊಂಡಂತಾಗಿದೆ ಎಂದು ಸಂಸದ ಜಿ.ಕುಮಾರನಾಯಕ ಆರೋಪಿಸಿದರು.

ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಉಗ್ರ ಬಲಪಂಥೀಯ ಯೋಚನೆಗಳನ್ನು ಹೇರುವ ಪ್ರಯತ್ನ ಪ್ರಾರಂಭಿಸಿರುವುದು ಕಳವಳಕಾರಿ. ನೂರು ದಿನ ಉದ್ಯೋಗ ಖಾತ್ರಿ ಯೋಜನೆಯನ್ನು 125 ದಿನಗಳಿಗೆ ಹೆಚ್ಚಿಸುವುದಾಗಿ ಸಮರ್ಥಿಸಿಕೊಳ್ಳುವ ಕೇಂದ್ರ ಸರಕಾರ ವರ್ಷವಿಡಿ ಉದ್ಯೋಗ ದೊರೆಯುವುದನ್ನು ತಡೆದಿದೆ. ಅಲ್ಲದೇ ಬೇಡಿಕೆ ಆಧಾರದ ಯೋಜನೆಯನ್ನು ಅವಶ್ಯಕತೆ ಆಧಾರದ ಮೇಲೆ ರೂಪಿತಗೊಳಿಸಿರುವುದು ಕಾರ್ಮಿಕರಿಗೆ ಉದ್ಯೋಗ ಖಾತ್ರಿ ಇಲ್ಲದಂತೆ ಮಾಡಿದೆ ಎಂದು ದೂರಿದರು.

ಸಂಸದೀಯ ಮಂಡಳಿಯ ಶಿಫಾರಸ್ಸುಗಳನ್ನು ಕಡೆಗಣಿಸಿ ಹೊಸ ಮಸೂದೆ ರೂಪಿಸಿ, ಉದ್ಯೋಗ ಖಾತ್ರಿ ಯೋಜನೆಗೆ ಇದ್ದ ಘನತೆ ಕುಂದು ತರುವ ಪ್ರಯತ್ನವಾಗಿದೆ. ಯುಪಿಎ ಸರಕಾರದ ಅವಧಿಯಲ್ಲಿ ಉದ್ಯೋಗ ಖಾತ್ರಿ, ಮಾಹಿತಿ ಹಕ್ಕು, ಶಿಕ್ಷಣ ಹಕ್ಕು ಕಾಯ್ದೆಯನ್ನು ರೂಪಿಸಿರುವ ಕ್ರಾಂತಿಕಾರಿ ಹೆಜ್ಜೆಯನ್ನು ಎನ್ಡಿಎ ಸರಕಾರ ದಿಕ್ಕುತಪ್ಪಿಸುವ ಕಾರ್ಪೊರೇಟ್ ವಲಯಕ್ಕೆ ಪೂರಕವಾಗುವ ಚಿಂತನೆ ಹೊಂದಿದೆ. ರಾಮನ ಕುರಿತು ತುಟಿ ಪ್ರೀತಿ ತೋರಿಸುವ ಸರಕಾರ ಜನರ ಹೃದಯದಲ್ಲಿರುವ ರಾಮನನ್ನು ಕಡೆಗಣಿಸಿದೆ. ಕಾಯ್ದೆ ಬದಲಾವಣೆ ಹಿಂದೆ ಕುಟೀಲ ನೀತಿಯಿದೆ ಎಂದು ಟೀಕಿಸಿದರು.

ಗ್ರಾಮ ಪಂಚಾಯ್ತಿಗಳ ಮೂಲಕ ಜನರು ಕೆಲಸದ ಬೇಡಿಕೆ ಮೇಲೆ ಜಾರಿಗೊಳಿಸಲಾಗುತ್ತಿದ್ದ ಯೋಜನೆ ಮುಂದಿನ ದಿನಗಳಲ್ಲಿ ನಿಗದಿತ ಪ್ರದೇಶ(ನೋಟಿಫೈ ಏರಿಯಾರ) ದಲ್ಲಿ ಮಾತ್ರ ಕೆಲಸ ನಡೆಸಬೇಕಾಗುತ್ತದೆ. 125 ದಿನ ಕೆಲಸ ನೀಡುವುದಾಗಿ ಹೇಳುತ್ತಿದ್ದರೂ, ಕೃಷಿ ಕಾರ್ಯ ಚಟುವಟಿಕೆ ದಿನದಲ್ಲಿ ಕೆಲಸ ಸ್ಥಗಿತಗೊಳಿಸುವುದರಿಂದ 60 ದಿನವೂ ಕೆಲಸ ದೊರೆಯದಂತಾಗಲಿದೆ ಎಂದು ಅನುಮಾನ ವ್ಯಕ್ತಪಡಿಸಿದರು.

ನೀತಿಯ ನ್ನು ಖಂಡಿಸಿ ಕಾಂಗ್ರೆಸ್ ಸಂಸದರು ಈಗಾಗಲೇ ಪ್ರತಿರೋಧ ವ್ಯಕ್ತಪಡಿಸಿದೆ. ಸರಕಾರ ಸಮರ್ಥನೆಯಲ್ಲಿತೊಡಗಿದೆ ಹೊರತು ಬದಲಾವಣೆಗೆ ಮುಂದಾಗದೇ ಇರುವದರಿಂದ ನೀತಿ ವಿರೋಧಿಸಿ ನಿರಂತರ ಹೋರಾಟ ನಡೆಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಹ್ಮದ ಶಾಲಂ, ಜಯಣ್ಣ, ರವಿಬೋಸರಾಜ, ಕೆ.ಶಾಂತಪ್ಪ, ರುದ್ರಪ್ಪ ಅಂಗಡಿ, ಜಯವಂತರಾವ ಪತಂಗೆ, ಎನ್. ಶ್ರೀನಿವಾಸರೆಡ್ಡಿ, ಜಿ.ಶಿವಮೂರ್ತಿ,ಅಮರೇಗೌಡ ಹಂಚಿನಾಳ, ಯುವ ಕಾಂಗ್ರೆಸ್ ಅಧ್ಯಕ್ಷ ಮರಿಸ್ವಾಮಿ ಗಟ್ಟುಬಿಚ್ಚಾಲಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸುದ್ದಿಗೋಷ್ಠಿಯಲ್ಲಿ ಸಂಸದ ಜಿ. ಕುಮಾರನಾಯಕ ಮಾತನಾಡಿದರು.

ಗ್ರಾಮಸಭೆಗಳ ಮೂಲಕ ಉದ್ಯೋಗ ಖಾತ್ರಿ ಕಾಮಗಾರಿಗಳ ಆಯ್ಕೆ ಪಂಚಾಯ್ತಿಗೆ ಇದ್ದ ಅಧಿಕಾರ ಮೊಟಕುಗೊಳ್ಳಲಿದೆ. ಆಯ್ಕೆ ಪ್ರದೇಶದಲ್ಲಿ ಮಾತ್ರ ಸರಕಾರ ಸೂಚಿಸುವ ಏಕರೂಪ ಮಾದರಿ ಕೆಲಸವನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವಂತೆ ಕಾಯ್ದೆ ರೂಪಿಸಿದೆ. ಯೋಜನೆಗೆ ಕಾಯ್ದಿರಿಸಿದ ಅನುದಾನ ಬಳಕೆಯಾದ ನಂತರ ಯೋಜನೆ ಸ್ಥಗಿತಗೊಳ್ಳುತ್ತದೆ. ಸರಕಾರ ಯೋಜನೆ ಪರಿಷ್ಕರಿಸಿರುವುದಾಗಿ ಹೇಳುತ್ತಿದೆ ಆದರೆ 125 ದಿನ ಕೆಲಸ ನೀಡುವದು ಹೊರತುಪಡಿಸಿದರೆ ಉಳಿದೆಲ್ಲವೂ ಹಿಂದಿನ ಕಾಯ್ದೆಯಲ್ಲಿರುವಂತೆಯೇ ಇದೆ. ಬದಲಾವಣೆ ಅವಶ್ಯಕತೇ ಇರಲಿಲ್ಲ.

-ಜಿ.ಕುಮಾರನಾಯಕ, ಸಂಸದ

ಸದರ್ ಶಾಹ ವಲಿ ಉರೂಸ್ ಜ. 15ಕ್ಕೆ

ಕೊಪ್ಪಳ: ನಗರದ ಹಸನ್ ರಸ್ತೆಯಲ್ಲಿನ ಸದರ್‌ಶಾಹ ವಲಿ ದರ್ಗಾದಲ್ಲಿ ಹಜರತ್ ಖ್ವಾಜಾ ಸೈಯ್ಯದ್ ಷಃ ಸದರುದ್ದೀನ್ ಹುಸೇನಿ ಚಿಸ್ತಿ ದೆಹಲ್ವಿ ದರ್ಗಾದ 224ನೇ ವರ್ಷದ ಉರುಸ್ ಏ ಮುಬಾರಕ್ ಜ.14 ರಿಂದ ಜ.16ರ ವರೆಗೆ ನಡೆಯಲಿದೆ ಎಂದು ಸಮೀತಿಯ ಸೈಯ್ಯದ್ ನಾಸಿರ್‌ಹುಸೇನ್ ಹೇಳಿದರು.

ನಗರದ ಮೀಡಿಯಾ ಕ್ಲಬ್ ನಲ್ಲಿ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಜ.14 ರಂದು ತಗ್ಗಿನ ಕೇರಿ ಓಣಿಯ ಜಂಟಾ ಕಟ್ಟೆಯಿಂದ ದರ್ಗಾದ ವರೆಗೆ ಸಂದಲ್ ಮೆರವಣಿಗೆ ನಡೆಯಲಿದೆ. ಜ.15 ರಂದು ನಾನಾ ಧಾರ್ಮಿಕ ಮತ್ತು ಸಾಂಪ್ರದಾಯಿಕ ಆಚರಣೆ ಜೊತೆಗೆ ಉರೂಸ್ ಜರುಗಲಿದೆ. ಸಂಜೆ 6.30ಕ್ಕೆ ತಸ್ಕೀನ್ ಖವ್ವಾಲಿ ತಂಡದಿಂದ ಖವ್ವಾಲಿ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಜ. 16 ರಂದು ಫಾತೇಹ ಖಾನಿ ಧಾರ್ಮಿಕ ಕಾರ್ಯಕ್ರಮ ಜರುಗಲಿದೆ. ಕೊಪ್ಪಳ ಜಿಲ್ಲೆಯ ಪ್ರಮುಖ ಜನಪ್ರತಿನಿಧಿಗಳು, ರಾಜಕೀಯ ಮುಖಂಡರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಮಾಹಿತಿ ನೀಡಿದರು. ಐತಿಹಾಸಿಕ ಹಿನ್ನೆಲೆ ಹೊಂದಿರುವ ದರ್ಗಾ ಸಾಕಷ್ಟು ಶಿಥಿಲವಾಗಿತ್ತು. ಈ ಹಿನ್ನೆಲೆ ಸುಮಾರು 2 ಕೋಟಿ ರೂ. ವೆಚ್ಚದಲ್ಲಿ ದರ್ಗಾ ನವೀಕರಿಸಲಾಗಿದೆ. ಸರಕಾರದಿಂದ ಯಾವುದೇ ಅನುದಾನ ಪಡೆದಿಲ್ಲ. ಬದಲಾಗಿ ನಮ್ಮ ವಂಶಸ್ಥರ ದೇಣಿಗೆ ಮೂಲಕ ಹಣ ಸಂಗ್ರಹಿಸಿ ಆಕರ್ಷಕವಾಗಿ ದರ್ಗಾ ನವೀಕರಿಸಲಾಗಿದೆ ಎಂದು ತಿಳಿಸಿದರು.

ನಾಳೆಯ ಮಕರಜ್ಯೋತಿಗೆ ಶಬರಿಮಲೆ ಸಜ್ಜು

ಅಯ್ಯಪ್ಪ ಸ್ವಾಮಿಯ ತಿರುವಾಭರಣ ಮೆರವಣಿಗೆ ಆರಂಭ | ಭದ್ರತೆ ಮತ್ತು ದಟ್ಟಣೆ ನಿಯಂತ್ರಣಕ್ಕೆ ಟೋಕನ್ ಮೂಲಕ ವ್ಯವಸ್ಥೆ

ಪತ್ತನಂತಿಟ್ಟ: ನಾಳೆ ನಡೆಯಲಿರುವ ಕೇರಳದ ಶಬರಿಮಲೆ ಮಕರಜ್ಯೋತಿ ಮಹೋತ್ಸವಕ್ಕೆ ಅಯ್ಯಪ್ಪ ದೇವಾಲಯ ಸಜ್ಜುಗೊಂಡಿದೆ. ಮಕರಜ್ಯೋತಿಯಂದು ಅಯ್ಯಪ್ಪ ಸ್ವಾಮಿಗೆ ತೊಡಿಸುವ 'ತಿರುವಾಭರಣ'ಗಳ ಮೆರವಣಿಗೆಯು ಸೋಮವಾರ ಮಧ್ಯಾಹ್ನ 1 ಗಂಟೆಗೆ ಪಂದಳಂ ವಲಿಯ ಕೋವಿಲ್ ಶ್ರೀಧರ್ಮಶಾಸ್ತ ದೇವಸ್ಥಾನದಿಂದ ಹೊರಟಿದ್ದು, ಮಕರಜ್ಯೋತಿ ದರ್ಶನದ ದಿನವಾದ ಬುಧವಾರ ಸಂಜೆ ಅದು ಸನ್ನಿಧಾನವನ್ನು ತಲುಪಲಿದೆ.

ಈ ಬಾರಿ ಪಂದಳಂ ಅರಮನೆಯ ರಾಜ ಪ್ರತಿನಿಧಿಯಾಗಿ ಪುನರ್ಧರ್ನಾಳ್ ನಾರಾಯಣ ವರ್ಮ ಆ ಮೆರವಣಿಗೆಯನ್ನು ಮುನ್ನಡೆಸಿದ್ದಾರೆ. ಗುರುಸ್ವಾಮಿ ಮರುದಮನ ಶಿವನಕುಟ್ಟಿ ನೇತೃತ್ವದಲ್ಲಿ 26 ಮಂದಿಯ ತಿರುವಾಭರಣ ತಂಡ ಮತ್ತು 4 ಮಂದಿ ಸಹಾಯಕರು ಸಹಿತ 30 ಸದಸ್ಯರು ತಿರುವಾಭರಣ ಪೆಟ್ಟಿಗೆಯನ್ನು ಹೊತ್ತು ಬುಧವಾರ ಶಬರಿಮಲೆ ತಲುಪಲಿದ್ದಾರೆ.

ಪ್ರಧಾನ ಪೆಟ್ಟಿಗೆಯನ್ನು ಅಯ್ಯಪ್ಪ ದೇಗುಲ ಮತ್ತು ಉಳಿದ ಎರಡು ಪೆಟ್ಟಿಗೆಗಳನ್ನು ಮಣಿಮಂಟಪಕ್ಕೆ ಮಕರ ಜ್ಯೋತಿಯ ದಿನ ತಲುಪಿಸಲಾಗುವುದು. ಅಯ್ಯಪ್ಪನಿಗೆ ಪ್ರಧಾನ ಪೆಟ್ಟಿಗೆಯಲ್ಲಿರುವ ತಿರುವಾಭರಣಗಳನ್ನು ತೊಡಿಸಿ ದೀಪಾರಾಧನೆ ಮಾಡಲಾಗುತ್ತದೆ. ಮುಸ್ಸಂಜೆ ಆಗಸದಲ್ಲಿ ಮಕರಜ್ಯೋತಿ ನಕ್ಷತ್ರ ಗೋಚರಿಸಿದ ತಕ್ಷಣ ಶಬರಿಮಲೆಯ ಪೊನ್ನಂಬಲಮೇಡ್‌ನಲ್ಲಿ ಮೂರು ಬಾರಿ ಮಕರ ಜ್ಯೋತಿ ಬೆಳಗುತ್ತದೆ.

ಜ.18ರಂದು ಪಂದಳಂ ಅರಮನೆಯ ವತಿಯಿಂದ ಕಳಭಾಭಿಷೇಕ ಮತ್ತು ಜ.19ರಂದು ರಾಜಪ್ರತಿನಿಧಿಯ ಉಪಸ್ಥಿತಿಯಲ್ಲಿ ಗುರುತಿ ಪೂಜೆ ನಡೆಯಲಿದೆ. ಜ.19ರಂದು ರಾತ್ರಿ ದೇಗುಲ ಮುಚ್ಚುವವರೆಗೆ ಭಕ್ತರಿಗೆ ದರ್ಶನಕ್ಕೆ ಅವಕಾಶವಿದೆ. ಜ.20ರಂದು ಬೆಳಗ್ಗೆ 6ಕ್ಕೆ ರಾಜ ಪ್ರತಿನಿಧಿಯ ದರ್ಶನದ ಬಳಿಕ ದೇಗುಲ ಮುಚ್ಚಲಾಗುವುದು.

ಮಕರಜ್ಯೋತಿ ದರ್ಶನ ತಾಣ: ಭಕ್ತರ ಸುರಕ್ಷತೆಯ ಭಾಗವಾಗಿ ಅನುಮತಿಸಲಾದ ಜಾಗದಲ್ಲಿ ಮಾತ್ರ ಶಬರಿಮಲೆಯಲ್ಲಿ ಮಕರಜ್ಯೋತಿಯನ್ನು ವೀಕ್ಷಿಸಲು ಅವಕಾಶವಿದೆ. ಅಯ್ಯಪ್ಪ ಸನ್ನಿಧಾನ, ಪಾಂಡಿತಾವಳಂ, ಪುಲ್ಲುಮೇಡ್, ಅಟ್ಟತ್ತೋಡ್ ಮತ್ತು ಇಳವುಂಗಾಲ್ ಮೊದಲಾದ ಪ್ರದೇಶಗಳಲ್ಲಿ ಸ್ವಾಮಿ ಭಕ್ತರಿಗೆ ಮಕರಜ್ಯೋತಿಯನ್ನು ವೀಕ್ಷಿಸಲು ಅವಕಾಶವಿದೆ.

ಭಕ್ತರ ಪ್ರವೇಶ ನಿರ್ಬಂಧ

ಕೇರಳ ಹೈಕೋರ್ಟ್ ಆದೇಶದಂತೆ ಮಕರಜ್ಯೋತಿ ದರ್ಶನಕ್ಕೆ ಆಗಮಿಸುವ ಭಕ್ತರ ಮೇಲೆ ಕೆಲವು ನಿರ್ಬಂಧಗಳನ್ನು ವಿಧಿಸಲಾಗಿದೆ. ಭಕ್ತರ ಗುಂಪನ್ನು ನಿಯಂತ್ರಿಸಲು ಮತ್ತು ಸೌಲಭ್ಯಗಳನ್ನು ಒದಗಿಸಲು ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಮತ್ತು ನಾನಾ ಸರಕಾರಿ ಇಲಾಖೆಗಳು ವಿಸ್ತೃತ ವ್ಯವಸ್ಥೆಗಳನ್ನು ಮಾಡಿವೆ. ಜ.13ರಂದು ಆನ್‌ಲೈನ್ ಬುಕ್ಕಿಂಗ್ ಮೂಲಕ 35 ಸಾವಿರ ಮತ್ತು ಸ್ಪಾಟ್ ಬುಕ್ಕಿಂಗ್ ಮೂಲಕ 5 ಸಾವಿರ ಭಕ್ತರಿಗೆ ಸನ್ನಿಧಾನ ಪ್ರವೇಶಿಸಲು ಅನುಮತಿ ನೀಡಿದರೆ ಸಾಕೆಂದು ನ್ಯಾಯಾಲಯ ಆದೇಶಿಸಿದೆ. ಭದ್ರತೆ ಹಾಗೂ ದಟ್ಟಣೆ ನಿಯಂತ್ರಣದ ಭಾಗವಾಗಿ ಈ ನಿರ್ಬಂಧ ಜಾರಿಗೊಳಿಸಲಾಗಿದೆ. ಜ.14ರ ಮಕರಜ್ಯೋತಿಯಂದು ಆನ್ ಲೈನ್ ಬುಕ್ಕಿಂಗ್ ಮೂಲಕ 30 ಸಾವಿರ ಹಾಗೂ ಸ್ಪಾಟ್ ಬುಕ್ಕಿಂಗ್ ಮೂಲಕ ಮತ್ತು 5 ಸಾವಿರ ಭಕ್ತರಿಗೆ ಸನ್ನಿಧಾನ ಪ್ರವೇಶಿಸಲು ಅವಕಾಶ ನೀಡಲಾಗುವುದು. ಜ.15ರಿಂದ 18ರವರೆಗೆ ಆನ್ ಲೈನ್ ಬುಕ್ಕಿಂಗ್ ಮೂಲಕ 50 ಸಾವಿರ, ಸ್ಪಾಟ್ ಬುಕ್ಕಿಂಗ್ ಮೂಲಕ 5 ಸಾವಿರ, ಜ.19ರಂದು ಆನ್‌ಲೈನ್ ಬುಕ್ಕಿಂಗ್ ಮೂಲಕ 30 ಸಾವಿರ, ಸ್ಪಾಟ್ ಬುಕ್ಕಿಂಗ್ ಮೂಲಕ 5 ಸಾವಿರ ಭಕ್ತರಿಗೆ ದರ್ಶನಕ್ಕೆ ಅವಕಾಶ ನೀಡಲಾಗುವುದು.

ಶಬರಿಮಲೆ ಚಿನ್ನಾಭರಣ ಕಳವು: ತನಿಖೆ ಪ್ರಗತಿ

ಶಬರಿಮಲೆ ದೇಗುಲಕ್ಕೆ ಕೈಗಾರಿಕೋದ್ಯಮಿ ವಿಜಯ್ ಮಲ್ಯ ಅವರು 1998ರಲ್ಲಿ ದಾನವಾಗಿ ನೀಡಿದ್ದ 30.3 ಕಿಲೋಗ್ರಾಂಗಳಷ್ಟು ಚಿನ್ನ ನಾಪತ್ತೆ ಪ್ರಕರಣ ಕೇರಳ ರಾಜ್ಯದ ಇತಿಹಾಸದಲ್ಲೇ ಅತಿದೊಡ್ಡ ಹಗರಣವಾಗಿ ಗುರುತಿಸಲ್ಪಟ್ಟಿದೆ. ವಿಜಯ್ ಮಲ್ಯ ಅವರು ದೇವಾಲಯದ ಗರ್ಭಗುಡಿ ಮತ್ತು ಮರದ ಕೆತ್ತನೆಗಳಿಗಾಗಿ 30.3 ಕೆ.ಜಿ ಚಿನ್ನ ಮತ್ತು 1,900 ಕೆ.ಜಿ ತಾಮ್ರವನ್ನು ದಾನವಾಗಿ ನೀಡಿದ್ದು, ಕೇರಳ ಹೈಕೋರ್ಟ್ ಪರಿಶೀಲನೆ ನಡೆಸಿದ ವೇಳೆ ಇದರಲ್ಲಿ ಭಾರೀ ಪ್ರಮಾಣದಲ್ಲಿ ನಷ್ಟವಾಗಿರುವುದು ಕಂಡು ಬಂದಿದೆ.

ಗರ್ಭಗುಡಿಯ ಮುಂದೆ ಎರಡು ದ್ವಾರಪಾಲಕರ ವಿಗ್ರಹಗಳಿವೆ. ಈ ದ್ವಾರಪಾಲಕರ ವಿಗ್ರಹಗಳು ಧರಿಸಿದ್ದ ಚಿನ್ನದ ಆಭರಣ ರಕ್ಷಾಕವಚಗಳನ್ನು 2019ರಲ್ಲಿ ತೆಗೆದು ದುರಸ್ತಿ ಕಾರ್ಯಕ್ಕಾಗಿ ಚೆನ್ನೈಗೆ ಕಳುಹಿಸಲಾಗಿತ್ತು. ನಂತರ ಚಿನ್ನದ ರಕ್ಷಾಕವಚಗಳನ್ನು ಚಿನ್ನದಿಂದ ಲೇಪಿಸಿ ಮತ್ತೆ ದೇವಾಲಯಕ್ಕೆ ತರಲಾಯಿತು. ಆ ಸಮಯದಲ್ಲಿ ಅವು ಕಡಿಮೆ ತೂಕ ಹೊಂದಿದ್ದವು ಎಂಬ ಆರೋಪಗಳಿದ್ದವು. ವಿಗ್ರಹಗಳ ಮೇಲಿನ ಚಿನ್ನದ ಪೀಠಗಳನ್ನು ಕದ್ದಿದ್ದಾರೆ ಎಂಬ ದೂರುಗಳೂ ಇದ್ದವು. ಕೇರಳ ಹೈಕೋರ್ಟ್ ಈ ವಿಷಯದ ಬಗ್ಗೆ ಸರಿಯಾದ ತನಿಖೆ ನಡೆಸಲು ಮತ್ತು ನಾಪತ್ತೆಯಾದ ಚಿನ್ನ ಕಂಡುಹಿಡಿಯಲು ವಿಶೇಷ ತನಿಖಾ ತಂಡವನ್ನು ರಚಿಸಲಾಗಿದ್ದು ತನಿಖೆ ಪ್ರಗತಿಯಲ್ಲಿದೆ. ಆ ಅವಧಿಯಲ್ಲಿ ಶಬರಿಮಲೆ ಪ್ರಧಾನ ಅರ್ಚಕರಾಗಿದ್ದವರೂ ಸೇರಿದಂತೆ ಸುಮಾರು 11 ಮಂದಿಯನ್ನು ಬಂಧಿಸಿದ್ದು ವಿಚಾರಣೆ ಕ್ಷಿಪ್ರಗತಿಯಲ್ಲಿ ಸಾಗುತ್ತಿದೆ.

ಸಮಾಚಾರ ಸಣ್ಣದಲ್ಲ

ಮಾಜಿ ಉಪ ರಾಷ್ಟ್ರಪತಿ ಧನಕರ್ ಏಮ್ಸ್‌ಗೆ ದಾಖಲು

ದೆಹಲಿ: ಮಾಜಿ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರ ಆರೋಗ್ಯದಲ್ಲಿ ಬಹಳ ಏರು ಪೇರು ಕಾಣಬರುತ್ತಿದ್ದು, ಜ.10 ಮತ್ತು ನಂತರದಲ್ಲಿ ಎರಡು ಬಾರಿ ಮನೆಯಲ್ಲೇ ಪ್ರಜ್ಞೆ ಕಳೆದುಕೊಂಡಿದ್ದರು. ಹಾಗಾಗಿ ಅವರನ್ನು ದೆಹಲಿಯಲ್ಲಿನ 'ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ'(ಏಮ್ಸ್) ಆಸ್ಪತ್ರೆಗೆ ಸೋಮವಾರ ದಾಖಲಿಸಲಾಗಿದೆ. ಜ.10ರಂದು ಮನೆಯಲ್ಲಿ ಶೌಚಾಲಯಕ್ಕೆ ಹೋಗಿದ್ದಾಗ ಪ್ರಜ್ಞಾಹೀನರಾಗಿದ್ದರು. ಹೀಗಾಗಿ ಅವರಿಗೆ ವೈದ್ಯರ ಸಲಹೆ ಮೇರೆಗೆ ಎಂಆರ್‌ಐ ಸ್ಕ್ಯಾನ್ ಮತ್ತು ವೈದ್ಯರ ಸೂಚನೆ ಮೇರೆಗೆ ಹಲವು ವೈದ್ಯಕೀಯ ಪರೀಕ್ಷೆಗಳನ್ನೂ ಮಾಡಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಉಪ ರಾಷ್ಟ್ರಪತಿ ಆಗಿದ್ದಾಗಲೇ ಧನಕರ್ ಅವರು ಹೃದ್ರೋಗ ಸಮಸ್ಯೆ ಎದುರಿಸಿದ್ದರು. 2025ರ ಮಾರ್ಚ್‌ನಲ್ಲಿ ಅವರಿಗೆ ಎದೆನೋವು ಕಾಣಿಸಿಕೊಂಡು 'ಏಮ್ಸ್' ಆಸ್ಪತ್ರೆಗೆ ದಾಖಲಾಗಿ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಅವರಿಗೆ 'ಸ್ಟೆಂಟ್' ಕೂಡಾ ಅಳವಡಿಸಲಾಗಿತ್ತು. ನಂತರದಲ್ಲಿಯೂ ಹಲವು ಸಂದರ್ಭಗಳಲ್ಲಿ ಆರೋಗ್ಯ ಸಮಸ್ಯೆ ಮರೆಮಾಚಿ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದರು. ಬಳಿಕ ಆರೋಗ್ಯದ ಕಾರಣ ನೀಡಿ 2025ರ ಜು.21ರಂದು ಉಪ ರಾಷ್ಟ್ರಪತಿ ಹುದ್ದೆಗೆ ರಾಜೀನಾಮೆ ಸಲ್ಲಿಸಿದರು.

ಮಗನಿಗೆ ಭಾರತೀಯ ಮೂಲದ ವಿಜ್ಞಾನಿ ಹೆಸರು

ವಾಷಿಂಗ್ಟನ್: ಟೆಸ್ಲಾ ಕಂಪನಿ ಮಾಲೀಕ, ಬಿಲಿಯನೆರ್ ಇಲಾನ್ ಮಸ್ಕ್ ತಮ್ಮ ಮಗನಿಗೆ ಭಾರತೀಯ ಮೂಲದ ವಿಜ್ಞಾನಿಯ ಹೆಸರನ್ನಿಟ್ಟಿದ್ದಾರೆ. ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ಮಗನಿಗೆ 'ಸ್ಟ್ರೈಡರ್ ಶೇಖರ್' ಎಂದೂ ಮಗಳಿಗೆ 'ಕಾಮೆಟ್ ಅಜುರೆ' ಎಂದು ನಾಮಕರಣ ಮಾಡಿದ್ದಾರೆ. ಹೆಸರಿನ ಹಿಂದಿರುವ ಉದ್ದೇಶವನ್ನು ವಿವರಿಸಿರುವ ಮಸ್ಕ್, ಸ್ಟ್ರೈಡರ್ ಎನ್ನುವುದು ಜೆಆರ್‌ಆರ್ ಟೋಲ್ಕಿನ್ ಅವರ 'ದಿ ಲಾರ್ಡ್ ಆಫ್ ದಿ ರಿಂಗ್ಸ್' ಕಾದಂಬರಿಯ ಕಾಲ್ಪನಿಕ ಪಾತ್ರ ಅರಾಗೋರ್ನ್‌ನಿಂದ ಪ್ರೇರಿತವಾಗಿದೆ. 'ಶೇಖರ್' ಎನ್ನುವುದು, 1983ರಲ್ಲಿ ಭೌತಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಗೆದ್ದ ಭಾರತೀಯ-ಅಮೆರಿಕನ್ ಭೌತಶಾಸ್ತ್ರಜ್ಞ ಸುಬ್ರಹ್ಮಣ್ಯನ್ ಚಂದ್ರಶೇಖರ್ ಅವರಿಂದ ಪ್ರೇರಿತವಾಗಿದೆ ಎಂದಿದ್ದಾರೆ. ಮಗಳ ಹೆಸರಿನಲ್ಲಿರುವ 'ಕಾಮೆಟ್ ಅಜುರೆ' ಎನ್ನುವುದು ಎಲ್ಡನ್ ರಿಂಗ್ ವಿಡಿಯೊ ಗೇಮ್‌ನಲ್ಲಿ ಅತ್ಯಂತ ಶಕ್ತಿಶಾಲಿ ಸಾಲುಗಳಾಗಿವೆ ಎಂದು ವಿವರಿಸಿದ್ದಾರೆ. ಮಸ್ಕ್ ಪತ್ನಿ ಶಿವೋನಿ ಜಿಲಿಸ್ ಅವರ ತಾಯಿ ಭಾರತದ ಪಂಜಾಬ್ ಮೂಲದವರಾಗಿದ್ದು, ಅವರ ಹೆಸರು ಶಾರದಾ ಜಿಲಿಸ್ ಎಂದಾಗಿದೆ.

ಖಗೋಳ ವಿಜ್ಞಾನಿ ಪ್ರೊಫೆಸರ್ ಶ್ರೀನಿವಾಸ ಕುಲಕರ್ಣಿಗೆ ರಾಯಲ್ ಸೊಸೈಟಿ ಪದಕ

ಲಂಡನ್: ಅಮೆರಿಕದಲ್ಲಿ ನೆಲೆಸಿರುವ ಭಾರತ ಮೂಲದ ಖಗೋಳ ವಿಜ್ಞಾನಿ ಪ್ರೊಫೆಸರ್ ಶ್ರೀನಿವಾಸ ಕುಲಕರ್ಣಿ ಅವರಿಗೆ ಇಂಗ್ಲೆಂಡ್‌ನ ರಾಯಲ್ ಅಸ್ಟ್ರೊನಾಮಿಕಲ್ ಸೊಸೈಟಿಯ (ಆರ್‌ಎಎಸ್) ಚಿನ್ನದ ಪದಕ ಲಭಿಸಿದೆ. ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದಂತೆ ಹಲವು ಮಹತ್ವದ ಸಂಶೋಧನೆಗಳನ್ನು ಕೈಗೊಂಡಿರುವ ಶ್ರೀನಿವಾಸ್ ಕುಲಕರ್ಣಿ ಅವರು, ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ಅವರ ಸಹೋದರ.

ಮಹಾರಾಷ್ಟ್ರದಲ್ಲಿ ಜನಿಸಿರುವ ಕುಲಕರ್ಣಿ ಅವರು, ಕ್ಯಾಲಿಫೋರ್ನಿಯಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಖಗೋಳ ವಸ್ತುಗಳು ಮತ್ತು ಗಾಮಾ ಕಿರಣಗಳ ಸ್ವಯಂಸ್ಫೋಟ ಸೇರಿದಂತೆ ಖಗೋಳ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ವಿಷಯಗಳ ಬಗ್ಗೆ ಸಂಶೋಧನೆ ಕೈಗೊಂಡು ಯಶಸ್ವಿಯಾಗಿದ್ದಾರೆ. ಖಗೋಳ ಭೌತಶಾಸ್ತ್ರದಲ್ಲಿ ಕ್ಷಣಿಕ ಬಹುತರಂಗಾಂತರದ ಕುರಿತಾದ ಸುಸ್ಥಿರ, ನವೀನ ಮತ್ತು ಅಭೂತಪೂರ್ವ ಅನ್ವೇಷಣೆಯ ಕೊಡುಗೆಯನ್ನು ಚಿನ್ನದ ಪದಕ ಆಯ್ಕೆಗೆ ಪರಿಗಣಿಸಲಾಗಿದೆ.

1984ರಿಂದಲೂ ರಾಯಲ್ ಸಂಸ್ಥೆಯು ಚಿನ್ನದ ಪದಕವನ್ನು ನೀಡುತ್ತಿದೆ. ಖ್ಯಾತ ವಿಜ್ಞಾನಿಗಳಾದ ಸ್ಟೀಫನ್ ಹಾಕಿಂಗ್, ಜಾಸ್ಲಿನ್ ಬೆಲ್ ಬರ್ನೆಲ್, ಆಲ್ಬರ್ಟ್ ಐನ್‌ಸ್ಟೀನ್ ಮತ್ತು ಎಡ್ವಿನ್ ಹಬಲ್ ಅವರು ಈ ಪದಕ ಪಡೆದಿದ್ದಾರೆ. ಇವರ ಸಾಲಿಗೆ ಕುಲಕರ್ಣಿ ಸೇರಿದ್ದಾರೆ.

ಈ ಪದಕವನ್ನು ಪಡೆದ ಖ್ಯಾತ ನಾಮರ ಪಟ್ಟಿಗೆ ನನ್ನನ್ನು ಸೇರಿಸಿರುವುದು ನನಗೆ ಆಶ್ಚರ್ಯವಾಗಿದೆ. ಇದು ನನ್ನ ಜೀವನದಲ್ಲಿ ಅತ್ಯಂತ ಖುಷಿಕೊಡುವಂಥದ್ದು.

- ಪ್ರೊ.ಶ್ರೀನಿವಾಸ ಕುಲಕರ್ಣಿ ಖಗೋಳ ವಿಜ್ಞಾನಿ

2024ರಲ್ಲಿ ಖಗೋಳ ಕ್ಷೇತ್ರದ ಅನ್ವೇಷಣೆಗಾಗಿ ಹಾಂಕಾಂಗ್ ನೀಡುವ 'ಶಾ' ಪುರಸ್ಕಾರವನ್ನೂ ಕುಲಕರ್ಣಿ ಪಡೆದಿದ್ದಾರೆ. ಖಗೋಳ ವಿಜ್ಞಾನದ ಸಾಧನಗಳ ಅನ್ವೇಷಕರಾಗಿರುವ ಕುಲಕರ್ಣಿ ಅವರು, ಈವರೆಗೆ 10 ಸಾಧನಗಳನ್ನು ರೂಪಿಸಿದ್ದಾರೆ. ಸದ್ಯ ಕುಲಕರ್ಣಿ ಅವರು ನಾಸಾದ ನೇರಳಾತೀತ ಕಿರಣಗಳ ಅನ್ವೇಷಣೆಗೆ ಸಂಬಂಧಿಸಿದ (ಯುವಿಎಕ್ಸ್) ಸಂಶೋಧನೆಯ ಕಾರ್ಯಯೋಜನೆಯ ಭಾಗವಾಗಿದ್ದಾರೆ. ನೇರಳಾತೀತ ಕಿರಣಗಳ ಕುರಿತಾದ ಅತ್ಯಂತ ಸೂಕ್ಷ್ಮ ಸಂಶೋಧನೆ ಇದಾಗಿದೆ. ಕುಲಕರ್ಣಿ ಅವರು 1978ರಲ್ಲಿ ದೆಹಲಿಯ ಭಾರತೀಯ ತಾಂತ್ರಿಕ ಸಂಸ್ಥೆಯಲ್ಲಿ (ಐಐಟಿ) ಸ್ನಾತಕೋತ್ತರ ಪದವಿ, 1983ರಲ್ಲಿ ಬಾರ್ಕ್‌ಲೆಯಲ್ಲಿ ಪಿಎಚ್.ಡಿ ಪದವಿ ಪಡೆದಿದ್ದಾರೆ.

ಶಕ್ಸ್‌ಗಾಮ್ ಕಣಿವೆ ತನ್ನದೆಂದ ಚೀನಾ

ಚೀನಾ ಕೈಗೊಂಡಿರುವ ಯೋಜನೆಗಳ ಕುರಿತು ಆಕ್ಷೇಪ ಎತ್ತಿದ್ದ ಭಾರತ

ಬೀಜಿಂಗ್: ಶಕ್ಸ್‌ಗಾಮ್ ಕಣಿವೆಯು ತನ್ನ ಭೂಭಾಗವಾಗಿದೆ ಎಂದು ಚೀನಾ ಪುನರುಚ್ಚರಿಸಿದ್ದು, ಅಲ್ಲಿ ಕೈಗೊಂಡಿರುವ ಮೂಲಸೌಕರ್ಯ ಯೋಜನೆಗಳು ಆಕ್ಷೇಪಕ್ಕೆ ಹೊರತಾಗಿವೆ ಎಂದು ಪ್ರತಿಪಾದಿಸಿದೆ.

ಶಕ್ಸ್‌ಗಾಮ್ ಕಣಿವೆಯಲ್ಲಿ ಚೀನಾ ಕೈಗೊಂಡಿರುವ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳ ಕುರಿತು ಭಾರತ ಕಳೆದ ಶುಕ್ರವಾರ ಆಕ್ಷೇಪ ವ್ಯಕ್ತಪಡಿಸಿತ್ತು. ಇದು ಭಾರತದ ಪ್ರದೇಶವಾಗಿರುವುದರಿಂದ ತನ್ನ ಹಿತಾಸಕ್ತಿ ಕಾಪಾಡಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳುವ ಹಕ್ಕುಗಳನ್ನು ಕಾಯ್ದಿರಿಸಿಕೊಂಡಿದೆ ಎಂದು ಹೇಳಿತ್ತು. 1963ರಲ್ಲಿ ಪಾಕಿಸ್ತಾನವು ಅಕ್ರಮವಾಗಿ ವಶಪಡಿಸಿಕೊಂಡ ಪ್ರದೇಶದಿಂದ ಭಾರತಕ್ಕೆ ಸೇರಿದ ಶಕ್ಸ್‌ಗಾಮ್ ಕಣಿವೆಯ 5,180 ಚದರ ಕಿಲೋಮೀಟರ್ ಭೂಪ್ರದೇಶವನ್ನು ಅಕ್ರಮವಾಗಿ ಚೀನಾಕ್ಕೆ ಬಿಟ್ಟುಕೊಟ್ಟಿತ್ತು.

'ಶಕ್ಸ್‌ಗಾಮ್ ಕಣಿವೆ ಭಾರತದ ಭೂಪ್ರದೇಶ. 1963ರಲ್ಲಿ ಸಹಿ ಹಾಕಿದ ಚೀನಾ-ಪಾಕಿಸ್ತಾನ ಗಡಿ ಒಪ್ಪಂದವೆಂದು ಕರೆಯಲಾಗುವ ಒಪ್ಪಂದವನ್ನು ನಾವು ಎಂದಿಗೂ ಒಪ್ಪಿಲ್ಲ ಮತ್ತು ಮಾನ್ಯತೆ ನೀಡಿಲ್ಲ. ಈ ಒಪ್ಪಂದವು ಕಾನೂನುಬಾಹಿರ ಮತ್ತು ಅಮಾನ್ಯವಾಗಿದೆ ಎಂದು ನಾವು ನಿರಂತರವಾಗಿ ಹೇಳುತ್ತಿದ್ದೇವೆ. ಪಾಕಿಸ್ತಾನ ಬಲವಂತವಾಗಿ ಮತ್ತು ಕಾನೂನುಬಾಹಿರವಾಗಿ ಆಕ್ರಮಿಸಿಕೊಂಡಿರುವ, ಭಾರತದ ಪ್ರದೇಶದ ಮೂಲಕ ಹಾದುಹೋಗುವ ಚೀನಾ-ಪಾಕಿಸ್ತಾನ ಆರ್ಥಿಕ ಕಾರಿಡಾರ್ ಅನ್ನು ನಾವು ಮಾನ್ಯ ಮಾಡಿಲ್ಲ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದರು.

ಜೈಸ್ವಾಲ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾವೋ ನಿಂಗ್, 'ನೀವು ಹೇಳಿದ ಪ್ರದೇಶವು ಚೀನಾದ ಪ್ರದೇಶದ ಭಾಗವಾಗಿದೆ. ತನ್ನದೇ ಆದ ಭೂಪ್ರದೇಶದಲ್ಲಿ ಮೂಲಸೌಕರ್ಯ ಚಟುವಟಿಕೆಗಳನ್ನು ಕೈಗೊಂಡಿದೆ. ಚೀನಾ, ಪಾಕ್‌ನ ಗಡಿ ಒಪ್ಪಂದಕ್ಕೆ ಸಹಿ ಹಾಕಿವೆ. 1960ರ ದಶಕದಿಂದಲೂ ಎರಡೂ ದೇಶಗಳ ನಡುವಿನ ಗಡಿಯನ್ನು ನಿರ್ಧರಿಸಿವೆ. ಇದು ಆರ್ಥಿಕ, ಸಾಮಾಜಿಕ ಅಭಿವೃದ್ಧಿ, ಜನರ ಜೀವನೋಪಾಯವನ್ನು ಸುಧಾರಿಸುವ ಗುರಿಯನ್ನು ಹೊಂದಿರುವ ಆರ್ಥಿಕ ಉಪಕ್ರಮವಾಗಿದೆ' ಎಂದು ತಿಳಿಸಿದ್ದಾರೆ.

ಅಂತಾರಾಷ್ಟ್ರೀಯ ಸೌರ ಒಕ್ಕೂಟದೊಂದಿಗೆ ಸೆಲ್ಕೋ ಒಪ್ಪಂದ

ಬೆಂಗಳೂರು: ಸೌರಶಕ್ತಿಯನ್ನು ಜನಕೇಂದ್ರಿತ ಅಭಿವೃದ್ಧಿಗೆ ಬಳಸುವ ದಿಕ್ಕಿನಲ್ಲಿ ಮಹತ್ವದ ಒಪ್ಪಂದವನ್ನು ಕರ್ನಾಟಕ ಮೂಲದ ಸೆಲ್ಕೋ ಫೌಂಡೇಶನ್ ಹಾಗೂ ಅಂತಾರಾಷ್ಟ್ರೀಯ ಸೌರ ಒಕ್ಕೂಟ ಮಾಡಿಕೊಂಡಿವೆ. ಜ.12ರಂದು ಬೆಂಗಳೂರಿನ ಸೆಲ್ಕೋ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಒಪ್ಪಂದಕ್ಕೆ ಐಎಸ್‌ಎ ನಿರ್ದೇಶಕ ಆಶಿಷ್ ಖನ್ನಾ ಹಾಗೂ ಸೆಲ್ಕೋ ಫೌಂಡೇಶನ್ ಸಿಇಒ ಡಾ.ಹರೀಶ್ ಹಂದೆ ಅವರು ಸಹಿ ಹಾಕಿದರು.

ಈ ಕುರಿತು ಐಎಸ್‌ಎ ನಿರ್ದೇಶಕ ಆಶಿಷ್ ಖನ್ನಾ ಮಾತನಾಡಿ, ಇಂದು ಬ್ಯಾಟರಿಗಳೊಂದಿಗೆ ಜೋಡಿಸಿದ ಸೌರಶಕ್ತಿ ಅಗ್ಗದ ಮತ್ತು ನಂಬಿಕೆಯ ಶಕ್ತಿಯ ಆಯ್ಕೆಯಾಗಿದೆ. ಇದು ಹವಾಮಾನ ಪರಿಹಾರ ಮಾತ್ರವಲ್ಲ, ಆರ್ಥಿಕವಾಗಿ ಕೂಡ ಅತ್ಯುತ್ತಮ ಆಯ್ಕೆ. ಸೆಲ್ಕೋ ಫೌಂಡೇಶನ್ ಜೊತೆಗೆ ಕೈಜೋಡಿಸುವುದರಿಂದ ನೈಜ ಅಭಿವೃದ್ಧಿ ಸಮಸ್ಯೆಗಳಿಗೆ ತಕ್ಕಂತೆ ಜನಕೇಂದ್ರಿತ ಪರಿಹಾರಗಳನ್ನು ನೀಡಲು ಸಾಧ್ಯವಾಗುತ್ತದೆ ಎಂದರು.

ಸೌರಶಕ್ತಿ ಕ್ಷೇತ್ರದಲ್ಲಿ ಜಾಗತಿಕ ಮಟ್ಟದ ಸಹಕಾರಕ್ಕೆ ಈ ಒಪ್ಪಂದದ ಮೂಲಕ ಹೊಸ ಆಯಾಮ ಸಿಕ್ಕಿದೆ. ಸೌರಶಕ್ತಿ ಬಳಕೆ ಕೇವಲ ವಿದ್ಯುತ್ ಉತ್ಪಾದನೆಗೆ ಸೀಮಿತಗೊಳಿಸದೇ, ಜನರ ಜೀವನಮಟ್ಟ ಸುಧಾರಣೆಗೆ ನೇರವಾಗಿ ತಲುಪಿಸುವುದು, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವುದು ಹಾಗೂ ಹವಾಮಾನ ಬದ್ಧತೆಗಳಿಗೆ ಬೆಂಬಲ ನೀಡುವುದು ಈ ಒಪ್ಪಂದದ ಉದ್ದೇಶವಾಗಿದೆ ಎಂದರು. ಸೆಲ್ಕೋ ಫೌಂಡೇಶನ್ ಸಿಇಒ ಡಾ. ಹರೀಶ್ ಹಂದೆ ಮಾತನಾಡಿ, ಪಿಎಂ ಕುಸುಮ್, ಪಿಎಂ ಸೂರ್ಯ ಘರ್ ಮುಂತಾದ ಜನಕೇಂದ್ರಿತ ಸೌರ ಯೋಜನೆಗಳ ಮೂಲಕ ಭಾರತ ಜಾಗತಿಕ ಮಟ್ಟದಲ್ಲಿ ಮುಂಚೂಣಿಯಲ್ಲಿದೆ. ಐಎಸ್‌ಎ ಜೊತೆಗಿನ ಈ ಸಹಕಾರ, ಇಂತಹ ಯಶಸ್ವಿ ಮತ್ತು ಸ್ಥಳಾನುಸಾರ ಪರಿಹಾರಗಳನ್ನು ಜಾಗತಿಕವಾಗಿ ವಿಸ್ತರಿಸಲು ನೆರವಾಗಲಿದೆ. ಕಟ್ಟಕಡೆಯ ಅಂಚಿನಲ್ಲಿರುವವರಿಗೆ ಸೌರಶಕ್ತಿ ಉಪಯೋಗಗಳು, ಸ್ಥಳಾನುಸಾರವಾದ ಇಂಧನ ವ್ಯವಸ್ಥೆಗಳು ಹಾಗೂ ವಿವಿಧ ಅಭಿವೃದ್ಧಿ ಕ್ಷೇತ್ರಗಳಲ್ಲಿ ಸೆಲ್ಕೋ ಹೊಂದಿರುವ ಅನುಭವ ತಿಳಿಸಲು ಈ ಸಹಕಾರಕ್ಕೆ ಬಲ ನೀಡಲಿದೆ ಎಂದರು. ಕರ್ನಾಟಕ ವಿಧಾನಸಭಾ ಸದಸ್ಯ ದರ್ಶನ್ ಪುಟ್ಟಣ್ಣಯ್ಯ, ಸೋಶಿಯಲ್ ಆಲ್ಫಾ ಸಂಸ್ಥೆಯ ಸಿಇಒ ಮನೋಜ್ ಕುಮಾರ್ ಸೇರಿ ಮತ್ತಿತರರಿದ್ದರು.

ಕರ್ನಾಟಕ ಮೂಲದ ಸೆಲ್ಕೋ ಫೌಂಡೇಶನ್, ಅಂತಾರಾಷ್ಟ್ರೀಯ ಸೌರ ಒಕ್ಕೂಟ ಸಂಸ್ಥೆಗಳು ಸೌರ ಒಕ್ಕೂಟ ಒಪ್ಪಂದ ಮಾಡಿಕೊಂಡಿವೆ.

...ಕಕ್ಷೆ ಸೇರದ 16 ಉಪಗ್ರಹ

ಮೊದಲಪುಟದಿಂದ

ಮೊದಲ ಬಾರಿಗೆ ಹೈದರಾಬಾದ್ ಮೂಲದ ಏಕೈಕ ಭಾರತೀಯ ಖಾಸಗಿ ಕಂಪನಿ, ಧ್ರುವ ಸ್ಪೇಸ್, ಈ ಮಿಷನ್‌ಗೆ ಏಳು ಉಪಗ್ರಹಗಳನ್ನು ಕೊಡುಗೆ ನೀಡಿತ್ತು. ಭಾರತೀಯ ಗಗನಯಾತ್ರಿಗಳನ್ನು ಬಾಹ್ಯಾಕಾಶಕ್ಕೆ ಕಳುಹಿಸುವ ಕನಸು ಹೊಂದಿರುವ ಇಸ್ರೋದ ಯೋಜನೆಗಳಿಗೆ ಇದು ಮಹತ್ವದ ಹಿನ್ನಡೆ ಎಂದು ಭಾವಿಸಲಾಗಿದೆ. ಕಳೆದ 30 ವರ್ಷಗಳಲ್ಲಿ 60ಕ್ಕೂ ಹೆಚ್ಚು ಯಶಸ್ವಿ ಉಡಾವಣೆಗಳನ್ನು ನಡೆಸಿರುವ ಪಿಎಸ್‌ಎಲ್‌ವಿ, ಭಾರತದ ನಂಬಿಕಸ್ಥ ರಾಕೆಟ್ ಉಡ್ಡಯನ ನೌಕೆ ಎಂಬ ಹೆಗ್ಗಳಿಕೆ ಪಡೆದಿದೆ. ವೈಫಲ್ಯದ ಕುರಿತು ಅಧಿಕೃತ ಹೇಳಿಕೆ ನೀಡಿರುವ ಇಸ್ರೋ, 3ನೇ ಹಂತದಲ್ಲಿ ತಲೆದೋರಿದ ರೋಲ್ ರೇಟ್ (ಉರುಳುವಿಕೆಯ ದರ) ತೊಂದರೆ ಇದಕ್ಕೆ ಕಾರಣ ಎಂದು ವಿವರಣೆ ನೀಡಲಾಗಿದೆ.

...ಪಾಲಿಕೆ ಚುನಾವಣೆಗೆ ಸುಪ್ರೀಂ ಗಡುವು

ಮೊದಲಪುಟದಿಂದ

ಈ ವಿಚಾರ ಕುರಿತು ರಾಜ್ಯ ಸರಕಾರದ ಪರವಾಗಿ ವಾದಿಸಿದ ಹಿರಿಯ ವಕೀಲ ಎ.ಎಂ.ಸಿಂಘ್ವಿ ಮತ್ತು ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಅವರು, ವಾರ್ಡ್‌ಗಳ ಮೀಸಲು ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಫೆ.28ರೊಳಗೆ ವಾರ್ಡ್‌ವಾರು ಮೀಸಲು ಪಟ್ಟಿ ಅಧಿಕೃತವಾಗಿ ಹೊರಬೀಳಲಿದೆ. ನಂತರ ಚುನಾವಣೆ ನಡೆಸುವ ಜವಾಬ್ದಾರಿ ಚುನಾವಣಾ ಆಯೋಗ ವಹಿಸಿಕೊಳ್ಳಲಿದೆ ಎಂದು ಪೀಠಕ್ಕೆ ತಿಳಿಸಿದರು.

ಮತ್ತೆ ಬರಬೇಡಿ ಎಂದ ಪೀಠ: ರಾಜ್ಯ ಚುನಾವಣಾ ಆಯೋಗದ ಪರ ಹಿರಿಯ ವಕೀಲ ಕೆ.ಎನ್. ಫಣೀಂದ್ರ ಅವರು, ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಯನ್ನು ಮಾರ್ಚ್ 16 ರಂದು ನಿಗದಿಪಡಿಸಲಾಗಿದೆ ಎಂದು ಪೀಠಕ್ಕೆ ಮಾಹಿತಿ ನೀಡಿದರು. ಪರೀಕ್ಷೆಗಳ ನಂತರ ಶಾಲೆಗಳು ಮತ್ತು ಕಾಲೇಜುಗಳು ಮತದಾನ ಕೇಂದ್ರಗಳಾಗಿರಲು ಮುಕ್ತವಾಗಿರುವುದರಿಂದ ಮೇ ಅಂತ್ಯದ ವೇಳೆಗೆ ಮಾತ್ರ ಚುನಾವಣೆಗಳನ್ನು ನಡೆಸಬಹುದು ಎಂದು ಅವರು ವಾದಿಸಿದರು. ಶಾಲೆಗಳು ಮತ್ತು ಶಿಕ್ಷಕರು ಮತದಾನದ ಕರ್ತವ್ಯಗಳಿಗೆ ಅಗತ್ಯವಿರುವುದರಿಂದ, ಮೇ 26 ರಂದು ಮಂಡಳಿ ಪರೀಕ್ಷೆಗಳು ಮುಗಿದ ತಕ್ಷಣ ನಗರ ಪಾಲಿಕೆಗಳ ಚುನಾವಣೆಗಳನ್ನು ನಿಗದಿಪಡಿಸುತ್ತದೆ ಎಂದು ಅವರು ಭರವಸೆ ನೀಡಿದರು. ಮಂಡಳಿ ಪರೀಕ್ಷೆಗಳು ಮುಗಿದ ತಕ್ಷಣ ಚುನಾವಣೆಗಳನ್ನು ನಡೆಸಬೇಕೆಂದು ಪೀಠ ನಿರ್ದೇಶಿಸಿತು. ಫೆಬ್ರವರಿ 20ರೊಳಗೆ ವಾರ್ಡ್‌ವಾರು ಮೀಸಲು ಪಟ್ಟಿಯನ್ನು ರಾಜ್ಯ ಸರಕಾರ ಪ್ರಕಟಿಸಬೇಕು. ಜಿಬಿಎ ಚುನಾವಣೆಯನ್ನು ಜೂನ್ 30 ರೊಳಗೆ ಮುಗಿಸಬೇಕು. ಇದಕ್ಕಾಗಿ ಮತ್ತೆ ಸಮಯಾವಕಾಶ ಕೋರಿ ಬರಬೇಡಿ ಎಂದು ಪೀಠ ಸ್ಪಷ್ಟಪಡಿಸಿತು.

ಬೆಂಗಳೂರಲ್ಲಿ 2 ಲಕ್ಷ ಬಾಂಗ್ಲಾದೇಶಿಯರು!

ಮೊದಲಪುಟದಿಂದ

ರೋಹಿಂಗ್ಯಾಗಳು ಮತ್ತು ಬಾಂಗ್ಲಾದವರ ಮೇಲೆ ಕ್ರಮಕ್ಕೆ ಆಗ್ರಹ: 2 ಲಕ್ಷಕ್ಕೂ ಹೆಚ್ಚು ರೋಹಿಂಗ್ಯಾಗಳು ಮತ್ತು ಬಾಂಗ್ಲಾದವರಿದ್ದಾರೆ ಎಂದು ನಮಗೆ ವರದಿಗಳು ಬಂದಿವೆ. ಅವೆಲ್ಲವನ್ನೂ ಪರಿಶೀಲಿಸಿ, ಅಂಥವರನ್ನು ಬಂಧಿಸಿ ಗಡಿಪಾರು ಮಾಡಬೇಕು. ಇಲ್ಲವೇ ಕಾನೂನು ಕ್ರಮ ಕೈಗೊಳ್ಳಬೇಕು. ನಗರದಲ್ಲಿರುವ 100 ಚಿಂದಿ ಆಯುವವರ ಪೈಕಿ ಶೇ.95 ಜನರು ರೋಹಿಂಗ್ಯಾಗಳೇ ಇದ್ದಾರೆ. ಅವರ ಬಳಿ ಕೆಲವು ಕಾರ್ಡ್‌ಗಳಿವೆ. ನಾವು ಹೋಗಿ ಕೇಳಿದಾಗ ಕೊಟ್ಟಿಲ್ಲ. ವಲಸಿಗರ ಕಾರ್ಡ್ ಅವರ ಬಳಿ ಇದೆ. ಹಣ ಕೊಟ್ಟು ಗಡಿ ದಾಟಿ ಬಂದುದಾಗಿ ಹೇಳುತ್ತಾರೆ. ಪಶ್ಚಿಮ ಬಂಗಾಳದ ಮೂಲಕ ಬರಲು ವ್ಯವಸ್ಥೆ ಕಲ್ಪಿಸುವ ತಂಡವೇ ಇದೆ ಎಂದು ಅವರೇ ಹೇಳಿದ್ದಾಗಿ ವಿವರಿಸಿದರು. ಅವರ ಭಾಷೆ ಹಿಂದಿಯೂ ಅಲ್ಲ, ಉರ್ದುವೂ ಅಲ್ಲ. ಅದು ನಮಗೆ ಅರ್ಥವೂ ಆಗುವುದಿಲ್ಲ. ಬಾಂಗ್ಲಾ ಮತ್ತು ರೋಹಿಂಗ್ಯಾ ಭಾಷೆ ಕೇಳಿದೊಡನೆ ಗೊತ್ತಾಗುತ್ತದೆ. ಇತ್ತೀಚೆಗೆ ಚಾನೆಲ್ ಒಂದರಲ್ಲಿ ಮಹಿಳೆಯೊಬ್ಬರು ಜೈ ಬಾಂಗ್ಲಾ ಹೇಳಿದ್ದನ್ನು ಕೇಳಿದ್ದೇವೆ. ಅವರು ರಾಜಾರೋಷವಾಗಿ ಇದ್ದಾರೆ ಎಂದರು.

ಭದ್ರತೆಗೆ ಧಕ್ಕೆ: ಬೆಂಗಳೂರಿನಲ್ಲಿ ಐದು ವರ್ಷ ವಾಸವಿದ್ದಾರೆ ಎಂದು ದೃಢಪಡಿಸಲು ಕಂದಾಯ ಇಲಾಖೆ ದೃಢೀಕರಣ ಪತ್ರ ಕೊಡಬೇಕು. 26 ಜನ ಅರ್ಹ ಫಲಾನುಭವಿಗಳು ಎಂದು ಸರಕಾರ ಗುರುತಿಸಿದೆ. ಆದರೆ ಈ ಜನರೂ ಇಲ್ಲಿಯವರಲ್ಲ. ಅಧಿಕಾರಿಗಳಿಗೆ ಉಳಿದವರ ಹಿನ್ನೆಲೆಯನ್ನು ಪತ್ತೆ ಮಾಡಲು ಇಲ್ಲಿವರೆಗೂ ಆಗಿಲ್ಲ. ಬಾಂಗ್ಲಾ, ರೋಹಿಂಗ್ಯಾಗಳು ಬೆಂಗಳೂರಿನಲ್ಲಿದ್ದಾರೆ. ಬಾಂಗ್ಲಾದವರು ಅಂತ ಮುಖಚರ್ಯೆ ನೋಡಿ ಪತ್ತೆ ಹಚ್ಚೋದು ಕಷ್ಟ. ಅಲ್ಲಿದ್ದ ಸ್ಥಳೀಯರೇ ಇದನ್ನು ಹೇಳಿದ್ದಾರೆ. ಇದರ ಬಗ್ಗೆ ಸೂಕ್ತ ತನಿಖೆ ಆಗಬೇಕು. ಅವರ ಬಳಿ ದಾಖಲೆ ಯಾರು ಮಾಡಿಕೊಟ್ಟರು ಎನ್ನುವುದು ಬಹಿರಂಗ ಆಗಬೇಕು. ಅಕ್ರಮ ನುಸುಳುಕೋರರಿಂದ ದೇಶದ ಭದ್ರತೆಗೆ, ರಾಜ್ಯದ ಭದ್ರತೆಗೆ ಅಪಾಯ ಇದೆ ಎಂದರು.

ಲೋಕಭವನದ ಅಂಗಳಕ್ಕೆ : ಬಿಜೆಪಿ ನಿಯೋಗ ರಾಜ್ಯಪಾಲರನ್ನು ಭೇಟಿಯಾಗಿ ಕೋಗಿಲು ಪ್ರಕರಣ ಮತ್ತು ದ್ವೇಷ ಭಾಷಣ ತಡೆ ವಿಧೇಯಕ ಸಂಬಂಧ ಮನವಿ ಸಲ್ಲಿಸಿದೆ. ನಂತರ ಮಾತನಾಡಿದ ಪ್ರತಿಪಕ್ಷ ನಾಯಕ ಆರ್.ಅಶೋಕ, ಕೋಗಿಲು ಅತಿಕ್ರಮಣದಾರರಿಗೆ ಮನೆ ಕಟ್ಟಿಕೊಡುವ ಸರಕಾರದ ನಿರ್ಧಾರವನ್ನು ರಾಜ್ಯಪಾಲರ ಗಮನಕ್ಕೆ ತಂದಿದ್ದೇವೆ. ವಿವಿಧ ವಸತಿ ಯೋಜನೆಗಳಡಿ ಸುಮಾರು 36 ಲಕ್ಷ ಜನರು ಹಣ ಪಾವತಿಸಿ, ಇನ್ನೂ ಮನೆಗಾಗಿ ಕಾಯುತ್ತಿದ್ದಾರೆ. ಮುಸ್ಲಿಮರ ಒಲೈಕೆಗಾಗಿ ಕೇರಳ ಕಾಂಗ್ರೆಸ್ ನಾಯಕರ ಒತ್ತಡದಿಂದ ಈ ನಿರ್ಧಾರ ಮಾಡಲಾಗಿದೆ ಎಂದು ಆರೋಪಿಸಿದರು.

ಜರ್ಮನಿ ಚಾನ್ಸಲರ್ ಫ್ರೆಡ್ರಿಕ್ ಜತೆ ಮೋದಿ ಗಾಳಿಪಟ ಹಾರಾಟ

ಸಬರಮತಿ ಆಶ್ರಮ ಸುತ್ತಾಟ, ಗಾಳಿಪಟ ಉತ್ಸವಕ್ಕೆ ಚಾಲನೆ
ಗಾಂಧಿ ಮಂದಿರದಲ್ಲಿ ದ್ವಿಪಕ್ಷೀಯ ಚರ್ಚೆ, ಪತ್ರಿಕಾ ಹೇಳಿಕೆ

ಅಹಮದಾಬಾದ್: ಜರ್ಮನಿಯ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಎರಡು ದಿನಗಳ ಭಾರತ ಪ್ರವಾಸ ಹಮ್ಮಿಕೊಂಡಿದ್ದು, ಸೋಮವಾರ ಬೆಳಗ್ಗೆ ಅಹಮದಾಬಾದ್‌ಗೆ ಆಗಮಿಸಿದ ಅವರನ್ನು ಗುಜರಾತ್ ರಾಜ್ಯಪಾಲ ಆಚಾರ್ಯ ದೇವವ್ರತ್ ವಿಮಾನ ನಿಲ್ದಾಣದಲ್ಲಿ ಆತ್ಮೀಯವಾಗಿ ಬರಮಾಡಿಕೊಂಡರು.

ಶನಿವಾರ ಸಂಜೆಯೇ ಗುಜರಾತ್‌ಗೆ ಆಗಮಿಸಿ, ಶ್ರೀ ಸೋಮನಾಥ ಸ್ವಾಭಿಮಾನ ಪರ್ವ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಪ್ರಧಾನಿ ನರೇಂದ್ರ ಮೋದಿ, ಸೋಮವಾರ ಬೆಳಗ್ಗೆ ಅಹಮದಾಬಾದ್‌ನಲ್ಲಿ ಜರ್ಮನಿ ಚಾನ್ಸಲರ್ ಫ್ರೆಡ್ರಿಕ್ ಅವರನ್ನು ಭೇಟಿ ಮಾಡಿದರು.

ಮೊದಲಿಗೆ ಸಬರಮತಿ ಆಶ್ರಮಕ್ಕೆ ಫ್ರೆಡ್ರಿಕ್‌ರನ್ನು ಕರೆದೊಯ್ದ ಪ್ರಧಾನಿ ಮೋದಿ, ಜರ್ಮನಿಯ ಚಾನ್ಸಲರ್‌ಗೆ ಇಡೀ ಆಶ್ರಮವನ್ನು ಸುತ್ತಾಡಿಸಿ ತೋರಿಸಿದರು. ಆಶ್ರಮದ ಸರಳತೆ ಮತ್ತು ಗಾಂಧಿ ನೂಲುತ್ತಿದ್ದ ಚರಕವನ್ನು ಫ್ರೆಡ್ರಿಕ್ ಸಮೀಪದಿಂದ ವೀಕ್ಷಿಸಿ ಅಚ್ಚರಿ ವ್ಯಕ್ತಪಡಿಸಿದರು. ಗಾಂಧಿ ಪತ್ನಿ ಕಸ್ತೂರ್ ಬಾ ವಾಸಿಸುತ್ತಿದ್ದ ಆಶ್ರಮದೊಳಗಿನ 'ಹೃದಯ ಕುಂಜ್' ಕೋಣೆಗೂ ಫ್ರೆಡ್ರಿಕ್ ತೆರಳಿ ವೀಕ್ಷಿಸಿದರು. ಸಬರಮತಿ ಆಶ್ರಮದಲ್ಲಿ ಇಬ್ಬರೂ ನಾಯಕರು ಗಾಂಧಿ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು. ಬಳಿಕ ಮೆರ್ಜ್ ಸಂದರ್ಶಕರ ಪುಸ್ತಕದಲ್ಲಿ ಸಹಿ ಹಾಕಿದರು.

ಆ ಬಳಿಕ ಇಬ್ಬರೂ ಗಣ್ಯರು ಸಬರಮತಿ ನದಿ ದಂಡೆಯಲ್ಲಿ ಆಯೋಜಿಸಲಾಗಿದ್ದ ಗುಜರಾತ್‌ನ ಅಂತಾರಾಷ್ಟ್ರೀಯ ಗಾಳಿಪಟ ಉತ್ಸವವನ್ನು ಉದ್ಘಾಟಿಸಿದರು. ಇಬ್ಬರೂ ಜತೆಗೂಡಿ ಹನುಮಂತನ ಪ್ರತಿಮೆ ಆಕಾರದ ಬೃಹತ್ ಗಾಳಿಪಟವನ್ನು ಹಾರಿಸಿ ಖುಷಿ ಪಟ್ಟರು.

ಭಾರತ-ಜರ್ಮನಿ ರಾಜತಾಂತ್ರಿಕ ಸಂಬಂಧ 75 ವರ್ಷಗಳನ್ನೂ ಮತ್ತು ಕಾರ್ಯತಂತ್ರದ ಪಾಲುದಾರಿಕೆಯ 25 ವರ್ಷಗಳನ್ನು ಆಚರಿಸುತ್ತಿವೆ. ಇದೇ ಕಾರಣವಾಗಿ ಜರ್ಮನಿಯ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಭಾರತಕ್ಕೆ ಭೇಟಿ ನೀಡಿದ್ದಾರೆ. ಎರಡೂ ದೇಶಗಳ ನಡುವಿನ ಕಾರ್ಯತಂತ್ರ ಮತ್ತು ರಾಜತಾಂತ್ರಿಕ ಸಂಬಂಧಗಳನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಗುರಿಯನ್ನು ಹೊಂದಿದ್ದಾರೆ ಎಂದು ಜರ್ಮನಿ ಅಧಿಕಾರಿಗಳು ಹೇಳಿದ್ದಾರೆ.



ಅಹಮದಾಬಾದ್‌ನಲ್ಲಿ ಜರ್ಮನಿ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಮತ್ತು ಪ್ರಧಾನಿ ಮೋದಿ.

ಗಾಳಿಪಟ ಉತ್ಸವ

ಜ.15ರಂದು ಮಕರ ಸಂಕ್ರಾಂತಿ ಹಬ್ಬವಿರುವ ಹಿನ್ನೆಲೆ ಆಯೋಜಿಸಲಾಗಿರುವ 3 ದಿನಗಳ ಗಾಳಿಪಟ ಉತ್ಸವದಲ್ಲಿ ಈ ವರ್ಷ 50 ದೇಶಗಳ 135 ಸ್ಪರ್ಧಿಗಳು ಆಗಮಿಸಿದ್ದು, ಗಾಳಿಪಟ ಹಾರಿಸುತ್ತಿದ್ದಾರೆ. ಭಾರತದ 65 ಮಾಜಿ ಸೈನಿಕರು ಮತ್ತು ಗುಜರಾತ್‌ನ 871 ನಾಗರಿಕರು ಕೂಡಾ ಗಾಳಿಪಟ ಉತ್ಸವದಲ್ಲಿ ಭಾಗವಹಿಸುತ್ತಿದ್ದಾರೆ.

1947ರಿಂದಲೂ ಸೌತ್ ಬ್ಲಾಕ್‌ನಲ್ಲೇ ಪಿಎಂಒ | ಈಗ 'ಸೇವಾ ತೀರ್ಥ' ಸಮುಚ್ಚಯಕ್ಕೆ ವರ್ಗ | ಉತ್ತರಾಯಣ: ಮೋದಿ ಜೆಗೆ ಹೊಸ ಕಚೇರಿ

ಸಂಕ್ರಾಂತಿಗೆ ಪಿಎಂಒ ಸ್ಥಳಾಂತರ

ದೆಹಲಿ: 79 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಪ್ರಧಾನ ಮಂತ್ರಿಗಳ ಕಚೇರಿ'(ಪಿಎಂಒ) ದೆಹಲಿಯ ಪ್ರತಿಷ್ಠಿತ ಸೌತ್ ಬ್ಲಾಕ್‌ನಿಂದ ಹೊಸ ಕಟ್ಟಡಕ್ಕೆ ಸ್ಥಳಾಂತರಗೊಳ್ಳುತ್ತಿದೆ. 1947ರ ಬಳಿಕ ಇದೇ ಮೊದಲ ಬಾರಿಗೆ ಪ್ರಧಾನ ಮಂತ್ರಿಗಳ ಕಚೇರಿ ಸ್ಥಳ ಬದಲಾವಣೆ ಕಾಣುತ್ತಿದೆ.

'ಪಿಎಂಒ' ಹೊಸ ಕಚೇರಿ ಮಕರ ಸಂಕ್ರಾಂತಿ ಹಬ್ಬದ ದಿನವೇ ಉದ್ಘಾಟನೆಗೊಳ್ಳುವ ಸಾಧ್ಯತೆ ಇದೆ. ಅಂದುಕೊಂಡಂತೆಯೇ ಕಾಯಕ್ರಮಗಳು ಜರುಗಿದರೆ ಅದೇ ದಿನ ಹೊಸ ಕಟ್ಟಡಕ್ಕೆ ಪಿಎಂಒ ಸ್ಥಳಾಂತರಗೊಳ್ಳಲಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 'ಉತ್ತರಾಯಣ' ಪುಣ್ಯ ಕಾಲದಲ್ಲೇ ಹೊಸ ಕಟ್ಟಡದಲ್ಲಿನ ನೂತನ ಕಚೇರಿಯಿಂದ ಆಡಳಿತ ಮುಂದುವರಿಸಲಿದ್ದಾರೆ.

ಎನ್‌ಡಿಎ ಸರಕಾರದ ಮಹತ್ವಾಕಾಂಕ್ಷೆಯ 'ಸೆಂಟ್ರಲ್ ವಿಸ್ಟಾ' ಯೋಜನೆಯಡಿ ನಿರ್ಮಿಸಲಾಗಿರುವ 'ಸೇವಾ ತೀರ್ಥ' ಸಂಕೀರ್ಣಕ್ಕೆ ಪ್ರಧಾನ ಮಂತ್ರಿಗಳ ಕಚೇರಿ(ಪಿಎಂಒ) ಸ್ಥಳಾಂತರಗೊಳ್ಳುತ್ತಿದೆ.

'ಸೇವಾ ತೀರ್ಥ' ಸಂಕೀರ್ಣವನ್ನು ಪ್ರಧಾನಿಗಳ ಕಚೇರಿ, ಸಂಪುಟ ದರ್ಜೆ ಸಚಿವರುಗಳ ಕಚೇರಿಗಳು ಹಾಗೂ ರಾಷ್ಟ್ರೀಯ ಭದ್ರತಾ ಮಂಡಳಿ ಸಚಿವಾಲಯದ ಕಚೇರಿಗಳಿಗಾಗಿಯೇ ವಿಶೇಷ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಪ್ರತಿ ಸಚಿವಾಲಯ ಕಚೇರಿಗಳಿಗೂ ಪ್ರತ್ಯೇಕ ಕಟ್ಟಡವನ್ನೇ ಮೀಸಲಿರಿಸಲಾಗಿದೆ.

'ಸೇವೆ' ವಿಷಯ ಆಧರಿಸಿಯೇ ಪ್ರಧಾನ ಮಂತ್ರಿಗಳ ಕಚೇರಿಗೆ 'ಸೇವಾ ತೀರ್ಥ-1' ಎಂಬ ಹೆಸರಿಡಲಾಗಿದೆ. ಸೇವೆಯ ಮಹತ್ವ ಬಿಂಬಿಸುವಂತೆಯೇ ಸಿದ್ಧಗೊಂಡಿರುವ ಕಟ್ಟಡದಲ್ಲಿ ಆಧುನಿಕ ಕಾರ್ಯಕ್ಷೇತ್ರ, ಬೃಹತ್ ಸಮಾರಂಭ ಹಜಾರಗಳೂ ಇವೆ.

ಸಂಪುಟ ದರ್ಜೆ ಸಚಿವಾಲಯಕ್ಕೆಂದೇ ವಿಶೇಷ ರೀತಿ ನಿರ್ಮಿಸಲಾದ ಕಟ್ಟಡಗಳಿಗೆ 'ಸೇವಾ ತೀರ್ಥ-2' ಮತ್ತು 'ರಾಷ್ಟ್ರೀಯ ಭದ್ರತಾ ಸಲಹೆಗಾರರ(ಎನ್‌ಎಸ್‌ಎ) ಕಚೇರಿ'ಗೆ 'ಸೇವಾ ತೀರ್ಥ-3' ಎಂದೂ ನಾಮಕರಣ ಮಾಡಲಾಗಿದೆ.

ಸೇವಾ ತೀರ್ಥ ಸಮುಚ್ಚಯದ ವಿನ್ಯಾಸ, ಶೈಲಿ, ಕಾಮಗಾರಿ ಗುಣಮಟ್ಟ ಪರಿಶೀಲಿಸಿದ ಪ್ರಧಾನಿ ಮೋದಿ.

ದೆಹಲಿಯಲ್ಲಿ ಪ್ರಧಾನ ಮಂತ್ರಿ ಕಚೇರಿ(ಪಿಎಂಒ)ಗೆಂದೇ ಹೊಸದಾಗಿ ನಿರ್ಮಿಸಿರುವ 'ಸೇವಾ ತೀರ್ಥ' ಸಮುಚ್ಚಯ.

ಸೇವಾ ತೀರ್ಥ ಕಟ್ಟಡಗಳಿಗೆ 1,189 ಕೋಟಿ ರು. ವೆಚ್ಚ

ಪ್ರಧಾನ ಮಂತ್ರಿಗಳ ಕಚೇರಿ ಒಳಗೊಂಡ ಪೂರ್ಣ 'ಸೇವಾ ತೀರ್ಥ' ಸಂಕೀರ್ಣ ಒಟ್ಟು 2,26,203 ಚದರಡಿಗಳಷ್ಟು ವಿಸ್ತೀರ್ಣ ಹೊಂದಿದ್ದು, ಒಟ್ಟು 1,189 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾಗಿದೆ. ಪ್ರಧಾನ ಮಂತ್ರಿ ಅವರ ಅಧಿಕೃತ ನಿವಾಸವಿರುವ ಕಟ್ಟಡಕ್ಕೆ 'ಕಾರ್ಯನಿರ್ವಾಹಕ ಎನ್‌ಕ್ಲೇವ್ ಭಾಗ 2' ಎಂಬ ಹೆಸರಿಸಲಾಗಿದೆ.

ಆರಾಮ

ಕೃತಾರ್ಥತೆ...

● ಮಾಯಾ ಬಾಲಚಂದ್ರ

ಉಪಕಾರಿಸಿದವರಿಗೆ ಕೃತಜ್ಞತೆಗಳನ್ನು ತಿಳಿಸುವುದರಿಂದ, ಒಬ್ಬರಿಗೆ ಹೊರೆಯಾದೆನೋ ಎಂಬ ಭಾವ ಕರಗಿ, ನಿರಾಳಭಾವ ಉಂಟಾಗಿ, ಸಂತೋಷವನ್ನು ಕಂಡುಕೊಳ್ಳಲು ಸಾಧ್ಯ. ಒಂದು ಸಂಸ್ಥೆಯಿಂದ ಅಥವಾ ಒಂದು ಗುಂಪಿನಿಂದ ಲೋಕೋದ್ಧಾರದ ಕೆಲಸ ಆದಾಗ, ಮುನ್ನೆಲೆಯಲ್ಲಿರುವವರಿಗೆ ಮಾತ್ರ ಕೃತಜ್ಞತೆಗಳನ್ನು ತಿಳಿಸಿ, ಸಂಪೂರ್ಣ ಕಾರ್ಯದ ಹಿಂದಿರುವವರನ್ನು ಪರಿಗಣಿಸದಿರುವ ಸಂದರ್ಭಗಳೇ ಹೆಚ್ಚು.

ಅಮೆರಿಕ-ವಿಯೆಟ್ನಾಂ ಯುದ್ಧ ನಡೆದಾಗ, ಕ್ಯಾಪ್ಟನ್ ಚಾರ್ಲಿ ಪ್ಲಂಬ್ ಅಮೆರಿಕ ಯುದ್ಧ ವಿಮಾನದ ಪೈಲಟ್ ಆಗಿದ್ದ. 74 ಉದ್ದೇಶಿತ ಕಾರ್ಯಾಚರಣೆಗಳನ್ನು ಯಶಸ್ವಿಯಾಗಿ ಪೂರೈಸಿದ ಈತ, ಅತ್ಯಂತ ಸುಪ್ರಸಿದ್ಧ ಫೈಟರ್ ಪೈಲಟ್ ಎನಿಸಿಕೊಂಡಿದ್ದ. 1967ರಲ್ಲಿ, 75ನೇ ಕಾರ್ಯಾಚರಣೆಯಲ್ಲಿ, ಈತನ ವಿಮಾನವನ್ನು ಶತ್ರುಗಳು ಹೊಡೆದುರುಳಿಸಿದರು. ಸರಿಯಾಗಿ ತೆರೆದುಕೊಂಡ ಪ್ಯಾರಾಶೂಟ್ ಸಹಾಯದಿಂದಾಗಿ ಈತ ಬದುಕುಳಿದು, ಶತ್ರು ದೇಶವಾದ ವಿಯೆಟ್ನಾಂನೊಳಗೆ ಇಳಿದ. ಮುಂದಿನ ಆರು ವರ್ಷಗಳ ಕಾಲ ಆತನನ್ನು ಯುದ್ಧ ಕೈದಿಯಾಗಿ, ಹನಾಯ್ ಹಿಲ್ಟನ್‌ನಲ್ಲಿ ಬಂಧಿಸಿಡಲಾಗಿತ್ತು. ಮುಂದೆ ಬಿಡುಗಡೆ ಹೊಂದಿ, ಅಮೆರಿಕಕ್ಕೆ ಮರಳಿದ.

ಕೆಲವು ವರ್ಷಗಳ ನಂತರ, ಕ್ಯಾಪ್ಟನ್ ಒಬ್ಬನೇ ರೆಸ್ಟೋರೆಂಟ್ ಒಂದರಲ್ಲಿ ಊಟ ಮಾಡುತ್ತಿದ್ದಾಗ, ಪಕ್ಕದ ಮೇಜಿನಲ್ಲಿದ್ದಾತ, ಈತನನ್ನು ಪದೇಪದೆ ನೋಡಲಾರಂಭಿಸಿ, ಕೊನೆಗೆ ಈತನೆಡೆಗೆ ಬಂದು, "ನೀವು ಕ್ಯಾಪ್ಟನ್ ಚಾರ್ಲಿ ಪ್ಲಂಬ್ ಅಲ್ಲವೇ?" ಎಂದು ಪ್ರಶ್ನಿಸಿದ. ಈತ ಹೌದು ಎನ್ನುತ್ತಿರುವಂತೆಯೇ, "74 ಯಶಸ್ವಿ ಕಾರ್ಯಾಚರಣೆಯ ನಂತರ, 75ನೇ ಕಾರ್ಯಾಚರಣೆಯಲ್ಲಿ, ವಿಯೆಟ್ನಾಂನಲ್ಲಿ ಯುದ್ಧ ವಿಮಾನವನ್ನು ಹೊಡೆದುರುಳಿಸಿದಾಗ, ಪ್ಯಾರಾಶೂಟ್ ತೆರೆದುಕೊಂಡು ಅಲ್ಲಿ ಇಳಿದಿದ್ದಿರಲ್ಲವೇ?" ಎನ್ನುವ ಗುರುತುಗಳನ್ನು ಸಹ ಹೇಳಿದ.

'ಹೌದು, ಆದರೆ ನಿನಗೆ ಇಷ್ಟೆಲ್ಲ ಮಾಹಿತಿ ಹೇಗೆ ತಿಳಿದಿದೆ?" ಎಂದು ಮರುಪ್ರಶ್ನಿಸಿದ ಕ್ಯಾಪ್ಟನ್.

"ನಿಮ್ಮ ಪ್ರತಿ ಕಾರ್ಯಾಚರಣೆಗೂ ಮೊದಲು, ನಿಮ್ಮ ಪ್ಯಾರಾಶೂಟ್ ಪ್ಯಾಕ್ ಮಾಡುತ್ತಿದ್ದವನು ನಾನೇ" ಎಂದು ಸಂಭ್ರಮದಿಂದ ನುಡಿದ ಆತ, "ನಿಮ್ಮ ಎಪ್ಪತ್ತೈದನೇ ಕಾರ್ಯಾಚರಣೆಯಲ್ಲಿಯೂ, ಪ್ಯಾರಾಶೂಟ್ ಸರಿಯಾಗಿ ತೆರೆದುಕೊಂಡು ಸಹಕರಿಸಿತು, ಹಾಗಾಗಿ ನೀವು ಬದುಕಿ ಉಳಿದಿರಿ ಎನ್ನುವುದೇ ನನಗೆ ಸಂತೋಷದ ವಿಷಯ" ಎಂದ. ಕ್ಯಾಪ್ಟನ್‌ನ ಹೃದಯ, ಆ ಕ್ಷಣದಲ್ಲಿ ಕೃತಜ್ಞತಾ ಭಾವದಿಂದ ತುಂಬಿ ಭಾರವಾಯಿತು. 'ನಾನು, ಕೆಲಸಗಳ ಸಂದರ್ಭಗಳಲ್ಲಿ, ಸಾವಿರಾರು ಬಾರಿ ಈತನನ್ನು ನೋಡಿದ್ದಿರಬಹುದು. ಆದರೆ ಒಮ್ಮೆಯೂ ಈತನನ್ನು ಗುರುತಿಸಿ ಮಾತನಾಡಿಸಿದ್ದಿಲ್ಲ, ನಾನೊಬ್ಬ ಕ್ಯಾಪ್ಟನ್, ಈತನೊಬ್ಬ ಸಾಮಾನ್ಯ ಪ್ಯಾರಾಶೂಟ್ ಪ್ಯಾಕರ್ ಎನ್ನುವ ಭಾವವಿದ್ದಿರಬೇಕೋ ಏನೋ..' ಎಂದು ಮನಸ್ಸಿನಲ್ಲಿ ತಾನೇ ಬಹಳ ಹಲುಬಿದ. ನಂತರ, "ನೀನು ದಕ್ಷತೆಯಿಂದ ಕಾರ್ಯನಿರ್ವಹಿಸಿದ್ದರಿಂದ, ನಾನಿಂದು ಜೀವಂತವಾಗಿರುತ್ತೇನೆ" ಎಂದು ಮನಸಾರೆ ಆತನಿಗೆ ಕೃತಜ್ಞತೆಗಳನ್ನು ಅರ್ಪಿಸಿದ ಕ್ಯಾಪ್ಟನ್.

ಸಂಘ-ಸಂಸ್ಥೆಗಳ ಮುಖ್ಯಸ್ಥರು, ಎಲ್ಲ ಕೆಲಸಗಾರರ ಕಾರ್ಯದಕ್ಷತೆಯನ್ನು ಗುರುತಿಸಿ, ಅವರವರ ಅರ್ಹತೆಗೆ ತಕ್ಕಂತೆ ಪ್ರಶಂಸಿಸುತ್ತಾ, ಕೃತಜ್ಞತೆಗಳನ್ನು ಸಲ್ಲಿಸಿದರೆ, ಆ ಸಂಸ್ಥೆ ಇನ್ನಷ್ಟು ಹೆಚ್ಚು ಪ್ರವರ್ಧಮಾನಕ್ಕೆ ಬರಲು ಸಾಧ್ಯ. ಹಣ್ಣನ್ನು ತಿನ್ನುವಾಗ, ಸಸಿ ನೆಟ್ಟು, ಮರ ಬೆಳೆಸಿದವರನ್ನು ನೆನೆಯಲೇಬೇಕು. ಅಲ್ಲವೇ?

ಯುವಜನರೇ ದೇಶದ ಉಜ್ವಲ ಭವಿಷ್ಯ

● ಪ್ರಜ್ಞಾ ಭಟ್, ಶಿರಸಿ

ಭಾರತವು ಯುವಜನರ ದೇಶ. ವಿಶ್ವದ ಅತಿದೊಡ್ಡ ಯುವಜನಸಂಖ್ಯೆಯನ್ನು ಹೊಂದಿರುವ ರಾಷ್ಟ್ರವೆಂಬ ಹೆಗ್ಗಳಿಕೆ ನಮಗೆ ಸೇರಿದೆ. ಇಂಥ ದೇಶದಲ್ಲಿ 'ಯುವಜನ ದಿನಾಚರಣೆ'ಗೆ ಇರುವ ಮಹತ್ವ ಅಪಾರ. ಅಂತೆಯೇ ನಿನ್ನೆ (ಜನವರಿ 12ರಂದು) ದೇಶದ ಉದ್ದಗಲಕ್ಕೂ ಯುವಜನ ದಿನವನ್ನು ಆಚರಿಸಲಾಗಿದೆ. ಈ ದಿನವು ಕೇವಲ ಒಂದು ಆಚರಣೆ ಅಲ್ಲ, ಅದು ಯುವಜನರ ಶಕ್ತಿಯನ್ನು ಅರಿಯುವ, ಅವರನ್ನು ಜಾಗೃತಗೊಳಿಸುವ ಹಾಗೂ ರಾಷ್ಟ್ರದ ಹೊಣೆಗಾರಿಕೆಯನ್ನು ನೆನಪಿಸುವ ಮಹತ್ವದ ಸಂದರ್ಭ. ಈ ದಿನವನ್ನು ಮಹಾನ್ ಚಿಂತಕ, ತತ್ವಜ್ಞಾನಿ ಮತ್ತು ಯುಗಪುರುಷರಾದ ಸ್ವಾಮಿ ವಿವೇಕಾನಂದರ ಜನ್ಮದಿನದ ಅಂಗವಾಗಿ ಆಚರಿಸಲಾಗುತ್ತದೆ ಎಂಬುದೇ ಇದರ ವಿಶೇಷತೆ.

ರಾಷ್ಟ್ರದ ಸಂಪತ್ತು

ಸ್ವಾಮಿ ವಿವೇಕಾನಂದರು ಯುವಜನರನ್ನು ರಾಷ್ಟ್ರದ ನಿಜವಾದ ಸಂಪತ್ತು ಎಂದು ನಂಬಿದ್ದರು. ''ನನಗೆ ನೂರು ಶಕ್ತಿಶಾಲಿ ಯುವಕರು ಸಿಕ್ಕರೆ, ಈ ದೇಶದ ಭವಿಷ್ಯವನ್ನೇ ಬದಲಿಸಬಲ್ಲೆ'' ಎಂಬ ಅವರ ಮಾತುಗಳು ಯುವಜನರ ಶಕ್ತಿಯ ಮಹತ್ವವನ್ನು ಎತ್ತಿ ತೋರಿಸುತ್ತವೆ. ಅವರ ದೃಷ್ಟಿಯಲ್ಲಿ ಯುವಜನತೆ ಎಂದರೆ ಕೇವಲ ವಯಸ್ಸಿನ ಹಂತವಲ್ಲ; ಅದು ಧೈರ್ಯ, ಆತ್ಮವಿಶ್ವಾಸ, ತ್ಯಾಗ ಮತ್ತು ಸೇವಾಭಾವದ ಸಂಕೇತ. ಆದ್ದರಿಂದ ಯುವಜನ ದಿನಾಚರಣೆಯು ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಯುವಜನರಲ್ಲಿ ಬೆಳೆಸುವ ಒಂದು ಶಕ್ತಿಯುತ ವೇದಿಕೆಯಾಗಿದೆ.

ಯುವಜನತೆ ಎಂಬುದು ಸಮಾಜದ ಚಲನೆಯ ಶಕ್ತಿ. ಹೊಸ ಆಲೋಚನೆಗಳು, ನವೀನ ಚಿಂತನೆಗಳು ಮತ್ತು ಬದಲಾವಣೆಯ ಕನಸುಗಳು ಹೆಚ್ಚಾಗಿ ಯುವಮನಸ್ಸುಗಳಿಂದಲೇ ಹುಟ್ಟುತ್ತವೆ. ಇತಿಹಾಸವನ್ನು ಗಮನಿಸಿದರೆ, ಅನೇಕ ಸಾಮಾಜಿಕ ಕ್ರಾಂತಿಗಳು, ಸ್ವಾತಂತ್ರ್ಯ ಹೋರಾಟಗಳು ಮತ್ತು ವೈಚಾರಿಕ ಬದಲಾವಣೆಗಳಲ್ಲಿ ಯುವಜನರ ಪಾತ್ರ ಪ್ರಮುಖವಾಗಿದೆ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿಯೂ ಯುವಜನರ ತ್ಯಾಗ ಮತ್ತು ಸಾಹಸ ಅಮೋಘವಾಗಿವೆ. ಇದರಿಂದ ಸ್ಪಷ್ಟವಾಗುವುದು- ಯುವಜನತೆ ಎಚ್ಚರಗೊಂಡರೆ ರಾಷ್ಟ್ರದ ದಿಕ್ಕೇ ಬದಲಾಗುತ್ತದೆ ಎಂಬ ಸತ್ಯ.

ಸಕಾರಾತ್ಮಕ ದಿಕ್ಕು

ಇಂದಿನ ಯುವಜನತೆ ವಿಜ್ಞಾನ ಮತ್ತು ತಂತ್ರಜ್ಞಾನಗಳ ಯುಗದಲ್ಲಿ ಬದುಕುತ್ತಿದೆ. ಡಿಜಿಟಲೀಕರಣ, ಕೃತಕ ಬುದ್ಧಿಮತ್ತೆ, ಸಾಮಾಜಿಕ ಮಾಧ್ಯಮ ಮತ್ತು ಜಾಗತೀಕರಣ ಎಲ್ಲವೂ ಯುವಜನರ ಬದುಕನ್ನು ಸುಲಭಗೊಳಿಸಿದ್ದರೂ, ಹೊಸ ಸವಾಲುಗಳನ್ನೂ ತಂದಿವೆ. ನಿರಂತರ ಸ್ಪರ್ಧೆ, ಉದ್ಯೋಗದ ಅನಿಶ್ಚಿತತೆ, ಸಾಮಾಜಿಕ ಹೋಲಿಕೆ, ಮಾನಸಿಕ ಒತ್ತಡ ಮತ್ತು ಆತಂಕಗಳು ಯುವಜನರನ್ನು ಆವರಿಸುತ್ತಿವೆ. ಈ ಹಿನ್ನೆಲೆಯಲ್ಲಿ ಯುವಜನ ದಿನಾಚರಣೆಯು ಯುವಕರಿಗೆ ತಮ್ಮ ಒಳಶಕ್ತಿಯನ್ನು ಗುರುತಿಸಿ, ಸಕಾರಾತ್ಮಕ ದಿಕ್ಕಿನಲ್ಲಿ ಸಾಗಲು ಪ್ರೇರಣೆಯಾಗಿ ಪರಿಣಮಿಸಬೇಕು.

ಯುವಜನರು ರಾಷ್ಟ್ರದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಕೃಷಿ, ಕೈಗಾರಿಕೆ, ಮಾಹಿತಿ ತಂತ್ರಜ್ಞಾನ, ಶಿಕ್ಷಣ, ಆರೋಗ್ಯ, ಸಂಶೋಧನೆ- ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ಯುವಜನರ ಶ್ರಮ ಮತ್ತು ನವೀನತೆ ಅಗತ್ಯ. ಉದ್ಯೋಗ ಹುಡುಕುವವರಾಗಿಯೇ ಅಲ್ಲ, ಉದ್ಯೋಗ ಸೃಷ್ಟಿಸುವ ಉದ್ಯಮಿಗಳಾಗುವ ಮನೋಭಾವವೂ ಯುವಜನರಲ್ಲಿ ಬೆಳೆಯಬೇಕು. ಸ್ವಾವಲಂಬನೆ ಮತ್ತು ಆತ್ಮನಿರ್ಭರತೆ ಇಂದು ರಾಷ್ಟ್ರದ ಅಗತ್ಯವಾಗಿದ್ದು, ಇದನ್ನು ಸಾಧಿಸುವಲ್ಲಿ ಯುವಜನರ ಪಾತ್ರ ನಿರ್ಣಾಯಕವಾಗಿದೆ.

ಮೌಲ್ಯಾಧಾರಿತ ಬದುಕು

ಶಿಕ್ಷಣವು ಯುವಜನರನ್ನು ರೂಪಿಸುವ ಅತ್ಯಂತ ಬಲವಾದ ಸಾಧನವಾಗಿದೆ. ಆದರೆ ಶಿಕ್ಷಣವೆಂದರೆ ಕೇವಲ ಅಂಕಗಳ ಸಂಗ್ರಹವಲ್ಲ; ಅದು ಮೌಲ್ಯಾಧಾರಿತ ಬದುಕಿಗೆ ದಾರಿ ತೋರಿಸುವ ಪ್ರಕ್ರಿಯೆಯಾಗಬೇಕು. ಪ್ರಾಮಾಣಿಕತೆ, ಶಿಸ್ತು, ಮಾನವೀಯತೆ, ಸಹಾನುಭೂತಿ ಮತ್ತು ಸಾಮಾಜಿಕ ಹೊಣೆಗಾರಿಕೆ- ಇವೆಲ್ಲ ಮೌಲ್ಯಗಳು ಶಿಕ್ಷಣದೊಂದಿಗೆ ಬೆಳೆಯಬೇಕು. ಕೌಶಲಾಭಿವೃದ್ಧಿ, ಸಂಶೋಧನಾ ಮನೋಭಾವ ಮತ್ತು ಸೃಜನಶೀಲತೆಗಳು ಯುವಜನರನ್ನು ಕಾಲದೊಂದಿಗೆ ಹೆಜ್ಜೆ ಹಾಕುವಂತೆ ಮಾಡುತ್ತವೆ.

ಯುವಜನರು ತಮ್ಮ ಹಕ್ಕುಗಳ ಜತೆಗೆ ಕರ್ತವ್ಯಗಳನ್ನೂ ಅರಿತುಕೊಳ್ಳಬೇಕಾಗಿದೆ. ಮತದಾನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು, ಪರಿಸರ ಸಂರಕ್ಷಣೆಗೆ ಕೈಜೋಡಿಸುವುದು, ಮಹಿಳೆಯರಿಗೆ ಸಮಾನತೆ ಮತ್ತು ಗೌರವ ನೀಡುವುದು, ಸಾಮಾಜಿಕ ಅಸಮಾನತೆ ವಿರುದ್ಧ ಧ್ವನಿ ಎತ್ತುವುದು- ಇವೆಲ್ಲವೂ ಯುವಜನರ ಕರ್ತವ್ಯಗಳಾಗಿವೆ. ಸಾಮಾಜಿಕ ಜಾಲತಾಣಗಳಲ್ಲಿ ಕೇವಲ ಅಭಿಪ್ರಾಯ ವ್ಯಕ್ತಪಡಿಸುವುದಷ್ಟೇ ಸಾಕಾಗುವುದಿಲ್ಲ, ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರಲು ಪ್ರಯತ್ನಿಸುವ ಮನೋಭಾವವೂ ಇಲ್ಲಿ ಅಗತ್ಯ.



ಸವಾಲುಗಳು ನಿರಂತರ

ಇಂದಿನ ಯುವಜನತೆಗೆ ದೊಡ್ಡ ಸವಾಲು ಎಂದರೆ ಮಾನಸಿಕ ಆರೋಗ್ಯ. ಯಶಸ್ಸಿನ ಒತ್ತಡ, ವಿಫಲತೆಯ ಭಯ ಮತ್ತು ಸಾಮಾಜಿಕ ನಿರೀಕ್ಷೆಗಳು ಯುವಮನಸ್ಸನ್ನು ಕುಗ್ಗಿಸುತ್ತಿವೆ. ಇಂಥ ಸಂದರ್ಭದಲ್ಲಿ ತಮ್ಮ ಭಾವನೆಗಳನ್ನು ಹಂಚಿಕೊಳ್ಳುವ ಧೈರ್ಯ ಯುವಜನರಲ್ಲಿ ಇರಬೇಕು. ಮಾನಸಿಕ ಆರೋಗ್ಯದ ಬಗ್ಗೆ ಸಮಾಜದಲ್ಲಿರುವ ಮೌನವನ್ನು ಮುರಿಯಬೇಕಾಗಿದೆ. ಸಹಾಯ ಕೇಳುವುದು ದುರ್ಬಲತೆ ಅಲ್ಲ, ಅದು ಜಾಣ್ಮೆಯ ಸಂಕೇತ ಎಂಬ ಅರಿವು ಅಗತ್ಯ.

ಯುವಜನ ದಿನಾಚರಣೆ ನಮ್ಮ ಸಾಂಸ್ಕೃತಿಕ ಮತ್ತು ನೈತಿಕ ಮೌಲ್ಯಗಳನ್ನು ನೆನಪಿಸುವ ದಿನವೂ ಹೌದು. ಭಾರತೀಯ ಸಂಸ್ಕೃತಿಯು ಸಹಬಾಳ್ವೆ, ಸಹಿಷ್ಣುತೆ ಮತ್ತು ವೈವಿಧ್ಯತೆಯಲ್ಲಿ ಏಕತೆಯನ್ನು ಸಾರುತ್ತದೆ. ಜಾಗತೀಕರಣದ ಪ್ರಭಾವದಲ್ಲಿಯೂ ಈ ಮೌಲ್ಯಗಳನ್ನು ಉಳಿಸಿಕೊಂಡು ಸಾಗುವ ಜವಾಬ್ದಾರಿ ಯುವಜನರ ಮೇಲಿದೆ. ಸಂಸ್ಕೃತಿಯನ್ನು ಅಂಧವಾಗಿ ಅನುಕರಿಸುವುದಕ್ಕಿಂತ ಅದರ ಅರ್ಥ ಮತ್ತು ಕಾರಣವನ್ನು ಸಮರ್ಪಕವಾಗಿ ತಿಳಿದುಕೊಂಡು ಅನುಸರಿಸಿ, ಜೀವನದಲ್ಲಿ ಅಳವಡಿಸಿಕೊಳ್ಳುವುದು ಮುಖ್ಯ.

ಮಹತ್ವದ ದಿನ

ಯುವಜನರು ಕೇವಲ ನಾಳೆಯ ನಾಯಕರು ಅಲ್ಲ; ಅವರು ಇಂದಿನ ಬದಲಾವಣೆಯ ಶಕ್ತಿ. ಅವರ ಚಿಂತನೆ, ನಡೆ ಮತ್ತು ನಿರ್ಧಾರಗಳು ರಾಷ್ಟ್ರದ ಭವಿಷ್ಯವನ್ನು ನಿರ್ಧರಿಸುತ್ತವೆ. ಯುವಜನ ದಿನಾಚರಣೆಯ ನಿಜವಾದ ಅರ್ಥವು ಯುವಜನರಲ್ಲಿ ಆತ್ಮವಿಶ್ವಾಸ, ಸೇವಾಭಾವ ಮತ್ತು ರಾಷ್ಟ್ರಭಕ್ತಿ ಬೆಳೆಸುವುದರಲ್ಲಿದೆ. ಶಕ್ತಿಶಾಲಿ ಯುವಜನತೆ ರೂಪುಗೊಂಡಾಗ, ಭಾರತ ನಿಜಾರ್ಥದಲ್ಲಿ ಅಭಿವೃದ್ಧಿ ಹೊಂದಿದ ಮತ್ತು ಮೌಲ್ಯಾಧಾರಿತ ರಾಷ್ಟ್ರವಾಗುತ್ತದೆ. ಅದೇ ಯುವಜನ ದಿನಾಚರಣೆಯ ಸಂದೇಶವೂ ಹೌದು. ಸ್ವಾಮಿ ವಿವೇಕಾನಂದರು ಕನಸುಕಂಡ ಯುವಜನತೆ ದೈಹಿಕವಾಗಿ ಶಕ್ತಿಶಾಲಿ, ಮಾನಸಿಕವಾಗಿ ದೃಢ ಮತ್ತು ನೈತಿಕವಾಗಿ ಉನ್ನತವಾಗಿರಬೇಕು. ಇಂಥ ಯುವಜನತೆ ರೂಪುಗೊಂಡಾಗ ಮಾತ್ರವೇ ರಾಷ್ಟ್ರವು ಪ್ರಗತಿಯ ಹಾದಿಯಲ್ಲಿ ದೃಢವಾಗಿ ಸಾಗಲು ಸಾಧ್ಯ. ನಿನ್ನೆ ಕೈಗೊಳ್ಳಲಾದ 'ಯುವಜನ ದಿನಾಚರಣೆ'ಯು ಆ ಕನಸನ್ನು ನೆನಪಿಸುವ, ಯುವಜನರನ್ನು ಜಾಗೃತಗೊಳಿಸುವ ಮಹತ್ವದ ದಿನವಾಗಲಿ, ಆ ಸ್ಫೂರ್ತಿಯು ಅನುಗಾಲವೂ ಹೃದಯದಲ್ಲಿ ಕೆನೆಗಟ್ಟಿರಲಿ ಎಂದು ಆಶಿಸೋಣ...

ಮದುವೆಯೋ ಮನೆಹಾಳೋ...!

● ಕೆ. ಶ್ರೀನಿವಾಸರಾವ್, ಹರಪನಹಳ್ಳಿ

ನಮ್ಮ ಹಿರಿಯರು ತಮ್ಮ ಅನುಭವದ ದೃಷ್ಟಿಕೋನದಿಂದ ಹೇಳಿದ್ದಾರೆ- 'ಮದುವೆ ಮಾಡಿ ನೋಡು, ಮನೆ ಕಟ್ಟಿ ನೋಡು' ಅಂತ. ಅಬ್ಬಾ! ಎಂಥ ಮುತ್ತಿನಂಥ ಮಾತು. ಮನೆಯನ್ನಾದರೂ ಹರಸಾಹಸ ಪಟ್ಟು ಕಟ್ಟಬಹುದು, ಆದರೆ ಮದುವೆ ಮಾಡುವುದೆಂದರೆ ಒಂದು ಅಶ್ವಮೇಧ ಯಾಗ ಮಾಡಿದಂತೆ! ನಾನಿಲ್ಲಿ ಹೇಳಹೊರಟಿರುವುದು ಮದುವೆಯ ಹಣೆಪಟ್ಟಿಯಡಿ ಕಾಣಬರುವ ಅತಿರೇಕದ ಮತ್ತು ಅನಪೇಕ್ಷಿತ ಅಬ್ಬರಗಳ ಬಗ್ಗೆ.

ಕಳೆದ ವಾರ ಬೆಂಗಳೂರಿನಲ್ಲಿ ನನ್ನ ಗೆಳೆಯರ ಮಗನ ಮದುವೆಗೆ ಹೋಗಿದ್ದೆ. ವಧು-ವರರು ಅಪ್ಪಿಕೊಂಡ ಭಂಗಿಯಲ್ಲಿರುವ ಆಳೆತ್ತರದ ಚಿತ್ರವನ್ನು ಬಾಗಿಲಲ್ಲೇ ಲಗತ್ತಿಸಲಾಗಿತ್ತು. ಅದಕ್ಕೆ ಹೂಗಳ ಅಲಂಕಾರ ಬೇರೆ! ಒಳಗಡಿಯಿಟ್ಟೆ, ಸುಂದರ ತರುಣಿಯರಿಬ್ಬರು ಕೃತಕ ನಗೆ ನಕ್ಕು, ಪನ್ನೀರುದಾನಿಯನ್ನು ಚಿಮುಕಿಸಿದಂತೆ ಮಾಡಿ, ಕೈಗೊಂದು ಹೂವು ಕೊಟ್ಟರು. ಮತ್ತೊಂದು ಬದಿಯಲ್ಲಿ 'ವೆಲ್‌ಕಮ್ ಡ್ರಿಂಕ್' ಆಗಿ ಪುನರ್ಪುಳಿ ಜ್ಯೂಸ್ ಕೊಟ್ಟರು, ಕುಡಿದು ಒಳಬದಿಯನ್ನೊಮ್ಮೆ ಅವಲೋಕಿಸಿದೆ. ಪರಿಚಯದವರಾರೂ ಕಂಡಂತಾಗಲಿಲ್ಲ. ಝಗಮಗಿಸುವ ಭರ್ಜರಿ ಅಲಂಕೃತ ವೇದಿಕೆಯ ಮಧ್ಯೆ ಇರಿಸಲಾಗಿದ್ದ ಸಿಂಹಾಸನದಂಥ ಸೋಫಾಗಳಲ್ಲಿ ನವ ವಿವಾಹಿತರಿದ್ದರು. ಅವರನ್ನು ಆವರಿಸಿ ನಿಂತಿದ್ದ ಬಂಧು-ಮಿತ್ರರು, 'ಸೈಡ್ ಬಿಡಿ, ಸೈಡ್ ಬಿಡಿ' ಎಂದು ತಲೆ ಚಚ್ಚಿಕೊಳ್ಳುತ್ತಿದ್ದ ವಿಡಿಯೋಗ್ರಾಫರ್, ಕೈಯಲ್ಲಿ ಮೊಬೈಲ್ ಹಿಡಿದು ಶೂಟ್ ಮಾಡುತ್ತಾ ಅತಿಥಿಗಳಿಗೆ ಅಡ್ಡಲಾಗಿ ನಿಂತ ಹಲವು ಹೆಂಗೆಳೆಯರು, ಗಿಫ್ಟ್ ಕೊಟ್ಟು ಬೇಗ ಊಟಕ್ಕೆ ಹೋಗುವ ಆತುರದಲ್ಲಿದ್ದ ತಿಂಡಿಪೋತರು...

ಕಂಡವರ ಮದುವೇಲಿ, ಉಂಡವರೇ ಜಾಣರು...

ವೇದಿಕೆಯ ಕೆಳಗೆ ನೋಡಿದರೆ, ರೇಷ್ಮೆ ಸೀರೆಗಳನ್ನು ಪ್ರದರ್ಶಿಸುತ್ತಾ, ಆಭರಣಗಳನ್ನು ಸರಿಮಾಡಿಕೊಳ್ಳುತ್ತಾ, ಸೀರೆ ಡಿಸೈನ್-ಬಣ್ಣ, ಟಿವಿ ಧಾರಾವಾಹಿಗಳ ಬಗ್ಗೆ ವ್ಯಾಖ್ಯಾನ ಮಾಡುತ್ತಿದ್ದ ಮಹಿಳಾಮಣಿಗಳು, ಅತ್ತಿಂದಿತ್ತ ಇತ್ತಿಂದತ್ತ ಓಡುತ್ತಾ ಕುರ್ಚಿಗಳನ್ನು ಎಳೆಯುತ್ತಾ ಆಟವಾಡುತ್ತಿದ್ದ ಮಕ್ಕಳು, ಸುಂದರಿಯರನ್ನು ಕಣ್ತುಂಬಿಕೊಳ್ಳುತ್ತಿದ್ದ ಪಡ್ಡೆಗಳು, ಪ್ರಸಕ್ತ ರಾಜಕೀಯದ ಬಗ್ಗೆ ಏರುದನಿಯಲ್ಲಿ ಚರ್ಚಿಸುತ್ತಿದ್ದ ಹಿರಿಯ ನಾಗರಿಕರು ಮುಂತಾದವರು ಕಂಡರು. ವೇದಿಕೆಯ ಬಲಬದಿಯ ಮೂಲೆಯಲ್ಲಿ ಕುಂದಾಪುರದ ಯುವಕಲಾವಿದೆ ಸ್ಯಾಕ್ಸೋಫೋನ್ ಅನ್ನು ಪಟ್ಟಾಗಿ ಹಿಡಿದುಕೊಂಡು 'ಮದುವೆಯ ಈ ಬಂಧ, ಅನುರಾಗದ ಅನುಬಂಧ' ಹಾಡನ್ನು ನುಡಿಸುತ್ತಿದ್ದರೆ, ಮತ್ತೊಂದೆಡೆ ರೆಕಾರ್ಡ್ ಗೀತೆಗಳ ಅಬ್ಬರ. ಈ ಒಟ್ಟಾರೆ ಗಲಭೆಯನ್ನು ಕಂಡು, 'ಸಂತೆಯೊಳಗೆ ಎನ್ನ ಕಿವುಡನ ಮಾಡಯ್ಯ ತಂದೆ' ಎಂದು ಕಾಣದ ದೇವರನ್ನು ಪ್ರಾರ್ಥಿಸಿದೆ.

ಕೆಲ ಹೊತ್ತಿನ ನಂತರ ಹೊಟ್ಟೆ ಚುರುಗುಟ್ಟತೊಡಗಿದಾಗ ಊಟದ ಹಾಲ್‌ನೆಡೆಗೆ ಹೆಜ್ಜೆಹಾಕಿದರೆ, ಅಲ್ಲೋ ಒಂದು ರೀತಿಯ ಯುದ್ಧದ ವಾತಾವರಣ. ಅದಾಗಲೇ ಊಟ ಮಾಡುತ್ತಿದ್ದವರ ಹಿಂದೆಯೇ ನಿಂತುಕೊಂಡು 'ಈ ಜಾಗ ನೆಕ್ಸ್ಟ್ ನಮ್ಮದೇ' ಎಂದು ತವಕಿಸುತ್ತಿದ್ದವರು, ಅಕ್ಷರಶಃ ಆ ಜಾಗವನ್ನು ಕಾಂಟ್ರಾಕ್ಟ್ ತೆಗೆದುಕೊಂಡವರಂತೆ ಭ್ರಮಿಸುತ್ತಿದ್ದವರು ನಿಂತಿದ್ದರು. ಅವರ ಇರುವಿಕೆಯಿಂದಾಗಿ, ಅದಾಗಲೇ ಊಟ ಮಾಡುತ್ತಿದ್ದವರು ಕೊನೆಯ ತುತ್ತುಗಳನ್ನೂ ತಿನ್ನಲಾಗದೆ ಮುಜುಗರ ಪಟ್ಟುಕೊಳ್ಳುತ್ತಿದ್ದುದು ಕಂಡಿತು. ಹಾಲ್ ತುಂಬೆಲ್ಲಾ ತಟ್ಟೆ-ಲೋಟಗಳ ಸಶಬ್ದ ತಾಳ-ಮೇಳ ಕೇಳಿಸಿತು. ಇನ್ನು ಊಟವನ್ನು ಬಡಿಸುವವರೋ ಭಿಕಾರಿಗಳಿಗೆ ಹಾಕುವಂತೆ ತಿನಿಸುಗಳನ್ನು ಎಲೆಗೆ ಎಸೆಯುತ್ತಾ ಸಾಗುತ್ತಿದ್ದರು. ಮತ್ತೊಂದು ಸಿಹಿತಿಂಡಿಯನ್ನು ಕೇಳಿದರೆ, ''ಒಂದೊಂದೇ ಸ್ವಾಮೀ ಬಡಿಸೋದು, ಅಷ್ಟಕ್ಕೇ ಕಾಂಟ್ರಾಕ್ಟ್ ಕೊಟ್ಟಿರೋದು...'' ಎನ್ನುತ್ತಿದ್ದರು ಮುಲಾಜಿಲ್ಲದೆ. ಒಟ್ಟಿನಲ್ಲಿ ಈ ಅಡುಗೆಯವರು, ತಮ್ಮ ಕೆಲಸ ಮುಗಿದರೆ ಸಾಕು ಎಂಬ ಧಾಟಿಯಲ್ಲಿ ಒಂದರ ಮೇಲೊಂದು ಪದಾರ್ಥವನ್ನು ಎಲೆಗೆ ಸುರಿದು ಹೋಗುತ್ತಿದ್ದರು...

ಇಷ್ಟು ಉಂಡದ್ದು ಸಾಲದೆಂಬಂತೆ, ''ಅತಿಥಿಗಳಿಗೆ ನೆನಪಿನ ಕಾಣಿಕೆ ಇಲ್ವಾ?'' ಎಂದು ಕೇಳುತ್ತಿದ್ದ ಮಹಾಶಯರೂ ಇದ್ದರು. ಭರ್ಜರಿಯಾಗಿ ಊಟ ಬಾರಿಸಿದ್ದು ಸಾಲದೆಂಬಂತೆ ಐಸ್‌ಕ್ರೀಂ, ಬಾಳೆಹಣ್ಣನ್ನೂ ಮೆದ್ದು, ತಮಗೊಂದು ಮನೆಯವರಿಗೊಂದು ಎಂಬಂತೆ ಎರಡೆರಡು ಪಾನ್‌ಬೀಡಾ ಹಾಕಿಕೊಂಡು ಜಾಗ ಖಾಲಿಮಾಡುತ್ತಿದ್ದರು. ಈ ಗದ್ದಲದ ನಡುವೆಯೂ ಸ್ಯಾಕ್ಸೋಫೋನ್ ವಾದಕಿಯು ''ಕಾಪಾಡು ಶ್ರೀ ಸತ್ಯನಾರಾಯಣಾ...'' ಎಂಬ ಹಾಡನ್ನು ನುಡಿಸುವ ವಿಫಲ ಯತ್ನದಲ್ಲಿ ಇದ್ದಂತಿತ್ತು!

ಇವನ್ನೆಲ್ಲಾ ಕಣ್ಣುತುಂಬಿಕೊಂಡ ನಂತರ, 'ಈ ಅದ್ದೂರಿ-ಆಡಂಬರ-ಅತಿವೆಚ್ಚದ, ಗಲಾಟೆಯೇ ತುಂಬಿಕೊಂಡಿರುವ ಮದುವೆಗಳ ಬದಲು, ಸರಳವಾಗಿ, ಸಾದಾ-ಸೀದಾ ಎನ್ನುವ ರೀತಿಯಲ್ಲಿ ವಧು-ವರರನ್ನು ಜೋಡಿಯಾಗಿಸಬಾರದೇ? ಒಂದು ಗಂಡು ಮತ್ತು ಒಂದು ಹೆಣ್ಣು ಒಂದಾಗಿ ಬಾಳಲು ಇಷ್ಟೆಲ್ಲಾ ಕಸರತ್ತು ಮಾಡಬೇಕೇ?' ಎಂಬ ಪ್ರಶ್ನೆಗಳು ಮನದಲ್ಲಿ ಮೂಡಿದ್ದು ಸುಳ್ಳಲ್ಲ...

ಶನೈಶ್ಚರನ ವಾಹನ ಕಾಗೆ: ಶರಣಾಗತಿಯ ಕಥೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಹಿಂದೂ ಧರ್ಮದಲ್ಲಿ ಪ್ರತಿಯೊಬ್ಬ ದೇವರಿಗೂ ಒಂದು ವಿಶಿಷ್ಟ ವಾಹನವಿದೆ. ನ್ಯಾಯದೇವನಾದ ಶನೈಶ್ಚರನಿಗೆ (ಶನಿ ದೇವ) ಕಾಗೆಯು ವಾಹನ. ಕಾಗೆಯನ್ನು ಸಾಮಾನ್ಯವಾಗಿ ಜನರು ಅಶುಭ ಎಂದು ಭಾವಿಸಿದರೂ, ಶನಿದೇವನ ವಾಹನವಾದ ಮೇಲೆ ಅದಕ್ಕೆ ಆಧ್ಯಾತ್ಮಿಕ ಮಹತ್ವ ಲಭಿಸಿದೆ. ಇದರ ಹಿಂದೆ ದೇವಲೋಕದ ಕುತೂಹಲಕಾರಿ ಕಥೆಯೊಂದಿದೆ.

ದೇವಲೋಕದಲ್ಲಿ ಕಾಕಾಸುರನೆಂಬ ರಾಕ್ಷಸನಿದ್ದನು. ಅವನಿಗೆ ಅಹಂಕಾರ ವಿಪರೀತವಾಗಿತ್ತು. ಒಮ್ಮೆ ಜಗನ್ಮಾತೆಯಾದ ಲಕ್ಷ್ಮೀದೇವಿಯು ಏಕಾಂತದಲ್ಲಿ ಸ್ನಾನ ಮಾಡುತ್ತಿದ್ದಾಗ, ಕಾಕಾಸುರನು ಮರೆಯಲ್ಲಿ ನಿಂತು ಕದ್ದು ನೋಡುವ ದುಸ್ಸಾಹಸ ಮಾಡಿದನು. ಇದನ್ನು ಗಮನಿಸಿದ ಮಾತೆ ಲಕ್ಷ್ಮಿಯು ಅತ್ಯಂತ ಅವಮಾನಿತಳಾಗಿ ಕಿರುಚಿಕೊಂಡಳು. ದೇವಿಯ ಮೊರೆ ಕೇಳಿದ ಮಹಾವಿಷ್ಣುವು ತಕ್ಷಣ ಅಲ್ಲಿಗೆ ಧಾವಿಸಿ ಬಂದನು. ನಡೆದ ಘಟನೆಯನ್ನು ತಿಳಿದ ವಿಷ್ಣುವು ಅತ್ಯಂತ ಕ್ರೋಧಿತನಾಗಿ, ಧರ್ಮದ ಮರ್ಯಾದೆ ಮೀರಿದ ಕಾಕಾಸುರನನ್ನು ಸಂಹರಿಸಲು ಸುದರ್ಶನ ಚಕ್ರವನ್ನು ಪ್ರಯೋಗಿಸಿ ಬೆನ್ನಟ್ಟಿದನು.

ವಿಷ್ಣುವಿನ ಕೋಪಕ್ಕೆ ಹೆದರಿದ ಕಾಕಾಸುರನು ಪ್ರಾಣಭಯದಿಂದ ಮುಕ್ಕಣ್ಣ ಶಿವನ ಬಳಿಗೆ ಓಡಿಹೋಗಿ ರಕ್ಷಿಸುವಂತೆ ಬೇಡಿಕೊಂಡನು. ಆದರೆ ಈಶ್ವರನು, ಲೋಕಮಾತೆಗೆ ಅಪಚಾರ ಮಾಡಿದ ನಿನಗೆ ಶಿಕ್ಷೆ ಖಂಡಿತ. ನಾರಾಯಣನ ಕೋಪದಿಂದ ನಿನ್ನನ್ನು ಉಳಿಸಲು ನನ್ನಿಂದಲೂ ಸಾಧ್ಯವಿಲ್ಲ. ನಿನಗೆ ಈಗ ದಾರಿ ತೋರಿಸಬಲ್ಲವನು ಶನೈಶ್ಚರ ಮಾತ್ರ. ಆತನ ಪಾದಕ್ಕೆ ಶರಣಾಗು ಎಂದು ಸಲಹೆ ನೀಡಿದನು.

ಕೊನೆಗೆ ಕಾಕಾಸುರನು ಶನೈಶ್ಚರನ ಪಾದಗಳಿಗೆ ಬಿದ್ದು ಕ್ಷಮೆ ಯಾಚಿಸಿದನು. ಅಷ್ಟರಲ್ಲಿ ಅಲ್ಲಿಗೆ ಬಂದ ವಿಷ್ಣುವು ಅಪರಾಧಿಯನ್ನು ತನಗೆ ಒಪ್ಪಿಸುವಂತೆ ಕೇಳಿದನು. ಆಗ ಶನೈಶ್ಚರನು ಶಾಂತನಾಗಿ, ''ಪ್ರಭು, ಶರಣು ಬಂದವರನ್ನು ರಕ್ಷಿಸುವುದು ಧರ್ಮ. ಇವನು ಮಾಡಿದ ತಪ್ಪಿಗೆ ತಕ್ಕ ಪ್ರಾಯಶ್ಚಿತ್ತವಾಗಲಿ'' ಎಂದು ಹೇಳಿ, ''ನಿನ್ನ ಒಂದು ಕಣ್ಣನ್ನು ಕಿತ್ತು ನಾರಾಯಣನ ಪಾದಕ್ಕೆ ಅರ್ಪಿಸು'' ಎಂದು ಕಾಕಾಸುರನಿಗೆ ಸೂಚಿಸಿದನು. ಕಾಕಾಸುರನು ಅದರಂತೆ ಮಾಡಿದನು. ಈ ಕಾರಣಕ್ಕಾಗಿಯೇ ಇಂದಿಗೂ ಕಾಗೆಗಳು ಒಂದು ಕಣ್ಣಿನಿಂದ ಮಾತ್ರ ನೇರವಾಗಿ ನೋಡಬಲ್ಲವು ಎಂಬ ನಂಬಿಕೆಯಿದೆ

ನಾರಾಯಣನು ಶಾಂತನಾದರೂ, ಕಾಕಾಸುರನಿಗೆ ತನ್ನ ತಪ್ಪಿನ ಅರಿವಾಗಿತ್ತು. ಅವನು ಶನೈಶ್ಚರನ ನ್ಯಾಯಪರತೆಗೆ ಮನಸೋತು, ''ಸ್ವಾಮಿ, ಇಂದಿನಿಂದ ನಾನು ನಿನ್ನನ್ನು ಬಿಟ್ಟಿರಲಾರೆ. ನನ್ನನ್ನು ನಿನ್ನ ವಾಹನವಾಗಿ ಸ್ವೀಕರಿಸಿ ಪಾವನಗೊಳಿಸು'' ಎಂದು ಪ್ರಾರ್ಥಿಸಿದನು. ಶನೈಶ್ಚರನು ಅವನ ಪ್ರಾರ್ಥನೆಯನ್ನು ಮನ್ನಿಸಿ, ಅವನನ್ನು ಕಾಗೆಯ ರೂಪದಲ್ಲಿ ತನ್ನ ವಾಹನವನ್ನಾಗಿ ಮಾಡಿಕೊಂಡನು.

ಕಾಗೆಯು ಶನಿದೇವನ ವಾಹನವಾದ ನಂತರ, ಅದು ಪಿತೃದೇವತೆಗಳ ಸಂಕೇತವೂ ಆಯಿತು. ಕಾಗೆಗೆ ಅನ್ನ ಹಾಕಿದರೆ ಶನಿದೇವನು ಪ್ರಸನ್ನನಾಗುತ್ತಾನೆ ಮತ್ತು ಪಿತೃಗಳ ಆಶೀರ್ವಾದ ದೊರೆಯುತ್ತದೆ ಎಂಬ ನಂಬಿಕೆ ಸನಾತನ ಧರ್ಮದಲ್ಲಿ ಭದ್ರವಾಯಿತು.

ಕಾಗೆಗಳು ಪ್ರಕೃತಿಯ 'ಸ್ವಚ್ಛತಾ ಕಾರ್ಮಿಕರು'. ಅವು ಸತ್ತ ಪ್ರಾಣಿಗಳನ್ನು ಅಥವಾ ಕೊಳೆತ ಆಹಾರವನ್ನು ತಿಂದು ಪರಿಸರವನ್ನು ಶುಚಿಯಾಗಿಡುತ್ತವೆ. ನಮ್ಮ ಹಿರಿಯರು ಇವುಗಳನ್ನು ದೈವಿಕ ಕೆಲಸಕ್ಕೆ ಜೋಡಿಸಿದ್ದರಿಂದ, ಜನರು ಈ ಪಕ್ಷಿಗಳನ್ನು ಸಂರಕ್ಷಿಸುವಂತಾಯಿತು.

ನಮ್ಮ ಸನಾತನ ಧರ್ಮದ ಎಲ್ಲ ಪುರಾಣ ಕಥೆಗಳಲ್ಲೂ ಮನುಷ್ಯ ಮತ್ತು ಪ್ರಕೃತಿಯ ನಡುವೆ, ವಿಶೇಷವಾಗಿ ಪ್ರಾಣಿ-ಪಕ್ಷಿಗಳ ಜತೆಗಿನ ಸೌಹಾರ್ದದ ಬದುಕನ್ನು ಬಿಂಬಿಸಲು ಅವುಗಳನ್ನು ನಮ್ಮ ದೇವತೆಗಳ ವಾಹನವನ್ನಾಗಿ, ಅಥವಾ ದೇವತೆಗಳಾಗಿ ಸ್ವೀಕರಿಸಲಾಗಿದೆ. ಇದರಿಂದಾಗಿ ನಮಗೆ ಪ್ರಾಣಿ-ಪಕ್ಷಿಗಳ ಬಗ್ಗೆ ಇರುವಂಥ ಭಾವನೆಗಳು ದೈವಿಕವಾಗಿ ಒಳಗೊಳ್ಳುತ್ತಾ ಅವುಗಳನ್ನು ನೋಡುವ ಮತ್ತು ನಮ್ಮ ಜೀವನದ ಒಂದು ಭಾಗವಾಗಿಸಿಕೊಳ್ಳುವ ರೀತಿಯಲ್ಲಿ ಸಾಕಷ್ಟು ಬದಲಾವಣೆಯಾಗುತ್ತದೆ.

ಇಂಥ ಕಥೆಗಳನ್ನ ನಮ್ಮ ಮಕ್ಕಳಿಗೂ ಹೇಳಿದಾಗ, ಪ್ರಕೃತಿಯೊಡನೆ, ಸಕಲ ಪ್ರಾಣಿ-ಪಕ್ಷಿಗಳ ಜತೆಗೆ ಸೌಹಾರ್ದನಿಂದ ಬದುಕುವ ಗುಣವನ್ನು ಅವರಲ್ಲಿ ಬೆಳೆಸಿದಂತಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ನಾವು ಮನುಷ್ಯರಾಗಿ ಈ ಭೂಮಿಯ ಒಂದು ಭಾಗ ಮಾತ್ರ. ಇಲ್ಲಿ ಸಕಲ ಜೀವಿಗಳಿಗೂ ಬದುಕುವ ಸಮಾನ ಹಕ್ಕಿದೆ. ಎಲ್ಲ ಜೀವಿಗಳನ್ನು ಅವುಗಳ ಬದುಕನ್ನು ಗೌರವಿಸುವ ಕೆಲಸ ನಮ್ಮಿಂದಾಗಬೇಕು. ಆಗ ಮಾತ್ರ ಭೂಮಿಯಲ್ಲಿ ಬದುಕಲು ನಾವು ಅರ್ಹರಾಗುತ್ತೇವೆ...

ಅಷ್ಟವಿಧ ನಾಯಕಿಯರ ಕಥನ

● ಕೆ. ರಾಮಮೂರ್ತಿರಾವ್, ಮೈಸೂರು

ವಿದುಷಿ ಸಿ.ಎನ್. ಅನಿತಾರವರು ಮೈಸೂರಿನ ಓರ್ವ ನೃತ್ಯಗುರುವಾಗಿ, ಸಂಯೋಜಕಿಯಾಗಿ, ಸಂಘಟಕಿಯಾಗಿ ಆ ಕ್ಷೇತ್ರದಲ್ಲಿ ತಮ್ಮದೇ ಛಾಪು ಒತ್ತಿದ್ದಾರೆ. 'ನೃತ್ಯ ವಿದ್ಯಾಪೀಠ' ಎಂಬ ಸಂಸ್ಥೆಯನ್ನು ಹುಟ್ಟುಹಾಕಿರುವ ಇವರು, ಇತ್ತೀಚೆಗೆ ಮೈಸೂರಿನ ಕಲಾಮಂದಿರದಲ್ಲಿ ಸಂಸ್ಥೆಯ ಹದಿನಾರನೆಯ ವಾರ್ಷಿಕ ಉತ್ಸವವನ್ನು ವ್ಯವಸ್ಥೆಗೊಳಿಸಿದ್ದರು. ಹಲವು ಉತ್ತಮಿಕೆಗಳಿಂದಾಗಿ ಈ ಉತ್ಸವವು ಪ್ರಶಂಸೆಗೆ ಪಾತ್ರವಾಯಿತು.

ಮೊದಲ ಒಂದು ಗಂಟೆಯ 'ನರ್ತನ ವೃಕ್ಷಾವಳಿ' ಶೀರ್ಷಿಕೆಯಡಿ, ಮುಂದೆ ನೃತ್ಯ ಕ್ಷೇತ್ರದ ವೃಕ್ಷಗಳಾಗಬಲ್ಲ ಚಿಗುರು ಪ್ರತಿಭೆಗಳ ನೃತ್ಯ ಪ್ರದರ್ಶನ ಏರ್ಪಡಿಸಿದ್ದು ಅದರಲ್ಲಿ ಭಾಗವಹಿಸಿದ್ದ ಎಲ್ಲಾ ಪುಟಾಣಿಗಳಲ್ಲಿದ್ದ ಪ್ರತಿಭೆ, ಪ್ರೌಢತೆ, ಉತ್ಸಾಹ ಮನಸೆಳೆಯಿತು. ವೇದಿಕೆಯ ಮೇಲಿನ ಅವರ ಚಲನೆಗಳಲ್ಲಿ ಕಂಡ ಹೊಂದಾಣಿಕೆ, ಲಯಕ್ಕೆ ಅನುಗುಣವಾದ ಅವರ ಹೆಜ್ಜೆಗಳ ನಾದ, ಹೆಜ್ಜೆಯ ನಿನಾದ ಈ ಎಲ್ಲದರ ಮಿಳಿತ ಮುದ ನೀಡಿತು.

ಅದಾದ ನಂತರ 'ಅಷ್ಟವಿಧ ನಾಯಕಿಯರ ಕಥನ' ಎಂಬ ಶೀರ್ಷಿಕೆಯಡಿ ಸುಮಾರು 16 ಮಂದಿ ಕಲಾವಿದೆಯರು ಪ್ರದರ್ಶಿಸಿದ ಶೃಂಗಾರ ಪ್ರಧಾನ ನಾಯಕೀಭಾವವುಳ್ಳ ನೃತ್ಯರೂಪಕ ವಿಷಯಾತ್ಮಕವಾಗಿದ್ದು ಎಲ್ಲರ ಮೆಚ್ಚುಗೆಗಳಿಸಿತು. ನೃತ್ಯದಲ್ಲಿ ಶೃಂಗಾರ ರಸಕ್ಕೆ ಮಹತ್ವದ ಸ್ಥಾನ. ನವರಸಗಳಲ್ಲಿ ಶೃಂಗಾರವೇ ಪ್ರಧಾನ. ಪ್ರೇಮವೇ ಜೀವನದ ತಿರುಳು. ಪರಮಾತ್ಮನೇ ಪ್ರೇಮ ಸ್ವರೂಪನು. ಮಾನವನು ಭಗವಂತನಲ್ಲಿ ಇಟ್ಟಿರುವ ಪ್ರೇಮವೂ, ಸ್ತ್ರೀಯು ಪ್ರಿಯಕರನಲ್ಲಿ ಇಟ್ಟಿರುವ ಪ್ರೇಮವೂ ಒಂದೇ ಆಗಿದೆ ಎಂದು ಉಪನಿಷತ್ತು ಹೇಳಿದೆ. ಈ ನಿಟ್ಟಿನಲ್ಲಿ ಹಲವಾರು ಸಂತರು, ಭಕ್ತರು, ಕವಿವರೇಣ್ಯರು ದೇವರನ್ನೇ ಸ್ತುತಿಸಿ ತಮ್ಮನ್ನೇ ದೇವರ ಪ್ರಿಯತಮೆ ಎಂದು ಭಾವಿಸಿ ಪರಮಾತ್ಮನೊಡನೆ ಐಕ್ಯ ಹೊಂದುವ ಆಶಯವುಳ್ಳ ಶೃಂಗಾರ ಮಹಾಕಾವ್ಯಗಳನ್ನೇ ಬರೆದಿದ್ದಾರೆ.

ಶೃಂಗಾರರಸದ ಉತ್ಪತ್ತಿಗೆ ಅಲ್ಲಿ ನಾಯಕ-ನಾಯಕಿ ಭಾವ ಇರಲೇಬೇಕು. ನಾಯಕನಿಗೆ ಸಂಬಂಧಿಸಿದಂತೆ ನಾಯಕಿಯ ಭಾವಗಳು ಸಂದರ್ಭಕ್ಕೆ ತಕ್ಕಂತೆ ಬದಲಾಗುತ್ತಿರುತ್ತದೆ. ಅದನ್ನು ಲಾಕ್ಷಣಿಕರು ಅಷ್ಟವಿಧ ನಾಯಕಿ ಭಾವಗಳೆಂದು ವಿವರಿಸಿದ್ದಾರೆ. ವಾಸಕಸಜ್ಜಾ, ವಿರಹೋತ್ಕಂಠಿತಾ, ವಿಪ್ರಲಬ್ಧಾ, ಖಂಡಿತಾ, ಕಲಹಾಂತರಿತಾ, ಅಭಿಸಾರಿಕಾ, ಪ್ರೋಷಿತಪ್ರಿಯಾ ಹಾಗೂ ಸ್ವಾಧೀನ ಪತಿಕಾ ಎಂಬ ಈ ನಾಯಕಿಯ ಎಂಟೂ ಅವಸ್ಥೆಗಳನ್ನು ಮೊದಲು ಒಬ್ಬೊಬ್ಬ ಕಲಾವಿದೆ ಹಿನ್ನೆಲೆಯ ಗದ್ಯಪಾಠ್ಯಕ್ಕನುಗುಣವಾಗಿ ತಮ್ಮ ಆಂಗಿಕಾಭಿನಯದಲ್ಲಿ ವಿವರಿಸಿ ಅನಂತರ ಅದನ್ನು ಸಂಚಾರೀ ಭಾವಗಳೊಂದಿಗೆ ನೃತ್ಯ ಮಾಧ್ಯಮದ ಮೂಲಕ ಎಲ್ಲರಿಗೂ ಅರ್ಥವಾಗುವಂತೆ ಪ್ರದರ್ಶಿಸಿದ್ದು ಮನಮೋಹಕವಾಗಿತ್ತು.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ದೇಶದ ಪ್ರಜ್ಞಾವಂತ ಪ್ರಜೆಯಿವನು (4)
4. ಬೇಕಾದಷ್ಟೇ ಖರ್ಚು ಮಾಡುವುದು (4)
6. ಬಾನಿನಲ್ಲಿ ಮಿನುಗುವ ತಾರೆ (3)
7. ಛಂದಸ್ಸು ಒಂದನ್ನು ನೆನಪಿಸುವ ಹೂವಾಡಿಗಿತ್ತಿ (3)
10. ನಾಕ ತೋರಿಸುವ ಮುಖಂಡ (3)
11. ಅರಸನಿಗೆ ಮಾಡುವ ಸೇವೆ (5)
12. ಬಹಳ ಕೆಟ್ಟವನು (3)
14. ಪಕ್ಷದ ಹತ್ತನೆಯ ದಿನ (3)
18. ಹಾಡುವಿಕೆಗೆ ಮತ್ತೊಂದು ಹೆಸರು (3)
19. ಗೆಳೆಯ ಎನ್ನುವ ಇನ್ನೊಂದು ಪದವಿದು (4)
20. ಕಾಳಿದಾಸನಿಗಿದ್ದ ಬಿರುದು (4)

ಮೇಲಿಂದ ಕೆಳಕ್ಕೆ

2. ಮನಸ್ಸಿನಲ್ಲಿ ಹುಟ್ಟಿಕೊಂಡ ಗೊಂದಲ (4)
3. ಚಿನ್ನಕ್ಕೆ ಮತ್ತೊಂದು ಹೆಸರು ಯಾವ ಕಡೆಯಿಂದ ನೋಡಿದರೂ ಒಂದೇ (3)
4. ಗೆಳೆತನಕ್ಕೆ ಪರ್ಯಾಯಪದ (3)
5. ಗದ್ದೆಯಲ್ಲಿ ಮಾಡುವ ಸಾಗುವಳಿ (4)
8. ಮನಸ್ಸಿಗೆ ಚಿಂತೆಯಿಲ್ಲದ ಸ್ಥಿತಿ (3)
9. ಹೆದರಿಕೆ ಅಥವಾ ಚಳಿಗೆ ಉಂಟಾದ ನಡುಕ (3)
10. ತ್ರಿಲೋಕ ಸಂಚಾರಿಯಾದ ಮುನಿವರ್ಯ (3)
13. ಶಿವನ ಮತ್ತೊಂದು ಹೆಸರಿನಿಂದ ತೊಡಗಿರುವ ಒಂದು ಬಗೆಯ ತಂತಿವಾದ್ಯ (4)
15. ಬಗೆಬಗೆಯ ಆಯುಧಗಳನ್ನಿಡುವ ಕಟ್ಟಡ (4)
16. ಈ ಸಂಬಳ ಪರರಿಗೂ ಸಿಕ್ಕೀತು (3)
17. ವಿನಾಯಕನ ಮತ್ತೊಂದು ಹೆಸರಿದು (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1.ನಾಗರಿಕ 4.ಮಿತವ್ಯಯ 6.ನಕ್ಷತ್ರ 7.ಮಾಲಿನಿ 10.ನಾಯಕ 11.ರಾಜೋಪಚಾರ 12.ದುರುಳ 14.ದಶಮಿ 18.ಗಾಯನ 19.ಗೆಣೆಕಾರ 20.ಕವಿರತ್ನ

ಮೇಲಿಂದ ಕೆಳಕ್ಕೆ
2.ಗಲಿಬಿಲಿ 3.ಕನಕ 4.ಮಿತ್ರತ್ವ 5.ವ್ಯವಸಾಯ 8.ನಿರಾಳ 9.ಕಂಪನ 10.ನಾರದ 13.ರುದ್ರವೀಣೆ 15.ಶಸ್ತ್ರಾಗಾರ 16.ಪಗಾರ 17.ಬೆನಕ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆಲಿನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಢಾಕಾ: ಎರಡು ಪಂದ್ಯ ಸ್ಥಳಾಂತರ

ಢಾಕಾ: ಭದ್ರತಾ ದೃಷ್ಟಿಯಿಂದ ಮಂಗಳವಾರದ ಒಳಗಾಗಿ ತಮ್ಮ ತಂಡ ಆಡುವ ಟಿ20 ವಿಶ್ವಕಪ್ ಪಂದ್ಯಗಳನ್ನು ಭಾರತ ಹೊರತುಪಡಿಸಿ ಬೇರೆ ಮೈದಾನಗಳಿಗೆ ಸ್ಥಳಾಂತರಿಸುವಂತೆ ಬಾಂಗ್ಲಾ ಕ್ರಿಕೆಟ್ ಬೋರ್ಡ್ ಐಸಿಸಿಗೆ ಮಾಡಿದ್ದ ಮನವಿಗೆ ಐಸಿಸಿ ಪ್ರತಿಕ್ರಿಯಿಸಿದೆ. ಕೊಲ್ಕತ್ತ ಹಾಗೂ ಮುಂಬೈನಲ್ಲಿ ಆಯೋಜನೆಗೊಂಡಿರುವ ಪಂದ್ಯಗಳನ್ನು ಚೆನ್ನೈ ಮತ್ತು ತಿರುವನಂತಪುರದಲ್ಲಿ ಆಡುವಂತೆ ಸೂಚನೆ ನೀಡಿದೆ ಎಂದು ವರದಿಯಾಗಿದೆ. ಬಾಂಗ್ಲಾದೇಶದಲ್ಲಿ ಅಲ್ಪ ಸಂಖ್ಯಾತ ಹಿಂದೂಗಳ ಮೇಲೆ ದಾಳಿಗಳು ನಡೆದ ಬಳಿಕ ಬಿಸಿಸಿಐ ಸಲಹೆಯ ಮೇರೆಗೆ, ಇಂಡಿಯನ್ ಪ್ರೀಮಿ ಯರ್ ಲೀಗ್‌ನಲ್ಲಿ ಕೊಲ್ಕತ್ತಾ ನೈಟ್ ರೈಡರ್ಸ್ ತಂಡದ ಪರ ಆಡಲು 19.20 ಕೋಟಿಗೆ ಆಯ್ಕೆಯಾಗಿದ್ದ ಮುಸ್ತಾಫಿಜುರ್ ರೆಹಮಾನ್ ಅವರನ್ನು ತಂಡದಿಂದ ಕೈಬಿಡಲಾಯಿತು, ಇದಾದ ಬಳಿಕ ಬಾಂಗ್ಲಾ ತಂಡ ಭಾರತದಲ್ಲಿ ಕ್ರಿಕೆಟ್ ಆಡದಿರಲು ನಿರ್ಧರಿಸಿತ್ತು.

ಕೆ.ಸಿ ಕಾರಿಯಪ್ಪ ಕ್ರಿಕೆಟ್‌ಗೆ ವಿದಾಯ

ಬೆಂಗಳೂರು: ದೇಶಿ ಕ್ರಿಕೆಟ್ ಹಾಗೂ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಖ್ಯಾತ ಲೆಗ್ ಸ್ಪಿನ್ನರ್ ಕೆ.ಸಿ ಕಾರಿಯಪ್ಪ ಅವರು ಸೋಮವಾ ಭಾರತೀಯ ಕ್ರಿಕೆಟ್‌ಗೆ ಹಠಾತ್ ವಿದಾಯ ಹೇಳಿದ್ದಾರೆ. 31ರ ವಯಸ್ಸಿನ ಅವರು ಸಾಮಾಜಿಕ ಮಾಧ್ಯಮದಲ್ಲಿ ಹೃದಯಸ್ಪರ್ಶಿ ಪೋಸ್ಟ್ ಮೂಲಕ ಈ ಸುದ್ದಿಯನ್ನು ಹಂಚಿಕೊಂಡಿದ್ದಾರೆ. 2015ರಲ್ಲಿ ಕೆ.ಸಿ ಕಾರಿಯಪ್ಪ ಅವರು ಕೋಲ್ಕತಾ ನೈಟ್ ರೈಡರ್ಸ್ ತಂಡದ ಪರ ಆಡುವ ಮೂಲಕ ಐಪಿಎಲ್ ಟೂರ್ನಿಗೆ ಪದಾರ್ಪಣೆ ಮಾಡಿದ್ದರು. ಅವರನ್ನು ಅಂದು ಕೋಲ್ಕತಾ ಫ್ರಾಂಚೈಸಿ 2.4 ಕೋಟಿ ರು. ಗಳಿಗೆ ಖರೀದಿಸಿತ್ತು. 2017 ಮತ್ತು 2018ರ ಆವೃತ್ತಿಗಳಲ್ಲಿ ಅವರು ಪಂಜಾಬ್ ಕಿಂಗ್ಸ್ ಪರ ಆಡಿದ್ದರು. ನಂತರ 2019ಕ್ಕೆ ಪುನಃ ಕೋಲ್ಕತಾ ನೈಟ್ ರೈಡರ್ಸ್‌ಗೆ ಮರಳಿದ್ದರು. 2021ರಿಂದ 2023ರವರೆಗೆ ಅವರು ರಾಜಸ್ಥಾನ್ ರಾಯಲ್ಸ್ ತಂಡದ ಪರ ಆಡಿದ್ದರು.

ವಿಜಯ್ ಹಜಾರೆ ಟ್ರೋಫಿ | ಮತ್ತೆ ಅಬ್ಬರಿಸಿದ ಪಡಿಕ್ಕಲ್, ಕರುಣ್ | ಮುಂಬೈಗೆ ಸೋಲು

ಸೆಮಿಫೈನಲ್‌ಗೆ ಕರ್ನಾಟಕ ಲಗ್ಗೆ

ಬೆಂಗಳೂರು: ವಿಜಯ್ ಹಜಾರೆ ಏಕದಿನ ಟೂರ್ನಿಯಲ್ಲಿ ಕರ್ನಾಟಕ ತಂಡವು ಸೆಮಿಫೈನಲ್‌ಗೆ ಲಗ್ಗೆಯಿಡುವಲ್ಲಿ ಯಶಸ್ವಿಯಾಗಿದೆ. ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮುಂಬೈ ವಿರುದ್ಧ ರಾಜ್ಯ ತಂಡವು ವಿಜೆಡಿ ನಿಯಮದನ್ವಯ 55 ರನ್‌ಗಳ ಜಯಭೇರಿ ಬಾರಿಸುವ ಮೂಲಕ ಸೆಮೀಸ್ ಪ್ರವೇಶಿಸಿದೆ. ಪಂದ್ಯಕ್ಕೆ ಮಂದ ಬೆಳಕು ಹಾಗೂ ಮಳೆ ಅಡ್ಡಿ ಪಡಿಸಿದ್ದರಿಂದ ಫಲಿತಾಂಶಕ್ಕೆ ವಿಜೆಡಿ ನಿಯಮದ ಮೊರೆ ಹೋಗಬೇಕಾಯಿತು.

ಇಲ್ಲಿನ ಬಿಸಿಸಿಐ ಸೆಂಟರ್ ಆಫ್ ಎಕ್ಸಲೆನ್ಸ್ ಮೈದಾನದಲ್ಲಿ ಸೋಮವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಗೆಲ್ಲಲು 255 ರನ್‌ಗಳ ಗುರಿಯನ್ನು ಬೆನ್ನತ್ತಿದ ಕರ್ನಾಟಕ ತಂಡವು ಉತ್ತಮ ಆರಂಭ ಪಡೆಯಿತು. ನಾಯಕ ಮಾಯಾಂಕ್ ಅಗರ್ವಾಲ್ ಹಾಗೂ ದೇವದತ್ ಪಡಿಕ್ಕಲ್ ಮೊದಲ ವಿಕೆಟ್‌ಗೆ 44 ರನ್‌ಗಳ ಜತೆಯಾಟವಾಡಿದರು. ಮಾಯಾಂಕ್ 12 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಎರಡನೇ ವಿಕೆಟ್‌ಗೆ ಜತೆಯಾದ ಕರುಣ್ ನಾಯರ್ ಹಾಗೂ ದೇವದತ್ ಪಡಿಕ್ಕಲ್ ಮುಂಬೈ ಬೌಲರ್‌ಗಳನ್ನು ದಿಟ್ಟತನದಿಂದ ಎದುರಿಸಿದರು. ಎರಡನೇ ವಿಕೆಟ್‌ಗೆ ಈ ಜೋಡಿ ಮುರಿಯದ 143 ರನ್‌ಗಳ ಜತೆಯಾಟವಾಡುವ ಮೂಲಕ ರಾಜ್ಯ ತಂಡಕ್ಕೆ ಆಸರೆಯಾದರು. ಭರ್ಜರಿ ಫಾರ್ಮ್‌ನಲ್ಲಿರುವ ದೇವದತ್ ಪಡಿಕ್ಕಲ್ 95 ಎಸೆತಗಳನ್ನು ಎದುರಿಸಿ 11 ಬೌಂಡರಿ ಸಹಿತ ಅಜೇಯ 81 ರನ್ ಸಿಡಿಸಿದರು. ಪಡಿಕ್ಕಲ್‌ಗೆ ಉತ್ತಮ ಜತೆ ನೀಡಿದ ಅನುಭವಿ ಬ್ಯಾಟರ್ ಕರುಣ್ ನಾಯರ್ 80 ಎಸೆತಗಳನ್ನು ಎದುರಿಸಿ 11 ಬೌಂಡರಿ ಸಹಿತ 74 ರನ್ ಬಾರಿಸಿ ಅಜೇಯರಾಗುಳಿದರು

ಫಲಿತಾಂಶಕ್ಕೆ ವಿಜೆಡಿ ನಿಯಮಕ್ಕಾಗಿ ಮೊರೆ: ಕರ್ನಾಟಕ ತಂಡವು 33 ಓವರ್ ಅಂತ್ಯದ ವೇಳೆಗೆ ಕೇವಲ ಒಂದು ವಿಕೆಟ್ ಕಳೆದುಕೊಂಡು 187 ರನ್ ಬಾರಿಸಿ ಜಯದತ್ತ ದಾಪುಗಾಲು ಹಾಕುತ್ತಿತ್ತು, ಆದರೆ ಈ ವೇಳೆ ಪಂದ್ಯಕ್ಕೆ ಬ್ಯಾಡ್‌ಲೈಟ್ ಅಡ್ಡಿಯಾಯಿತು. ಆಗ ಕರ್ನಾಟಕ ತಂಡಕ್ಕೆ ಸೆಮಿಫೈನಲ್ ಪ್ರವೇಶಿಸಲು 102 ಎಸೆತಗಳಲ್ಲಿ ಕೇವಲ 68 ರನ್‌ಗಳ ಅಗತ್ಯವಿತ್ತು. ಆದರೆ ಬ್ಯಾಡ್‌ಲೈಟ್‌ನಿಂದಾಗಿ ಪಂದ್ಯ ಮುಂದುವರೆಸಲು ಸಾಧ್ಯವಾಗದೇ ಇದ್ದಾಗ, ಫಲಿತಾಂಶಕ್ಕಾಗಿ ದೇಶಿಯ ಕ್ರಿಕೆಟ್‌ನಲ್ಲಿ ಬಳಸುವ ವಿಜೆಡಿ ನಿಯಮದ ಮೊರೆ ಹೋಗಲಾಯಿತು, ಅದರ ಪರಿಣಾಮವಾಗಿ ಕರ್ನಾಟಕ ತಂಡಕ್ಕೆ 55 ರನ್ ಅಂತರದ ಜಯ ಎಂದು ಘೋಷಿಸಲಾಯಿತು.

ಕರುಣ್: ಅಜೇಯ ಆಕರ್ಷಕ ಬ್ಯಾಟಿಂಗ್

ಪಡಿಕ್ಕಲ್: ಸತತ ಬ್ಯಾಟಿಂಗ್ ಯಶಸ್ಸು

ಇನ್ನು ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟ್ ಮಾಡಿದ ಮುಂಬೈ ತಂಡವು ಉತ್ತಮ ಆರಂಭ ಪಡೆಯಲು ವಿಫಲವಾಯಿತು. ಕೇವಲ 60 ರನ್ ಗಳಿಸುವಷ್ಟರಲ್ಲಿ ಅಗ್ರಕ್ರಮಾಂಕದ ನಾಲ್ಕು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು.

ಮಧ್ಯಮ ಕ್ರಮಾಂಕದಲ್ಲಿ ಶಮ್ಸ್ ಮುಲಾನಿ ಆಕರ್ಷಕ 86 ರನ್ ಸಿಡಿಸುವ ಮೂಲಕ ತಂಡಕ್ಕೆ ಆಸರೆಯಾದರು. 5ನೇ ವಿಕೆಟ್‌ಗೆ ಶಮ್ಸ್ ಮುಲಾನಿ ಹಾಗೂ ನಾಯಕ ಸಿದ್ದೇಶ್ ಲಾಡ್ 76 ರನ್‌ಗಳ ಜತೆಯಾಟವಾಡುವ ಮೂಲಕ ಮುಂಬೈ ತಂಡಕ್ಕೆ ಆಸರೆಯಾದರು. ಸಿದ್ದೇಶ್ ಲಾಡ್ 38 ರನ್ ಗಳಿಸಿದರು. ಸಾಯಿರಾಜ್ ಪಾಟೀಲ್ ಅಜೇಯ 33 ರನ್ ಬಾರಿಸುವ ಮೂಲಕ ತಂಡದ ಮೊತ್ತವನ್ನು 250ರ ಗಡಿ ದಾಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಕರ್ನಾಟಕ ತಂಡದ ಪರ ವಿದ್ಯಾಧರ್ ಪಾಟೀಲ್ 3 ವಿಕೆಟ್ ಕಬಳಿಸಿ ಯಶಸ್ವಿ ಬೌಲರ್ ಆಗಿ ಹೊರಹೊಮ್ಮಿದರೆ, ವಿದ್ವತ್ ಕಾವೇರಪ್ಪ ಹಾಗೂ ಅಭಿಲಾಷ್ ಶೆಟ್ಟಿ ತಲಾ ಎರಡು ವಿಕೆಟ್ ಪಡೆದರು, ಇನ್ನು ವೈಶಾಕ್ ವಿಜಯ್‌ಕುಮಾರ್ ಒಂದು ವಿಕೆಟ್ ಗಳಿಸಿದರು.

ಮಹಿಳಾ ಪ್ರೀಮಿಯರ್ ಲೀಗ್ | ಯು.ಪಿ ವಾರಿಯರ್ಸ್ ಸಾಮಾನ್ಯ ಮೊತ್ತ

ಆರ್‌ಸಿಬಿಗೆ ಭರ್ಜರಿ ಜಯ

ಮುಂಬೈ: ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟ್ವೆಂಟಿ-20 ಕ್ರಿಕೆಟ್ ಟೂರ್ನಿಯಲ್ಲಿ ಯು.ಪಿ ವಾರಿಯರ್ಸ್ ವಿರುದ್ಧ ಆರ್‌ಸಿಬಿ ಜಯಗಳಿಸಿದೆ.

ಮೊದಲು ಬ್ಯಾಟಿಂಗ್ ನಡೆಸಿದ ಯುಪಿ ವಾರಿಯರ್ಸ್ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 143 ರನ್ ಗಳಿಸಿತು. ಒಂದು ಹಂತದಲ್ಲಿ 50ಕ್ಕೆ ಐದು ವಿಕೆಟ್ ಕಳೆದುಕೊಂಡ ಯು.ಪಿ ವಾರಿಯರ್ಸ್ ಭಾರೀ ಸಂಕಷ್ಟಕ್ಕೆ ಸಿಲುಕಿತ್ತು. ಆದರೆ ಮುರಿಯದ ಆರನೇ ವಿಕೆಟ್‌ಗೆ 93 ರನ್‌ಗಳ ಜತೆಯಾಟ ಕಟ್ಟಿದ ದೀಪ್ತಿ ಶರ್ಮಾ ಹಾಗೂ ಡಿಯಾಂಡ್ರಾ ಡಾಟಿನ್ ತಂಡವನ್ನು ಸವಾಲಿನ ಮೊತ್ತ ಪೇರಿಸಲು ನೆರವಾದರು. ದೀಪ್ತಿ ಶರ್ಮಾ ಅಜೇಯ 45 ಹಾಗೂ ಡಿಯಾಂಡ್ರ ಡಾಟಿನ್ ಔಟಾಗದೆ 40 ರನ್ ಗಳಿಸಿದರು.

ಯು.ಪಿ ವಾರಿಯರ್ಸ್‌ನ ಆರಂಭಿಕ ಬ್ಯಾಟರ್ ಮೆಗ್ ಲ್ಯಾನಿಂಗ್ 21 ಬಾಲ್‌ಗಳಲ್ಲಿ 14 ರನ್ ಗಳಿಸಿದರು. ಹರ್ಲೀನ್ ಡಿಯೋಲ್ 41 ಬಾಲ್‌ಗಳಲ್ಲಿ 11 ರನ್, ಫೋಬೆ ಲಿಚ್‌ಫೀಲ್ಡ್ 11 ಬಾಲ್‌ಗಳಲ್ಲಿ 20 ರನ್ ಗಳಿಸಿದರು.

ಉಳಿದಂತೆ ಕಿರಣ್ ನವಗಿರೆ 3 ಬಾಲ್‌ಗಳನ್ನು ಎದುರಿಸಿ 5 ರನ್ ಮಾಡಿದರೆ, ಶ್ವೇತಾ ಸೆಹ್ರಾವತ್ ಯಾವುದೇ ರನ್ ಗಳಿಸದೆ ಔಟ್ ಆಗಿದ್ದರು.

ಸ್ಮೃತಿ ಮಂದಾನ ನಾಯಕತ್ವದ ಆರ್‌ಸಿಬಿ ತಂಡವು ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಭಾನುವಾರ, ಮುಂಬೈ ಇಂಡಿಯನ್ ವಿರುದ್ಧ 3 ವಿಕೆಟ್‌ಗಳ ರೋಚಕ ಗೆಲುವು ದಾಖಲಿಸಿತ್ತು.

ಗುಜರಾತ್ ಜೈಂಟ್ಸ್ ವಿರುದ್ಧದ ಮೊದಲ ಪಂದ್ಯದಲ್ಲಿ ಯುಪಿ ವಾರಿಯರ್ಸ್ ತಂಡವು 10 ರನ್‌ಗಳ ಸೋಲು ಅನುಭವಿಸಿತ್ತು. ಮೊದಲ ಪಂದ್ಯದಲ್ಲಿ ಆಡಿದ್ದ ತಂಡವನ್ನೇ ಗುಜರಾತ್ ಮತ್ತೆ ಕಣಕ್ಕಿಳಿಸಿದೆ.

ಭಾನುವಾರದ ಏಕದಿನ ಪಂದ್ಯ ವೇಳೆ ವಾಷಿಂಗ್ಟನ್ ಸುಂದರ್‌ಗೆ ಗಾಯ | ದೆಹಲಿ ಬ್ಯಾಟ್ಸ್‌ಮನ್‌ಗೆ ಅವಕಾಶ

ಸುಂದರ್ ಸ್ಥಾನಕ್ಕೆ ಬದೋನಿ ಆಯ್ಕೆ

ದೆಹಲಿ: ನ್ಯೂಜಿಲೆಂಡ್ ವಿರುದ್ಧದ ಮೂರು ಪಂದ್ಯಗಳ ಸರಣಿಯ ಉಳಿದ ಪಂದ್ಯಗಳಿಂದ ವಾಷಿಂಗ್ಟನ್ ಸುಂದರ್ ಗಾಯದ ಕಾರಣ ಹೊರಗುಳಿದ ಕಾರಣ ದೆಹಲಿ ಬ್ಯಾಟ್ಸ್‌ಮನ್ ಆಯುಷ್ ಬದೋನಿ ಮೊದಲ ಬಾರಿಗೆ ಏಕದಿನ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಭಾನುವಾರ ವಡೋದರಾದ ಬಿಸಿಎ ಕ್ರೀಡಾಂಗಣದಲ್ಲಿ ನಡೆದ ಮೊದಲ ಏಕದಿನ ಪಂದ್ಯದಲ್ಲಿ ಬೌಲಿಂಗ್ ಮಾಡುವಾಗ ಸುಂದರ್ ಅವರ ಎಡ ಕೆಳ ಪಕ್ಕೆಲುಬಿನ ಪ್ರದೇಶದಲ್ಲಿ ತೀವ್ರ ಅಸ್ವಸ್ಥತೆ ಉಂಟಾಗಿದೆ ಎಂದು ವರದಿಯಾಗಿದ್ದು, ಅವರನ್ನು ಮತ್ತಷ್ಟು ಸ್ಕ್ಯಾನ್‌ಗೆ ಒಳಪಡಿಸಿ, ನಂತರ ಬಿಸಿಸಿಐ ವೈದ್ಯಕೀಯ ತಂಡವು ಗಾಯದ ವ್ಯಾಪ್ತಿ ಯನ್ನು ನಿರ್ಣಯಿಸಲು ತಜ್ಞರ ಅಭಿಪ್ರಾಯವನ್ನು ಪಡೆಯಲಿದೆ.

ಪಂದ್ಯದ ಸಮಯದಲ್ಲಿ ಗಾಯಗೊಂಡು ಕೇವಲ ಐದು ಓವರ್‌ಗಳನ್ನು ಬೌಲಿಂಗ್ ಮಾಡಿದ ನಂತರ ಪೆವಿಲಿಯನ್‌ಗೆ ಮರಳಿದರು. ನ್ಯೂಜಿಲೆಂಡ್‌ನ ಉಳಿದ ಇನ್ನಿಂಗ್ಸ್‌ಗೆ ಅವರು ಮೈದಾನಕ್ಕೆ ಇಳಿಯಲಿಲ್ಲ, ಅದರ ಪರಿಣಾಮವಾಗಿ ಒಬ್ಬ ಭಾರತೀಯ ಬೌಲರ್ ಮಾತ್ರ ತಮ್ಮ 10 ಓವರ್‌ಗಳ ಪೂರ್ಣ ಕೋಟಾವನ್ನು ಪೂರ್ಣಗೊಳಿಸಿದರು.

ಉಳಿದ ಎರಡು ಏಕದಿನ ಪಂದ್ಯದಿಂದ ಸುಂದರ್ ಹೊರಗುಳಿದಿರುವುದರಿಂದ, ಭಾರತೀಯ ಆಯ್ಕೆದಾರರು ಆಯುಷ್ ಬದೋನಿ ಅವರನ್ನು ಬದಲಿಯಾಗಿ ಹೆಸರಿಸಿದ್ದಾರೆ. ಎರಡನೇ ಏಕದಿನ ಪಂದ್ಯವನ್ನು ಆಯೋಜಿಸಲಿರುವ ರಾಜ್‌ಕೋಟ್‌ನಲ್ಲಿ ಬದೋನಿ ತಂಡದೊಂದಿಗೆ ಆಡಲಿದ್ದಾರೆ

ಈ ತವರಿನ ಋತುವಿನಲ್ಲಿ ಗಾಯದಿಂದ ಹೊರಗುಳಿದ ಮೂರನೇ ಭಾರತೀಯ ಆಟಗಾರ ಸುಂದರ್ ಎನಿಸಿಕೊಂಡರು. ವಿಕೆಟ್ ಕೀಪರ್-ಬ್ಯಾಟರ್ ರಿಷಭ್ ಪಂತ್ ಕಳೆದ ವಾರ ಗಾಯದ ನಂತರ ಏಕದಿನ ಸರಣಿಯಿಂದ ಹೊರಗುಳಿದಿದ್ದರು, ತಿಲಕ್ ವರ್ಮಾ ತೊಡೆಸಂದು ಗಾಯದಿಂದಾಗಿ ಶಸ್ತ್ರಚಿಕಿತ್ಸೆಯ ಅಗತ್ಯವಿರುವುದರಿಂದ ಮೊದಲ ಮೂರು ಟಿ 20 ಪಂದ್ಯಗಳಿಂದ ಹೊರಗುಳಿಯಲಿದ್ದಾರೆ.

ಅಂತರ ವಿ.ವಿ ಅಥ್ಲೆಟಿಕ್ ಕೂಟ| ಮಹಿಳೆಯರ 10 ಸಾವಿರ ಮೀ. ಓಟದಲ್ಲಿ ಮಂಗಳೂರು ವಿ.ವಿ.ಗೆ ಪದಕ

ವಿ.ವಿ ಅಥ್ಲೆಟಿಕ್: ನಿರ್ಮಲಾಗೆ ಚಿನ್ನ

ಮಂಗಳೂರು: ಪ್ರತಿಸ್ಪರ್ಧಿಯನ್ನು ಒಂದು ಸೆಕೆಂಡು ಅಂತರದಲ್ಲಿ ಹಿಂದಿಕ್ಕಿದ ಮಂಗಳೂರು ವಿ.ವಿ.ಯ ನಿರ್ಮಲಾ, ಇಲ್ಲಿನ ಮೂಡುಬಿದಿರೆಯ ಸ್ವರಾಜ್ಯ ಮೈದಾನದಲ್ಲಿ ಸೋಮವಾರ ನಡೆದ ಸ್ಪರ್ಧೆಯಲ್ಲಿ ನಡೆದ ಅಂತರ ವಿ.ವಿ ಅಥ್ಲೆಟಿಕ್ ಕೂಟದ ಮಹಿಳೆಯರ 10 ಸಾವಿರ ಮೀಟರ್ಸ್ ಓಟದಲ್ಲಿ ಚಿನ್ನದ ಪದಕವನ್ನು ತಮ್ಮದನ್ನಾಗಿಸಿದರು.

ನಿರ್ಮಲಾ 34 ನಿಮಿಷ 47:20 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಪುಣೆಯ ಸಾವಿತ್ರಿಭಾಯಿ ಪುಲೆ ವಿ.ವಿಯ ರವೀನಾ ವಿಜಯ್ ಗಾಯಕವಾಡ್ ಗುರಿಮುಟ್ಟಲು 34:48.7 ನಿಮಿಷ ತೆಗೆದುಕೊಂಡರು. ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ವಿ.ವಿ.ಯಅಂಜಲಿ ದೇವಿ ಕಂಚಿನ ಪದಕ ಗಳಿಸಿದರು.

ಚಾಂಪಿಯನ್‌ಶಿಪ್‌ನ ಮೊದಲ ಸ್ಪರ್ಧೆ, ಪುರುಷರ 10ಸಾವಿರ ಮೀಟರ್ಸ್ ಓಟದ ಚಿನ್ನ ಉತ್ತರಪ್ರದೇಶದ ಮಹಾತ್ಮ ಜ್ಯೋತಿಬಾ ಫುಲೆ ವಿ.ವಿ ಪಾಲಾಯಿತು. 29 ನಿಮಿಷ 19:46 ಸೆಕೆಂಡುಗಳಲ್ಲಿ ಗುರಿ ತಲುಪಿದ ಗೌರವ್ ಚಿನ್ನದ ನಗೆ ಬೀರಿದರು. ರೋಹ್ಟಕ್‌ನ ಎಂ.ಡಿ ವಿವಿಯ ಅವಕಾಶ್ (29: 19.01) ಬೆಳ್ಳಿ ಮತ್ತು ಅದಿಕವಿ ಶ್ರೀಮಹರ್ಷಿ ವಿ.ವಿಯ ಪ್ರಿನ್ಸ್ ರಾಜ್ ಯಾದವ್ ಕಂಚಿನ ಪದಕ ಗಳಿಸಿದರು.

ರಾಜಸ್ಥಾನದ ಚೂರೂ ಜಿಲ್ಲೆಯ ನಿರ್ಮಲಾ ಕಳೆದ ಬಾರಿ ಅಖಿಲ ಭಾರತ ಅಂತರ ವಿ.ವಿ ಅಥ್ಲೆಟಿಕ್ಸ್‌ನಲ್ಲಿ ಬಿಕಾನೇರ್‌ನ ಮಹಾರಾಜ್ ಗಂಗಾಸಿಂಗ್ ವಿ.ವಿ ಪರವಾಗಿ ಕಣಕ್ಕಿಳಿದು 5 ಸಾವಿರ ಮೀಟರ್ಸ್ ಓಟದಲ್ಲಿ ಬೆಳ್ಳಿ ಗೆದ್ದಿದ್ದರು.

ದೇಶದ ಅಗ್ರ 16 ವಿ.ವಿಗಳ ಮಹಿಳಾ ಕ್ರೀಡಾಪಟುಗಳು ಭಾಗಿ

ಪಿಇಎಸ್‌ನಲ್ಲಿ ಅಂತರ ವಿ.ವಿ ಬ್ಯಾಡ್ಮಿಂಟನ್

ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯ ವತಿಯಿಂದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಮಹಿಳಾ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ ಹಮ್ಮಿಕೊಳ್ಳಲಾಗಿತ್ತು. ದೇಶದ ಅಗ್ರ 16 ವಿಶ್ವವಿದ್ಯಾಲಯಗಳು ಹಾಗೂ ಉನ್ನತ ಶ್ರೇಯಾಂಕಿತ ಕ್ರೀಡಾಪಟುಗಳು ಸೇರಿದಂತೆ 90ಕ್ಕೂ ಹೆಚ್ಚು ಮಹಿಳಾ ಆಟಗಾರರು ಭಾಗವಹಿಸಿದ್ದರು.

ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಮಹಿಳಾ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ ಕಾರ್ಯಕ್ರಮವನ್ನು ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಜವಾಹರ್ ದೊರೆಸ್ವಾಮಿ ಅವರು ಉದ್ಘಾಟಿಸಿ, ಬಳಿಕ ಮಾತನಾಡಿದರು.

ಭಾರತದಲ್ಲಿ ಮಹಿಳಾ ಬ್ಯಾಡ್ಮಿಂಟನ್‌ಗೆ ನೀಡಿದ ಕೊಡುಗೆಗಾಗಿ ಏಕಲವ್ಯ ಪ್ರಶಸ್ತಿ ಪುರಸ್ಕೃತೆ ಮತ್ತು ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರ್ತಿ ಅಶ್ವಿನಿ ಭಟ್ ಅವರನ್ನು ಕಾರ್ಯಕ್ರಮದಲ್ಲಿ ಗೌರವಿಸಿ, ಸನ್ಮಾನಿಸಲಾಯಿತು.

ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಡಾ. ಜೆ. ಸೂರ್ಯಪ್ರಸಾದ್, ವಿಶೇಷ ಅಧಿಕಾರಿ ಪ್ರೊ. ಎಂ.ಎಸ್. ವಿನಯ್, ಎಐಯು ವೀಕ್ಷಕ ಡಾ. ಅಜಿತ್ ಮೋಹನ್ ಕೆ.ಆರ್. ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಈ ಕಾರ್ಯಕ್ರಮವು ವಿಶ್ವವಿದ್ಯಾಲಯ ಮಟ್ಟದಲ್ಲಿ ಮಹಿಳಾ ಬ್ಯಾಡ್ಮಿಂಟನ್ ಅನ್ನು ಉತ್ತೇಜಿಸುವಲ್ಲಿ ಪ್ರಮುಖ ಮೈಲುಗಲ್ಲನ್ನು ಗುರುತಿಸುತ್ತದೆ ಮತ್ತು ಕ್ರೀಡೆ ಮತ್ತು ಕ್ರೀಡಾಪಟು ಅಭಿವೃದ್ಧಿಯಲ್ಲಿ ಶ್ರೇಷ್ಠತೆಗೆ ಪಿಇಎಸ್ ವಿಶ್ವವಿದ್ಯಾಲಯದ ಬಲವಾದ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಪಿಇಎಸ್ ವಿಶ್ವವಿದ್ಯಾಲಯ ತಿಳಿಸಿದೆ.

ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರ್ತಿ ಅಶ್ವಿನಿ ಭಟ್ ಅವರನ್ನು ಪಿಇಎಸ್ ವಿ.ವಿ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ವಿಟಾಕೀಸ್

ಥ್ರಿಲ್ಲರ್ ಸ್ಟೋರಿಯ ಡಿಯರ್ ಹಸ್ಬೆಂಡ್

ಗುರುರಾಜ ಕುಲಕರ್ಣಿ ನಿರ್ದೇಶನದ ನೂತನ ಚಿತ್ರದ ಟೈಟಲ್ ಟೀಸರ್ ಬಿಡುಗಡೆಯಾಗಿದೆ. ನಟ ಕಿಚ್ಚ ಸುದೀಪ್, ಡಿಯರ್ ಹಸ್ಬೆಂಡ್ ಚಿತ್ರದ ಶೀರ್ಷಿಕೆ ಮತ್ತು ಟೈಟಲ್ ಟೀಸರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನಲ್ಲಿ ಮೂಡಿಬರುತ್ತಿದ್ದು ಈ ಚಿತ್ರದಲ್ಲಿ ಸೂರಜ್ ಗೌಡ, ಶರಣ್ಯಾ ಶೆಟ್ಟಿ ಹಾಗೂ ಪ್ರವೀಣ್ ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಕುಮಾರ್ ಬಂಗಾರಪ್ಪ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ನಾವು ಚಿತ್ರರಂಗಕ್ಕೆ ಹೊಸಬರಾಗಿ ಬಂದಾಗ, ಅನೇಕ ಹಿರಿಯರು ನಮ್ಮನ್ನು ಪ್ರೋತ್ಸಾಹಿಸಿ, ಬೆನ್ನು ತಟ್ಟಿದ್ದರು. ಅದೇ ಕೆಲಸವನ್ನು ನಾವು ಈಗ ಹೊಸಬರಿಗೆ ಮಾಡುತ್ತಿದ್ದೇವೆ. ಅಂತಿಮವಾಗಿ ಕನ್ನಡ ಚಿತ್ರರಂಗ ಬೆಳೆಯಬೇಕು. ಇಡೀ ಚಿತ್ರತಂಡಕ್ಕೆ ಶುಭವಾಗಲಿ ಎಂದು ಸುದೀಪ್ ಆಶಿಸಿದರು.

ನಿರ್ದೇಶಕ ಗುರುರಾಜ ಕುಲಕರ್ಣಿ ಹೇಳುತ್ತಿರುವ ಕಥೆ ನಿಜಕ್ಕೂ ಅದ್ಭುತವಾಗಿದೆ. ನಾನು ಈ ಸಿನಿಮಾದಲ್ಲಿ ವಿಭಿನ್ನವಾದ ಪಾತ್ರದಲ್ಲಿ ನಟಿಸುತ್ತಿದ್ದು, ಈ ಸಿನಿಮಾದ ಕಥೆ, ನನ್ನ ಪಾತ್ರ ಪ್ರೇಕ್ಷಕರಿಗೆ ಇಷ್ಟವಾಗಲಿದೆ ಎಂಬ ಭರವಸೆಯಿದೆ ಎಂದು ಪ್ರವೀಣ್ ಹೇಳಿದರು.

ಇದು ಇಂದಿನ ಜನರೇಶನ್‌ಗೆ ಕನೆಕ್ಟ್ ಆಗುವಂಥಹ ಯೂತ್ ಫುಲ್ ಸ್ಟೋರಿಯ ಸಿನಿಮಾ. ಇದರಲ್ಲಿ ನಾನು ವಾಸಂತಿ ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಇಂಥ ದ್ದೊಂದು ವಿಭಿನ್ನ ಕಥೆಯಾಗಿದ್ದು, ಇಂತಹ ಪಾತ್ರ ಕಲಾವಿದರಿಗೆ ಸಿಗುವುದು ಬಹಳ ಅಪರೂಪ. ಸಿನಿಮಾದ ಮೇಲೆ ಸಾಕಷ್ಟು ನಿರೀಕ್ಷೆಯಿದೆ ಎಂದು ಶರಣ್ಯಾ ಶೆಟ್ಟಿ ಸಂತಸದಿಂದ ನುಡಿದರು.ಸದ್ಯ ಡಿಯರ್ ಹಸ್ಬೆಂಡ್ ಈ ತಿಂಗಳಾಂತ್ಯಕ್ಕೆ ಶೂಟಿಂಗ್ ಆರಂಭಿಸ ಲಿದ್ದು, ಬೆಂಗಳೂರು, ಗೋವಾ ಮತ್ತಿತರ ಕಡೆಗಳಲ್ಲಿ ಶೂಟಿಂಗ್ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ಡಿಯರ್ ಹಸ್ಬೆಂಡ್ ಚಿತ್ರದ ಟೈಟಲ್ ಟೀಸರ್‌ಗೆ ಸಚಿನ್ ಬಸ್ರೂರು ಹಿನ್ನೆಲೆ ಸಂಗೀತ ಒದಗಿಸು ತ್ತಿದ್ದು, ಚಿತ್ರದ ಹಾಡು ಗಳಿಗೆ ವೀರ್ ಸಮರ್ಥ್ ಸಂಗೀತ ಸಂಯೋಜಿಸುತ್ತಿ ದ್ದಾರೆ. ಪ್ರಮೋದ್ ಮರವಂತೆ ಸಾಹಿತ್ಯ, ರಘು ನಿಡುವಳ್ಳಿ ಸಂಭಾಷಣೆ ಈ ಚಿತ್ರಕ್ಕಿದೆ. ಹರ್ಷ ಕುಮಾರ್ ಗೌಡ ಛಾಯಾಗ್ರಹಣ, ಬಿ. ಎಸ್.ಕೆಂಪರಾಜ್ ಸಂಕಲನ ನಿರ್ವಹಿಸುತ್ತಿದ್ದಾರೆ. ಜಿ9 ಕಮ್ಯುನಿಕೇಶನ್ ಅಂಡ್ ಮೀಡಿಯಾ ಹಾಗೂ ನಿರಂತರ ಪ್ರೊಡಕ್ಷನ್ಸ್ ಸಂಸ್ಥೆಯಲ್ಲಿ ಈ ಚಿತ್ರ ನಿರ್ಮಾಣವಾಗುತ್ತಿದೆ.

ಇದೊಂದು ರೊಮ್ಯಾಂಟಿಕ್-ಥ್ರಿಲ್ಲರ್ ಕಥಾಹಂದರದ ಸಿನಿಮಾ. ನಿರ್ದೇಶಕ ಗುರುರಾಜ ಕುಲಕರ್ಣಿ ಯಾವಾಗಲೂ ಸಿನಿಮಾದ ಬಗ್ಗೆಯೇ ಯೋಚಿಸುವ ವ್ಯಕ್ತಿ. ಸಿನಿಮಾದಲ್ಲಿ ಸಾಕಷ್ಟು ಅನುಭವವಿರುವಂತವರು. ಅವರು ಹೇಳಿದ ಕಥೆ ಇಷ್ಟವಾಯಿತು, ಹಾಗಾಗಿ ಅದನ್ನು ತೆರೆಮೇಲೆ ತರಲು ಮುಂದಾಗಿದ್ದೇವೆ. ಇಂದಿನ ಪ್ರೇಕ್ಷಕರಿಗೆ ಇಷ್ಟವಾಗುವಂತಹ ಕಥೆ ಇಲ್ಲಿದೆ. ಸಿನಿಮಾ ಎಲ್ಲರೂ ಮೆಚ್ಚುವಂತೆ ಮೂಡಿಬರಲಿದೆ.

-ಡಾ.ನಿರಂತರ ಗಣೇಶ್ ನಿರ್ಮಾಪಕ

ಒಂದೂವರೆ ವರ್ಷಗಳಿಂದ ಈ ಸಿನಿಮಾದ ಕಥೆ ಸಿದ್ಧಮಾಡಿ ದ್ದೇವೆ. ಕಿಚ್ಚ ಸುದೀಪ್ ಅವರ ಸಹಕಾರ ನಮ್ಮ ಚಿತ್ರಕ್ಕೆ ಸಿಕ್ಕಿರುವುದು ತುಂಬಾ ಖುಷಿಯಾಗಿದೆ. ಇಂದಿನ ಯುವಕರು ಇಷ್ಟಪಡುವಂತಹ ಕಥೆಯೊಂದನ್ನು ಈ ಸಿನಿಮಾದಲ್ಲಿ ಪ್ರೇಕ್ಷಕರ ಮುಂದೆ ತರುತ್ತಿದ್ದೇವೆ. ಪ್ರೇಕ್ಷಕರಿಗೆ ಈ ಸಿನಿಮಾ ಖಂಡಿತವಾಗಿಯೂ ಹಿಡಿಸಲಿದೆ ಎಂಬ ವಿಶ್ವಾಸವಿದೆ.

-ಗುರುರಾಜ ಕುಲಕರ್ಣಿ ನಿರ್ದೇಶಕ

ಇತ್ತೀಚಿನ ವರ್ಷಗಳಲ್ಲಿ ಕನ್ನಡದಲ್ಲಿ ಒಳ್ಳೆಯ ಕಥೆಯ, ಅದ್ಭುತ ಸಿನಿಮಾಗಳು ಮೂಡಿಬರುತ್ತಿವೆ. ಅಂಥಹ ಒಳ್ಳೆಯ ಸಿನಿಮಾಗಳ ಸಾಲಿಗೆ ಈ ಸಿನಿಮಾ ಕೂಡ ಸೇರ್ಪಡೆಯಾಗುತ್ತದೆ ಎಂಬ ವಿಶ್ವಾಸವಿದೆ. ಹೊಸಬರ ತಂಡದಲ್ಲಿ ನಾನೂ ಕೂಡ ಭಾಗವಾಗುತ್ತಿರುವುದಕ್ಕೆ ಖುಷಿಯಿದೆ.

-ಕುಮಾರ ಬಂಗಾರಪ್ಪ ನಟ

ಕಿಚ್ಚನಿಗೆ ಧನ್ಯವಾದ ತಿಳಿಸಿದ ಯಶ್

ಯಶ್ ಅಭಿನಯದ ಬಹುನಿರೀಕ್ಷಿತ ಚಿತ್ರ ಟಾಕ್ಸಿಕ್ ಮಾರ್ಚ್ 19ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ. ಸದ್ಯ ಬಿಡುಗಡೆಯಾಗಿರುವ ಚಿತ್ರದ ಟೀಸರ್ ಮಿಲಿಯನ್‌ಗಟ್ಟಲೇ ವೀಕ್ಷಣೆ ಕಂಡಿದ್ದು, ಹೊಸ ದಾಖಲೆ ಬರೆದಿದೆ. ಟಾಕ್ಸಿಕ್ ಟೀಸರ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದ್ದರು. ಚಿತ್ರರಂಗದ ದಿಗ್ಗಜರು ಟೀಸರ್‌ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಕಿಚ್ಚ ಸುದೀಪ್ ಕೂಡ ಟಾಕ್ಸಿಕ್ ಟೀಸರ್ ಮೆಚ್ಚಿ ಯಶ್‌ಗೆ ಶುಭಕೋರಿದ್ದರು. ಯಶ್‌ಗೆ ಶುಭಾಶಯಗಳು, ಅಲೆಗಳ ವಿರುದ್ಧ ಸಾಗಲು ಯಾವಾಗಲೂ ಸಮಯ ಬೇಕಾಗುತ್ತದೆ. ಈ ಹೊಸ ಹೆಜ್ಜೆ ನಿಮ್ಮನ್ನು ಅದೃಷ್ಟದ ಬಳಿ ಕೊಂಡೊಯ್ಯಲಿ. ನೀವು ನಿಮ್ಮ ಗುರಿಯನ್ನು ನಿರ್ಧರಿಸಿದ್ದೀರಿ ಎಂದು ಟ್ವೀಟ್ ಮಾಡಿದ್ದರು. ಇದಕ್ಕೆ ಪ್ರತಿಕ್ರಿಯಿಸಿರುವ ಯಶ್, ಧನ್ಯವಾದಗಳು ಸರ್. ಏಕಾಗ್ರತೆ ಅಥವಾ ಸಮಗ್ರತೆಯನ್ನು ಕಳೆದುಕೊಳ್ಳದೆ, ಪ್ರಾಮಾಣಿಕವಾಗಿ ಮತ್ತು ಧೈರ್ಯದಿಂದ ಉತ್ತಮವಾಗಿ ಹೇಗೆ ಕೆಲಸ ಮಾಡಬೇಕು ಎಂಬುದನ್ನು ನನ್ನ ಹಿರಿಯರಿಂದ ಕಲಿತಿದ್ದೇನೆ. ಆ ಹಿರಿಯರಲ್ಲಿ ನೀವು ಒಬ್ಬರು ಎಂದು ಉತ್ತರಿಸಿದ್ದಾರೆ.

ಈ ಹಿಂದೆ ಫಿಟ್ನೆಸ್ ಚಾಲೆಂಜ್ ವಿಚಾರವಾಗಿ ಇಬ್ಬರು ನಟರ ಫ್ಯಾನ್ಸ್ ನಡುವೆ ವೈಮನಸ್ಸು ಉಂಟಾಗಿತ್ತು. ಹಾಗಾಗಿ ಸುದೀಪ್ ಹಾಗೂ ಯಶ್ ನಡುವೆ ಯಾವುದು ಸರಿ ಇಲ್ಲ ಎನ್ನುವ ಮಾತುಗಳು ಕೇಳಿಬಂದಿದ್ದವು. ಯಶ್ ಹಾಗೂ ಸುದೀಪ್ ಒಟ್ಟಿಗೆ ಯಾವುದೇ ಕಾರ್ಯಕ್ರಮದಲ್ಲಿಯೂ ಪಾಲ್ಗೊಂಡಿರಲಿಲ್ಲ, ಇದು ಈ ಮಾತಿಗೆ ಪುಷ್ಠಿ ನೀಡಿತ್ತು. ಆದರೀಗ ಕಿಚ್ಚ, ಯಶ್ ಚಿತ್ರಕ್ಕೆ ಶುಭಕೋರಿರುವುದು ಅದಕ್ಕೆ ಯಶ್ ಧನ್ಯವಾದ ತಿಳಿಸಿರುವುದನ್ನು ಗಮನಿಸಿದರೆ ಕಿಚ್ಚ ಹಾಗೂ ಯಶ್ ನಡುವೆ ಒಳ್ಳೆಯ ಗೆಳೆತನವಿದೆ ಎಂಬುದು ತಿಳಿಯುತ್ತದೆ.

ಟಾಕ್ಸಿಕ್ ಫ್ಯಾನ್ ವರ್ಲ್ಡ್ ಸಿನಿಮಾವಾಗಿದ್ದು ಹಾಲಿವುಡ್ ರೀತಿಯೇ ಮೂಡಿಬಂದಿದೆ. ಮಲೆಯಾಳಂ ಖ್ಯಾತ ನಿರ್ದೇಶಕಿ ಗೀತು ಮೋಹನ್ ದಾಸ್ ಚಿತ್ರದ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಯಶ್ ಜತೆಗೆ ಕಿಯಾರಾ ಅಡ್ವಾಣಿ ಬಣ್ಣಹಚ್ಚಿದ್ದಾರೆ. ಉಳಿದಂತೆ ನಯನತಾರಾ, ರುಕ್ಮಿಣಿ ವಸಂತ್, ತಾರಾ ಸುತಾರಿಯಾ, ಹುಮಾ ಖುರೇಷಿ ಹೀಗೆ ಹಲವು ನಟಿಸಿದ್ದಾರೆ. ಕೆವಿಎನ್ ಪ್ರೊಡಕ್ಷನ್‌ನಲ್ಲಿ ಚಿತ್ರ ನಿರ್ಮಾಣವಾಗಿದ್ದು, ಯಶ್ ಕೂಡ ನಿರ್ಮಾಣದಲ್ಲಿ ಕೈಜೋಡಿಸಿದ್ದಾರೆ.

ಸಾರಾ ಈಗ ನ್ಯಾಷನಲ್ ಕ್ರಶ್

ಹದಿನೈದು ವರ್ಷಗಳ ಹಿಂದೆ ತಮಿಳಿನಲ್ಲಿ ದೈವ ತಿರುಮಗಳ್ ಎಂಬ ಚಿತ್ರ ತೆರೆಗೆ ಬಂದಿತ್ತು. ಈ ಚಿತ್ರದಲ್ಲಿ ಚೀಯನ್ ವಿಕ್ರಮ್ ನಾಯಕನಾಗಿ ನಟಿಸಿದ್ದರು. ಈ ಸಿನಿಮಾದಲ್ಲಿ ವಿಕ್ರಮ್ ಮುದ್ದಿನ ಮಗಳ ಪಾತ್ರದಲ್ಲಿ ಸಾರಾ ಅರ್ಜುನ್ ಎಂಬ ಪುಟ್ಟ ಬಾಲೆ ನಟಿಸಿದ್ದರು. ಮುದ್ದಾಗಿದ್ದ ಸಾರಾ, ಮುಗ್ಧತೆಯಲ್ಲಿಯೇ ಮನಗೆದ್ದರು. ಈ ಸಿನಿಮಾದ ಅಭಿನಯಕ್ಕಾಗಿ ಅತ್ಯುತ್ತಮ ಬಾಲನಟಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಅಲ್ಲಿಂದ ಆಕೆ ಬಾಲ ನಟಿಯಾಗಿಯೇ ಹಲವು ಸಿನಿಮಾಗಳಲ್ಲಿ ಬಣ್ಣಹಚ್ಚಿದರು. ಸಲ್ಮಾನ್ ಖಾನ್ ಅಭಿನಯದ ಜೈಹೋ ಸಿನಿಮಾದಲ್ಲಿಯೂ ನಟಿಸಿ ಮನಸೂರೆಗೊಂಡರು. ಮಣಿರತ್ನಂ ನಿರ್ದೇಶನದಲ್ಲಿ ಮೂಡಿಬಂದ ಪೊನ್ನಿಯಿನ್ ಸೆಲ್ವನ್ ಸಿನಿಮಾದಲ್ಲಿ ಸಾರಾ, ಐಶ್ವರ್ಯಾ ರೈ ಅವರ ಬಾಲ್ಯದ ಆವೃತ್ತಿಯ ಪಾತ್ರದಲ್ಲಿ ಕಾಣಿಸಿಕೊಂಡರು. ಈ ಚಿತ್ರದಲ್ಲಿಯೂ ಅದ್ಭುತ ಅಭಿನಯ ತೋರಿದರು. ಹೀಗಿರುವಾಗಲೇ ಸಾರಾ ಅರ್ಜುನ್ ನ್ಯಾಷನಲ್ ಕ್ರಶ್ ಆಗಿ ಹೊರಹೊಮ್ಮಿದ್ದಾರೆ. ಐಎಂಡಿಬಿಯ ಜನಪ್ರಿಯ ತಾರೆಯರ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿದ್ದಾರೆ. ಹೌದು, ಸಾರಾ ಅರ್ಜುನ್ ಸಾವಿರ ಕೋಟಿಗೂ ಹೆಚ್ಚು ಗಳಿಕೆಕಂಡ ಸೂಪರ್ ಹಿಟ್ ಚಿತ್ರ ಧುರಂಧರ್‌ನಲ್ಲಿ ನಾಯಕಿಯಾಗಿ ನಟಿಸಿದರು. ಈ ಸಿನಿಮಾದಲ್ಲಿಯೂ ಮೆಚ್ಚುವ ಅಭಿನಯ ತೋರಿದ ಸಾರಾ, ಸಿನಿಪ್ರಿಯರ ಅಚ್ಚುಮೆಚ್ಚಿನ ನಟಿಯಾಗಿದ್ದಾರೆ. ಆ ಮೂಲಕ ಐಎಂಡಿಬಿ ಜನಪ್ರಿಯರ ನಟಿಯರ ಸಾಲಿನಲ್ಲಿ ಅಗ್ರಸ್ಥಾನದಲ್ಲಿ ಗುರುತಿಸಿಕೊಂಡಿದ್ದಾರೆ. ಆದಿತ್ಯಧಾರ್ ಎರಡನೇ ಸ್ಥಾನದಲ್ಲಿದ್ದರೆ, ಬಾಲಿವುಡ್ ಮಿಸ್ಟರ್ ಫರ್ಫೆಕ್ಟ್ ಅಮೀರ್ ಖಾನ್ ಮೂರನೇ ಸ್ಥಾನದಲ್ಲಿದ್ದಾರೆ. ಇಶಾ ಕಟ್ಟರ್ ನಾಲ್ಕು ಹಾಗೂ ಲಕ್ಷ್ಯಾ ಐದನೇ ಸ್ಥಾನ ಪಡೆದು ಕೊಂಡಿದ್ದಾರೆ. ನಟಿ ರಶ್ಮಿಕಾ ಮಂದಣ್ಣ ಆರನೇ ಸ್ಥಾನದಲ್ಲಿ ಗುರುತಿಸಿ ಕೊಂಡಿದ್ದು, ಕನ್ನಡತಿ ರುಕ್ಮಿಣಿ ವಸಂತ್ ಹತ್ತನೇ ಸ್ಥಾನದ ಲ್ಲಿದ್ದಾರೆ.

ಬಿಗ್‌ಬಾಸ್‌ಗೆ ಸಂಕಷ್ಟ

ಕನ್ನಡದ ಬಿಗ್‌ಬಾಸ್ ಸೀಸನ್ 12 ಅಂತಿಮ ಹಂತಕ್ಕೆ ತಲುಪಿದೆ. ಈ ನಡುವೆಯೇ ಬಿಗ್‌ಬಾಸ್‌ಗೆ ಮತ್ತೊಂದು ಸಂಕಷ್ಟಎದಿರಾಗಿದೆ. ಬಿಗ್‌ಬಾಸ್ ನಡೆಸಿಕೊಡುವ ಕಿಚ್ಚ ಸುದೀಪ್ ಅವರ ಮೇಲೆಯೇ ದೂರು ದಾಖಲಾಗಿದೆ. ಆಗಿದಿಷ್ಟೇ, ಸುದೀಪ್ ವಾರಾಂತ್ಯದಲ್ಲಿ ಬಿಗ್‌ಬಾಸ್ ಸ್ಪರ್ಧಿಗಳ ಮುಂದೆ ಹಾಜರಾಗುತ್ತಾರೆ. ಹೀಗೆ ವಾರಾಂತ್ಯದಲ್ಲಿ ಕಿಚ್ಚನ ಪಂಚಾಯಿತಿ ಸಂದರ್ಭದಲ್ಲಿ ಹೊಂಚು ಹಾಕಿ ಸಂಚು ಮಾಡಿ ಹಿಡಿಯುವ ರಣಹದ್ದು ಎಂದು ಸುದೀಪ್ ಹೇಳಿದ್ದರು. ಈ ಮಾತು ತಪ್ಪು, ರಣಹದ್ದುಗಳ ಕುರಿತು ತಪ್ಪು ಸಂದೇಶ ನೀಡುತ್ತದೆ ಎಂದು ರಣಹದ್ದು ಸಂರಕ್ಷಣಾ ಟ್ರಸ್ಟ್ ಹೇಳಿದ್ದು ದೂರನ್ನು ದಾಖಲಿಸಿದೆ. ಅಲ್ಲದೆ ಮುಂದಿನ ಬಾರಿ ಅದನ್ನು ಸರಿ ಪಡಿಸಿಕೊಂಡು ರಣ ಹದ್ದುಗಳ ಬಗ್ಗೆ ಸರಿಯಾದ ಮಾಹಿತಿ ನೀಡಬೇಕು ಎಂದು ಟ್ರಸ್ಟ್‌ನ ಪ್ರಮುಖರು ಹೇಳಿದ್ದಾರೆ. ಹಾಗಂತ ಬಿಗ್‌ಬಾಸ್ ಸಂಕಷ್ಟಕ್ಕೆ ಸಿಲುಕಿದ್ದು ಇದೇ ಮೊದಲಲ್ಲ, ಈ ಹಿಂದೆ ಬಿಗ್‌ಬಾಸ್ ಮನೆಯಿಂದ ಕಸವಿಲೇವಾರಿ ಸರಿಯಾಗಿ ಮಾಡುತ್ತಿಲ್ಲ ಇದರಿಂದ ಪರಿಸರ ಮಾಲಿನ್ಯವಾಗುತ್ತಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಬಿಗ್‌ಬಾಸ್ ಮನೆಯಲ್ಲಿದ್ದ ಸ್ಪರ್ಧಿಗಳು, ಸಿಬ್ಬಂದಿಗಳನ್ನು ಹೊರಗೆ ಕಳುಹಿಸಿ ಬಿಗ್‌ಬಾಸ್ ಮನೆಗೆ ಬೀಗ ಜಡಿಯಲಾಗಿತ್ತು. ಈಗ ರಣಹದ್ದುಗಳ ಕುರಿತಂತೆ ಆಡಿದ ಮಾತು ವಿವಾದಕ್ಕೆ ಕಾರಣವಾಗಿದೆ. ಇದೇ ವಾರ ಬಿಗ್‌ಬಾಸ್ ಫಿನಾಲೆ ನಡೆಯಲಿದ್ದು, ಅದರಲ್ಲಿ ಯಾರು ವಿಜೇತರಾಗುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

ಒಲಿದು ಬಂದ ಅದೃಷ್ಟ

ಬಿಗ್‌ಬಾಸ್ ಮನೆಗೆ ಹೋಗಿ ಬಂದವರ ಅದೃಷ್ಟವೇ ಬದಲಾಗಿದೆ. ಬಿಗ್‌ಬಾಸ್ ಹಲವರಿಗೆ ಉತ್ತಮ ಬದುಕು ಕಟ್ಟಿಕೊಟ್ಟಿದೆ. ಈ ಬಾರಿಯ ಬಿಗ್‌ಬಾಸ್‌ಗೆ ವೈಲ್ಡ್ ಕಾರ್ಡ್ ಎಂಟ್ರಿಯಾಗಿದ್ದ ಸೂರಜ್ ಇತ್ತೀಚೆಗಷ್ಟೇ ಮನೆಯಿಂದ ಹೊರಬಂದಿದ್ದರು. ಹೀಗಿರುವಾಗಲೇ ಅವರಿಗೆ ಅದೃಷ್ಟ ಒಲಿದು ಬಂದಿದೆ. ಸೂರಜ್‌ಗೆ ಕಿರುತೆರೆಯಲ್ಲಿ ನಟಿಸಲು ಅವಕಾಶ ಅರಸಿ ಬಂದಿದೆ. ಹೌದು, ಸೂರಜ್ ಪವಿತ್ರ ಬಂಧನ ಎಂಬ ಧಾರಾವಾಹಿಯಲ್ಲಿ ಅಭಿನಯಿಸುತ್ತಿದ್ದಾರೆ. ಅಣ್ಣ ತಮ್ಮಂದಿರ ಬಾಂಧವ್ಯದ ಜತೆಗೆ ಕೌಟುಂಬಿಕ ಕಥೆಯೂ ಈ ಧಾರಾವಾಹಿಯಲ್ಲಿದ್ದು, ಸೂರಜ್ ಇಲ್ಲಿ, ದೇವದತ್ ದೇಶಮುಖ್ ಎಂಬ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಶೀಘ್ರದಲ್ಲಿಯೇ ಈ ಧಾರಾವಾಹಿ ಪ್ರಸಾರವಾಗಲಿದೆ.